ದೃಶ್ಯಕಲಾ ಶಿಕ್ಷಣ

ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್

ಕೊಡುಗೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಸಂಗಮ ದೊಡ್ಡಮನಿ

ಮಾರ್ಗದರ್ಶಕರು :

ಡಾ|| ಲಕ್ಷ್ಮಣ್‌ಸಿಂಗ್ ಆರ್. ರಾಥೋಡ್

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ)

ದೃಶ್ಯಕಲಾ ವಿಭಾಗ

ಲಲಿತ ಕಲಾ ನಿಲಯ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

ದೃಶ್ಯಕಲಾ ಶಿಕ್ಷಣಕ್ಕೆ
ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್
ಕೊಡುಗೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಸಂಗಮ ದೊಡ್ಡಮನಿ

ಮಾರ್ಗದರ್ಶಕರು
ಡಾ. ಲಕ್ಷ್ಮಣ್‌ಸಿಂಗ್ ಆರ್. ರಾಥೋಡ್
ಉಪನ್ಯಾಸಕರು
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ)

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಪ್ರಮಾಣ ಪತ್ರ

ದೃಶ್ಯಕಲಾ ಶಿಕ್ಷಣಕ್ಕೆ ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್ ಕೊಡುಗೆ ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು **ಡಾ. ಲಕ್ಷ್ಮಣ್‌ಸಿಂಗ್ ಆರ್. ರಾಥೋಡ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಈ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 19/09/2016

ಸ್ಥಳ: ವಿದ್ಯಾರಣ್ಯ

Doddamani

(ಸಂಗಮ ದೊಡ್ಡಮನಿ)
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದೃಢೀಕರಣ ಪತ್ರ

ಸಂಗಮ ದೊಡ್ಡಮನಿ ಇವರು ಬರೆದು ಸಾದರಪಡಿಸಿದ **ದೃಶ್ಯಕಲಾ ಶಿಕ್ಷಣಕ್ಕೆ ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್ ಕೊಡುಗೆ** ಎಂಬ ಶೀರ್ಷಿಕೆಯ ಈ ಎಂ.ಫಿಲ್ ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಈ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: 19/09/2016

ಸ್ಥಳ: ವಿದ್ಯಾರಣ್ಯ

ಮಾರ್ಗದರ್ಶಕರು

ಡಾ|| ಲಕ್ಷ್ಮಣ್‌ಸಿಂಗ್ ಆರ್. ರಾಥೋಡ್

(ಡಾ. ಲಕ್ಷ್ಮಣ್ ಸಿಂಗ್ ಆರ್. ರಾಥೋಡ್)

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು

ಉಪನ್ಯಾಸಕರು

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ)

ದೃಢೀಕರಣ ಪತ್ರ

ಸಂಗಮ ದೊಡ್ಡಮನಿ ಅವರು **ದೃಶ್ಯಕಲಾ ಶಿಕ್ಷಣಕ್ಕೆ ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್ ಕೊಡುಗೆ** ಎಂಬ ಶೀರ್ಷಿಕೆಯ ಎಂ.ಫಿಲ್ ಸಂಶೋಧನಾ ಪ್ರಬಂಧವನ್ನು **ಡಾ. ಲಕ್ಷ್ಮಣ್‌ಸಿಂಗ್ ಆರ್. ರಾಥೋಡ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದಾರೆ.

ದಿನಾಂಕ: ೨೨.೦೮-೨೦೧೬

ಸ್ಥಳ: ವಿದ್ಯಾರಣ್ಯ

೨೨.೮.೨೦೧೬

(ಡಾ. ಹನುಮಣ್ಣನಾಯಕ ದೊರೆ)
ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ಎರಡು

ಕಲಾಶಿಕ್ಷಣದ ಐತಿಹಾಸಿಕ ಹಿನ್ನೆಲೆ

ಅಧ್ಯಾಯ : ಮೂರು

ಧಾರವಾಡದ ಸಾಂಸ್ಕೃತಿಕ ಪರಿಸರ ಮತ್ತು ಹಾಲಭಾವಿಯವರ ಸ್ಕೂಲ್ ಆಫ್ ಆರ್ಟ್ ಸ್ಥಾಪನೆ

ಅಧ್ಯಾಯ : ನಾಲ್ಕು

ಸ್ಕೂಲ್ ಆಫ್ ಆರ್ಟ್‌ನ್ ಹುಟ್ಟು ಬೆಳವಣಿಗೆಯ ವಿವಿಧ ಆಯಾಮಗಳು ಮತ್ತು ಪಠ್ಯಕ್ರಮ

ಅಧ್ಯಾಯ : ಐದು

ಸ್ಕೂಲ್ ಆಫ್ ಆರ್ಟ್‌ನ ಬೋಧಕವರ್ಗ ಮತ್ತು ವಿದ್ಯಾರ್ಥಿ ಸಮುದಾಯ

ಅಧ್ಯಾಯ : ಆರು

ಸ್ಕೂಲ್ ಆಫ್ ಆರ್ಟ್‌ನ ಕಲಾಚಟುವಟಿಕೆಗಳು

ಅಧ್ಯಾಯ : ಏಳು

ಸಮಾರೋಪ

ಅನುಬಂಧಗಳು

೧. ಸಂಕ್ಷೇಪಗಳು

೨. ಗ್ರಂಥಋಣ

೩. ವಕ್ತೃಗಳು



ಶ್ರೀ ಡಿ.ವ್ಹಿ. ಹಾಲಭಾವಿ ಯವರು
ಸ್ಕೂಲ್ ಆಫ್ ಆರ್ಟ್‌ನ ಸಂಸ್ಥಾಪಕರು



ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್

ಜೆ.ಎಸ್.ಎಸ್. ಸಂಸ್ಥೆಯ ಪರಮಪೂಜ್ಯ ಜಗದ್ಗುರುಗಳು



ಆದಿ ಜಗದ್ಗುರು
ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು



ಜಗದ್ಗುರು
ಶ್ರೀ ಮಂತ್ರ ಮಹರ್ಷಿಗಳು




ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ
ಮಹಾಸ್ವಾಮಿಗಳು



ಜಗದ್ಗುರು
ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು

ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಪ್ರಾಚಾರ್ಯರು




ಸಂಸ್ಥಾಪಕರು
ಶ್ರೀ ಡಿ.ವ್ಹಿ. ಹಾಲಭಾವಿಯವರು



ಶ್ರೀಮತಿ ತಾರಾ ಪವಾರ



ಶ್ರೀ ಸುರೇಶ್ ಡಿ. ಹಾಲಭಾವಿ



ಪ್ರಸಕ್ತ ಪ್ರಾಚಾರ್ಯರು
ಶ್ರೀಮತಿ ರೇಣುಕಾ ಮಾರ್ಕಂಡೇಯ



ಶ್ರೀಮತಿ ಗಾಯತ್ರಿ ಗೌಡರ



ಶ್ರೀ ಎನ್.ಕೆ. ಹಾಲಕೇರಿ

ಅಧ್ಯಾಯ : ಒಂದು

ಅಧ್ಯಯನ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಆದಿ ಮಾನವರು ತಮ್ಮ ಅನಿಸಿಕೆ, ಭಾವನೆಗಳನ್ನು ವ್ಯಕ್ತಪಡಿಸಲು ಹಾಗೂ ಪರಸ್ಪರರಲ್ಲಿ ಸಂಪರ್ಕ ಸಾಧಿಸಿ ಬೇಟೆಯಿಂದ ಆಹಾರ ಪಡೆಯಲು ಮನೆರಂಜನೆಯ ಕ್ರಿಯೆಯಲ್ಲಿ ತೊಡಗಲು ಚಿತ್ರಕಲೆಯನ್ನೇ ಭಾಷೆಯಂತೆ ಬಳಸಿದ್ದು ಕಂಡು ಬರುತ್ತದೆ. ಇದೊಂದು ಸಂಶೋಧಾನಾತ್ಮಕ ಸತ್ಯವಾಗಿದೆ. ಚಿತ್ರಕಲೆಯು ವಿಶ್ವಭಾಷೆಯಾಗಿದೆ. "ಒಂದು ಚಿತ್ರಕ್ಕೆ ಸಾವಿರ ಶಬ್ದಗಳ ಶಕ್ತಿ ಇದೆ" ಚಿತ್ರವು ದೃಶ್ಯಕಾವ್ಯ ಎಂದು ಹಲವಾರು ವ್ಯಾಖ್ಯಾನಿಸಿದ್ದು ಚಿತ್ರಕಲೆಯ ಹಿರಿಮೆ, ಗರಿಮೆಯನ್ನು ತೋರಿಸುತ್ತದೆ.

ಜಗತ್ತಿನ ಇನ್ನಿತರ ದೇಶದ ಸಂಸ್ಕೃತಿಗಳು ಮೊಗ್ಗು ಕಾಯಿಯಾಗಿರುವಾಗಲೇ ಭಾರತೀಯ ಸಂಸ್ಕೃತಿ ಅರಳಹೂವಾಗಿ, ಹಣ್ಣಾಗಿ ತನ್ನ ಸೌರಭವವನ್ನು ವಿಶ್ವದಾದ್ಯಂತ ಹರಡಿದ್ದು ಕಂಡು ಬರುತ್ತದೆ. ನಮ್ಮ ಪೂರ್ವಜರು ಪುರಾಣ, ವೇದ ಉಪನಿಷತ್ತುಗಳಲ್ಲಿ, ಧಾರ್ಮಿಕ ಗ್ರಂಥಗಳಲ್ಲಿ ಚಿತ್ರಕಲೆಯ ಬಗೆಗೆ ಅನೇಕ ಮಾಹಿತಿ ನೀಡಿದ್ದು ಹೆಮ್ಮೆ ಮತ್ತು ಸಾಧನೆಯ ದ್ಯೋತಕವಾಗಿದೆ. ಅವುಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ನಾಟಕ ನೃತ್ಯ ಸಂಗೀತ, ಕಾವ್ಯ , ಸಾಹಿತ್ಯ, ಮುಂತಾದ ವಿಷಯಗಳ ಕುರಿತು ಸ್ಥೂಲವಾಗಿ ವಿವರಗಳನ್ನು ನೀಡಿದ್ದಾರೆ. ಈ ವಿಷಯಗಳು ಹಾಗೂ ಅವುಗಳ ವಸ್ತುನಿಷ್ಠತೆ ಇಂದಿಗೂ ಪ್ರಸ್ತುತವಾಗಿದೆ.

ಪ್ರಾಚೀನ ಕಾಲದಿಂದಲೂ ನಿರ್ಮಿಸಲಾದ ಅನೇಕ ವಾಸ್ತುಶಿಲ್ಪ ಹಾಗೂ ಚಿತ್ರಕಲೆಗಳು ಇತಿಹಾಸ ಸಂಶೋಧಕರಿಗೆ ಪ್ರಮುಖ ಆಕರ ಸಾಮಗ್ರಿಗಳಾಗಿವೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿದ ಭಾರತದಲ್ಲಿ ಆಳಿದ ಸಾಮ್ರಾಟ್ರರು, ರಾಜ ಮಹಾರಾಜರು, ಮಾಂಡಲೀಕರು, ಧರ್ಮ ಗುರುಗಳು ನೀಡಿದ ಪ್ರೋತ್ಸಾಹ ಹಾಗೂ ಸಂರಕ್ಷಣೆಯ ಫಲವಾಗಿ ಇಂದು ನಾವು ಅಂದಿನ ವೈಭವದ ಕಲಾ ಸೃಷ್ಟಿಯ ಸವಿಯುತ ಮಾಡುತ್ತಿದ್ದೇವೆ. ಇಡೀ ದೇಶದಲ್ಲಿಯೇ ಕರ್ನಾಟಕ ಲಲಿತಕಲೆಗಳ ತವರೂರು ಎಂದು ಹೆಸರು ಪಡೆದಿದೆ. ಇಲ್ಲಿನ ಕಲೆ, ಚಿತ್ರಕಲೆ, ಶಿಲ್ಪಕಲೆಗಳನ್ನು ಇತಿಹಾಸ, ಪ್ರಸಿದ್ಧ ಅದರಲ್ಲೂ ಉತ್ತರ ಕರ್ನಾಟಕದ ವಿಜಾಪೂರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಹಂಪಿ, ನಿಪ್ಪಾಣಿ, ನರಗುಂಧ ಗುಳೇದಗುಡ್ಡ ಅಮ್ಮೀನಭಾವಿ ಮುಂತಾದ ಪ್ರದೇಶಗಳಲ್ಲಿ ಕಾಣಬಹುದಾಗಿದೆ. ಈ ಎಲ್ಲ ಪ್ರದೇಶಗಳಲ್ಲಿ ಇರುವಂತಹ ವಾಸ್ತುಶಿಲ್ಪ ಮೂರ್ತಿ ಶಿಲ್ಪಗಳು ಹಾಗೂ ಭಿತ್ತಿ

ಚಿತ್ರಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಸರಕಾರದ ಕಾರ್ಯ ಶ್ಲಾಘನೀಯವಾಗಿದೆ. ಇಂಥ ಪ್ರದೇಶಗಳಲ್ಲಿನ ಅನೇಕ ಆಕರಗಳ ಮೂಲಕ ನಡೆಯುವ ಅಭ್ಯಾಸದಿಂದ ಸಾಂಸ್ಕೃತಿಕ ಕಲೆಯ ಅಧ್ಯಯನ ಸಾಧ್ಯವಾಗುತ್ತದೆ. ಮಾನವನು ಆಯಾಕಾಲದಲ್ಲಿ, ಆಯಾ ಪ್ರದೇಶಗಳಲ್ಲಿ ತೊಡುತ್ತಿದ್ದ ವೇಷ ಭೂಷಣ, ಆಭರಣಗಳು, ಧಾರ್ಮಿಕ ಆಚರಣೆಗಳು, ಶೃಂಗಾರ ಸಾಧನ ಮತ್ತು ವೈಖರಿ, ವಿಚಾರಧಾರೆ ಹಾಗೂ ಅವರ ಸಾಮಾಜಿಕ ರೀತಿ ನೀತಿಗಳ ವಿಷಯ ಸಂಗ್ರಹಿಸಿ ಅಭ್ಯಸಿಸಲು ಲಲಿತಕಲೆಗಳು ಸಹ ಪ್ರಮುಖ ಪಾತ್ರವಹಿಸುತ್ತೇವೆ. ಚಿತ್ರಗಳ ನಿರ್ಮಾಣ ಅಥವಾ ಕಲೆಗಳ ನಿರ್ಮಾಣವಾದುದು ಧರ್ಮಪ್ರಚಾರಕ್ಕಾಗಿ ಮನೋರಂಜನೆಗಾಗಿ, ಕಲಾತ್ಮಕ ಕೌಶಲ್ಯತೆಯ ಪ್ರತೀಕವಾಗಿ ಉದಯಿಸಿದ್ದು ಕಂಡುಬರುತ್ತದೆ.

ಕಲೆಗಳ ಕುರಿತು ಅಧ್ಯಯನ ಮಾಡುತ್ತ ಆಳಕ್ಕೆ ಇಳಿದಾಗ ಪ್ರದರ್ಶನದ ಹಿಂದಿರುವ ಉದ್ದೇಶ, ಆಶಯ ಸ್ಪಷ್ಟವಾಗಿ ಗೋಚರಿಸುತ್ತದೆ. ಕಲಾಕೃತಿಗಳಲ್ಲಿನ ತಾಂತ್ರಿಕತೆ ಶೈಲಿ ವರ್ಣಸಂಯೋಜನೆ, ರೇಖಾಲಾಲಿತ್ಯ ಸೌಂದರ್ಯ ಮುಂತಾದವುಗಳ ಬಗ್ಗೆ ಸಾಕಷ್ಟು ಮಾಹಿತಿ ದೊರೆಯುತ್ತವೆ. ಬದಲಾವಣೆಯೆಂಬುದು ಜಗತ್ತಿನ ನಿಯಮ ಅದಕ್ಕೆ ತಕ್ಕಂತೆ ಆಯಾ ಕಾಲಘಟ್ಟದಲ್ಲಿನ ಸಾಮಾಜಿಕ ಬದಲಾವಣೆ, ಬದುಕಿನ ವೈಭವ ವಿಸ್ತಾರತೆ ವೈವಿಧ್ಯತೆಗಳಲ್ಲಿ ಈ ವಿಷಯದ ಮಾಹಿತಿ ಪಡೆಯಲು ಕಲೆಗಳು ಪ್ರಮುಖ ಪಾತ್ರವಹಿಸುತ್ತವೆ. ಇಂತಹ ಚಿತ್ರಕಲೆಗೆ ನಮ್ಮ ಭಾರತೀಯ ಗ್ರಂಥಗಳು ಅನೇಕ ಅನುಕೂಲಕರ ಅವಶ್ಯಕ ಮಾಹಿತಿ ನೀಡಿವೆ. ಅದರಲ್ಲಿಯೂ ಮಾನಸೋಲ್ಲಾಸ, ಶಿವತತ್ವರತ್ನಾಕರ, ವಾತ್ಸಾಯನನ ಕಾಮಸೂತ್ರ, ಶಿಲ್ಪರತ್ನ ಮುಂತಾದವುಗಳಲ್ಲಿ ಸೌಂದರ್ಯಶಾಸ್ತ್ರದ ವಿಷಯ, ವರ್ಣ ತಯಾರಿಕೆ, ಭಿತ್ತಿ ತಯಾರಿಕೆ, ಚಿತ್ರ ಹಾಗೂ ಶಿಲ್ಪಕಲೆಗೆ ಬೇಕಾಗುವ ಪ್ರಮಾಣಬದ್ಧತೆ ಹಾಗೂ ಕಲಾಸಾಮಗ್ರಿಗಳ ತಯಾರಿಕೆಗಳ ಸರಳ ವಿಧಾನಗಳನ್ನು ತಿಳಿಸಿದ್ದಾರೆ. ಇವರ ಸಹಾಯದಿಂದ ರಚಿಸಿದ್ದ ಅನೇಕ ಚಿತ್ರಗಳು ಶಾಶ್ವತವಾಗಿ ಉಳಿದಿವೆ.

ಭಿತ್ತಿಚಿತ್ರಗಳು, ಹಸ್ತಪ್ರತಿ ಚಿತ್ರಗಳು, ಬಿಡಿಚಿತ್ರಗಳು ಹೀಗೆ ಅನೇಕ ರಚನೆಗೊಂಡಿದ್ದು ಇಂತಹ ಕಲಾಕೃತಿಗಳನ್ನು ಭಿತ್ತಿಗಳಲ್ಲಿ, ಗ್ಯಾಲರಿಗಳಲ್ಲಿ, ಕಲಾ ಶಾಲೆಗಳಲ್ಲಿ ವೈಯುಕ್ತಿಕ ಸ್ಟುಡಿಯೋಗಳಲ್ಲಿ ಸಂಗ್ರಹಿಸಡಲಾಗಿದೆ. ಇವುಗಳ ಆಧಾರದಿಂದ ಇಂದು ನಾವು ಅನೇಕ ಮಾಹಿತಿ ಪಡೆದು ಜೀವನದಲ್ಲಿ ಉನ್ನತಿಯನ್ನು ಹೊಂದುತ್ತಿದ್ದೇವೆ. ಇದಕ್ಕೆಲ್ಲ ಮೂಲ ಕಾರಣ ಸಂಗ್ರಹ ಮತ್ತು ಅವುಗಳ ಸಂರಕ್ಷಣೆ ಎನ್ನಬಹುದು.

ದೃಶ್ಯಕಲೆಯಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನ ಅಧ್ಯಯನಗಳು:

1) **ಪಿ.ಎಚ್.ಡಿ. ಪ್ರಬಂಧಗಳು :**

1991 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಎಸ್.ಸಿ. ಪಾಟೀಲ ಅವರ **ಕರ್ನಾಟಕ ಜನಪದ ಚಿತ್ರಕಲೆ** ಎಂಬ ಪಿ.ಎಚ್.ಡಿ. ಪ್ರಬಂಧ ಹೊರಬಂದಿದ್ದು, ಇದು ಪೂರ್ಣ ಪ್ರಮಾಣದಲ್ಲಿ ಚಿತ್ರಕಲೆಯನ್ನೇ ಕುರಿತು ಸಂಶೋಧನೆ ನಡೆಸಿದ ಕರ್ನಾಟಕದ ಮೊಟ್ಟಮೊದಲ ಪಿ.ಎಚ್.ಡಿ. ಮಹಾಪ್ರಬಂಧವಾಗಿದೆ. ಮುಂದೆ ನಾಲ್ಕು ವರ್ಷಗಳ ನಂತರ 1995 ರಲ್ಲಿ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು** ಎಂಬ ಪಿ.ಎಚ್.ಡಿ. ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅ.ಲ. ನರಸಿಂಹನ್ ಅವರಿಂದ ಸಲ್ಲಿಸಲ್ಪಟ್ಟಿತ್ತು.

1997 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪುಷ್ಪಾ ದ್ರಾವಿಡ ಅವರು **ಕಲಾವಿದ ರೋರಿಚ್ ಜೀವನ ಮತ್ತು ಕಲಾಕೃತಿಗಳು** ಎಂಬ ವಿಷಯದ ಮೇಲೆ, 1998 ರಲ್ಲಿ **ಹಿಂದೂಸ್ತಾನೀ ಸಂಗೀತ ಮತ್ತು**

ರಾಗಮಾಲಾ ಚಿತ್ರಗಳು ಎಂಬ ವಿಷಯದ ಕುರಿತು ಸಂಪದಾ ಭಟ್‌ರು ಸಂಶೋಧನಾ ಮಹಾ ಪ್ರಭಂದ ಸಲ್ಲಿಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. 2000 ದಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿ ಪಡೆದುಕೊಂಡಿದ್ದಾರೆ. 2002 ರಲ್ಲಿ ಯಾದಪ್ಪ ಪರದೇಶಿ ಅವರು **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ** ವಿಷಯದ ಮೇಲೆ ಪ್ರಬಂಧ ಮಂಡಿಸಿ ಪಿ.ಎಚ್.ಡಿ ಪದವಿ ಪಡೆದಿದ್ದಾರೆ. ಶಿವಾನಂದ ಬಂಟನೂರ **ಕರ್ನಾಟಕದ ಜನಪದ ಶಿಲ್ಪಕಲೆ** ಕುರಿತು, ಚಿತ್ರಕಲಾವಿದ ಎಂ.ಎ. ಚೆಟ್ಟಿ ಜೀವನ ಮತ್ತು ಕಲಾಕೃತಿಗಳು ವಿಷಯದ ಮೇಲೆ ಲಕ್ಷ್ಮೀದೇವಿ ಗವಾಯಿ, ಹಾಗೆಯೇ ಗಿರೀಶಕುಮಾರರವರು **ಬುಡಕಟ್ಟು ಚಿತ್ರಕಲೆ** ಬಗ್ಗೆ ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪಡೆದುಕೊಂಡಿದ್ದಾರೆ.

ಈ ಅವಧಿಯಲ್ಲಿಯೇ **ಯಂತ್ರಾ ದಿ ವಿಜ್ಯುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ಆರ್ಟಿಸ್ಟ್** ಎಂಬ ವಿಷಯದ ಮೇಲೆ ಸೌಮ್ಯ ಎಂಬುವರು, **ಮೈಂಡ್, ಮ್ಯೂಜಿಕ್ ಆಂಡ್ ಡೆವಲಪಮೆಂಟ್ ಆಫ್ ರಾಗಮಾಲಾ ಪೇಟಿಂಗ್ಸ್** ಎಂಬುವರ ಬಗ್ಗೆ ಪ್ರಮೀಳಾ ಲೋಚನಾ ಅವರು ಬೆಂಗಳೂರು ವಿಶ್ವವಿದ್ಯಾಲದಿಂದ ಪಿಎಚ್.ಡಿ ಪಡೆದುಕೊಂಡಿದ್ದಾರೆ. 2003 ರಲ್ಲಿ **ಎ ಕ್ರಿಟಿಕಲ್ ಎನಾಲಸಿಸ್ ಆಫ್ ಆರ್ಟ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಶಲ್ ರೆಫೆರನ್ಸ್ ಟು ಡ್ರಾಯಿಂಗ್ ಆಂಡ್ ಪೇಟಿಂಗ್** ವಿಷಯದ ಮೇಲೆ ಡಾ. ಎಸ್.ಸಿ ಪಾಟೀಲ ಅವರು ತಮ್ಮ ಎರಡನೆಯ ಪಿಎಚ್.ಡಿ ಪದವಿಯನ್ನು ಕರ್ನಾಟಕದ ವಿಶ್ವವಿದ್ಯಾಲದಿಂದ ಪಡೆದುಕೊಂಡಿದ್ದು ದಾಖಲೆಯಾಗಿದೆ.

ಇದೇ ಅವಧಿಯಲ್ಲಿ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಟಿಂಗ್ ಆಫ್ ಕರ್ನಾಟಕ (1780–1820)** ವಿಷಯದ ಬಗ್ಗೆ ವೀಣಾಶೇಖರ ಅವರು ಬೆಂಗಳೂರು ವಿಶ್ವವಿದ್ಯಾಲದಿಂದ, ಹಾಗೆಯೇ ಸಿದ್ದಲಿಂಗಸ್ವಾಮಿ ಹಿರೇಮಠರು **ಚಿತ್ರಕಲಾವಿದ ಆರ್.ಎಂ. ಹಡಪದ ಒಂದು ಅಧ್ಯಯನ** ಕನ್ನಡ ವಿಶ್ವವಿದ್ಯಾಲದಿಂದ ಪಿ.ಎಚ್.ಡಿ ಪದವಿ ಹೊಂದಿದ್ದಾರೆ.

2004 ರಲ್ಲಿ ಶರಣಪ್ಪ ಕೋಲ್ಕಾರ ಅವರು **ಕೊಪ್ಪಳ ಹಂಪಿ ಪ್ರದೇಶದ ಪ್ರಾಗ್ಯೆತಿಹಾಸದ ಕಲೆ** ಎಂಬ ವಿಷಯದ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ, ಶಿವಕುಮಾರ ಎ.ಒ. ಅವರು **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು** ವಿಷಯದ ಕುರಿತು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪಡೆದುಕೊಂಡಿದ್ದಾರೆ.

ಈ ಅವಧಿಯಲ್ಲಿಯೇ ವಿ.ಎಂ.ಭಾಗಾಯುತ ಅವರು **ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ** (1400–1800) ವಿಷಯದ ಬಗ್ಗೆ ಕನ್ನಡ ವಿಶ್ವವಿದ್ಯಾಲಯದಿಂದ, ಪಿ.ಗೌರೀಶ ಅವರು **ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ** ಮೈಸೂರು ವಿಶ್ವವಿದ್ಯಾಲಯದಿಂದ, ಮತ್ತು 2005ರಲ್ಲಿ ಶಶಿಕಲಾ ಹೂಗಾರ ಅವರು **ಕರ್ನಾಟಕದ ತೊಗಲು ಗೊಂಬೆ ಚಿತ್ರಕಲೆ** ಬಗ್ಗೆ, ಡಾ. ಎಸ್.ವಿ.ವೆಂಕಟೇಶಯ್ಯ ಅವರು **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ** ವಿಷಯದ ಮೇಲೆ, **ಕರ್ನಾಟಕದ ರಥ ಶಿಲ್ಪಕಲೆ** ವಿಷಯದ ಕುರಿತು ಶಿವಪ್ರಕಾಶ ತುಕ್ಕಣ್ಣವರ, ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಬಗ್ಗೆ ಎಚ್.ಎನ್. ಚಿತ್ರಗಾರ ಇವರೆಲ್ಲ ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿಗಾಗಿ ಅಧ್ಯಯನ ಮಾಡಿದ್ದಾರೆ.

2006ರಲ್ಲಿ ವಿಶ್ವೇಶ್ವರಿ ತಿವಾರಿ ಅವರು ಹೈದರಾಬಾದ ಕರ್ನಾಟಕದ **ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**, ಮಲ್ಲಿಕಾರ್ಜುನ ಬಾಗೋಡಿ ಅವರು **ಸುರಪೂರ ಚಿತ್ರಕಲೆ ಒಂದು ಅಧ್ಯಯನ** ಮತ್ತು

2007ರಲ್ಲಿ ಮೋಹನ ಬಿ.ಪಂಚಾಳ ಅವರು **ಎಸ್.ಎಂ. ಪಂಡಿತರ ಕಲಾಬದುಕು ಮತ್ತು ಕಲಾಕೃತಿಗಳು** ಕುರಿತಾಗಿ, ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪಡೆದುಕೊಂಡಿದ್ದಾರೆ. ಇದೇ ಅವಧಿಯಲ್ಲಿ ಲಕ್ಷ್ಮಣ್‌ಸಿಂಗ್ ಆರ್. ರಾಠೋಡ ಅವರ **ಅನ್ವಯಿಕ ಕಲೆ, ಅಂದಿನಿಂದ ಇಂದಿನಿಂದವರೆಗೂ** ಎಂಬ ವಿಷಯದ ಕುರಿತು ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪಡೆದುಕೊಂಡಿದ್ದಾರೆ. 2008ರಲ್ಲಿ ಪ್ರೇಮಾನಂದ ತಿ.ಲಕ್ಕಣ್ಣವರ ಅವರು **ಕರ್ನಾಟಕದ ಚಿತ್ರಕಲಾ ಸಾಹಿತ್ಯ ವೈಚಾರಿಕ ಅಧ್ಯಯನ,** ರವೀಂದ್ರ ಎಸ್.ಕಮ್ಮಾರ ಅವರು **ಚಿತ್ರಕಲಾವಿದ ವಿ.ಬಿಹರೇಗೌಡರ ಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ** ಎನ್ನುವ ವಿಷಯದ ಕುರಿತಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಇವರೆಲ್ಲ ಪಿ.ಎಚ್.ಡಿ ಪಡೆದುಕೊಂಡಿದ್ದಾರೆ.

2009ರಲ್ಲಿ **ಕರ್ನಾಟಕದ ಬಿದರಿಕಲೆ ಒಂದು ಅಧ್ಯಯನ** (ವಿಶೇಷವಾಗಿ ಬೀದರನ್ನು ಅನುಲಕ್ಷಿಸಿ) ಎಂಬ ವಿಷಯದ ಕುರಿತಾಗಿ ರೆಹಮಾನ್ ಪಟೇಲ್ ಎಂಬುವರು, ಮತ್ತು **ಕಲಾವಿದ ಧನಂಜಯ ಶಿಲ್ಪಿ ಬದುಕು ಮತ್ತು ಕಲಾಕೃತಿಗಳು** ಎಂಬ ವಿಷಯದ ಕುರಿತು ಸೂರ್ಯಕಾಂತ ಮಂಟಗಿ ಇವರ ಪಿ.ಎಚ್.ಡಿ ಮಹಾಪ್ರಬಂಧಗಳು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಬಂದವೆ. ಈ. ಲಕ್ಷ್ಮೀಪತಿಯವರಾದ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ** ಪಿ.ಎಚ್.ಡಿ ಅಧ್ಯಯನ ಕನ್ನಡ ವಿಶ್ವವಿದ್ಯಾಲಯದಿಂದ ಬಂದಿವೆ. 2010ರಲ್ಲಿ ಸುನೀತಾ ಪಾಟೀಲ ಅವರು **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು,** ನಿಂಗಪ್ಪ ಎಂ. ಅಂಗಡಿಯವರ **ಕರ್ನಾಟಕ ಗಾಜಿನ ಮೇಲಿನ ಚಿತ್ರಕಲೆ ಒಂದು ಅಧ್ಯಯನ,** ಕಿಶೋರ ದಾಟನಾಳರ ಕಲಾವಿದ ಶಂಕರ ಪಾಟೀಲ ಅವರ **ಬದುಕು ಮತ್ತು ಕಲಾಕೃತಿಗಳು** ಇವೆಲ್ಲ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ ಪಿ.ಎಚ್.ಡಿ ಮಹಾಪ್ರಬಂಧಗಳಾಗಿವೆ. ಇದೇ ಅವಧಿಯಲ್ಲಿ ಭಾರತಿ ಮರವಂತೆಯವರ **ಕರಾವಳಿ ಕರ್ನಾಟಕದ ರಂಗೋಲಿ ಕಲೆ** ಮೈಸೂರು ವಿಶ್ವವಿದ್ಯಾಲಯದಿಂದ ಬಂದಿವೆ. ಇವೆಲ್ಲ ಕರ್ನಾಟಕದಲ್ಲಿ ದೃಶ್ಯಕಲಾ ಕ್ಷೇತ್ರದಲ್ಲಿ ನಡೆಸಿದ ಪಿ.ಎಚ್.ಡಿ ಪದವಿಯ ಸಂಶೋಧನಾ ಅಧ್ಯಯನವಾಗಿವೆ.

2010ರಲ್ಲಿ ಸಣ್ಣಮದಗಪ್ಪ ಎಸ್. ಗದಿಯವರ **ಕಲಾವಿದ ಎಂ.ಬಿ. ಪಾಟೀಲ ಜೀವನ ಮತ್ತು ಕಲಾಕೃತಿಗಳು ಒಂದು ಅಧ್ಯಯನ,** 2010ರಲ್ಲಿ ಕಾಮಾಕ್ಷಿ ಸಿ.ಸೂಪಣ್ಣ ಅವರ **ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ,** 2011ರಲ್ಲಿ ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕ ಗಂಜೀಫಾ ಚಿತ್ರಕಲೆ, 2012**ರಲ್ಲಿ ಬಿ.ಎಲ್. ಲಮಾಣಿಯವರ **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,** ಕೃಷ್ಣೇಗೌಡ ಅವರ **ಕರ್ನಾಟಕ ಬೌದ್ಧ ಚಿತ್ರಕಲೆ,** ಶಶಿಕಲಾ ಅವರ **ಹುದುಗು ಕಲೆ** ಮತ್ತು ರೇಣುಕಾ ಮಾರ್ಕಂಡೆಯವರ **ಕರ್ನಾಟಕ ವೈಷ್ಣವ ಪರಂಪರೆಯ ಚಿತ್ರಕಲೆ** ಇವು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ ಪಿ.ಎಚ್.ಡಿ ಮಹಾಪ್ರಬಂಧಗಳಾಗಿವೆ.

ಇಲ್ಲಿಯವರೆಗೆ ಒಟ್ಟು ನಾಲ್ವತ್ಮೂರು ಪಿ.ಎಚ್.ಡಿ ಮಹಾಪ್ರಬಂಧಗಳು ರಚನೆಯಾಗಿವೆ. ಅವುಗಳಲ್ಲಿ ಕರ್ನಾಟಕ ವಿರ್ಶವವಿದ್ಯಾಲಯದಿಂದ ಎರಡು ಪಿ.ಎಚ್.ಡಿ ಮಹಾಪ್ರಬಂಧಗಳು ಬಂದಿದ್ದು ಕರ್ನಾಟಕದಲ್ಲಿ ಮೊಟ್ಟಮೊದಲು ಮಹಾಪ್ರಬಂಧ ಈ ವಿಶ್ವವಿದ್ಯಾಲಯದಿಂದ ಬಂದಿರುವುದು ಗಮನಾರ್ಹ ಅಂಶವಾಗಿದೆ. ಮತ್ತು ಬೆಂಗಳೂರು ವಿಶ್ವವಿದ್ಯಾಲಯದಿಂದ ಒಟ್ಟು ನಾಲ್ಕು ಪಿ.ಎಚ್.ಡಿ ಮಹಾಪ್ರಬಂಧಗಳು ಹೊರಬಂದಿದೆ. ಮೈಸೂರು ವಿಶ್ವವಿದ್ಯಾಲಯದಿಂದ ಮೂರು. ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಆರು . ಪಿ.ಎಚ.ಡಿ ಮಹಾ ಪ್ರಬಂಧಗಳು ಬಂದಿವೆ.

ಕನ್ನಡ ವಿಶ್ವವಿದ್ಯಾಲಯ, ಮೂವತ್ತು, ಹಂಪಿಯಿಂದ ಉಳಿದ ಪಿ.ಎಚ್.ಡಿ ಮಹಾಪ್ರಬಂಧ ಬಂದಿದ್ದು, ದೃಶ್ಯಕಲಾ ವಿಭಾಗದಿಂದ ಮೂವತ್ತು ಪಿ.ಎಚ್.ಡಿ ಮಹಾಪ್ರಬಂಧಗಳು ಪುರಾತತ್ವ ವಿಭಾಗದಿಂದ ಒಂದು, ಶಾಸನಶಾಸ್ತ್ರ ವಿಭಾಗದಂದ ಒಂದು, ಸಂಗೀತ ಮತ್ತು ನೃತ್ಯ ವಿಭಾಗದಿಂದ ಒಂದೂಂದು ಒಟ್ಟು ಮೂರು ಪಿ.ಎಚ್.ಡಿ ಮಹಾಪ್ರಬಂಧಗಳು ಬಂದಿದ್ದು ಇವೆಲ್ಲ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳಾಗಿವೆ.

ಈ ಮೇಲಿನ ಅಂಕಿಸಂಖ್ಯೆಗಳನ್ನು ಗಮನಿಸಿದರೆ ಒಟ್ಟು 35 ಮಹಾಪ್ರಬಂಧಗಳು ಕರ್ನಾಟಕದಲ್ಲಿ ಇಲ್ಲಿಯವರೆಗೆ ಬಂದಿದ್ದು, ಅವುಗಳಲ್ಲಿ ಕನ್ನಡ ವಿಶ್ವಿದ್ಯಾಲಯ ಹಂಪಿಯಿಂದಲೇ ಇಪ್ಪತ್ಮೂರು ಪಿ.ಎಚ್.ಡಿ ಮಹಾಪ್ರಬಂಧಗಳು ಉಳಿದ ವಿಶ್ವವಿದ್ಯಾಲಯಗಳಲ್ಲಿ ಒಟ್ಟು ಹನ್ನೆರಡು ಪಿ.ಎಚ್.ಡಿ ಮಹಾಪ್ರಬಂಧಗಳು ಬಂದಿವೆ. ಸಂಶೋಧನೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಮಂಚೂಣಿಯಲ್ಲಿದ್ದುದು ಮೇಲಿನ ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

2) ಎಂ.ಫಿಲ್ ಅಧ್ಯಯನಗಳು

ಕರ್ನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್ ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು, ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ, ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ, ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್ ಸಂಶೋಧನಾ ಅಧ್ಯಯನ ನಡೆಯುತ್ತಿದೆ. ನಡೆದು ಬಂದು ಎಂ.ಫಿಲ್ ಸಂಶೋಧನಾ ಅಧ್ಯಯನವು ಈ ಕೆಳನಂತಿದೆ.

2002ರಲ್ಲಿ **ಮಲ್ಲಿಕಾರ್ಜುನ ಬಾಗೋಡಿಯವರು ಚಿತ್ರಕಲಾವಿದ ಜೆ.ಎಸ್.ಖಂಡೇರಾವ್ ಒಂದು ಅಧ್ಯಯನ,** 2003ರಲ್ಲಿ ಎ.ಎಸ್.ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು,** 2005ರಲ್ಲಿ ಸಿ.ಡಿಜಟ್ಟೆಣ್ಣವರ ಅವರು **ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಬದುಕು,** ಶಂಕರ ಕುಂದಗೋಳ ಅವರು **ಡಿ.ವಿಹಾಲಭಾವಿಯವರ ಜೀವನ ಮತ್ತು ಕಲಾಬದುಕು,** 2006ರಲ್ಲಿ ಸುಚಿತ್ರಾ ಲಿಂಗದಳ್ಳಿಯವರು **ವಿಜಯನಗರದ ಭಿತ್ತಿಚಿತ್ರಕಲೆ** ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಮತ್ತು 2006ರಲ್ಲಿ ರಾಜಕುಮಾರ ಎಸ್. ಕಾಳೆ **ಜೌಂದ ಗ್ಯಾಲರಿ** ಜೀತೇಂದ್ರ ಜಿ.ಕೋತಳಿಕರ **ಕಲಾವಿದ ವಿದ್ಯಾಭೂಷಣರ** ಬಗ್ಗೆ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಅಧ್ಯಯನ ಮಾಡಿದ್ದಾರೆ. 2007ರಲ್ಲಿ ಬಿ.ಎಂ. ಪಾಟೀಲರು **ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು,** ಉಮೇಶ ಎ.ಸ್. ಇವರು **ಕರ್ನಾಟಕ ಜೈನ ಚಿತ್ರಕಲೆ,** ರವಿ ನಾಯಕರ **ಕಿನ್ನಾಳ ಕಲೆ,** ಶಶಿಕಾಂತ ಬಸರಿಕಟ್ಟಿಯವರ **ಕಲಘಟ್ಟಿಯ ಚಿತ್ರಕಲೆ,** ಶೈಲಾ ಬರಡೋಲರ ಸಂತ ಕಲಾವಿದ **ಶುಭಾರಾಯರ ಜೀವನ ಮತ್ತು ಕಲಾಕೃತಿಗಳು** ಎಂಬ ಪ್ರಬಂಧಗಳು ಹೊರಬಂದಿವೆ.

2008ರಲ್ಲಿ ಕೃಷ್ಣವೇಣಿ ಅವರು **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,** ಯೋಗೀಶ ಹೆಚ್. **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ,** ಮಹಾಕೋಟೇಶ್ವರಗೌಡ ಪಾಟೀಲ **ಬೆಳಗಾವಿ ಜಿಲ್ಲೆಯ ಚಿತ್ರಕಲೆ,** ಸುರೇಶ ಬಡಿಗೇರ **ಕನ್ನಡ ವಿಶ್ವವಿದ್ಯಾಲಯದ ಹಸ್ತಪತ್ರಿಕೆಗಳ ಚಿತ್ರಕಲೆ,** ಸಂತೋಷ್‌ಕುಮಾರ್ ಕುಲಕರ್ಣಿ **ದಾವಣಗೆರೆ ಜಿಲ್ಲೆಯ ಚಿತ್ರಕಲೆ** ಜಯರಾಜ ಚಿಕ್ಕಪಾಟೀಲರ **ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು,** ಮಹೇಶ

ಉಮತಾರ **ಬಿ.ಪಿ. ಬಾಯರಿ ಕಲೆ ಮತ್ತು ಕಲಾ ಸಾಹಿತ್ಯ** ಗಿರಿಜಾ ಬಿರಾದಾರ **ಬಿಜಾಪುರ ಜಿಲ್ಲೆ ಚಿತ್ರಕಲೆ,** ಬಸಯ್ಯ ಗವಿಮಠ **ಬಾಗಲಕೋಟೆ ಜಿಲ್ಲೆ ಚಿತ್ರಕಲೆ,** ಕೃಷ್ಣೇಗೌಡ ಹೆಚ್.ಎನ್. **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ,** ಮಹಾಂತೇಶ ಪಲದಿನ್ನಿ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು,** 2009ರಲ್ಲಿ ಕಾಂತರಾಜ ಅವರ **ಸಿಭಿ ದೇವಾಲಯದ ಭಿತ್ತಿಚಿತ್ರಕಲೆ,** ರಂಗಸ್ವಾಮಿ ಅವರ **ಚಿತ್ರಕಲಾವಿದ ರುಮಾಲೆ ಚೆನ್ನಬಸಯ್ಯನವರು,** ವಿಶ್ವನಾಥ ಅವರ **ಚಿತ್ರದುರ್ಗ ಜಿಲ್ಲೆ ಚಿತ್ರಕಲೆ,** ಶ್ಯಾಮ ತಾ. ಆಮಾದಾರರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು** ಕನ್ನಡ ವಿಶ್ವವಿದ್ಯಾಲಯದಿಂದ ಬಂದಿವೆ. 2010ರಲ್ಲಿ ಬಾನುಮತಿ ಕೆ.ಎಲ್ ಅವರ ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು, ದಿನೇಶ್ ರವರ **ಚೆನ್ನಪಟ್ಟಣದ ಚಿತ್ತರಾದ ಬೊಂಬೆಗಳು,** ವಾದಿರಾಜ್ ಅವರ **ಕಲಾವಿದ ಎಲ್.ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು,** ಚಿಂತಾಮಣಿ ಅವರ **ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ** ಇವುಗಳು ಎಲ್ಲಾ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಬಂದ ಎಂ.ಫಿಲ್. ಪ್ರಬಂಧಗಳಾಗಿವೆ.

ಇಲ್ಲಿಯವರೆಗೆ ಕರ್ನಾಟಕದಲ್ಲಿ ಒಟ್ಟು ಮುವತ್ತೊಂದು ಎಂ.ಫಿಲ್ ಪದವಿಯ ಸಂಶೋಧನಾ ಪ್ರಬಂಧಗಳು ಹೊರಬಂದಿದ್ದು, ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ, ಎರಡು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಇಪ್ಪತ್ತೊಂಬತ್ತು ಎಂ.ಫಿಲ್ ಪ್ರಬಂಧಗಳಾಗಿವೆ.

3) ಡಿ.ಲಿಟ್ ಪದವಿಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್ ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನಲೆಯಲ್ಲಿ ಹೊರಬಂದ ಡಿ.ಲಿಟ್ ಪ್ರಬಂಧಗಳು ಈ ಕೆಳಗಿನಂತಿವೆ.

2001ರಲ್ಲಿ ದೇವದಾಸ ಕಳಸದ ಇವರ **ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ,** 2005ರಲ್ಲಿ ಬಂದ ಆನಂದ ಪೂಜಾರವರ **ಕರಾವಳಿಯ ಕಾವಿಚಿತ್ರಕಲೆ,** 2005ರಲ್ಲಿ ಡಿ.ಎ ಉಪಾಧ್ಯ ಇವರ **ದೃಶ್ಯಕಲೆಗಳ ತೌಲನಿಕ ಅಧ್ಯಯನ(ವಾಸ್ತುಶಿಲ್ಪ ಚಿತ್ರಕಲೆಯ ಹಿನ್ನಲೆಯಲ್ಲಿ) ಸೌಂದರ್ಯದ ಪರಿಕಲ್ಪನೆ,** 2010ರಲ್ಲಿ ಎಂ.ಎಸ್. ಮೂರ್ತಿ ಅವರ **ಮಕ್ಕಳ ಮನಸ್ಸಿಗೆ ಚಿತ್ರಗಳು** ಇವುಗಳು ಮುಖ್ಯವಾಗಿವೆ. ಈ ಡಿ.ಲಿಟ್ ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯ ಪದವಿಗಳ ಅವಶ್ಯಕತೆ ಇರುವುದಿಲ್ಲ. ಅಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಕನ್ನಡ ವಿಶ್ವವಿದ್ಯಾಲಯವು ಪರಿಶೀಲಿಸಿ ಇಂತಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್ ಸಂಶೋಧನಾ ಅಧ್ಯಯನಕ್ಕೆ ಅವಕಾಶವಿರುತ್ತದೆ. ಇದಲ್ಲದೆ ಇನ್ನು ಆನೇಕ ಪಿ.ಎಚ್.ಡಿ. ಎಂ.ಫಿಲ್ ಮತ್ತು ಡಿ.ಲಿಟ್ ಪ್ರಬಂಧಗಳು ರಚನೆ ಹಂತದಲ್ಲಿವೆ.

ಇವುಗಳಲ್ಲದೇ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳ ಹಂತದಲ್ಲಿಯೂ ಕಿರುಶೋಧ ಪ್ರಬಂಧಗಳು ರಚನೆಯಾಗುತ್ತಲಿರುವುದು ಗಮನಾರ್ಹ ಸಂಗತಿಯಾಗಿದೆ. ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲ್ಬರ್ಗಾ, ದಾರವಾಡ, ಶಿವಮೊಗ್ಗ, ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರಂತರಾಗಿದ್ದಾರೆ.

ಎ.ಟಿ.ಸಿ (ಆರ್ಟ್ ಟೀಚರ್ಸ್ ಕೋರ್ಸ್) ಐದು ವರ್ಷದ ವಿಶೇಷ ಪರಿಣಿತಿ ಚಿತ್ರಶಿಲ್ಪ, ಗ್ರಾಫಿಕ್, ವಾಣಿಜ್ಯಕಲೆಯ ಡಿಪ್ಲೋಮಾಅಂತಿಮ ವರ್ಷದ ತರಗತಿಯಲ್ಲಿ ಈ ಕೋರ್ಸಿನ ಭಾಗವಾಗಿ ಕಿರುಪ್ರಬಂಧಗಳನ್ನು ರಚಿಸುತ್ತಿದ್ದು, ಇವುಗಳ ಸಂಖ್ಯೆ ಸಾವಿರಕ್ಕೂ ಅಧಿಕವಾಗಿವೆ. ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ (ಬಿ.ಎಫ್.ಎ), ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ ಎಜುಕೇಷನ್ (ಬಿ.ವಿ.ಇ.ಡಿ) ಪದವಿ ಹಾಗೂ ಮಾಸ್ಟರ್ ಆಫ್ ವಿಜ್ಯುವಲ್ ಆರ್ಟ್ಸ್ (ಎಂ.ವಿ.ಎ) ಪದವಿ, ಮಾಸ್ಟರ್ ಆಫ್ ಫೈನ್ ಆರ್ಟ್ಸ್ (ಎಂ.ಎಫ್.ಎ) ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಈ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗುತ್ತಿದ್ದು, ಅವುಗಳ ಸಂಖ್ಯೆ ಸಾವಿರ ಮೀರಿದೆ.

ಈ ಕಿರು ಪ್ರಬಂಧಗಳು ವಿದ್ಯಾರ್ಥಿಗಳು ಅಯಾ ಕೋರ್ಸಿನ ಅಧ್ಯಯನ ಸಂದರ್ಭದಲ್ಲಿ ನಡೆದ ಸಂಶೋಧನಾ ಅಧ್ಯಯನಗಳಾಗಿದ್ದು. ಇವು ಮುಂದೆ ಸಂಶೋಧನಾ ಅಧ್ಯಯನಕ್ಕೆ ಅಭ್ಯರ್ಥಿಗಳು ತೊಡಗಸಿಕೊಳ್ಳಲು ಈ ಹಂತದ ಅಧ್ಯಯನಗಳು ತುಂಬಾ ಸಹಾಯಕಾರಿಯಾಗಿವೆ. ಮತ್ತು ಆನೇಕ ವೈವಿಧ್ಯಮಯವಾದ ವಿಷಯದ ಈ ಕಿರು ಪ್ರಬಂಧ ಸಂಶೋಧನ ಅಧ್ಯಯನಕ್ಕೆ ಆಕರ ಸಾಮಗ್ರಿಯಾಗಿವೆ.

ಹಾಲಭಾವಿ ಸ್ಕೂಲ ಆರ್ಟಿನ ಕುರಿತು ಇದುವರೆಗೆ ನಡೆದ ಅಧ್ಯಯನ

1968ರಲ್ಲಿ ದಾನಪ್ಪ ಹಾಲಭಾವಿಯವರಿಗೆ ಆರವತ್ತು ವರ್ಷ ತುಂಬಿದ ಸಂಧರ್ಭದಲ್ಲಿ ತಾರಾ ಪವಾರ್ ಅವರ ಸಂಪಾದಕತ್ವದಲ್ಲಿ "ಅರವತ್ತರ ಒಸಗೆ" ಎಂಬ ಸ್ಮರಣ ಸಂಚಿಕೆಯಲ್ಲಿ ಕಲಾಶಾಲೆಯ ಕುರಿತು ಬರೆಯಲಾಗಿದೆ. 1979ರಲ್ಲಿ ಕರ್ನಾಟಕದ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ, "ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟದ ಸ್ಕೂಲ್ ಆಫ್ ಆರ್ಟ್ ಧಾರಾವಾಡ" ಎಂಬ ಸಂಶೋಧನಾ ಕಿರುಪ್ರಬಂಧವು, ಚಿತ್ರಕಲಾ ಸಂಶೋಧನಾ ಕ್ಷೇತ್ರದಲ್ಲಿಯೇ ಪ್ರಥಮ ಅಧ್ಯಯನವಾಗಿದೆ, ಇದರಲ್ಲಿ ಕಲಾಶಿಕ್ಷಣದ ಕುರಿತು, ಪಠ್ಯಕ್ರಮಗಳ ಕುರಿತು ಅಧ್ಯಯನ ಮಾಡಲಾಗಿದೆ. 1985ರಲ್ಲಿ ಹಾಲಭಾವಿ ಸ್ಕೂಲ್ ಆರ್ಫ ಆರ್ಟಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಹೊರಬಂದ ಸ್ಮರಣ ಸಂಚಿಕೆಯಲ್ಲಿ, ಕಲಾಮಂದಿರದ ಕುರಿತು "ಊಚಿಟಜಿ ಚಿ ಅಜಟಿಣಣಾಡಿಥಿ" ಎಂಬ ಲೇಖನದಲ್ಲಿ ಅಂದಿನ ಪ್ರಾಚಾರ್ಯರಾದ ಶ್ರೀ ಸುರೇಶ್ ಹಾಲಭಾವಿ ಅವರು ಮಹತ್ವದ ಅಂಶಗಳನ್ನು ಕಲಾಶಾಲೆಯ ಕುರಿತು ತಿಳಿಸಿರುವರು. 1995ರಲ್ಲಿ ನಡೆದ ಕಲಾಮಂದಿರದ ವಜ್ರಮಹೋತ್ಸವ ಸಂದರ್ಭದಲ್ಲಿ "ಚಿತ್ರಾಕ್ಷಿ" ಹಾಗೂ "ಚಿತ್ರಕಲೆ" ಮತ್ತು ಪೂರಕ ಕ್ಷೇತ್ರಗಳು" ಡಾ ಎಸ್.ಸಿ. ಪಾಟೀಲ್ ಸಂಪಾದಕತ್ವದಲ್ಲಿ ಹೊರಬಂದಿದ್ದು, ಇದರಲ್ಲಿ ಡಿ.ವಿ. ಹಾಲಭಾವಿಯವರ ಹಾಗೂ ಮಹಾವಿದ್ಯಾಲಯದ ಕುರಿತು ಕೆಲವು ಲೇಖನಗಳು ಬಂದಿರುವವು. 2005ರಲ್ಲಿ ಚಿತ್ರಕಲಾವಿದ ಡಿ.ವಿ ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು ಎಂಬ ಎಂ.ಫಿಲ್ ಅಧ್ಯಯನವನನು ಶ್ರೀ ಶಂಕರ ಕುಂದಗೋಳ ಅವರು ಮಾಡಿದ್ದು, ಸ್ಕೂಲ್ ಆಫ್ ಆರ್ಟ್ ಕುರಿತು ಮೂರನೇ ಅಧ್ಯಯದಲ್ಲಿ ಹೇಳಿರುವರು. 2006ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ ಎಂಬ ಕಿರು ಸಂಶೋಧನಾ ಪ್ರಬಂಧವನ್ನು ಶ್ರೀ.ಬಿ.ಎಂ. ಪಾಟೀಲ್‌ರವರು ಕನ್ನಡ ವಿ.ವಿ ಹಂಪಿ ಇಲ್ಲಿಗೆ ಸಾದರಪಡಿಸಿರುತ್ತಾರೆ. ಸ್ಕೂಲ್ ಆಫ್ ಆರ್ಟ್ ಕುರಿತು ಗ್ರಂಥಗಳಲ್ಲಿ ಪ್ರಕಟವಾದ ಲೇಖನಗಳಂತೆಯೇ ಪತ್ರಿಕೆಯಲ್ಲೂ ಕಲಾ ಚಟುವಟಿಕೆಗಳ ಕುರಿತು ಲೇಖನಗಳು ಪ್ರಕಟವಾಗಿವೆ. ಬೆಳ್ಳಿ ಮಹೋತ್ಸವ, ಸುವರ್ಣ ಮಹೋತ್ಸವ, ವಜ್ರಮಹೋತ್ಸವಗಳ ಹಾಗೂ ಅಮೃತ ಮಹೋತ್ಸವ ಅಲ್ಲದೆ ಡಿ.ವಿ. ಹಾಲಭಾವಿಯವರ ಪ್ರಶಸ್ತಿ ಸಮಾರಂಭ ಸಂದರ್ಭದಲ್ಲಿ ವಾರ್ಷಿಕ ಚಿತ್ರಕಲಾ ಪ್ರದರ್ಶನಗಳ

ಸಂದರ್ಭದಲ್ಲಿ ನಾಡಿನ ಎಲ್ಲಾ ಕನ್ನಡ ಮತ್ತು ಆಂಗ್ಲ ಪತ್ರಿಕೆಯಲ್ಲಿ ಸ್ಕೂಲ್ ಆಫ್ ಆರ್ಟ್ ಕುರಿತು ಹಲವಾರು ಲೇಖನಗಳು ಬಂದಿವೆ. ಹೀಗೆ ಗ್ರಂಥಗಳಲ್ಲಿ ಪತ್ರಿಕೆಗಳಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕುರಿತು ಲೇಖನಗಳು ಪ್ರಕಟವಾಗಿವೆ. ಈ ಕಲಾ ಮಹಾವಿದ್ಯಾಲಯದ ಪ್ರಸ್ತುತ ಸಮಗ್ರ ಸಂಶೋಧನಾ ಅಧ್ಯಯನವನ್ನು ಮಾಡುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಹಲವಾರು ಉದ್ದೇಶಗಳನ್ನು ಹೊಂದಿದ್ದು, ಅವುಗಳಲ್ಲಿ ಪ್ರಮುಖವಾದ ಕೆಲವು ಉದ್ದೇಶಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಧಾರವಾಡದ ಸ್ಕೂಲ್ ಆಫ್ ಆರ್ಟ್ ಇಂದು ಎಪ್ಪತ್ತೈದು ವಸಂತಗಳನ್ನು ಪೂರೈಸಿ ಮುನ್ನಡೆಯುತ್ತಲಿದೆ. ಈ ಸಂಸ್ಥೆಯು ಬೆಳೆದು ಬಂದ ಐತಿಹಾಸಿಕ ಹಿನ್ನೆಲೆಯನ್ನು ಅಧ್ಯಯನಕ್ಕೊಳಪಡಿಸುವುದು ಒಂದು ಪ್ರಮುಖ ಉದ್ದೇಶವಾಗಿದೆ. ಈ ಸಂಸ್ಥೆಯು ಪ್ರಾರಂಭಿಕ ಹಂತದಿಂದ ಬೆಳವಣಿಗೆ ಹಂತದವರೆಗೆ ಎದುರಿಸಿದ ಹಲವಾರು ಸಮಸ್ಯೆಗಳು ಮತ್ತು ಅವುಗಳಿಗೆ ಕಂಡುಕೊಂಡ ಪರಿಹಾರಗಳು ಕಾಲಕಾಲಕ್ಕೆ ಬದಲಾವಣೆಯಾದ ಪಠ್ಯಕ್ರಮಗಳು, ಕಲಿಸುವ ವಿಷಯಗಳ ಕುರಿತಾಗಿ ಅಧ್ಯಯನ ಮಾಡುವ ಉದ್ದೇಶ ಇದೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಿಸುವ ಅಧ್ಯಾಪಕರು ಮತ್ತು ಬೋಧನಾ ಪದ್ಧತಿ ಮುಂತಾದ ವಿಷಯಗಳನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶವನ್ನು ಹೊಂದಲಾಗಿದೆ. ಸ್ಕೂಲ್ ಆಫ್ ಆರ್ಟ್‌ನಿಂದ ತೇರ್ಗಡೆಯಾಗಿ ಬಂದ ವಿದ್ಯಾರ್ಥಿಗಳು ಬೇರೆ ಬೇರೆ ಕಡೆಗಳಲ್ಲಿ ಬೆಳೆದು ನಿಂತ ಸ್ಥೂಲವಾದ ವಿವರಗಳನ್ನು ದಾಖಲಿಸುವ ಮತ್ತು ಈ ಸಂಸ್ಥೆಯ ಕೊಡುಗೆಯನ್ನು ವಿವರಿಸುವ ಪ್ರಯತ್ನವು ಇಲ್ಲಿದೆ. ಹಾಗೆಯೇ ಇಲ್ಲಿಯ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಕಲಾಚಟುವಟಿಕೆಗಳನ್ನು ಉದಾ: ಕಲಾಪ್ರದರ್ಶನಗಳು, ಕಲಾಶಿಬಿರಗಳು, ಕಲಾಪ್ರಾತ್ಯಕ್ಷಿಕೆಗಳು, ವಿಚಾರ ಸಂಕಿರಣಗಳು, ಗ್ರಂಥಪ್ರಕಟಣೆ ಮುಂತಾದ ಅಂಶಗಳನ್ನು ದಾಖಲಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನ ಹೊಂದಿದೆ.

ಒಟ್ಟಾರೆ ಸ್ಕೂಲ್ ಆಫ್ ಆರ್ಟ್‌ನ ಸುದೀರ್ಘ ಬದುಕಿನ ಸಮಗ್ರವಾದ ಕೊಡುಗೆಯನ್ನು ದೃಶ್ಯಕಲಾ ಪ್ರಪಂಚಕ್ಕೆ ತಿಳಿಯಪಡಿಸುವ ಪ್ರಮುಖ ಉದ್ದೇಶವು ಈ ಅಧ್ಯಯನದ ಹಿಂದೆ ಅಡಕವಾಗಿದೆ.

ಅಧ್ಯಯನದ ಸ್ವರೂಪ

"ದೃಶ್ಯಕಲಾ ಶಿಕ್ಷಣಕ್ಕೆ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಕೊಡುಗೆ" ಎಂಬ ಶೀರ್ಷಿಕೆಯಡಿಯಲ್ಲಿ ರೂಪುಗೊಂಡ ಈ ಕಿರುಪ್ರಬಂಧವು ಅಧ್ಯಯನದ ಅನುಕೂಲತೆಗಾಗಿ ಏಳು ಅಧ್ಯಾಯಗಳಾಗಿ ವಿಂಗಿಡಸಿ ಅಧ್ಯಯನ ಮಾಡಲಾಗುವುದು. ಅವುಗಳ ಸಂಕ್ಷಿಪ್ತ ಸ್ವರೂಪವನ್ನು ಈ ಕೆಳಗೆ ನೀಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನವನ್ನು ಸ್ಪಷ್ಟವಾಗಿ ಕಟ್ಟಿಕೊಡಲಾಗುವುದು.

ಎರಡನೆಯ ಅಧ್ಯಾಯದಲ್ಲಿ ಭಾರತದ ಕಲಾಶಿಕ್ಷಣದ ಐತಿಹಾಸಿಕ ಹಿನ್ನೆಲೆ ಕುರಿತದ್ದು, ಇಲ್ಲಿ ಬ್ರಿಟೀಷ್ ಪೂರ್ವದ ಹಂತ, ಬ್ರಿಟೀಷ್ ಕಾಲದ ಹಂತ ಹಾಗೂ ಸ್ವಾತಂತ್ರ್ಯೋತ್ತರ ಹಂತ ಎಂದು ಮೂರು ವಿಭಾಗಗಳಾಗಿ ವಿಂಗಡಿಸಿ ಚರ್ಚಿಸಲಾಗುವುದು.

ಮೂರನೆಯ ಅಧ್ಯಾಯದಲ್ಲಿ ಧಾರವಾಡ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಹುಟ್ಟು, ಬೆಳವಣಿಗೆಯ ಹಿನ್ನೆಲೆಯನ್ನು ಕುರಿತು ಅಧ್ಯಯನ ಮಾಡಲಾಗುವುದು.

ಐದನೆಯ ಅಧ್ಯಾಯದಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಪಠ್ಯಕ್ರಮ, ಬೋಧಕವರ್ಗ ಮತ್ತು ವಿದ್ಯಾರ್ಥಿ ಸಮುದಾಯದ ಕುರಿತು ಸ್ಥೂಲವಾಗಿ ಚರ್ಚಿಸಲಾಗುವುದು.

ಆರನೆಯ ಅಧ್ಯಾಯದಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಕಲಾಚಟುವಟಿಕೆಗಳ ಬಗ್ಗೆ ಅಧ್ಯಯನ ಮಾಡಲಾಗುವುದು.

ಅಧ್ಯಾಯ ಏಳು ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಆರು ಅಧ್ಯಾಯಗಳ ಪ್ರಮುಖ ಫಲಿತಗಳ ಸಮೀಕ್ಷೆಯನ್ನು ಮಾಡಲಾಗುವುದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಪ್ರಬಂಧವು ಧಾರವಾಡದ ಸ್ಕೂಲ್ ಆಫ್ ಆರ್ಟ್ ಕಲಾಶಿಕ್ಷಣ ಸಂಸ್ಥೆಯ ಕುರಿತು ಅಧ್ಯಯನ ಮಾಡುವ ವ್ಯಾಪ್ತಿಯನ್ನು ಹೊಂದಿದೆ. ಆದರೂ ಆನುಷಂಗಿಕವಾಗಿ ಕರ್ನಾಟಕ ಮತ್ತು ಕರ್ನಾಟಕೇತರ ಪ್ರದೇಶಗಳಲ್ಲಿನ ಕಲಾಶಿಕ್ಷಣ ಸಂಸ್ಥೆಗಳನ್ನು ಪೂರಕವಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು.

ಅಧ್ಯಯನದ ವಿಧಾನ

ಪ್ರಸ್ತುತ ಈ ಪ್ರಬಂಧವನ್ನು ರಚಿಸಲು ಎರಡು ರೀತಿಯ ವಿಧಾನಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗುವುದು.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕಿ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಪ್ರಮುಖವಾಗಿ ಕ್ಷೇತ್ರಕಾರ್ಯ, ಕಛೇರಿ ದಾಖಲೆಗಳು, ಆದೇಶಗಳು ಹಾಗೂ ಇತರ ಮಾಹಿತಿ, ಪುಸ್ತಕಗಳು, ಪೀಠೋಪಕರಣಗಳು, ಕಲಿಕೋಪಕರಣಗಳು, ಕಟ್ಟಡ ಹಾಗೂ ವಿಸ್ತೀರ್ಣಗಳ ವಿವರವಾದ ನಕ್ಷೆಗಳು, ಸಂಗ್ರಹಿತ ಕಲಾ ಪ್ರಕಾರಗಳು, ಕಲಾಕೃತಿಗಳು, ಫಲಿತಾಂಶ ಇತ್ಯಾದಿಗಳ ಪಟ್ಟಿಗಳನ್ನು ಸಿದ್ದಪಡಿಸಿ ವಿವಿಧ ರೂಪ , ಆಯಾಮಗಳಲ್ಲಿ ಅಧ್ಯಯನ ಮಾಡಲಾಗುವುದು.

೧. **ಸಂದರ್ಶನ :** ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಪ್ರಾಚಾರ್ಯರು, ನಿವೃತ್ತ ಅಧಿಕಾರಿಗಳು, ನಿವೃತ್ತ ಅಧ್ಯಾಪಕರುಗಳು ಹಾಗೂ ಇಲ್ಲಿ ಕಲಿತ ಹಳೆಯ ವಿದ್ಯಾರ್ಥಿಗಳು ಮುಂತಾದವರ ಲೇಖನ ಮೂಲಗಳಿಂದಲೂ ಸಹ ಮಾಹಿತಿ ಪಡೆಯಲಾಗಿದೆ. ಸಂದರ್ಶಕರಿಂದ ಬಂದ ಅಭಿಪ್ರಾಯಗಳು. ಹೇಳಿಕೆಗಳು, ಧ್ವನಿಸುರುಳಿ, ಇತ್ಯಾದಿ ವಿವಿಧ ಪೂರಕ ಮಾಹಿತಿಗಳನ್ನು ಪಡೆದು ಅಧ್ಯಯನ ಮಾಡಲಾಗುವುದು.

೨. ಛಾಯಾಗ್ರಹಣ : ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಕಟ್ಟಡ ನಕ್ಷೆಗಳನ್ನು ತರಗತಿ ಕೊಠಡಿಗಳು, ಕಲಾ ಗ್ಯಾಲರಿಗಳಲ್ಲಿ ಛಾಯಾಗ್ರಹಣ ಸಂಗ್ರಹಿಸಿದ ಕಲಾಕೃತಿಗಳು, ಕಲಾ ಶಿಬಿರಗಳು, ಪ್ರದರ್ಶನಗಳು, ಸಭೆ ಸಮಾರಂಭಗಳು, ಕಲಾ ಚಟುವಟಿಕೆಗಳು ಮತ್ತು ಪ್ರಾತ್ಯಕ್ಷಿಕೆಗಳಲ್ಲಿ ಸಂಗ್ರಹಿಸಿದ ಕಲಾಕೃತಿಗಳು ಇತ್ಯಾದಿಗಳನ್ನು ಛಾಯಾಗ್ರಹಣ ಮಾಡಿಸಿ, ಪರಿಶೀಲಿಸಿ, ಸಂಸ್ಕರಿಸಿ ಹಾಗೂ ವಿಂಗಡಿಸಿ ವಿಷಯಗಳನ್ನು ಸೂಕ್ತವಾದ ಅಧ್ಯಾಯದಲ್ಲಿ ಅವುಗಳನ್ನು ಮುದ್ರಿಸಿ ಬಳಸಿಕೊಳ್ಳಲಾಗುವುದು.

೨. ಆನುಷಂಗಿಕ ಆಕರ ಸಾಮಗ್ರಿ

ಸಂಶೋಧನಾ ಕಿರು-ಪ್ರಬಂಧಗಳು ಹಾಗೂ ಪ್ರಕಟಿಕ ಪುಸ್ತಕಗಳು, ಅಪ್ರಕಟಿತ ಕೃತಿಗಳು ಹಾಗೂ ಕಲಾಶಾಲೆಯನ್ನು ಕುರಿತ ಲೇಖನಗಳು, ಉದ್ದೇಶಿತ ಬರಹಗಳು, ಪತ್ರಿಕಾ ವರದಿಗಳು, ವಿದ್ಯಾರ್ಥಿಗಳ ಸಂದರ್ಶನ, ಅವರಿಂದ ಬಂದ ಅಭಿಪ್ರಾಯಗಳನ್ನು ಈ ಸಂಶೋಧನಾ ಪ್ರಬಂಧವನ್ನು ಮಂಡಿಸಲಾಗುವುದು.

ಅಧ್ಯಾಯ : ಎರಡು
ಕಲಾಶಿಕ್ಷಣದ ಐತಿಹಾಸಿಕ ಹಿನ್ನೆಲೆ

ಅಧ್ಯಾಯ : ಎರಡು

ಕಲಾಶಿಕ್ಷಣದ ಐತಿಹಾಸಿಕ ಹಿನ್ನೆಲೆ

ಭಾರತದಲ್ಲಿ ಕಲಾವಿದರೇ ಸ್ವತಃ ಪರಿಶ್ರಮದಿಂದ ಕಲೆಯನ್ನು ಕಲಿಯುತ್ತಿದ್ದರು, ಇಲ್ಲವೇ ಅಜ್ಜ ಕಲಿತಿದ್ದನ್ನು ತಂದೆಗೆ ತಂದೆಯಿಂದ ಮಗನಿಗೆ, ಹೀಗೆ ವಂಶ ಪಾರಂಪರೆರ್ಯವಾಗಿ ಕಲೆಯು ಬೆಳೇದು ಬಂದಿತು. ನಮ್ಮ ದೇಶದಲ್ಲಿ ಎಲ್ಲಾ ಕಲೆ ಹಾಗೂ (ಕೈ ಕಸುಬುಗಳು) ಕರಕುಶಲ ಕಲೆಗಳು ತಂದೆಯಿಂದ ಮಕ್ಕಳಿಗೆ ಸಂಬಂಧಿಕರ ಮೂಲಕವೇ ಬೆಳೆದು ಬಂದಿವೆ. ೧೮ನೇ ಶತಮಾನದ ಆರಂಭದಲ್ಲಿ ಆದ ಬದಲಾವಣೆಗಳಂತೆ ಚಿತ್ರಕಲೆಯಲ್ಲಿಯೂ ಕ್ರಾಂತಿಕಾರಕ ಬದಲಾವಣೆಗಳಾದವು, ಅವುಗಳಲ್ಲಿ "ಕಲಾಶಾಲೆಗಳ ಹುಟ್ಟು ಒಂದಾಗಿತ್ತು. ಅದಕ್ಕೂ ಮೊದಲು ಪಾಶ್ಚಾತ್ಯ ದೇಶಗಳಲ್ಲಿಯೂ ಕಲಾಶಾಲೆಗಳು ಇರಲಿಲ್ಲ, ಆಸಕ್ತಿ ಇದ್ದವರು ಯಾರಾದರೂ ಕಲಾವಿದರಲ್ಲಿ ಆಶ್ರಯ ಪಡೆದು ಅವರು ಮಾಡುತ್ತಿದ್ದ ಕಲಾಕೃತಿಗಳಲ್ಲಿಯ ವಿಧಾನಗಳನ್ನು ನೋಡಿ, ಅವರಿಗೆ ಚಿತ್ರ ಬರೆಯುವುದರಲ್ಲಿ (ನೆರವಾಗಿ) ಸಹಾಯ ಮಾಡುತ್ತ ಕಷ್ಟಪಟ್ಟು ಕಲಿಯುತ್ತಿದ್ದರು. ಬಹಳಷ್ಟು ಕಲಾವಿದರು ಬೇರೆಯವರಿಗೆ, ತಮ್ಮ ಚಿತ್ರಕಲಾ ವಿಧಾನವನ್ನು ತಿಳಿಸಲು ಇಷ್ಟಪಡದೇ ಇರುವುದೂ ಕೂಡಾ ಕಂಡು ಬರುತ್ತದೆ. ಆಗ ಬೇರೆ ಬೇರೆ ಕಲಾವಿದರಿಂದ ಸ್ವಲ್ಪ ಸ್ವಲ್ಪವೇ ತಿಳಿದು ತಾವೇ ಅಭ್ಯಾಸ ಮಾಡಿ ಕಲಾವಿದರಾಗುತ್ತಿದ್ದರು. ಕೆಲವು ಕಡೆ ಮ್ಯೂಜಿಯಮ್‌ಗಳಲ್ಲಿ ಕಲೆಯನ್ನು ಹೇಳಿಕೊಡುವ ಪರಿಪಾಠವೂ ಇದ್ದಿತು ಆದರೆ ಇಲ್ಲಿ ಹಳೆಯ ಚಿತ್ರಗಳನ್ನು ನಕಲು ಮಾಡುವುದನ್ನು ಹೇಳಿಕೊಡುತ್ತಿದ್ದರು. ನಂತರ ಚಿತ್ರಕಲೆಗೆ ಒಂದು ಪಠ್ಯವಸ್ತುವನ್ನು ರಚಿಸಿ ಕ್ರಮಬದ್ಧವಾಗಿ ಚಿತ್ರ ರಚಿಸಲು ತೊಡಗಿದರು, ವ್ಯಕ್ತಿಗಳನ್ನು ಎದುರಿಗೆ ಕುಳ್ಳಿರಿಸಿ ಚಿತ್ರ ರಚಿಸುವುದು ಪ್ರಾರಂಭವಾಯಿತು ಹೀಗೆ ಪಠ್ಯಕ್ರಮದಲ್ಲಿ ಸೇರ್ಪಡೆಗೊಂಡ ವಿಷಯಗಳು ಕೆಳಗಿನಂತಿವೆ:

೧. ದೇಹ ರಚನಾಶಾಸ್ತ್ರ (Anotomy)

೨. ಯಥಾದರ್ಶನ (Perspective)

೩. ಭೂಮಿತಿಯಾಕೃತಿ ಚಿತ್ರಣ (Geometry)

೪. ಸ್ಥಿರಜೀವ ಚಿತ್ರಣ (Still life)

೫. ರೇಖಾಚಿತ್ರಣ (Drawing)

೬. ಸಂಯೋಜನೆ (Composition) – ಮುಂತಾದ ವಿಷಯಗಳನ್ನು ಕ್ರಮಬದ್ಧವಾಗಿ ಶಾಲೆಗಳಲ್ಲಿ ಕಲಿಸತೊಡಗಿದರು. ಇದೇ ಪಠ್ಯ ವಿಷಯ ತೆಗೆದುಕೊಂಡು, ಮುಂಬಯಿಯ ಜೆ. ಜೆ. ಕಲಾಶಾಲೆಯು ಆರಂಭವಾಯಿತು. ಚಿತ್ರಕಲೆಯು ಕುಲಕಸುಬಾಗಿಲ್ಲದವರೂ, ಚಿತ್ರಕಲೆಯನ್ನು ಕಲಿಯುವ ಆಸಕ್ತಿಯಿಂದ ಬಂದು ಸೇರತೊಡಗಿದರು. ಇಲ್ಲಿ ಕಲಿಸುವ ವಿಷಯ, ಇಲ್ಲಿ ಕಲಿಸುವ ಪದ್ಧತಿ ಹಾಗೂ ಮುಖ್ಯ ಉಪಾಧ್ಯಾಯರುಗಳು (ಮುಖ್ಯಸ್ಥರು) ವಿದೇಶದವರೇ ಆಗಿದ್ದರು, ಪಾಶ್ಚಾತ್ಯ ರೀತಿಯ ಚಿತ್ರಗಳಿಗೇ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಭಾರತೀಯ ಪರಂಪರಾನುಗತ ಚಿತ್ರಗಳಿಗೆ ಇಲ್ಲಿ ಅವಕಾಶವೇ ಇಲ್ಲದಂತಾಗಿ ನಮ್ಮದೇ ಆದ ಭಾರತೀಯ ಕಲೆಯು ಅವನತಿ ಕಾಣುವ ಭಯ ಕೆಲವರಲ್ಲಿ ಬಂದಿತು. ಇಂತಹ ಸಂದರ್ಭದಲ್ಲಿ ಜನಪ್ರಿಯ ಕಲಾವಿದನಾಗಿ ಹೊರಹೊಮ್ಮಿದ ರಾಜಾರವಿವರ್ಮನೂ ಸಹ "ಥಿಯೋಡರ್ ಜಾನ್‌ಸನ್" ಎಂಬ ವಿದೇಶಿಯನಿಂದಲೆ ಕಲಿತದ್ದು, ಆತನ ಕಲಾಕೃತಿಗಳೂ ಪಾಶ್ಚಾತ್ಯ ಶೈಲಿಯಲ್ಲಿಯೇ ರೂಪುಗೊಂಡವು. ಈ ಸಂದಿಗ್ಧ ಸ್ಥಿತಿಯಲ್ಲಿ ಭಾರತದ ಸಂಪ್ರದಾಯ ಶೈಲಿಯ ಚಿತ್ರಗಳು ಮತ್ತು ಹಿಂದೆ ಇದ್ದ ಭಾರತೀಯ ಪದ್ಧತಿಯ ಚಿತ್ರಕಲೆಯನ್ನು ಮತ್ತೆ ತರಬೇಕು ಎಂದು ಕಲ್ಕತಾದಲ್ಲಿ ಅಭಿನಿಂದ್ರನಾಥರ ನೇತೃತ್ವದಲ್ಲಿ ಇ.ಬಿ. ಹ್ಯಾವೆಲ್‌ರ ಮಾರ್ಗದರ್ಶನದೊಂದಿಗೆ ಇಂದಿನ ವಿಶ್ವಭಾರತಿಯಲ್ಲಿ ಡಾ.ರವೀದ್ರನಾಥ ಠಾಗೂರ್ ಅವರು ಕಲ್ಕತ್ತೆಯ ಬಳಿ ಇರುವ ಶಾಂತಿನಿಕೇತನ ಎಂಬ ಹಳ್ಳಿಯಲ್ಲಿ ಅಂತಹ ಒಂದು ಕಲಾಶಾಲೆಯನ್ನು ಪ್ರಾರಂಭಿಸಿದರು.

ಪ್ರಕೃತಿ ಸೌಂದರ್ಯದ ಮಧ್ಯೆಯಿರುವ ಪ್ರಶಾಂತವಾದ ಸ್ಥಳ ಇದಾಗಿರುವುದರಿಂದ ಇಲ್ಲಿ ಚಿತ್ರಕಲೆ, ಸಂಗೀತ, ನೃತ್ಯಗಳನ್ನು ಭಾರತೀಯ ಪದ್ಧತಿಯಲ್ಲಿ ಕಲಿಸತೊಡಗಿದರು. ವಿದ್ಯಾರ್ಥಿಗಳು ಹಾಗೂ ಉಪಾಧ್ಯಾಯರು ಇಲ್ಲಿಯೇ ಇರುತ್ತಿದ್ದರು. ಕಟ್ಟಡದ ಒಳಗೆ ಹೊರಗೆ ಗಿಡಗಳ ಅಡಿಯಲ್ಲಿ ಉಪಾಧ್ಯಾಯರು ಪಾಠ ಹೇಳಿಕೊಡುತ್ತಿದ್ದರು. ವರ್ಷವಿಡೀ ಶಿಕ್ಷಕರು ವಿದ್ಯಾರ್ಥಿಗಳ ಬಳಿ ಇರುವುದರಿಂದ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿತ್ತು, ಈ ಪದ್ಧತಿಯ ಶಿಕ್ಷಣವು ನಮ್ಮ ದೇಶದಲ್ಲಿ ಮೊದಲಿನಿಂದಲೂ ಬೆಳೆದು ಬಂದಿತ್ತು ಅದಕ್ಕೆ "ಗುರುಕುಲ ಶಿಕ್ಷಣ" ಎಂದು ಕರೆಯುತ್ತಾರೆ, ಶಾಂತಿನಿಕೇತನದಲ್ಲಿ ಕಲೆಯನ್ನು ಕೂಡಾ ಗುರುಕುಲ ಮಾದರಿಯಲ್ಲೇ ಹೇಳಿಕೊಡಬಹುದೆಂಬುದನ್ನು ತೋರಿಸಿಕೊಟ್ಟರು. ಈಗಲೂ ಅದೇ ಪದ್ಧತಿ ಅಲ್ಲಿದೆ. ಬ್ರಿಟೀಷರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದರು, ಕ್ರಮೇಣ ಅವರು ನೆಲೆಯೂರಿದರು, ಇದರಿಂದ ಅವರ ಸಂಸ್ಕೃತಿಯು ಭಾರತದ ಎಲ್ಲಾ ಕಡೆ ಪ್ರಚಾರಕ್ಕೆ ಬಂದಿತು. ಇಂಗ್ಲೀಷರ ಚಿತ್ರ, ಶಿಲ್ಪ ಕಲೆಗಳ ಪ್ರತಿಗಳು, ಪುಸ್ತಕಗಳು ಭಾರತಕ್ಕೆ ಬಂದವು ಅವರ ಪ್ರಕೃತಿಚಿತ್ರ, ಭಾವಚಿತ್ರ, ಸಂಯೋಜನಾಚಿತ್ರ ಮುಂತಾದವುಗಳು ಅವರ ಕಲೆಯಲ್ಲಿಯೇ ಮುಖ್ಯವಾದವುಗಳು ಅವರ ಪದ್ಧತಿಯೇ ನಮ್ಮಲ್ಲಿಯೂ ಬಳಕೆಗೆ ಬಂದಿತು.

ಕಂಪನಿ ಸ್ಕೂಲ್

ಭಾರತೀಯ ಚಿತ್ರಗಳ ವಿಕಸನ ಮತ್ತು ಪಾಶ್ಚಾತ್ಯ ಚಿತ್ರಕಲೆಯ ಸಂಪ್ರದಾಯದಿಂದಾಗಿ ಕಂಪನಿ ಚಿತ್ರಗಳು ಪ್ರಾರಂಭವಾದವು. ಈ ಚಿತ್ರಕಲಾ ಶೈಲಿಯು ಕ್ರಿ.ಶ. ೧೭೭೦ ರಿಂದ ಕ್ರಿ.ಶ. ೧೮೮೦ ರವರೆಗೆ ಬೆಳೆದು ಬಂದಿತು. ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಉತ್ಕೃಷ್ಟ ಮಟ್ಟವನ್ನು ತಲುಪಿತು. ಮೊಗಲ್‌ರ ಕಾಲದಲ್ಲಿ ಯುರೋಪಿನ ಕಲೆ ಬಂದು, ಭಾರತೀಯ ಕಲಾವಿದರ ಮೇಲೆ ಪ್ರಭಾವ ಬಿರಿತು. ಪಾಶ್ಚಾತ್ಯಕಲೆಯ ವೈಶಿಷ್ಟ್ಯಗಳನ್ನು ಪ್ರಾಂತೀಯ ಕಲೆಯಲ್ಲಿ ಬಳಸಿದಾಗ ಕಂಪನಿ ಚಿತ್ರಗಳಲ್ಲಿ ಏಕರೀತಿಯ ಶೈಲಿ ಕಂಡು ಬರುತ್ತಿರಲಿಲ್ಲ. ಆದರೆ

ಸಾಮಾನ್ಯವಾಗಿ ವಿಷಯ ಮಾತ್ರ ಒಂದೇ ರೀತಿಯಾಗಿರುತ್ತಿತ್ತು. ಧಾರ್ಮಿಕ, ಪೌರಾಣಿಕ ಹಬ್ಬಗಳು, ವ್ಯಕ್ತಿಗಳು, ಉಡುಪುಗಳು ಮತ್ತು ಆಡಳಿತಗಾರರ ಭಾವಚಿತ್ರಗಳು, ಪರಿಸರ ಮುಂತಾದವುಗಳನ್ನು ಕಾಣಬಹುದು. ನಂತರ ಪಾಟ್ನಾದಲ್ಲಿ "ಚಾರ್ಲ್ಸ್‌ಡಿಲೇ" ಮುದ್ರಣ ಯಂತ್ರವನ್ನು ಸ್ಥಾಪಿಸಿದ ಭಾರತೀಯ ಕಲಾವಿದರು ಇದರಲ್ಲಿ ಕೆಲಸ ಮಾಡುತ್ತಿದ್ದರು. ಮುದ್ರಣದ ಪ್ರಭಾವ ಜನಪ್ರಿಯವಾಯಿತು. ಮುದ್ರಣದ ಬಳಕೆಯಾದವು. ಇದರಿಂದ ಮುದ್ರಣದಲ್ಲಿ ಹೊಸಯುಗವೇ ಪ್ರಾರಂಭಾವಾಯಿತು.

ಭಾರತೀಯ ಕಿರುರೂಪ ಚಿತ್ರಗಳಲ್ಲಿ ಪ್ರಕೃತಿಯ ಸಹಜ ಚಿತ್ರಗಳು ಕಂಡು ಬರುತ್ತಿದ್ದು, ರಾಜಸ್ಥಾನ, ಕಿಷನ್‌ಘಡ, ಪಾಟ್ನಾ, ಬನಾರಸಗಳಲ್ಲಿ ಕಲಾಕೃತಿಗಳ ರಚನೆಯು ಪ್ರಾರಂಭವಾಯಿತು. ಭಾರತೀಯ ಗ್ರಾಮೀಣ ವಲಯದಲ್ಲಿ, ಕಲಾವಿದರು ಧಾರ್ಮಿಕ ಚಿತ್ರಗಳನ್ನು ರಚಿಸುತ್ತಿದ್ದರು. ಭಾರತದಲ್ಲಿ ಸಂಪ್ರದಾಯಿಕವಾಗಿ ಜಾನಪದ, ಬುಡಕಟ್ಟು, ಗ್ರಾಮೀಣ ಕಲೆಗಳು ಆಳವಾಗಿ ಬೇರೂರಿದ್ದು ಬಹಳ ಶಕ್ತಿಯುತವಾಗಿ ಬೆಳೆದು ಬಂದಿವೆ. ಬಂಗಾಳದಲ್ಲಿ – ಪಟುವಾ, ಬಿಹಾರದಲ್ಲಿ ಮಧುಬನಿ, ಕರ್ನಾಟಕದಲ್ಲಿ (ದಖನಿ) ಡೆಕ್ಕನ್, ಸುರಪುರ, ಮೈಸೂರು ಶೈಲಿಗಳು, ತಮಿಳುನಾಡಿನಲ್ಲಿ ತಂಜಾವೂರ್ ಶೈಲಿ ಇತ್ಯಾದಿಯಾಗಿ ಬೆಳೆಯುತ್ತಿದ್ದವು. ಈ ಕಲಾಕೃತಿಗಳಲ್ಲಿ ಬರುವ ಮೂಲಭೂತ ರಚನಾಕ್ರಮಗಳನ್ನು ಅಳವಡಿಸಿಕೊಂಡು ನಮ್ಮ ಪರಿಸರಕ್ಕೆ ಹೊಂದಿಕೊಂಡಿರುವಂತೆ ಚಿತ್ರಗಳನ್ನು ರಚಿಸುತ್ತಿದ್ದರು. ಇದರಲ್ಲಿ ಭಾರತದ ಆಧುನಿಕ ಕಲೆಯ ಮೇಲೆ ಹೆಚ್ಚು ಪ್ರಭಾವ ಬೀರಿದ್ದು ಬಂಗಾಲದ ಕಾಳಿಘಾಟ್ ಚಿತ್ರಗಳು ಹೀಗೆ ಕಲಾಕೃತಿಗಳು ರಚನೆಯಾಗುತ್ತಿದ್ದವು.

ಅನಂತರ ಕಲಾಕೃತಿಗಳು ರಚಿಸಲು ಕಲಾವಿದರಿಗೆ ಯಾಂತ್ರಿಕವಾಗಿ ಸಿದ್ದವಾದ ಕಾಗದ, ಜಲವರ್ಣಗಳು ಹೊಸ ಹೊಸ ತಂತ್ರಗಳು ಬಳಕೆಗೆ ಬಂದವು. ಅಲ್ಲದೇ ಚಿತ್ರಕಲೆಯಲ್ಲಿ ಅನೇಕ ಪ್ರಯೋಗಗಳೂ ನಡೆದವು. ಹೊಸ ಹೊಸ ಪಂಥಗಳು ಹುಟ್ಟಿಕೊಂಡವು. ವಾಸ್ತವವಾದ, ಸಮಷ್ಠಿವಾದ, ಭಾವಾಭಿವಾದ(Realism, Impresionism, Expressionism, etc)ದಂತಹ ಪ್ರಯೋಗಗಳು ನಡೆದವು. ಇದರಿಂದಾಗಿ ಹೊಸ ವಾತಾವರಣವೇ ಸೃಷ್ಠಿಯಾದಂತಾಯಿತು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಚಿತ್ರಕಲೆಯು ಕ್ರಾಂತಿಕಾರ ರೀತಿಯಲ್ಲಿ ಅನೇಕ ಬದಲಾವಣೆಗೊಳಗಾಯಿತು.

ಭಾರತದಲ್ಲಿಯೂ ಆಧುನಿಕ ಚಿತ್ರಕಲೆಯ ಜನನ ಮತ್ತು ಬೆಳವಣಿಗೆಗಳು, ಕಲಾಶೈಲಿಗಳ ಆಯ್ಕೆಯ ಪ್ರವೃತ್ತಿಗಳಿಂದ ಪ್ರಾರಂಭವಾಗಿರುವುದು ಕಂಡುಬರುತ್ತದೆ.ಪಾಶ್ಚಾತ್ಯರು ಚಿತ್ರಕಲೆಯ ಪೂರ್ವಸ್ಥಿತಿಗಳ ಕುರಿತು ಸಾಕಷ್ಟು ಪುರಾವೆಗಳನ್ನು ಹೊಂದಿದ್ದು ಅತ್ಯಂತ ಜಾಗರೂಕತೆಯಿಂದಲೇ ಉಳಿಸಿಕೊಂಡು ಬಂದಿರುವರು ಆದರೆ ಭಾರತೀಯರು ಚಿತ್ರಕಲೆಯ ಕುರಿತಾದ ಪೂರ್ವ ಸ್ಥಿತಿಗತಿಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಇಂದಿನ ನವ್ಯಕಲೆಯು ಜಗತ್ತಿನ ಎಲ್ಲ ದೇಶಗಳ ಚಿತ್ರಕಲೆಯ ಪೂರ್ವ ಸ್ಥಿತಿಯಿಂದ ಬಹಳ ದೂರಕ್ಕೆ ಬಂದಿದೆ.

ಸ್ವಾತಂತ್ರ್ಯೋತ್ತರದ ಕಲೆ

ಪಾಶ್ಚಾತ್ಯ ದೇಶಗಳಲ್ಲಿ ರೂಪುಗೊಂಡು ನವ್ಯಕಲೆ (Modern Art) ಭಾರತದಲ್ಲಿ ಆಗ ಪ್ರಚಲಿತವಿದ್ದ ಬಾವಪರವಾದ ರಮ್ಯ ಹಾಗೂ ಅಕಾಡೆಮಿಕ್ ಶೈಲಿಯನ್ನು ಬದಿಗೆ ತಳ್ಳಿ ಗಮನಾರ್ಹವೆನಿಸಿದ್ದು ೧೯೪೦ರ ದಶಕದಲ್ಲಿ ಹೀಗೆ ಬದಲಾವಣೆಗೆ ಬಂದ ನವ್ಯಕಲೆಯನ್ನು ಸಮಕಾಲೀನ ಕಲೆ (Conteparary Art) ಎಂದೂ ಕರೆಯುವ ವಾಡಿಕೆಯಿದೆ. ಇದು ಸರಿಯೇ? ತಪ್ಪೋ ಎಂಬ ಬಗ್ಗೆ ಚರ್ಚೆಯು ಅವಶ್ಯಕತೆಯಿದೆಯೆಂದರೂ

* ಪಿ.ಆರ್. ತಿಪ್ಪೇಸ್ವಾಮಿ (ಪ್ರಸ) ಪ್ರ ಸ ಅ ಲ ನರಸಿಂಹನ್ ಎನ್ ಮರಿಶಾಮಾಚಾರ್ ಚಿತ್ರಕಲಾ ಪ್ರಪಂಚ ಪು–೧

ಅದು ಇಲ್ಲಿ ಅಪ್ರಸ್ತುತಾ ಎಂದು ಭಾವಿಸಿ ನವ್ಯಕಲೆಯನ್ನು ಸಮಕಾಲೀನ ಕಲೆ ಎಂದೇ ಈ ಲೇಖನದಲ್ಲಿ ಪರಿಭಾವಿಸಲಾಗಿದೆ.

ಸಾಂಪ್ರದಾಯಿಕ ಕಲೆಗಳಿಂದ ಭಿನ್ನವಾಗಿರುವ ಈ ಸಮಕಾಲೀನ ಕಲೆಯಲ್ಲಿ ವ್ಯಕ್ತಿ, ಪ್ರಾಣಿ, ವಸ್ತು ಇತ್ಯಾದಿಗಳ ಬಾಹ್ಯ ರೂಪಕ್ಕಿಂತ ಅವುಗಳ ಆಂತರಿಕ ರೂಪಕ್ಕೆ ಮಹತ್ವವಿದೆ. ರಮ್ಯ (Romantic) ಸಂಪ್ರದಾಯದಲ್ಲಿ ಕಲಾವಿದನ ಅಭಿವ್ಯಕ್ತಿ ಒಂದು ಸಮುದಾಯದ ಮನಸ್ಸಿಗೆ ಕೊಟ್ಟ ರೂಪವಾದರೆ ಇಲ್ಲಿ ವ್ಯಕ್ತಿಯ ವೈಯಕ್ತಿಕ ಅನುಭವಗಳ ಅಭಿವ್ಯಕ್ತಿಗೆ ಒತ್ತಾಸೆಯಿದೆ. ಸಾಂಪ್ರದಾಯಿಕ ಕಲೆಗಳಲ್ಲಿರುವಂತೆ ಸಮಕಾಲೀನ ಕಲೆಯಲ್ಲಿ ಕಲಾಕೃತಿಯೊಂದನ್ನೂ ಹೀಗೆಯೇ ರಚಿಸಬೇಕೆಂಬ ಬಂಧನವಿಲ್ಲ. ಕಠಿಣ ನಿಯಮಗಳಿಲ್ಲ ಅಭಿವ್ಯಕ್ತಿಗೆ ಅನುಗುಣವಾಗಿ ರೂಪವನ್ನು ತಂತ್ರವನ್ನು ಕಲಾವಿದನಿಗೆ ಬೇಕೆನಿಸಿದಂತೆ ಬದಲಿಸಿಕೊಳ್ಳುವ ಸ್ವಾತಂತ್ರ್ಯವಿದೆ. ರಮ್ಯ ಕಲಾವಿದರಿಗೆ ಬಹುತೇಕ ಬಾಹ್ಯಸೌಂದರ್ಯ ಮಾತ್ರವೇ ಸತ್ಯ. ನೋವನ್ನು ಸಿಹಿಯಾದ ರೀತಿಯಲ್ಲಿ ಹೇಳುವ ತವಕ ಅವರಿಗೆ. ಅವರ ದೃಷ್ಟಿಯಲ್ಲಿ ರಸೋತ್ಕರ್ಷದ ಸ್ಥಿತಿಗೆ ಕೊಂಡೊಯ್ಯುವುದೇ ಕಲಾಕೃತಿ. ರಮ್ಯ ಕಲಾವಿದನ ಮನಸ್ಸು ಆಗಸದಲ್ಲಿ ವಿಹರಿಸಿದರೆ, ಸಮಕಾಲೀನ ಕಲಾವಿದನ ಮನಸ್ಸು ವಾಸ್ತವ ಜಗತ್ತಿನಲ್ಲಿಯೇ ನಡೆದಾಡುತ್ತದೆ. ಇಲ್ಲಿ ಬಿಚ್ಚು ಮನಸ್ಸಿನಿಂದ ಹೊರ ಜಗತ್ತನ್ನು ನೋಡುವ ಆತ್ಮವನ್ನು ಶೋಧಿಸುವ ಧೋರಣೆಯಿಂದ. ಸಮಕಾಲೀನ ಚಿತ್ರಕಲೆಯ ಈ ಎಲ್ಲ ಅಂಶಗಳು ಸಮಕಾಲೀನ ರೇಖಾಚಿತ್ರಗಳಲ್ಲಿ ಹಾಸುಹೊಕ್ಕಾಗಿವೆ.

"ಭಾರತದಲ್ಲಿ ನವ್ಯಕಲೆ ತನ್ನ ಬೇರುಗಳನ್ನು ಗಟ್ಟಿಯಾಗಿಸಿಕೊಂಡದ್ದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸತರಲ್ಲಿಯೇ ವಿಶ್ವಕ್ಕೆ ತನ್ನನ್ನೂ ತೆರೆದುಕೊಂಡು ಭಾರತೀಯ ಸಮಾಜದ ಗಮನಾರ್ಹ ಭಾಗದ ಬದುಕು ಪೂರ್ಣವಾಗಿ ಬದಲಾದದ್ದು ಈ ಸಂದರ್ಭದಲ್ಲೇ ರಾಜಕೀಯದೊಂದಿಗೆ, ಸಾಂಸ್ಕೃತಿಕ ಬದಲಾವಣೆಯ ಗಾಳಿ ಬೀಸಿದ ಈ ಪರ್ವಕಾಲದಲ್ಲಿ ನಮ್ಮ ಸಂವೇದನೆಗಳೂ ಬದಲಾದವು. ಪ್ರತಿಯೊಂದು ಯುಗವು ತನ್ನ ಆಂತರಿಕ ಆಶಯ ಅಗತ್ಯತೆಗಳಿಗೆ ಅನುಸಾರವಾಗಿ ಹೊಸವಿಚಾರಗಳನ್ನು, ಹೊಸರೂಪಗಳನ್ನು ಸೃಷ್ಟಿಸಿಕೊಳ್ಳುತ್ತದೆ" ಎನ್ನುವಂತೆ ನಮ್ಮ ಚಿತ್ರ, ಶಿಲ್ಪ ಕಲೆಗಳಲ್ಲೂ ಭಾರೀ ಬದಲಾವಣೆಗಳಾದವು ಕಲಾಕೃತಿಯೊಂದನ್ನು ಹೊಸ ದೃಷ್ಟಿಯಿಂದ ಹೊಸ ಆಲೋಚನೆಗಳಿಂದ ಹೊಸ ರೂಪದಿಂದ ಅಭಿವ್ಯಕ್ತಿಸುವ ಚಳುವಳಿಯೇ ಆರಂಭವಾಯಿತು ವಿವಿಧ ಕವಲುಗಳಾಗಿ ರೂಪಗೊಂಡ ಅವುಗಳಲ್ಲಿ ಸ್ವಾತ್ರಂತ್ರ್ಯೋತ್ತರ ಭಾರತದಲ್ಲಿ ಸಮಕಾಲೀನ ರೇಖಾ ಚಿತ್ರಗಳನ್ನೆ ಗಮನಿಸಬಹುದಾಗಿದೆ.

ರೇಖಾ ಚಿತ್ರಗಳ "ಬಿಟ್ ವೀನ್ ದಿ ಲೈನ್ಸ್" ಎಂಬ ಪುಸ್ತಕ ರೂಪದಲ್ಲಿ ಪ್ರಕಟವಾಗಿದ್ದು, ಅದರಲ್ಲಿ ರೇಖೆಗಳ ವಿವಿಧ ಗುಣಗಳನ್ನು ಹೊರಸೂಸುವಂತೆ ಬಳಸಿಕೊಂಡಿರುವುದಕ್ಕೆ ವಿಫಲವಾದ ಉದಾಹರಣೆಗಳು ದೊರೆಯುತ್ತವೆ. ಈ ಬ್ರಿಟೀಷ್ ಚಿತ್ರಕಲಾ ಶೈಲಿಯ ಆಯ್ಕೆ ವಿಧಾನವು ಕಲಾಪ್ರಗತಿಗೆ ನಾಂದಿಯಾದಂತೆ ಭಾರತೀಯ ಸಾಂಪ್ರಾದಾಯಿಕ ಚಿತ್ರಕಲಾ ಶೈಲಿ ಕುಂಠಿತವಾಗಲೂ ಕಾರಣವಾಯಿತು. ಅಂದಿನ ಸಂದರ್ಭದಲ್ಲಿ ರಚನೆಯಾದ ಕಲಾಕೃತಿಗಳು ಮೂಲ ಭಾರತೀಯತೆಯಾಗಲಿ ಅಥವಾ ಮೂಲ ಪಾಶ್ಚಿಮಾತ್ಯ ಶೈಲಿಗಳಿಂದಲೂ, ವಂಚಿತರಾಗುವುದನ್ನು ಕಾಣುತ್ತೇವೆ. ಪಾಶ್ಚಿಮಾತ್ಯ ಕಲಾಶೈಲಿ ಇಲ್ಲವೇ ಭಾರತೀಯ ಸಾಂಪ್ರದಾಯಿಕ ಕಲಾ ಶೈಲಿಗಳ ಪರಿಜ್ಞಾನವು, ಕಲಾವಿದನಿಗೆ ಅಗತ್ಯವಿತ್ತು. ಇವೆರಡೂ ಶೈಲಿಗಳ ಕಲಾಕೃತಿಗಳಲ್ಲಿ ಒಂದೇ ಬಗೆಯ ಭಾವನೆಯನ್ನು ಮೂಡಿಸಬಲ್ಲುದೆ ಎಂಬುದು ದೊಡ್ಡ ಸಮಸ್ಯೆಯಾಗಿತ್ತು ಈ ಸಂದರ್ಭದಲ್ಲಿ ರಾಜಾರವಿವರ್ಮನು ಭಾರತದಲ್ಲಿಯ ಪುರಾಣ ಕಥೆಗಳ ಸನ್ನಿವೇಶಗಳನ್ನು ಬ್ರಿಟೀಷ್ ಶೈಲಿಯಲ್ಲಿ ಮೂಡಿಸುವಾಗಲೂ ಅನೇಕ

*ಟಿ.ಆರ್. ಶಿವಸ್ವಾಮಿ (ಪ್ರ.ಸ) ಪ್ರ ಸ ಅ ಲ ನರಸಿಂಹನ್ ಎನ್ ಮರಿಶಾಮಾಚಾರ್ ಚಿತ್ರಕಲಾ ಪ್ರಪಂಚ ಪು-೧

ಸಮಸ್ಯೆಗಳನ್ನು ಎದುರಿಸಬೇಕಾಯಿತು.

೧೯ನೇ ಶತಮಾನದಲ್ಲಿ ಕಲೆಯಲ್ಲಿ ಆದ ಪ್ರಚಂಡ ಕ್ರಾಂತಿಯಿಂದಾಗಿ ಚಿತ್ರಕಲಾವಿದ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಭಾರತೀಯ ಸಾಂಪ್ರದಾಯಿಕ ಶೈಲಿಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಬಂದಿತು. "ಸಾಂಪ್ರಾದಾಯಿಕ ಕಲಾಶೈಲಿಯನ್ನು ಬಂಧಿಸುತ್ತಿರುವ, ಪಾಶ್ಚಿಮಾತ್ಯ ಕಲಾಶೈಲಿಯನ್ನು ವಿಮುಕ್ತಿಗೊಳಿಸಿ ಭಾರತೀಯ ಕಲೆಯನ್ನು ಬೆಳೆಸಲು ಇಟ್ಟ ಹೆಜ್ಜೆಯು ನಿರೀಕ್ಷಿಸಿದ ಫಲ ಕೊಡಲಿಲ್ಲ, ಏಕೆಂದರೆ "ಬ್ರಿಟೀಷ್ ಶೈಲಿಯು ತನ್ನದೇ ಆದ ನಿಶ್ಚಿತ ಚೌಕಟ್ಟಿನಲ್ಲಿ ನಿರಂತರವಾಗಿ ಜನಾಕರ್ಷಣೆ ಹೊಂದುತ್ತಾ ಬೆಳೆಯುತ್ತಿತ್ತು. "ಅಸಾಮಾನ್ಯವಾದ ಭಾರತೀಯ ಕಲಾ ಸಂಪ್ರದಾಯಕ್ಕೆ ಪ್ರಾಮುಖ್ಯತೆ ಕೊಟ್ಟು ಭಾರತೀಯ ಭಾವನೆಗಳನ್ನು ತಿಳಿಸುವ ಪರಿಸರದ ರಚನೆ ಮಾಡುತ್ತ ಬ್ರಿಟೀಷ್ ಶೈಲಿಗೆ ಸರಿಸಮಾನವಾಗಿ ನಿಲ್ಲಿಸುವ ಪ್ರಯತ್ನ ಮಾಡಬಹುದಾಗಿತ್ತು." ಆದರೆ ಈ ಮಾರ್ಗ ಕಾರ್ಯರೂಪಕ್ಕೆ ಬರಲು, ಸಾಕಷ್ಟು ತೊಂದರೆಗಳಿದ್ದವೆಂದು, ಅನೇಕ ಬರಹಗಾರರ ಅಭಿಪ್ರಾಯಗಳಿಂದ ತಿಳಿಯಬಹುದಾಗಿದೆ. ತದನಂತರ "ಭಾರತೀಯ ಸಾಂಪ್ರದಾಯಿಕ ಕಲಾಶೈಲಿಯನ್ನು ಬಂಧಿಸುತ್ತಿರುವ ಪಾಶ್ಚಿಮಾತ್ಯ ಕಲಾಶೈಲಿಯನ್ನು ವಿಮುಕ್ತಗೊಳಿಸಿ, ಭಾರತೀಯ ಜಾನಪದ ಕಲೆಯನ್ನು ಬೆಳೆಸಲು ಕಂಕಣ ಬದ್ಧರಾಗಿ ಜಾಮಿನಿರಾಯ್ ಹಾಗೂ ಸಮಕಾಲೀನರು ನಿಂತರು. ಜಾಮಿನಿರಾಯ್ ಅವರು ಚಾಣಾಕ್ಷತನದಿಂದ ಜಾನಪದ ಚಿತ್ರಗಳಿಗೆ ಹೊಸರೂಪ ಕೊಟ್ಟರು. ಇದರಿಂದ ಜನಪದ ಚಿತ್ರಗಳು ಜಗತ್ತಿನ ಕಲಾಕ್ಷೇತ್ರದ ಗಮನ ಸೆಳೆದು ಅವು ಆಧುನಿಕ ಕಲಾಕ್ಷೇತ್ರದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡವು.

* ಕಂಪನಿ ಸ್ಕೂಲ ಅವಧಿಯಲ್ಲಿ ಅತ್ಯಂತ ಪ್ರಭಾವಶಾಲಿ ಕಲಾವಿದನಾಗಿ ಬೆಳೆದ ರಾಜಾರವಿವರ್ಮನು "ಭಾರತೀಯ ವಿಷಯ ಮತ್ತು ವಸ್ತುಗಳನ್ನು ಹಾಗೂ ಪಾಶ್ಚಾತ್ಯ ಶೈಲಿ ಮತ್ತು ತಂತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ರಚಿಸಿದ ಕಲಾಕೃತಿಗಳು, ಜನಸಾಮಾನ್ಯರ ಮನಗೆದ್ದವು.

* ಬ್ರಿಟೀಷ್ ನಿರೂಪಣ ಕಲಾಶಾಲೆಗಳ ಅವಧಿಯಲ್ಲಿ ಅತ್ಯಂತ ಪ್ರಭಾವಶಾಲಿ ಕಲಾವಿದನಾಗಿ ಬೆಳೆದ ಜಾಮಿನಿರಾಯ್ "ಭಾರತೀಯ ವಿಷಯ, ವಸ್ತು, ಶೈಲಿ, ತಂತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ರಚಿಸಿದ ಕಲಾಕೃತಿಗಳು ಅಪ್ಪಟ ಭಾರತೀಯ ಜಾನಪದ ಅಂಶಗಳನ್ನು ಹೊಂದಿದ್ದು, ಜನಸಾಮಾನ್ಯರ ಮನಗೆದ್ದವು. ಈ ಜನಪದ ಚಿತ್ರಗಳು ಜಗತ್ತಿನ ಕಲಾಕ್ಷೇತ್ರದ ಗಮನ ಸೆಳೆದವು.

ಬ್ರಿಟೀಷ್ ಕಾಲದಲ್ಲಿ ನೇರವಾಗಿ ಪಾಶ್ಚಾತ್ಯ ದೇಶಗಳೊಡನೆ ಸಂಪರ್ಕ ಮಾಧ್ಯಮದಿಂದ, ಕಲೆಯ ಬೆಳವಣಿಗೆ ತಿಳಿಯುತ್ತಿತ್ತು. ಕೈಗಾರಿಕಾ ಕ್ರಾಂತೀಯ ಪರಿಣಾಮವಾಗಿ ಅನೇಕ ಬದಲಾವಣೆಗಳಾದವು. ಬ್ರಿಟೀಷ್ ಕಲಾ ಶಿಕ್ಷಣ ಭಾರತಕ್ಕೆ ಬಂದು ಮುಂಬಯಿ, ಮದ್ರಾಸು, ಲೋಹಾರ್, ಕಲ್ಕತ್ತಾ ಕಲಾಶಾಲೆಗಳು ಪ್ರಾರಂಭವಾದವು.

ಮುಂಬಯಿಯ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ ಬಹಳ ಪ್ರಮುಖವಾದ ಕಲಾ ಶಾಲೆಯಾಗಿಯೂ ಅನೇಕ ಕಲಾವಿದರ ಮೇಲೆ ಪ್ರಭಾವ ಬೀರಿತು. ಇನ್ನೊಂದೆಡೆ ಕಲ್ಕತ್ತಾ ಸ್ಕೂಲ್ ಆಫ್ ಆರ್ಟ್ ಸಹ ಮುಖ್ಯವಾಗಿದ್ದು ಭಾರತೀಯ ಕಲೆಯು ಪುನರುಜ್ಜೀವನಕ್ಕಾಗಿ ಶ್ರಮಿಸಿದವರೆಲ್ಲ ಈ ಶಾಲೆಗೆ ಸೇರಿದವರು ಭಾರತೀಯ ಕಲಾವಿದರು ಕಲೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಲು ಪ್ರಯತ್ನಿಸಿದರು. ಭಾರತದಲ್ಲಿ ಇಲ್ಲಿಯವರೆಗೆ ಜಲವರ್ಣ ಮಾತ್ರ ಬಳಕೆಯಲ್ಲಿತ್ತು. ಈಗ ತೈಲ ವರ್ಣದ ಬಳಕೆಗೆ ಪ್ರಾರಂಭಿಸಿದರು ಇದರಿಂದಾಗಿ ಕಲಾವಿದರ ದೃಷ್ಟಿಯೇ ಬದಲಾವಣೆ ಹೊಂದಿತು.

ನಮ್ಮ ಚಿತ್ರಕಲೆಗೆ ಪ್ರವೇಶಿಸಿದ ಬ್ರಿಟೀಷ್ ಭಾವನೆಗಳು, ಕಲ್ಪನೆಗಳು ಚಿತ್ರಕಲೆಯ ಬೆಳವಣಿಗೆಗೆ ಹೆಚ್ಚಿನ ಚೇತನವನ್ನು ನೀಡಿದ ಗತಶಕ್ತಿಗಳಾಗಿವೆ. ಈ ಬ್ರಿಟೀಷ್ ಶೈಲಿಯು ತನ್ನದೇ ಆದ ಗತಚರಿತ್ರೆಯನ್ನು ಹೊಂದಿದ್ದರು ಅದು ಭಾರತೀಯ ಶೈಲಿಯೊಡನೆ ಬೆರೆತಾಗ ಸರ್ವತೋಮುಖವಾಗಿ ಆಕರ್ಷಕವಾಗಿ ಬೆಳೆಯಿತು. ಆದಾಗ್ಯೂ ಭಾರತೀಯ ಪರಂಪರಾಗತವಾದ ಮತ್ತು ಪಾಶ್ಚಾತ್ಯಶೈಲಿಯ ಪ್ರಭಾವದ ಸಂಘರ್ಷಣೆ ನಡೆಯುತ್ತಲೇ ಇತ್ತು ಈಗಲೂ ಇದೆ.

ಬ್ರಿಟೀಷ್ ಕಾಲದ ಹಂತ

ಭಾರತದಲ್ಲಿ ಬ್ರಿಟೀಷರು ನಾಲ್ಕು ವಿಭಾಗಗಳಲ್ಲಿ ಕಲಾಶಿಕ್ಷಣವನ್ನು ನೀಡಲು ಪ್ರಾರಂಭಿಸಿದ್ದು ಕೆಳಗಿನಂತಿದೆ.

೧. ಕ್ರಿ.ಶ.೧೮೫೪ ಜೂನ್ ತಿಂಗಳಲ್ಲಿ ಪ್ರಥಮವಾಗಿ ಕಲ್ಕತ್ತಾದಲ್ಲಿ ಸರಕಾರಿ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿದರು.

೨. ಕ್ರಿ.ಶ. ೧೮೫೪ ಡಿಸೆಂಬರ್ ತಿಂಗಳಲ್ಲಿ ಮದ್ರಾಸ್ (ಚೆನ್ನೈ) ದಲ್ಲಿ ಕೈಗಾರಿಕಾ ಕಲಾಶಾಲೆಯನ್ನು ಪ್ರಾರಂಭಿಸಿದರು

೩. ಕ್ರಿ.ಶ. ೧೮೫೭ ಮಾರ್ಚ್ ೨ರಂದು "ಸರ್. ಜೆಮ್‌ಸೇಡ್ ಜೀಜಾಬಾಯಿ" ಚಿತ್ರಕಲಾ ಶಾಲೆಯನ್ನು ಮುಂಬಯಿಯಲ್ಲಿ ಪ್ರಾರಂಭಿಸಿದರು.

೪. ಕ್ರಿ.ಶ. ೧೮೭೮ ರಲ್ಲಿ ಲಾಹೋರ್‌ನಲ್ಲಿ "ಮಾಯೋ" ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿದರು.

ಶೂನ್ಯ ರೇಖಾಂಶದಿಂದ ಪೂರ್ವಕ್ಕಿರುವ ದೇಶಗಳು (ಪೌರಾತ್ಯ ದೇಶಗಳು) ಆಂತರಿಕ ಪ್ರಧಾನವಾದ ಕಲೆಯನ್ನು ಬೆಳೆಸಿದರೆ, ಪಶ್ಚಿಮಕ್ಕಿರುವ ದೇಶಗಳು (ಪಾಶ್ಚಿಮಾತ್ಯ ದೇಶಗಳು) ಬಾಹ್ಯ ಪ್ರಧಾನವಾಧ ಕಲೆಯನ್ನು ಬೆಳೆಸಿದವು.

ಕಲ್ಕತ್ತಾದಲ್ಲಿ ಪ್ರಥಮ ಸರಕಾರಿ ಚಿತ್ರಕಲಾ ಶಾಲೆ

ಕ್ರಿ.ಶ. ೧೮೫೪ ಜೂನ್ ತಿಂಗಳಲ್ಲಿ ಪ್ರಥಮ ಬಾರಿಗೆ ಕಲ್ಕತ್ತಾದಲ್ಲಿ ಸರಕಾರಿ ಚಿತ್ರಕಲಾ ಶಾಲೆಯನ್ನು ರಾಜಾಪ್ರತಾಪಚಂದ್ರ ಎನ್ನುವವರ ಮನೆಯಲ್ಲಿ ಪ್ರಾರಂಭವಾಯಿತು. ಈ ದೇಶದಲ್ಲಿ ಪ್ರಾರಂಭಿಸಿದ ಬ್ರಿಟೀಷ್ ನಿರೂಪಣಾ ಚಿತ್ರಕಲಾ ಶಾಲೆಗಳಲ್ಲಿ ಪ್ರಪ್ರಥಮವಾಗಿ ಕೈಗಾರಿಕಾ ವಿಷಯದ ಕುರಿತು ಪಾಠ ಮಾಡಲು ಪ್ರಾರಂಭಿಸಿದರು. ಕೈಗಾರಿಕಾ ವಸ್ತುವಿನ ಆಕಾರಗಳನ್ನು ಕಲಿಸುತ್ತಿದ್ದರು. ಯಂತ್ರೋಪಕರಣಗಳನ್ನು ರಚಿಸಲು ಕಲಿಸುತ್ತಿದ್ದರು, ತಯಾರಿಸಿದ ವಸ್ತುಗಳನ್ನು ಬೇರೆ ಬೇರೆ ಕಾರ್ಖಾನೆಗಳಿಗೆ ಕಳಿಸಿಕೊಡುತ್ತಿದ್ದರು.

ಕಲ್ಕತ್ತಾದಲ್ಲಿಯ ಸರಕಾರಿ ಚಿತ್ರಕಲಾ ಶಾಲೆಯನ್ನು ರಾಜಾಪ್ರತಾಪಚಂದ್ರ ಎಂಬುವವರ ಮನೆಯಲ್ಲಿ ಪ್ರಾರಂಭವಾಯಿತು. ಒಂದು ವರುಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಹಾಗೂ ಮಾಡಲಿಂಗ್ ವಿಷಯದ ಕುರಿತು ಕಲಾ ಶಿಕ್ಷಣವನ್ನು ನೀಡಲು ಪ್ರಾರಂಭಿಸಿದರು. ಆರಂಭದಲ್ಲಿ ಉಚ್ಚವರ್ಗದ ಜನ ಈ ಕಲಾಶಾಲೆಗೆ ಬರುತ್ತಿರಲಿಲ್ಲ. ಉತ್ತರ ಭಾರತದಲ್ಲಿಯ ಘಟವಾ ಅನ್ನುವ ಜನ ಕುಂಬಾರರು, ಕಂಬಾರರು, ನೇಕಾರರು, ಅಕ್ಕಸಾಲಿಗರು ಈ ಜನ ಕಲಾಶಾಲೆಗೆ ಬರಲು ಪ್ರಾರಂಭಿಸಿದರು. ಬಹುಶಃ ಇದಕ್ಕೆ ಕಾರಣವೂ ಇಲ್ಲದಿಲ್ಲ. "ನಮ್ಮ ಭಾರತೀಯ ಸಂಸ್ಕೃತಿ, ಕಲೆಯ ಸೊಗಡು, ಗ್ರಾಮೀಣ ಕರಕುಶಲ ಕಲೆಯಲ್ಲಿರುವುದನ್ನು" ಗಮನಿಸಿದ

ಅಂದಿನ ಶಿಕ್ಷಣ ತಜ್ಞರು ದೇಶದ ಬಡತನ ಹಾಗೂ ಅವರಲ್ಲಿ ಅಡಗಿರುವ ಸೌಂದರ್ಯ ಪ್ರಜ್ಞೆಯನ್ನು ಹೊರಹಾಕುವುದರೊಂದಿಗೆ ಪ್ರಯೋಜನ ಮೂಲದ ಕಲೆಯನ್ನು ಕಲಿಯಲು ಪ್ರೋತ್ಸಾಹಿಸಿದರು. ಈ ಕಲ್ಕತ್ತಾ ಕಲಾ ಶಾಲೆಗೆ ಪ್ರಾಚಾರ್ಯರಾಗಿ ಶ್ರೀ ಎಚ್.ಎಚ್.ಲೋಕ್ ಅನ್ನುವವರು ಕ್ರಿ.ಶ.೧೮೬೪ ರಲ್ಲಿ ಬಂದರು. ಈಗಾಗಲೇ ಇರುವ ಒಂದು ವರ್ಷದ ಕೋರ್ಸನ್ನು ಎರಡು ವರ್ಷದ ಕೋರ್ಸಾಗಿ ವಿಸ್ತರಿಸಿದರು. ಮೊದಲನೇ ವರ್ಷ ಅಭ್ಯಾಸ ಮಾಡಿಕೊಂಡ ವಿಷಯವನ್ನೇ ಎರಡನೇ ವರ್ಷಕ್ಕೆ ಮುಂದುವರೆಸಿದರು.

೧. ಮೊದಲ ವರ್ಷಕ್ಕೆ ಡ್ರಾಯಿಂಗ್ ಮತ್ತು ಪೇಂಟಿಂಗ್ ಹಾಗೂ ಮಾಡಲಿಂಗ್

೨. ಎರಡನೇ ವರ್ಷಕ್ಕೆ ಲಿಥೋಗ್ರಾಫಿ ಮತ್ತು ವುಡ್‌ಕಟ್‌ಗಳನ್ನು ಪ್ರಾರಂಭಿಸಿದರು.

ಕ್ರಮಬದ್ಧವಾದ ಶಿಕ್ಷಣ ನೀಡುವುದು ಪ್ರಮಾಣ ಪತ್ರಗಳನ್ನು ನೀಡುವುದು. ವಸ್ತ್ರೋದ್ಯಮ, ಅಲಂಕಾರ ಫಲಕ, ಕಟ್ಟಿಗೆ ಮತ್ತು ಲೋಹಗಳಲ್ಲಿ ಚಿತ್ರಗಳ ರಚನೆ ರೇಖೆ ಮಾರ್ಗಗಳ ಸಂಯೋಜನೆಯಲ್ಲಿ ಹೊಸತನವನ್ನು ಇವರ ಅವಧಿಯಲ್ಲಿ ಕಾಣಬಹುದಾಗಿದೆ. ಇದರೊಂದಿಗೆ ಕಲಾಶಾಲೆಯ ವಿದ್ಯಾರ್ಥಿಗಳನ್ನು ದೇವಾಲಯಗಳಿಗೆ ಕರೆದುಕೊಂಡು ಹೋಗಿ ಅಲ್ಲಿರುವ ನಕ್ಷೆಗಳನ್ನು ನಕಲು ಮಾಡಿಸಿದರು.

ಕಲ್ಕತ್ತಾ ಮತ್ತು ಮುಂಬೈನ ಕಲಾಶಾಲೆಗಳು “ಲಲಿತ್ ಕಲಾಶಿಕ್ಷಣವನ್ನು” ಕೊಡಲು ಪ್ರಾರಂಭಿಸಿದವು. ಕಲ್ಕತ್ತಾ ಕಲಾಶಾಲೆಯು ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಒತ್ತು ಕೊಟ್ಟು ಕಲಿಸುತ್ತಿತ್ತು. ಭಾರತೀಯ ಕಲೆ ಎಂದರೆ, ಕಲ್ಕತ್ತಾ ಶೈಲಿಯೆಂದೇ ಪ್ರಚಲಿತವಾಯಿತು. ಮುಂಬೈ ಕಲಾಶಾಲೆಯಲ್ಲಿ ಪಾಶ್ಚಾತ್ಯ ಕಲೆಯ ತಂತ್ರಗಳು ಮತ್ತು ಪ್ರಭಾವ ನೇರವಾಗಿ ಬಿದ್ದಿರುವುದು ಕಂಡುಬರುತ್ತದೆ.

ಕಲ್ಕತ್ತಾ ಕಲಾಶಾಲೆಗೆ ಕ್ರಿ.ಶ. ೧೮೭೬ ರಲ್ಲಿ ಕಲಾಗ್ಯಾಲರಿ ಸ್ಥಾಪಿಸಲು ಬ್ರಿಟೀಷ್ ವೈಸರಾಯ್ ಧನ ಸಹಾಯ ಮಾಡಿದರು. ಈ ಕಲಾಗ್ಯಾಲರಿಯಲ್ಲಿ ಯುರೋಪಿನ ಇಂಗ್ಲೆಂಡ್ ಮತ್ತು ಇಟಲಿ ದೇಶಗಳಲ್ಲಿಯ ಪ್ರಸಿದ್ಧ ಕಲಾವಿದರಾದ ರಾಫೇಲ್, ರೂಬೆನ್ಸ್ ಟಿಷನ್ ಅವರ ಕಲಾಕೃತಿಗಳ ಪ್ರದರ್ಶನ ಮಾಡಿದರು ಮತ್ತು ಖಾಸಗಿ ವ್ಯಕ್ತಿಗಳಿಗೆ ಆಸಕ್ತಿ ಹುಟ್ಟಿಸಲು ಸಂಘ ಸಂಸ್ಥೆಗಳಿಗೆ ಕಲಾಕೃತಿಗಳನ್ನು ಬಾಡಿಗೆಯಾಗಿ ಕೊಡುತ್ತಿದ್ದರು. ಇದರಿಂದ ಬಂದ ಹಣವನ್ನು ಶಾಲೆಯ ಅಭಿವೃದ್ಧಿಗಾಗಿ ಬಳಸುತ್ತಿದ್ದರು ಹೀಗಾಗಿ ಹಲವಾರು ರಾಜರುಗಳು ಶ್ರೀಮಂತರು ಈ ಪ್ರಯೋಜನೆಯನ್ನು ಪಡೆದರು.

ಕ್ರಿ.ಶ. ೧೮೯೬-೯೭ ರಲ್ಲಿ ಕಲ್ಕತ್ತಾ, ಮುಂಬೈ, ಮದ್ರಾಸ್ ಹಾಗೂ ಲಾಹೋರ್ ಈ ನಾಲ್ಕು ಕಲಾ ಶಾಲೆಗಳು ಟೆರ್ರಾಕೋಟಾ ಅಲಂಕಾರಿಕ ಮಣ್ಣಿನ ಫಲಕಗಳು, ವುಡ್‌ಕಟ್, ಲಿಥೋಗ್ರಾಫಿಯ ಕಲಾ ಶಿಕ್ಷಣವನ್ನು ನೀಡಲು ಪ್ರಾರಂಭಿಸಿದರು. ಇದಕ್ಕಾಗಿ ಸಂಬಂಧಪಟ್ಟ ಕರಕುಶಲ ತಜ್ಞರನ್ನು ಬಳಸಿಕೊಂಡು ಅವರಿಂದ ಶಿಕ್ಷಣ ನೀಡಲು ಪ್ರಾರಂಭಿಸಿದರು.

ಕ್ರಿ.ಶ. ೧೮೯೨ ರಲ್ಲಿ “ಚೌರಂಗಿ” ಅನ್ನುವ ಸ್ಥಳದಲ್ಲಿ ಸ್ವತಂತ್ರ ಕಟ್ಟಡವನ್ನು ಕಟ್ಟಿ “ಬಹುಬಜಾರದಲ್ಲಿರುವ” ಕಲಾಶಾಲೆಯನ್ನು ಅಲ್ಲಿಗೆ ಸ್ಥಳಾಂತರಗೊಳಿಸಿದರು. ಈ ಚೌರಂಗಿ ಅನ್ನುವ ಸ್ಥಳದಲ್ಲಿ ಸ್ವತಂತ್ರ ಕಟ್ಟಡದೊಂದಿಗೆ ಪ್ರಾರಂಭವಾದ ಈ ಕಲಾಶಾಲೆಯ ಎದುರುಗಡೆಯಲ್ಲಿ ಇಂಡಿಯನ್ ಮ್ಯೂಜಿಯಮ್ ಇರುವುದರಿಂದ ಕಲಾಶಾಲೆಯ ಶಿಕ್ಷಕ ವಿದ್ಯಾರ್ಥಿಗಳಿಗೆ ಶಿಲ್ಪಚಿತ್ರಗಳ ಬೆಳವಣಿಗೆಗೆ ಅನುಕೂಲವಾಯಿತು.

ಕ್ರಿ.ಶ. ೧೮೮೬ ರಲ್ಲಿ ಈ ಕಲಾಶಾಲೆಗೆ ಓಗಿಲಾರ್ಡಿ ಅನ್ನುವವರು ಪ್ರಾಚಾರ್ಯರಾಗಿ ಬಂದರು. ಇವರು ಕಲಾಶಾಲೆಯಲ್ಲಿ ಈಗಾಗಲೇ ಇರುವ ವಿಷಯಗಳೊಂದಿಗೆ ಭಿತ್ತಿ ಚಿತ್ರಕಲೆಯನ್ನು ಅಧ್ಯಯನಮಾಡಲು ಹೊಸ ವಿಷಯವನ್ನು ಸೇರ್ಪಡಿಸಿದರು. "ಜಾನ್‌ಗ್ರಾಫಿಟ್ಸ್" ಅನ್ನುವವರ ಮೇಲ್ವಿಚಾರಣೆಯಲ್ಲಿ "ಭಿತ್ತಿ ಚಿತ್ರಕಲೆ" ಯ ತರಗತಿಯನ್ನು ಪ್ರಾರಂಭಿಸಿದರು.

೧೮೯೦ರಲ್ಲಿ ಮದ್ರಾಸ್‌ದಲ್ಲಿಯೂ ಭಿತ್ತಿಚಿತ್ರಕಲೆಯ ತರಗತಿಗಳು ಪ್ರಾರಂಭವಾದವು. ಭಾರತೀಯ ದೇವಾಲಯಗಳಲ್ಲಿರುವ ಭಿತ್ತಿಚಿತ್ರಗಳ ನಕ್ಷೆಯ ಕುರಿತು ಹಾಗೂ ಶಿಲ್ಪಗಳನ್ನು ಪ್ಲಾಸ್ಟರ್ ಆಫ್ ಪ್ಯಾರಸ್‌ದಲ್ಲಿ ತಯಾರಿಸಿ ಇಂಗ್ಲೆಂಡಿಗೆ ಕಳಿಸಿಕೊಟ್ಟರು. ೧೯ನೇ ಶತಮಾನದ ಪ್ರಾರಂಭದವರೆಗೂ ಭಿತ್ತಿಚಿತ್ರಗಳನ್ನು ಪ್ರತಿಕೃತಿ ಮಾಡುವುದು ಬೆಳೆದು ಬಂದಿತು. ಕ್ರಿ.ಶ.೧೮೯೬ ರಲ್ಲಿ ಇ.ಬಿ. ಹ್ಯಾವೆಲ್ ಅವರು ಪ್ರಾಚಾರ್ಯರಾಗಿ ಬಂದ ನಂತರ ರಾಷ್ಟ್ರೀಯ ತಿಳುವಳಿಕೆ ನೀಡಿ ಭಾರತೀಯ ಪುನರುಜ್ಜೀವನ ಕಲೆಯನ್ನು ಹುಟ್ಟು ಹಾಕಲು ಪ್ರಾರಂಭಿಸಿದರು. ಅವರೊಂದಿಗೆ ರವೀಂದ್ರನಾಥ ಠಾಗೂರ್ ಅವರು ಸೇರಿಕೊಂಡರು ನಂತರ ಭಾರತೀಯ ಕಲೆಯಲ್ಲಿ ಪುನರುಜ್ಜೀವನಕ್ಕೆ ಹೊಸ ಕ್ರಾಂತಿಯೇ ಪ್ರಾರಂಭವಾಯಿತು.

ಭಾರತೀಯ ಪುನರುಜ್ಜೀವನ ಕಲೆಗೆ ಆಂಗ್ಲರ ಕೊಡುಗೆ

ಭಾರತೀಯ ಕಲೆಗೆ ಇಬ್ಬರು ಆಂಗ್ಲರು ಅದ್ವಿತೀಯ ಸೇವೆ ಸಲ್ಲಿಸಿರುವರು "ಲಾರ್ಡ್‌ಕರ್ಜನ್‌ರು ಭಾರತೀಯ ಕಲೆ ಮತ್ತು ಪ್ರಾಚೀನ ಸ್ಮಾರಕಗಳ ಹುಡುಕುವಿಕೆ ಮತ್ತು ಸಂರಕ್ಷಣೆಗಳ ಮೇಲೆ ಬಹಳ ಪ್ರೋತ್ಸಾಹ ನೀಡಿದರು." ಇವರಿಗಿಂತಲೂ ಬಹಳ ಪ್ರಮುಖರಾದವರು ಇ.ಬಿ. ಹ್ಯಾವೆಲ್ ಭಾರತೀಯಕಲೆಯ ಪುನರ್ ನಿರ್ಮಾಣಕ್ಕೆ ಹೆಚ್ಚು ಗಟ್ಟಿಯಾಗಿ ಕೆಲಸ ಮಾಡಿದ ವ್ಯಕ್ತಿಯಾಗಿದ್ದಾರೆ.

"ಒಂದು ವಿಕಸಿತವಾದ ಪರಂಪರೆಯನ್ನು ಸ್ವಂತ ಮಾಡಿಕೊಳ್ಳುವುದರ ಬದಲಾಗಿ ಭಾರತೀಯ ಕಲಾವಿದ ಕೇವಲ ಪಾಶ್ಚಿಮಾತ್ಯ ಕಲೆಯ ಅನುಕರಣೆ ಮಾಡಿದರೆ ಏನೂ ಲಾಭ ಹೊಂದುವುದಿಲ್ಲ. ಏಕೆಂದರೆ ಆ ಕಲೆಯಲ್ಲಿ ಯಾವ ರೀತಿಯ ಆಳವಾದ ಪ್ರೇರಣೆ ಇಲ್ಲ ಭಾರತೀಯ ಕಲೆಗೆ ಒಂದು ಪರಂಪರೆ ಇದೆ. ಇದಕ್ಕೆ ರಚನಾತ್ಮಕ ಕಲಾಕಾರರ ಸಮರ್ಥನೆ ದೊರೆತರೆ , ಭಾರತೀಯ ಕಲೆಯು ಉಜ್ವಲಗೊಳ್ಳುವುದು" ಎಂದು ಸ್ಪಷ್ಟವಾಗಿ ನಂಬಿದ್ದರು! ಅವರು ಭಾರತದ ಸಂಸ್ಕೃತಿಯನ್ನು ಪ್ರೀತಿಸುತ್ತಿದ್ದರು ಮತ್ತು ಭಾರತೀಯ ಕಲಾವಿದರನ್ನು ದೇಶಿಯತೆಯ ಕುರಿತು ಪ್ರೇರೇಪಿಸಿದರು. ಭಾರತೀಯ ಕಲಾಪರಂಪರೆಯ ಬಗ್ಗೆ ಅನೇಕ ಲೇಖನಗಳನ್ನು ಬರೆದು ಪಾಶ್ಚಾತ್ಯ ಕಲೆಯ ಅಂಧಾಭಿಮಾನದಿಂದ ತಪ್ಪಿಸುವುದಕ್ಕಾಗಿ ಪ್ರಯತ್ನಿಸಿದರು.

ಇವರೊಂದಿಗೆ ಡಾ. ಆನಂದ ಕುಮಾರಸ್ವಾಮಿ ಅವರ ಪಾತ್ರವೂ ಬಹಳ ಮುಖ್ಯವಾದುದು. "ಭಾರತೀಯ ಕಲೆಯ ಗೊತ್ತುಗುರಿ" ಅವರು ಬರೆದ ಲೇಖನವು ಜಗತ್ತಿನ ಕಲಾವಿದರ ಕಣ್ಣನ್ನು ತೆರೆಸಿತು. ರಾಷ್ಟ್ರೀಯತೆಯ ಆಂದೋಲನ ಮತ್ತು ರಾಜಕೀಯ ಒಲವು ಭಾರತೀಯ ಸಂಸ್ಕೃತಿಯ ಪುನರುಜ್ಜೀವನಕ್ಕೆ ಕಾರಣಗಳಾಗಿವೆ. ಈ ಸಂಸ್ಕೃತಿಯ ಮೂಲ ಕರ್ತೃರೆಂದರೆ ಇ.ಬಿ. ಹ್ಯಾವೆಲ್ ಮತ್ತು ಡಾ.ಆನಂದ ಕುಮಾರಸ್ವಾಮಿಗಳನ್ನು ಹೆಸರಿಸಬಹುದು. ಈ ಸಮಯದಲ್ಲಿ "ಭಾರತದಲ್ಲಿಯ ಸಾಂಪ್ರಾದಾಯಿಕ ಕಲೆಗಳ ಅನೇಕ ಧ್ಯೇಯಗಳನ್ನು ಗುರುತಿಸಲಾಯಿತು." ಅಜಂತಾ ಬಾಗ್, ಮೊಘಲ್, ರಜಪೂತ್, ಪಹಾಡಿ ವರ್ಣಚಿತ್ರಗಳು ಬಂಗಾಳಿ ಮತ್ತು ಒರಿಸ್ಸಾಗಳ ಜಾನಪದ ಚಿತ್ರ ಪದ್ಧತಿಗಳು ಹಸ್ತಪ್ರತಿ ಚಿತ್ರಗಳು ಕಲಾಶೈಲಿಗಳು ಭಾರತೀಯ ಚಿತ್ರಕಲೆಯ ಬೆಳವಣಿಗೆಯ ಬಗ್ಗೆ ಕುತೂಹಲಭರಿತರಾಗಿದ್ದ ಚರಿತ್ರಕಾರರಿಗೆ ಸಾಕಷ್ಟು ಪುರಾವೆ ಮತ್ತು ಟಿಪ್ಪಣಿಗಳನ್ನು

ಒದಗಿಸುವಲ್ಲಿ ನೆರವಾದರು.

ಹ್ಯಾವೆಲ್‌ರ ಉದ್ದೇಶಗಳನ್ನು ಪೂರ್ತಿ ಮಾಡಲು ಹಾಗೂ ಕಾರ್ಯರೂಪಕ್ಕೆ ತರಲು ಸಹಾಯ ಮಾಡಿದರು. "ಅವನೀಂದ್ರನಾಥ ಠಾಗೂರ್" ಅವರು ಪ್ರಮುಖರು ಅವನೀಂದ್ರರರು ಯುವ ಚಿತ್ರಕಾರರ ಒಂದು ಸಮೂಹವನ್ನು ನಂದಲಾಲ್‌ಭೋಸ್‌ರ ನೇತೃತ್ವದಲ್ಲಿ ಕಟ್ಟಿಸಿದರು. ಇದು ಬಂಗಾಳದ ಕಲೆಯ ಪುನರುಜ್ಜೀವನವೆಂದೂ ಹೆಸರು ಪಡೆಯಿತು.

ಭಾರತೀಯ ಪುನರುಜ್ಜೀವನ ಕಲೆಗೆ ಅವನೀಂದ್ರನಾಥ ಠಾಗೂರ್ ಅವರ ಸಾರಥ್ಯ

ಭಾರತೀಯ ಯುವ ಕಲಾವಿದರು ಪರಂಪರೆಯ ಪುನರುಜ್ಜೀವನಕ್ಕೆ ಉತ್ಸುಕರಾದರು. ಅಜಂತಾ ಮೊಘಲ್, ರಜಪೂತ್, ಪಹಾಡಿ ಚಿತ್ರಗಳನ್ನು ಆದರ್ಶವಾಗಿಟ್ಟುಕೊಂಡು ಚಿತ್ರ ರಚಿಸಿದರು. ಪಾಶ್ಚಾತ್ಯ ಚಿತ್ರಗಳ ನೈಜ ಸಾದೃಶ್ಯ ಇತ್ಯಾದಿ ವಿಶೇಷತೆಗಳನ್ನು ಬಿಟ್ಟು ಭಾರತೀಯ ಪೌರಾಣಿಕ ರಾಮಾಯಣ, ಮಹಾಭಾರತ, ಉಮ್‌ಖಯಾಮ್, ಮೋರಾಬಾಯಿ ಹಾಗೂ ಭಾರತದ ಇತಿಹಾಸದಲ್ಲಿಯ ಸ್ಮರಣೀಯ (ಸನ್ನಿವೇಶ) ವಿಷಯಗಳನ್ನು ತಮ್ಮ ಕಲ್ಪನಾ ಶಕ್ತಿಯಿಂದ ರಚಿಸಿದರು. ಭಾರತೀಯ ಚಿತ್ರಗಳಲ್ಲಿ ರೇಖೆಗಳ ಸೌಂದರ್ಯ ವಿವರಣೆ ಅಲಂಕಾರದ ಸುಕುಮಾರತೆ, ಕಾವ್ಯಾತ್ಮಕ ಭಾವ ಭಂಗಿಯ ಕಾರಣದಿಂದ ಈ ಚಿತ್ರಗಳಿಗೆ ತನ್ನದೇ ಆದ ವೈಶಿಷ್ಟ್ಯವಿದ್ದಿತು. ಕಳೆದು ಹೋದ ಪರಂಪರೆಗೆ ಭಾರತೀಯ ಯುವಕಲಾವಿದರು ಮತ್ತೆ ಬಲ ತಂದುಕೊಟ್ಟರು. ಭಾರತೀಯ ಚಿತ್ರಗಳ ಲಯ ಮತ್ತು ಪ್ರೇರಣೆಯಿಂದ ಕೂಡಿದ್ದು, ಪಾಶ್ಚಾತ್ಯ ಶೈಲಿಗಿಂತ ಭಿನ್ನವಾಗಿವೆ. ಯುರೋಪಿನ ತೈಲವರ್ಣವನ್ನು ತ್ಯಜಿಸಿ ಜಲವರ್ಣ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದರು.

ಬಂಗಾಲಿ ಕಲಾ ಶೈಲಿಯು ಅಭಿನೀಂದ್ರನಾಥ ಠಾಗೂರ್ ಅವರ ಮನೆಯಲ್ಲಿ ಹುಟ್ಟಿಕೊಂಡಿತು. ಇ.ಬಿ. ಹ್ಯಾವೆಲ್ ಅವರೊಂದಿಗೆ ಭಾರತಿಯ ಕಲೆಯ ಕುರಿತು ಚರ್ಚಿಸುವುದರ ಮೂಲಕ ಪ್ರಾರಂಭವಾಯಿತು. "ಜೋರಾಸಂಕೋ" ಎಂಬ ಟ್ಯಾಗೋರ್ ಅವರ ಮನೆಯಲ್ಲಿ ಗಗನೇಂದ್ರನಾಥ ಠಾಗೂರ್, ಸಮರೇಂದ್ರನಾಥ ಟ್ಯಾಗೂರ್, ಅವನೇಂದ್ರನಾಥ ಟ್ಯಾಗೂರ್‌ರು ಚಿತ್ರಕಲಾಕೃತಿಗಳ ರಚನೆ , ಚರ್ಚೆ ವಿಚಾರಗೋಷ್ಠಿಗಳನ್ನು ಪ್ರಾರಂಭಿಸಿದರು. ಹಗಲು ಹೊತ್ತಿನಲ್ಲಿ ಕಲಾಶಾಲೆಯಲ್ಲಿ ಅಭ್ಯಾಸ ರಾತ್ರಿ ಹೊತ್ತಿನಲ್ಲಿ ಈ "ಜೋರಾಸಂಕೋ"ದಲ್ಲಿ ಕಲಾಚಟುವಟಿಕೆಗಳು ನಡೆಯುತ್ತಿದ್ದವು.

ಅವನೇಂದ್ರರ ಶಿಷ್ಯರಾದ ನಂದಲಾಲ್ ಭೋಸ್, ಅಜಿತ್ ಕುಮಾರ ಹಲ್ದಾರ್, ಮುಜುಮ್ದಾರ್, ಶೈಲೇಂದ್ರನಾಥ ಡೇ, ಸುಮರೇಂದ್ರನಾಥ ಗುಪ್ತ, ಶಾರದಾ ಚರಣ, ಉಕಿಲ್, ಕೆ.ವೆಂಕಟಪ್ಪ ಮತ್ತು ಹವ್ಯಾಸಿ ಕಲಾವಿದರು, ಜಪಾನ್ ಕಲಾವಿದರು, ಯುರೋಪಿನ ಕಲಾ ವಿಮರ್ಶಕರು ಕೂಡ ರಾತ್ರಿ ವೇಳೆ ಈ ಮನೆಗೆ ಬಂದು ದೇಶೀಯ ಅಂಶಗಳನ್ನು ಕುರಿತು ಚರ್ಚಿಸುತ್ತಿದ್ದರು. ಈ "ಜೋರಾಸಂಕೋ" ಸಲೋನ್ ಆಗಿ ಪರಿವರ್ತನೆಗೊಂಡಿತು. "ಸಲೋನ್" ಎಂದರೆ ಕಲೆಯ ಕುರಿತು ವಿಚಾರ ಮಂಡಿಸುವ ನೆಲೆಯಾಗಿತ್ತು. ಕ್ರಿ.ಶ. ೧೯೦೬ ರಲ್ಲಿ ಈ ಸಲೋನ್ "ಬಿಚಿತ್ರ ಸ್ಟುಡಿಯೋ" ಆಗಿ ಮಾರ್ಪಟ್ಟಿತ್ತು ಈ ಸ್ಟುಡಿಯೋದಲ್ಲಿ ರಚನೆಯಾಗುವ ಕಲಾಕೃತಿಗಳು ಬಂಗಾಲಿ ಕಲಾಶೈಲಿಯ ಚಿತ್ರಗಳೆಂದು ಬೆಳಕಿಗೆ ಬಂದವು.

ಮದರಾಸು ಕಲಾಶಾಲೆ

ಮದರಾಸಿ ಕಲಾಶಾಲೆ ೧೮೮೦ ರಷ್ಟು ಹಿಂದೆಯೇ ಆಗಿನ ಮದರಾಸ್ ಪ್ರಾಂತ್ಯ ಸರಕಾರದಿಂದ

ಏರ್ಪಟ್ಟು ಶಾಲೆಯ ವ್ಯವಸ್ಥೆಗೆ ಅರ್ನೆಸ್ಟ್ ಭಿನ್ ಫೀಲ್ಡ್ ಹ್ಯಾವೆಲ್ (೧೮೬೧-೧೯೧೫) ಎಂಬ ಕಲಾ ಪರಿಣಿತರು ಇಂಗ್ಲೆಂಡಿನಿಂದ ಬಂದು ೧೮೮೪ ರಿಂದ ೧೮೯೬ ರವರೆಗೂ ಅದರ ಮುಖ್ಯಸ್ಥರಾಗಿದ್ದರು. ಇವರಿಗೆ ಭಾರತ ದೇಶದ ಕಲೆಯೆಂದರೆ ತುಂಬ ಮೆಚ್ಚುಗೆ ಭಾರತೀಯ ಕಲಾಪ್ರಕಾರಗಳ ಪ್ರಸಾರಕ್ಕೆ ಪ್ರಸಿದ್ಧಿಗೆ ಬಹುವಾಗಿ ಶ್ರಮಿಸಿದರು.

ಮಹಾರಾಣಿ ರಿಜೆಂಟ್ ಅವರ ಆಳ್ವಿಕೆಯ ಸಮಯದಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಯೋಜನೆಯೊಂದನ್ನು ಜಾರಿಗೆ ತಂದಿದ್ದರು. ಈ ದೇಶದಲ್ಲಿ ಯೋಗ್ಯರಾದ ಪ್ರತಿಭಾಶಾಲಿಗಳಾದ ತರುಣರನ್ನು ಬ್ರಿಟಿಷರ ನೇರವಾದ ಆಡಳಿತಕ್ಕೆ ಒಳಪಟ್ಟು ಮುಂಬಯಿ ಮದರಾಸು ಮೊದಲಾದ ಮುಂದುವರಿದ ಸ್ಥಳಗಳಲ್ಲಿದ್ದ ಉಚ್ಚಶಿಕ್ಷಣ ಶಾಲೆಗಳಿಗೋ ಸಾಧ್ಯವಾದರೆ ಇಂಗ್ಲೆಂಡ್ ದೇಶದ ಶಾಲೆಗಳಿಗೋ ಕಳುಹಿಸಿ ಅಲ್ಲಿ ಶಿಕ್ಷಣಪಡೆದು ಹಿಂದುರುಗಿ ಬಂದು ಇಲ್ಲಿನ ಔದ್ಯಮಿಕ ಆರ್ಥಿಕ ಪ್ರಗತಿಗೆ ನೆರವಾಗಬೇಕೆಂಬುದು ಯೋಜನೆಯ ಆಶಯ ಪ್ರತಿ ವಿದ್ಯಾರ್ಥಿಗೂ ಸರಕಾರದಿಂದ ತಿಂಗಳೊಂದಕ್ಕೆ ಹದಿನೈದು ಇಪ್ಪತ್ತು ರೂಪಾಯಿಗಳಷ್ಟು ವಿದ್ಯಾರ್ಥಿ ವೇತನವು ದೊರುಕುತ್ತಿತ್ತು. ನಮ್ಮ ದೇಶದಲ್ಲೆ ಈ ವಿಭಾಗಗಳಲ್ಲಿ ಶಿಕ್ಷಣ ದೊರೆಯದಿದ್ದಲ್ಲಿ ಮಾತ್ರ ಹೊರಗಿನ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸುತ್ತಿದ್ದರು. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ಗಳಿಗೂ ಮದರಾಸಿನ ಆರ್ಟ್ಸ್ ಸ್ಕೂಲಿಗೂ ಕಳುಹಿಸಿದ್ದುಂಟು.

ಐರೋಪ್ಯ ಕಲಾಪ್ರಕಾರಗಳು ಆ ಕಲೆಯ ರೀತಿನೀತಿಗಳು ಗೊತ್ತುಗುರಿಯೂ ಆಗಲೇ ನಮ್ಮ ಜನರಲ್ಲಿ ಹರಡಿಕೊಳ್ಳುತ್ತಿದ್ದವು. ಆ ದರವನ್ನು ಪಡೆದುಕೊಳ್ಳುತ್ತಿದ್ದವು. ಆ ಕಾಲಕ್ಕೆ ಮುಂಬಯಿ, ಕಲ್ಕತ್ತೆ ಮದರಾಸ್‌ಗಳ ಕಲಾಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಭಾರತೀಯ ಕಲೆಯೆಂದರೆ ಪರ್ಶಿಯನ್ ಮತ್ತು ಮೊಗಲ್ ಶೈಲಿಗಳಿಂದ ಮೈವಳಿಕೆಯ ಮುಂದೆ ಐರೋಪ್ಯ ಪ್ರಭಾವವನ್ನು ಕಲಿಯಲು ಹೇಳುತ್ತಿದ್ದರು.

ಕಲಾಶೈಲಿ: ೧. ಜಲವರ್ಣಗಳ ಬಳಕೆಯನ್ನು ಮಾಡುತ್ತಿದ್ದರು.

೨. ತೆಳುವಾದ ವರ್ಣಗಳನ್ನು ಮತ್ತೆ ಮತ್ತೆ ಬಳಸುತ್ತಿದ್ದರು.

ಮುಂಬಯಿಯ ಜೆ.ಜೆ. ಕಲಾಶಾಲೆ ಭಾರತಕ್ಕೆ "ಈಸ್ಟ್ ಇಂಡಿಯಾ ಕಂಪನಿ" ಬರುವುದಕ್ಕೆ ಮೊದಲೇ ಭಾರತೀಯ ಕಲೆಯ ಪರಂಪರೆ ನಶಿಸುತ್ತ ಹೋಗುತ್ತಿತ್ತು ಭಾರತೀಯ ಕಲಾಸಂಪ್ರದಾಯದ ಅಧಃಪತನ ಸಂಕ್ರಮಣದ ಕಾಲದಲ್ಲಿ ಈ ಕಲಾಶಾಲೆಯು ಪ್ರಾರಂಭವಾಯಿತು. ಈ ಕಲಾಶಾಲೆಯ ಪ್ರಾರಂಭವಾಗಲು ಮೂಲಕಾರಣ ಪುರುಷರೆಂದರೆ, ಪಾರ್ಸಿ ಮನೆತನದ "ಜೀಜಾಬಾಯಿ ಜೇಮ್‌ಶೇಠ್‌ಜಿ" ಅವರು ಕ್ರಿ.ಶ. ೧೮೫೧ ರಲ್ಲಿ "ಲಂಡನ್‌ನ ಅಂತರ್ ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ" ನೋಡಲು ಹೋದಾಗ ಅದರಿಂದ ಪ್ರೇರಿತರಾಗಿ ಇಂತಹ ಕಲಾಶಾಲೆಯನ್ನು ನಮ್ಮ ಭಾರತದಲ್ಲೂ ಪ್ರಾರಂಭಿಸಬೇಕೆಂಬ ಇಚ್ಛೆಯೇ ಈ ಕಲಾಶಾಲೆ ಪ್ರಾರಂಭಿಸಲು ಕಾರಣವಾಯಿತು ಎಂಬುದನ್ನು ಜೆ.ಜೆ. ಕಲಾಶಾಲೆಯ ಉಪನ್ಯಾಸಕರಾಗಿರುವ ಶ್ರೀ ಪುರಂದರ ಅವರು ಹೇಳುತ್ತಾರೆ.

ಕ್ರಿ.ಶ. ೧೮೫೬ ರಲ್ಲಿ ಜೀಜಾಬಾಯಿ ಜೇಮ್‌ಶೇಡಜಿ ಅವರು ಲಂಡನ್‌ದ ಚಿತ್ರಕಲಾ ಪ್ರದರ್ಶನವನ್ನು ನೋಡಲು ಹೋದಾಗ ಅಲ್ಲಿನ ಅತ್ಯಂತ ಪ್ರಭಾವಶಾಲಿ ಕಲಾವಿದನಾಗಿದ್ದ ಮಿ.ಪೈಥಾನ ಅವರು ಭೇಟಿಯಾದರು. ಈ ಕಲಾವಿದನನ್ನೇ ಭಾರತಕ್ಕೆ ಕರೆಸಿಕೊಂಡು ಕಲಾಶಾಲೆಯನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿದರು.

ಅಂತೆಯೇ ಸರಕಾರಕ್ಕೇ ಮನವಿಯೊಂದನ್ನು ಸಲ್ಲಿಸಿ ನೂರು ಸಾವಿರ ರೂಪಾಯಿಗಳನ್ನು ನೀಡಿ ಕಲಾ ಶಾಲೆಯನ್ನು ಪ್ರಾರಂಭಿಸಬೇಕೆಂದು ಕೋರಿದ ಮಿ.ಪೈಥಾನ ಅವರ ಮಾರ್ಗದರ್ಶನದಲ್ಲಿ ಕಲಾಶಾಲೆಯ ನಡೆಯಬೇಕೆಂದು ಸರಕಾರಕ್ಕೆ ಮನವಿ ಸಲ್ಲಿಸಿದರು.

ಈಗಾಗಲೇ ಡಾ॥ ಹಂಟರ್ ಅವರ ಸಲಹೆಯ ಮೇರೆಗೆ ಕಲಾಶಾಲೆಯು ಕ್ರಿ.ಶ. ೧೮೫೭ ಮಾರ್ಚ್ ೨ ರಂದು "ಸರ್ ಜೇಮ್ ಶೇಡಜೀ ಜೀಜಾಬಾಯಿ ಕಲಾಶಾಲೆಯು" ಪ್ರಾರಂಭವಾಯಿತು. ಈ ಕಲಾಶಾಲೆಯ ಮೆಲ್ವಿಚಾರಕರಾಗಿ "ಮಿ. ಜೇಮ್ಸ್ ಪೈಥಾನ" ಅವರು ನೇಮಕಗೊಂಡರು. "ಲಂಡನ್ನಿನ ರಾಯಲ್ ಅಕಾಡೆಮಿಯ ಆಫ್ ಆರ್ಟ್ಸ್ ಸಂಸ್ಥೆಯ ಮಾದರಿಯಲ್ಲಿ ಬ್ರಿಟಿಷರ ಸ್ಥಾಪಿಸಿದ ಏಕೈಕ ಭಾರತೀಯ ಕಲಾಶಾಲೆ ಇದಾಗಿದೆ. ಈ ಕಲಾಶಾಲೆಯಲ್ಲಿ ಮೊದಲಿಗೆ ಮೊದಲಿಗೆ ಎಲಿಮೆಂಟರಿ ಡ್ರಾಯಿಂಗ್ ಮತ್ತು ಡಿಜಾಯಿನ್ನಿಂದ ವರ್ಗವನ್ನು ಪ್ರಾರಂಭಿಸಿದರು. ಆ ಹೊತ್ತಿಗಾಗಲೆ ಮದ್ರಾಸ್ ಮತ್ತು ಕಲ್ಕತ್ತಾ ಕಲಾಶಾಲೆಯ ಪ್ರಭಾವ ಈ ಕಲಾಶಾಲೆಯ ಮೇಲೂ ಆಯಿತು. ಯಾಕೆಂದರೆ ಆ ಕಾಲಕ್ಕೆ ಕಲ್ಕತ್ತಾ ಇಡೀ ದೇಶದ ರಾಜಧಾನಿಯಾಗಿ ಸಾಂಸ್ಕೃತಿಕ ಕೇಂದ್ರವಾಗಿ ರಾಜಕೀಯ ಆಂದೋಲನದ ನೆಲೆಯಾಗಿತ್ತು.

ಐರೋಪ್ಯ ಸಂಸ್ಕೃತಿಯ ಪ್ರಭಾವ ಪ್ರಬಲವಾಗಿದ್ದುದೂ ಅಲ್ಲೇ ಈ ಎಲ್ಲ ಕಲಾಶಾಲೆಗಳಿಗೆ "ರಾಯಲ್ ಸ್ಕೂಲ್ ಆಫ್ ಆರ್ಟ್ಸ್" ದಲ್ಲಿ ಶಿಕ್ಷಣ ಪಡೆದವರೇ ಮೇಲ್ವಿಚಾರಕರಾಗಿದ್ದರು ಕ್ರಿ.ಶ.೧೮೫೪ರಲ್ಲಿ ನಾಡಿನ ಒಡೆಯನಾಗಿದ್ದ 'ಲಾರ್ಡ್‌ಕರ್ಜನ್‌ನ" ಕಲಾಶಾಲೆಯಲ್ಲಿ ಕಲಾಶಿಕ್ಷಣದ ವಿಷಯವಾಗಿ "ಕರಕುಶಲಕಲೆ ಮತ್ತು ಕೈಗಾರಿಕೆಗಳನ್ನೇ" ಪ್ರಮುಖವಾಗಿಟ್ಟುಕೊಂಡು ಕಲಿಸಬೇಕೆಂದು ಆಜ್ಞಾಪಿಸಿದನು. ಅಂದಿನ ಪಠ್ಯಕ್ರಮದಲ್ಲಿಯ ವಿಷಯಗಳು ಕೆಳಗಿನಂತಿವೆ.

೧. ಆಭರಣಗಳ ರೇಖಾಚಿತ್ರ

೨. ಪ್ಲಾಸ್ಟರ್‌ನಿಂದ ಮೂರ್ತಿಗಳ ರಚನೆ

೩. ಕುಂಭಕಲೆ

೪. ಮರದ ಕೆತ್ತನೆ

೫. ಅಚ್ಚು ತೆಗೆಯುವುದು

೬. ಛಾಯಾಚಿತ್ರ

ಈ ಎಲ್ಲಾ ವಿಷಯಗಳನ್ನೊಳಗೊಂಡ ಮದ್ರಾಸ್ ಮತ್ತು ಕಲ್ಕತ್ತಾ ಕಲಾಶಾಲೆಗಳ ಪ್ರಭಾವವನ್ನು ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿಯೂ ಕಾಣುತ್ತೆವೆ. ಕಾರಣ ಕಲ್ಕತ್ತಾ ಮತ್ತು ಮದ್ರಾಸ್ ಕಲಾ ಶಾಲೆಗಳ ಪಠ್ಯಕ್ರಮವನ್ನೇ (Syllabus) ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲೂ ತಯಾರಿಸಿದ್ದು ಕಾಣುತ್ತೇವೆ. ಕರಕುಶಲ ಕಲೆಗೆ ಮೂಲಭೂತವಾದದ್ದು ರೇಖಾಚಿತ್ರ ಹಾಗೂ ವರ್ಣಚಿತ್ರಗಳು. ಹೀಗಾಗಿ Departnment of Drawing & painting ವಿಭಾಗವನ್ನು ಪ್ರಾರಂಭಿಸಿದರು. ಚಿತ್ರಕಲಾ ವಿಭಾಗದಿಂದ ಪ್ರಾರಂಭವಾದ ಈ ಸಂಸ್ಥೆ ಮುಂದೆ ಬೇರೆ ಬೇರೆ ಉಪವಿಭಾಗಗಳಾಗಿ ಹೊರಹೊಮ್ಮಿತು ಅವುಗಳೆಂದರೆ

೧. ಮಾಡೆಲಿಂಗ್ (Modeling)

೨. ವಾಸ್ತುಶಿಲ್ಪ (Architect)

೩. ಶಿಲ್ಪ (Sculpture)

೪. ಚಿತ್ರಕಲಾ ಶಿಕ್ಷಕರ ತರಬೇತಿ ಕೋರ್ಸ್ (Art Teacher Training Cource)

೫. ಭಾರತೀಯ ಕಲೆ ಮತ್ತು ಕರಕುಶಲಕಲೆ (Art & Craft of India)

೬. ವಾಣಿಜ್ಯ ಕಲೆ (Applied Art)

ಲಾಹೋರ್-೧೮೭೨ ಮಾಯೊ ಕರಕುಶಲ ಕಲಾಶಾಲೆ:

ಲಾರ್ಡ ಮಾಯೊ ಎನ್ನುವವರು ಲಾಹೋರ್ (ಇಂದಿನ ಪಾಕಿಸ್ತಾನ ದೇಶದ ಪ್ರಮುಖ ನಗರ) ನಲ್ಲಿ ಕ್ರಿ.ಶ. ೧೮೭೨ ರಲ್ಲಿ ಈ ಕಲಾಶಾಲೆಯನ್ನು ಪ್ರಾರಂಭಿಸಿದ್ದಾರೆ.ಶಿಲ್ಪ ಮತ್ತು ಚಿತ್ರಕಲೆಯ ಶಿಕ್ಷಕರಾಗಿ ಬಾಂಬೆ ಪಾರ್ಸಿ ಶಾಲೆಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದ 'ಲಾಕುಡ್ ಕಿಪ್ಲಿಂಗ್'ಇವರು ಈ ಕಲಾಶಾಲೆಯ ಪ್ರಥಮ ಪ್ರಾಚಾರ್ಯರಾಗಿ ನೇಮಕರಾಗಿದ್ದಾರೆ.ಮತ್ತು ಇದರೊಂದಿಗೆ ಲಾಹೋರಿನ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಆಗಿಯೂ ಸಹ ಹೆಚ್ಚುವರಿಯಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಆಗ ಬ್ರಿಟಿಷ್ ರಾಣಿ ಪಂಜಾಬಿನ ಕಾರ್ಯಕ್ರಮವೊಂದಕ್ಕೆ ಬಂದ ಸಂದರ್ಭದಲ್ಲಿ ಈ ಕಾಲೇಜಿಗೆ ಬೇಟಿ ನೀಡಿ, ಈ ಸಂಸ್ಥೆಯು ಮ್ಯೂಸಿಯಂ ಮತ್ತು ಗ್ರಂಥಾಲಯ ಹಾಗೂ ತರಗತಿ ಕೊಠಡಿಗಳಿಗೆ ಆರ್ಥಿಕ ಪ್ರೋತ್ಸಾಹ ನೀಡಿದ್ದಾಳೆ. ಹಾಗೆಯೇ ಭಾರತೀಯ ಸಾಂಪ್ರದಾಯಿಕ ಕರಕುಶಲ ಕಲೆಗಳನ್ನು ಕಲಿಸಲು ವಿಶೇಷವಾದ ಆರ್ಥಿಕ ನೆರವನ್ನು ನೀಡಿದ ಕಾರಣವಾಗಿ ಇಲ್ಲಿ ಸಾಕಷ್ಟು ಕಟ್ಟಡಗಳು ತಯಾರಾದವು.

ಮಾಯೋ ಶಾಲೆ ಇದೊಂದು ಇಂಡಸ್ಟ್ರೀಯಲ್ ಶಾಲೆಯಾಗಿ ಬೆಳವಣಿಗೆ ಹೊಂದಿತು ಮತ್ತು ಲಾಹೋರ್‌ನಲ್ಲಿರುವ ವಸ್ತು ಸಂಗ್ರಾಹಾಲಯ, ಇವುಗಳೆರಡನ್ನು ಒಂದುಗೂಡಿಸಿ ವ್ಯವಸ್ಥಿತವಾಗಿ ಆಡಳಿತವನ್ನು ಲಾಕುಡ್ ಕಿಪ್ಲಿಂಗ್‌ರ ಮುಂದುವರೆಸಿಕೊಂಡು ಹೋಗುತ್ತಾನೆ. ಮುಂದೆ ಈತನ ಮಗನಾದ ರುಡ್‌ಯಾರ್ಡ್ ಕ್ಲಿಪಿಂಗ್ ಅವನ ಯೋಜನೆಯಂತೆ ಪುರಾತತ್ವದ ಒಂದು ಭಾಗವಾಗಿ ವಸ್ತು ಸಂಗ್ರಾಹಾಲಯ ಮತ್ತು ಗ್ರಾಮೀಣ ಕರಕುಶಲ ಕಲೆಗಳ ಕೇಂದ್ರವಾಗಿ ಬೆಳೆಯಲು ಶ್ರಮಿಸುತ್ತಾನೆ. ಈ ಸಂಸ್ಥೆಯಲ್ಲಿ ಸಿದ್ದವಾಗುವ ಕರಕುಶಲ ಕಲೆಗಳು ಪಂಜಾಬ ಮತ್ತು ಬ್ರಿಟಿಷ್ ಮಾರ್ಕೇಟ್‌ನಲ್ಲಿ ಸಾಕಷ್ಟು ಹೆಸರನ್ನು ಗಳಿಸುತ್ತವೆ. ಅಲ್ಲದೆ ಸುಮಾರು ೪೦ ಸಾವಿರ ಕೆಲಸಗಾರರು, ೯೦೦ ಜನ ನೇಯ್ಗೆ ಮಾಡುವವರಿಗೆ ಇಲ್ಲಿ ಉದ್ಯೋಗ ಅವಕಾಶ ಕಲ್ಪಿಸಿರುವುದು ಒಂದು ಮಹತ್ತರವಾದ ಸಾಧನೆಯಾಗಿದೆ. ಬಟ್ಟೆಯ ಮೇಲ ಮುದ್ರಣ ಮಾಡಿ ಅವುಗಳನ್ನು ಸ್ವಿಝರ್‌ಲ್ಯಾಂಡ್, ಹಾಲೆಂಡ್ ಮತ್ತು ಮ್ಯಾಂಚೆಸ್ಟರ್ ಮುಂತಾದ ಕಡೆಗೆ ಸರಬರಾಜು ಮಾಡುತ್ತಿದ್ದದೂ, ಅಲ್ಲದೇ ಗ್ರಾಮೀಣ ಕೈಗಾರಿಕೆಯಲ್ಲಿ ಉಲನ್ ಮತ್ತು ಸಿಲ್ಕನ್ನು ಬಳಸಿಕೊಂಡು ಕರಕುಶಲ ಕಲಾಕೃತಿಗಳನ್ನು ಮಾಡಿರುವುದು ಕಂಡು ಬರುತ್ತಿದೆ.

ಮಾಯೊ ಸ್ಕೂಲ್ ಆಫ್ ಆರ್ಟ್‌ನಿಂದ ಸಿದ್ದವಾಗುವ ಗ್ರಾಮೀಣ ಕರಕುಶಲ ಕಲೆಗಳಲ್ಲಿ ಯೂರೋಪಿನ ಕಟ್ಟಡ ಮತ್ತು ಮೇಜು, ಖುರ್ಚಿಗಳಲ್ಲಿ ಈ ಡಿಸೈನ್‌ಗಳು ಕಾಣಿಸಿಕೊಳ್ಳುತ್ತವೆ. ಪಂಜಾಬಿನ ಬಡಿಗೇರರ ಕುಶಲವಿನ್ಯಾಸಗಳು ಜಗತ್ತಿಗೆ ಈ ಶಾಲೆಯ ಮೂಲಕ ಪರಿಚಯಗೊಳ್ಳುತ್ತವೆ. ಇಲ್ಲಿ ಛಾಯಾಚಿತ್ರ ಮತ್ತು ಮುದ್ರಣ ಕಲೆಯ ವಿನ್ಯಾಸಗಳಿಗೆ ದೊಡ್ಡ ಪ್ರಮಾಣದ ಬೇಡಿಕೆ ಪಾಶ್ಚಿಮಾತ್ಯ ದೇಶಗಳಿಂದ ಬರುತ್ತದೆ. ಲಿಥೋಗ್ರಾಪರ್ಸ್,

ಕಲರ್ ಬ್ಲಾಕ್ಸ್‌ಗಳ ಮೂಲಕ ಸಾಕಷ್ಟು ಪ್ರಾತ್ಯಕ್ಷಿಕೆಗಳನ್ನು ಈ ಸಂಸ್ಥೆಯಲ್ಲಿ ನಡೆಸಿಕೊಡುತ್ತಿದ್ದರು.

ಲಾಕುಡ್ ಕಿಪ್ಲಿಂಗ್ ೧೮೮೧ ರಲ್ಲಿ ಪ್ರಾಚಾರ್ಯರಾಗಿ ಬರುತ್ತಾರೆ. ಪಂಜಾಬಿನ ಕರಕುಶಲ ಕಲೆಗಳ ಪ್ರದರ್ಶನ ಗೃಹವನ್ನು ಸ್ಥಾಪಿಸುತ್ತಾನೆ. ಅಲ್ಲದೆ ೧೮೮೨ ರಲ್ಲಿ ಈ ಕಲಾಶಾಲೆಯ ದಿಕ್ಕನ್ನೇ ಬದಲಿಸುತ್ತಾನೆ. ಹಲವಾರು ಸ್ವತಂತ್ರವಾದ ಕಟ್ಟಡಗಳನ್ನು ನಿರ್ಮಿಸಿಕೊಡುತ್ತಾನೆ, ೧೮೯೧ ರಲ್ಲಿ ಕಿಪ್ಲಿಂಗ್, ಈ ಸಂಸ್ಥೆಯಲ್ಲಿ ನಿರಂತರವಾಗಿ ಅನೇಕ ಕಾರ್ಯಗಾರಗಳು, ಪ್ರಾತ್ಯಾಕ್ಷಿಕೆಗಳು ನಡೆಯಲು ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸುತ್ತಾನೆ.

೧೯೦೨ ರಲ್ಲಿ ೪ ದೊಡ್ಡ ಪ್ರಮಾಣದ ಕಾರ್ಯಾಗಾರಗಳಿಗೆ ಚಾಲನೆ ನೀಡುತ್ತಾನೆ, ಪೋಟೋ ಲಿಥೋಗ್ರಾಫಿ ಸ್ಟುಡಿಯೋಗಳನ್ನು ಪ್ರಾರಂಭಿಸುತ್ತಾನೆ. ೧೯೧೧ ರಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಯಂತ್ರಗಳನ್ನು ಖರೀದಿಸುತ್ತಾನೆ. ಈ ಸಂದರ್ಭದಲ್ಲಿ ಆಚರಣೆಗಳ ಕಲೆಗೆ ಮತ್ತು ಬಟ್ಟೆಯ ಮೇಲಿನ ಮುದ್ರಣ, ಬುಕ್ ಬೈಂಡಿಂಗ್, ಮೆಟಲ್ ವರ್ಕ್, ಕಾರ್ಪೆಂಟರಿಂಗ್ ಮುಂತಾದ ಮಾಧ್ಯಮದಲ್ಲಿ ಕರಕುಶಲ ಕಲೆಗಳನ್ನು ಸರಿಪಡಿಸಲು ಎಲ್ಲ ರೀತಿಯ ತರಬೇತಿಯ ವ್ಯವಸ್ಥೆಯನ್ನು ಮಾಡುತ್ತಾನೆ. ವುಡ್ ಕಾರ್ವಿಂಗ್, ಪ್ಲಾಸ್ಟರ್ ವರ್ಕ್‌ಗಳನ್ನು ಲಾಹೋರಿನ ಬೇರೆ ಬೇರೆ ಸ್ಥಳಗಳಲ್ಲಿ. ಉದಾಹರಣೆಗೆ ಕೋರ್ಟ್, ಸರ್ಕಾರಿ ಕಾಲೇಜುಗಳು, ಸರ್ಕ್ಯೂಟ್ ಹೌಸ್,

ಲಾಹೋರಿನ ಓರಿಯಂಟಲ್ ಕಾಲೇಜ್, ರೈಲ್ವೇ ಥೇಟ್ಟರ್ ಅಲ್ಲದೆ ಇಂಗ್ಲೆಂಡ್, ಡ್ಯೂಕ ಮುಂತಾದ ದೇಶಗಳಿಗೆ ಹೋಗಿ ಅಲ್ಲಿಯೂ ಕೂಡ ಇಲ್ಲಿಯ ವಿದ್ಯಾರ್ಥಿಗಳು ಕಟ್ಟಡಗಳ ಒಳಾಂಗಣ ವಿನ್ಯಾಸದ ಕೆಲಸಗಳನ್ನು ನಿರ್ವಹಿಸಿ ಬರಲು ಅವಕಾಶ ಕಲ್ಪಿಸಿಕೊಡುತ್ತಾನೆ.

೧೯೫೮ ರಲ್ಲಿ ಈ ಶಾಲೆಯನ್ನು ಪಾಕಿಸ್ತನ ಸರ್ಕಾರವು ಮೇಲ್ದರ್ಜೆಗೆ ಏರಿಸಿ, ನ್ಯಾಷನಲ್ ಕಾಲೇಜ್ ಆಫ್ ಆರ್ಟ್ಸ್ ಎಂದು ಹೆಸರಿಸುತ್ತದೆ.ಇಲ್ಲಿ ಮೂರು ಹೊಸ ವಿಭಾಗಗಳನ್ನು ಸ್ಥಾಪಿಸುತ್ತದೆ. ೧), ಲಲಿತಕಲೆ ೨), ವಿನ್ಯಾಸ ಕಲೆ ೩), ವಾಸ್ತುಕಲೆ. ಈ ವಿಭಾಗಗಳಲ್ಲಿ ಸಾಂಪ್ರದಾಯಕ ಗ್ರಾಮೀಣ ಕರಕುಶಲ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಾರೆ.ಉದಾಹರಣೆಗೆ ಕಾರ್ಪ್‌ರೆಟರಿ, ಪೌಟ್ರಿ, ನೀಡ್ಲವರ್ಕ್, ಗೋಲ್ಡ್‌ಸ್ಮಿತ್, ಪ್ಲಂಬ್ಲಿಂಗ್, ಸಿವಿಲ್ ಇಂಜನಿಯರಿಂಗ್ ಮತ್ತು ಕಮರ್ಸಿಯಲ್ ಆರ್ಟ್ಸ್ ಮುಂತಾದ ಕಲೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಲಲಿತಕಲೆಯಲ್ಲಿ ವಿಶೇಷವಾಗಿ ಸಾಂಪ್ರದಾಯಿಕ ಮತ್ತು ಸಮಕಾಲೀನ ಕಲೆ, ಮುದ್ರಣ ಕಲೆ, ಶಿಲ್ಪಕಲೆಯ ಕೋರ್ಸಗಳು, ವಿನ್ಯಾಸಕಲೆ ವಿಭಾಗದಲ್ಲಿ ಟೆಕ್ಸ್‌ಟೈಲ್ಸ್ ಡಿಸೈನ್, ಪಬ್ಲಿಸಿಟಿ ಡಿಸೈನ್, ಪ್ರೋಡೆಕ್ಟ್ ಮತ್ತು ಸಿರಾಮಿಕ್ ವಿಷಯಗಳು ಭೋದನೆಯಲ್ಲಿವೆ.

೧೯೬೩ ರಲ್ಲಿ ಪಾಕಿಸ್ತಾನ ಸರ್ಕಾರವು ಈ ಸಂಸ್ಥೆಗೆ ಒಂದು ಕಲಾಸಂಸ್ಥೆಯನ್ನಾಗಿ ಮಾನ್ಯತೆ ನೀಡಿತು. ಉಳಿದ ವಿಭಾಗಗಳನ್ನು ಬೇರ್ಪಡಿಸಿ ೧೯೭೨ ರಲ್ಲಿ ಈ ಕಾಲೇಜನ್ನು ವಿಜುವಲ್ ಅರ್ಟ್ಸ್ ಕಾಲೇಜನ್ನಾಗಿ ಪರಿವರ್ತಿಸಿ ಸ್ವಾಯತ್ತತೆಯನ್ನು ನೀಡಿದೆ. ಇಲ್ಲಿ ಡಿಪ್ಲೋಮಾ ಮುಗಿಸಿದ ಸುಮಾರು ೪೫೦ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಪಾಕಿಸ್ತಾನದ ಅನೇಕ ಸಂಸ್ಥೆಗಳಲ್ಲಿ ನೇಮಕಾತಿ ಹೊಂದಿದ್ದು ಒಂದು ಮಹತ್ವದ ದಾಖಲೆಯಾಗಿದೆ. ಈ ಸಂಸ್ಥೆಯಿಂದ ಹೊರಬಂದ ಪಾಕಿಸ್ತಾನದ ಪ್ರಸಿದ್ಧ ಚಿತ್ರಗಾರರಾದ ಅಬ್ದುಲ್ ರೆಹಮಾನ್ (ಮಾದ್ದಲ್ ಸಂಪ್ರದಾಯದ ಪ್ರಖ್ಯಾತ ಕಾಲವಿದ) ಚುಗುತಾಯ್, ಶೇಖರ್ ಅಲಿ ಮತ್ತು ಹಾಜಿ ಮುಹಮ್ಮದ್ ಷರೀಫ್ ಕಿರು ರೂಪ ಚಿತ್ರಕಲೆಯ ಖ್ಯಾತಿ ಕಲಾವಿದ, ಶೆಖ್ ಸುಜುಲ್ಲಾ, ಬೀರ್ ಅಹಮ್ಮದ್ ಮುಂತಾದವರು ಈ ಕಾಲೇಜಿನಲ್ಲಿ

ಸೇವೆಯನ್ನು ಸಲ್ಲಿಸಿದ್ದಾರೆ. ನಂತರ ಈ ಕಾಲೇಜು ಹೊಸ ವಿನ್ಯಾಸದಲ್ಲಿ ಸಿದ್ಧಗೊಂಡಿತು.ಮತ್ತು ಮೂರು ವಿಭಾಗಗಳಲ್ಲಿ ಉದ್ಯೋಗಕ್ಕೆ ಹೆಚ್ಚಿನ ಅವಕಾಶ ನೀಡುವ ಕೋರ್ಸ್‌ಗಳನ್ನು ಪ್ರಾರಂಭಿಸಿದ್ದಾರೆ. ಹಾಗೆಯೇ ಸಂಶೋಧನೆ ಮತ್ತು ಪ್ರಕಟಣೆಯನ್ನು ಈ ಕಾಲೇಜು ಪ್ರಾರಂಭಿಸಿದೆ.೨೦೦೧ ರಲ್ಲಿ ಮಲ್ಟಿ ಮೀಡಿಯಾ ಆರ್ಟ್ಸ್ ಮತ್ತು ಮಾಸ್ಟಾರ್ ಡಿಗ್ರಿ ಇನ್ ಇಂಟೀರಿಯರ್ ಡಿಸೈನ್ ಮುಂತಾದ ಕೋರ್ಸ್‌ಗಳನ್ನು ಈ ಕಾಲೇಜಿನಲ್ಲಿ ಹೊಸದಾಗಿ ಪ್ರಾರಂಭಿಸಲಾಗಿದೆ. ಈ ಸಂಸ್ಥೆಯು ತನ್ನದೇ ಆದ ಇನ್ನೊಂದು ಶಾಲೆಯನ್ನು ರಾಯಲ್ ಐಡಿಯಲ್ ಪ್ರಾರಂಭಿಸಿತ್ತು. ಇಲ್ಲಿ ರಾಜ್ಯದಲ್ಲಿರುವ ಕಲಾಶಾಲೆಗಳ ಪರೀಕ್ಷೆಗಳನ್ನು ನಡೆಸುವ, ಅಂಕಪಟ್ಟಿಗಳನ್ನು ನೀಡುವ ಕಾರ್ಯವನ್ನು ನಿರ್ವಹಿಸಲಾಗುತ್ತದೆ.ಇಲ್ಲಿ ಫೌಂಡೇಷನ್ ಕೋರ್ಸ ಮತ್ತು ಬ್ಯಾಚುಲರ್ಸ್ ಡಿಗ್ರಿಯನ್ನು ನಡೆಸಲಾಗುತ್ತದೆ.

ಸ್ವಾತಂತ್ರ್ಯ ಪೂರ್ವ ಕರ್ನಾಟಕದ ದೃಶ್ಯಕಲಾ ಶಿಕ್ಷಣ ಸಂಸ್ಥೆಗಳು ಕರ್ನಾಟಕದಲ್ಲಿ ಗುರುಕುಲ ಪದ್ಧತಿಂದ ಬೆಳೆದು ಬಂದ ಚಿತ್ರಕಲಾ ಶಿಕ್ಷಣ ಮುಂದೆ ರಾಜಾಶ್ರಯದಲ್ಲಿ ಸಾಕಷ್ಟು ಪ್ರೋತ್ಸಾಹದಿಂದ ಬೆಳೆದುಕೊಂಡು ಬಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದಲ್ಲಿಯೂ ಸಹ ಬ್ರಿಟಿಷ್ ಮಾದರಿಯ ನಾಲ್ಕು ಕಲಾಶಿಕ್ಷಣ ಸಂಸ್ಥೆಗಳು ಪ್ರಾರಂಭಗೊಂಡು ಚಿತ್ರಕಲೆ ಮತ್ತು ಕರಕುಶಲ ಕಲೆಗಳ ಕುರಿತಾಗಿ ತರಬೇತಿ ನೀಡುತ್ತ ಬಂದಿವೆ.

೧). ಕಲೆ ಮತ್ತು ಗುಡಿಕೈಗಾರಿಕೆಯ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆ. ಮೈಸೂರು: ೧೮೯೨

೨). ಅ.ನ.ಸು ಕಲಾಮಂದಿರ, ಬೆಂಗಳೂರು: ೧೯೧೯

೩). ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ, ೧೯೩೫

೪). ವಿಜಯ ಕಲಾಮಂದಿರ, ಗದಗ: ೧೯೪೭

೧). ಕಲೆ ಮತ್ತು ಗುಡಿಕೈಗಾರಿಕೆಯ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆ ಮೈಸೂರು: ೧೮೯೨

೧೮೯೨ ರಲ್ಲಿ ಮೈಸೂರಿನ ಅರಸರಿಂದ ನಿಜಮಬಾದಿನಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಕಲೆ ಮತ್ತು ಗುಡಿ ಕೈಗಾರಿಕೆಯಲ್ಲಿ ವಿಶೇಷ ಶಿಕ್ಷಣ ನೀಡುವ ಉದ್ದೇಶದಿಂದ ಮುಂದುವರಿಯಿತು. ಇಲ್ಲಿ ಮರದ ಕೆತ್ತನೆ, ರೇಖಾಚಿತ್ರ ರಚನೆ, ಭಾವಚಿತ್ರದ ರಚನೆ, ವರ್ಣಚಿತ್ರ ರಚನೆ, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳಲ್ಲಿ ಕೆಲಸ, ಬೆತ್ತದಲ್ಲಿ ಖುರ್ಚಿ, ಮೇಜು ಮುಂತಾದವುಗಳನ್ನು ಸಿದ್ಧಪಡಿಸುವುದು, ಮರದ ಹಲಗೆಗಳಲ್ಲಿ ಚಿತ್ರಗಳನ್ನು ಹಾಕುವುದು (ಹುದುಗು ಚಿತ್ರಕಲೆ) ಶಿಲಾ ಶಿಲ್ಪಕಲೆ ಮುಂತಾದ ಹಲವಾರು ವಿಷಯಗಳಲ್ಲಿ ವೃತ್ತಿ ಶಿಕ್ಷಣ, ಪ್ರಾತ್ಯಕ್ಷಿಕೆ ಶಿಕ್ಷಣ ನೀಡುವ ಉದ್ದೇಶವನ್ನು ಈ ಸಂಸ್ಥೆ ಹೊಂದಿತ್ತು. ಮತ್ತು ಮುಖ್ಯವಾಗಿ ಮಕ್ಕಳು ಕಲಿಯುವಾಗಲೇ ಗಳಿಸುವ ಸಾಮಾರ್ಥ್ಯವನ್ನು ಪಡೆಯುವ ಕಲಿಕೆ-ಗಳಿಕೆಯ ಪ್ರಯೋಗ ಕರ್ನಾಟಕದಲ್ಲಿ ಪ್ರಾರಂಭವಾದದ್ದು ಈ ಸಂಸ್ಥೆಯಿಂದ ಎಂದು ಹೇಳಿದರೆ ತಪ್ಪಾಗಲಾರದು.

೧೯೦೩ ರಲ್ಲಿ ಇದನ್ನು ಕೇಂದ್ರಿಯ ಕಲಾಶಾಲೆಯನ್ನಾಗಿ ಮಾರ್ಪಡಿಸಲಾಯಿತು.ಮುಂದೆ ೧೯೦೬ ರಲ್ಲಿ ಶ್ರೀ ಚಾಮಾರಾಜೇಂದ್ರ ಒಡೆಯರ್ ಬಹದ್ದೂರ್ ಅವರ ನೆನಪಿನಲ್ಲಿ ಹೊಸ ಕಟ್ಟಡಕ್ಕೆ ಶಿಲಾವಿನ್ಯಾಸ ಮಾಡಲಾಯಿತು. ಆಗಿನ ವೇಲ್ಸ್‌ನ್ ರಾಜಕುಮಾರ ಚಕ್ರವರ್ತಿ ಜಾರ್ಜ್ ಇದನ್ನು ನೆರವೇರಿಸಿದರು. ೧೯೧೩ ರಲ್ಲಿ ಈ ಕಟ್ಟಡ ಸಂಪೂರ್ಣಗೊಂಡು ಹೊಸ ಕಟ್ಟಡಕ್ಕೆ ಈ ತರಬೇತಿ ಸಂಸ್ಥೆ ಸ್ಥಳಾಂತರಗೊಂಡಿತ್ತು.

ಕರಕುಶಲ ಕೈಗಾರಿಕೆಯ ವಿವಿಧ ವಿಧಾನಗಳಲ್ಲಿ ಶಿಕ್ಷಣ ನೀಡುವುದರ ಜೊತೆಗೆ ತಯಾರಿಕೆ ಮತ್ತು ಪ್ರಾಯೋಗಿಕತೆಯೊಂದಿಗೆ ವಿದ್ಯಾರ್ಥಿಗಳನ್ನು ಸ್ವಾವಲಂಭಿಗಳನ್ನಾಗಿ ಮಾಡಬೇಕೆನ್ನುವುದು. ಈ ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ.ಇಲ್ಲಿ ವಿವಿಧ ಕರಕುಶಲ ಕಲೆಗಳೊಂದಿಗೆ ರೇಖಾಚಿತ್ರಕಲೆ, ವರ್ಣಚಿತ್ರಕಲೆ ಮತ್ತು ಹುದುಗು ಚಿತ್ರಕಲೆಯ ತರಬೇತಿಯೊಂದಿಗೆ ಸಾಂಪ್ರದಾಯಿಕ ಮೈಸೂರು ಶೈಲಿಯ ಅನೇಕ ಕಲಾಕೃತಿಗಳ ರಚನೆಗೆ ಇಲ್ಲಿ ವಿಶೇಷ ತರಬೇತಿ ನೀಡುವ ಕಾರ್ಯ ನಡೆದಿರುವುದು. ಗಮನಾರ್ಹ ಅಂಶವಾಗಿದೆ. ಮುಂದೆ ಈ ಸಂಸ್ಥೆಯು ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ) ಎಂದು ಬದಲಾವಣೆಯಾಯಿತು. ಇಲ್ಲಿ ಪದವಿ ಮತ್ತು ಸ್ನಾತ್ತಕೋತ್ತರ ಪದವಿಯ ಚಿತ್ರಕಲೆ, ಶಿಲ್ಪಕಲೆ, ಅನ್ವಯಕ ಕಲೆ, ಮುದ್ರಣ ಕಲೆ, ಛಾಯಾಚಿತ್ರ, ಕಲಾ ಇತಿಹಾಸ ಮುಂತಾದ ಕಲೆಗಳ ಕುರಿತು ಭೋದನೆ ನಡೆಯುತ್ತಿದೆ. ಮೈಸೂರು ವಿಶ್ವವಿದ್ಯಾಲಯದಿಂದ ಮಾನ್ಯತೆ ಹೊಂದಿ ಪ್ರಸ್ತುತ ಕಾಲೇಜು ಕಾರ್ಯನಿರ್ವವಿಸುತ್ತಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಖ್ಯಾತಿಯನ್ನು ಗಳಿಸಿದ ಸಂಸ್ಥೆ ಇದಾಗಿದ್ದು, ಇಲ್ಲಿಂದ ಶಿಕ್ಷಣ ಪಡೆದ ಅನೇಕ ಜನ ಪ್ರತಿಭಾವಂತ ಕಲಾವಿದರು ದೇಶ-ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ.

೨). ಅ.ನ.ಸು. ಕಲಾಮಂದಿರ, ಬೆಂಗಳೂರು: ೧೯೧೯

ಬೆಂಗಳೂರು ಅಗಸ್ಟ್ ೧೨,೧೯೧೯ ರಲ್ಲಿ ಅ.ನ.ಸುಬ್ಬರಾಯರು 'ಕಲಾಮಂದಿರ' ಎಂಬ ಸಂಸ್ಥೆಯನ್ನು ಪ್ರಾರಂಭಿಸುತ್ತಾರೆ. (ಇದೇ ಅವಧಿಯಲ್ಲಿಯೇ ೧೯೧೯ ರಲ್ಲಿ ರವಿಂದ್ರನಾಥ ಠಾಕೂರರು ಶಾಂತಿನಿಕೇತನವೆಂಬ ಸಂಸ್ಥೆಯನ್ನು ಕಲ್ಕತ್ತದಲ್ಲಿ ಪ್ರಾರಂಭಿಸಿದ್ದು ಈಗ ಅದು ವಿಶ್ವಭಾರತಿ ವಿಶ್ವವಿದ್ಯಾಲಯವಾಗಿ ಬೆಳದಿದೆ).ಈ ಕಲಾಮಂದಿರ ಸಂಸ್ಥೆಯಲ್ಲಿ ಬಗೆ ಬಗೆಯ ಬಣ್ಣದ ಬೋರ್ಡ್‌ಗಳು, ರೂಪಚಿತ್ರ ತಯಾರಿಕೆ, ಕಲಾತ್ಮಕ ಖುರ್ಚಿ ಬೆಂಚುಗಳು, ವಾಣಿಜ್ಯ ಅಂಗಡಿಗಳ ಮುಂದಿನ ಬೋರ್ಡ್‌ಗಳು ನಿರ್ಮಿತವಾಗುತ್ತಿದ್ದು. ಬೆಂಗಳೂರಿಗೆ ಪರಿಚುಸಿದ್ದು ಈ ಕಲಾಮಂದಿರ.ಸ್ವಾತಂತ್ರ್ಯವೇ ಸ್ವರ್ಗ-ಸ್ವಾವಲಂಬನೆಯೇ ಸ್ವಾತಂತ್ರ್ಯದ ಹಾದಿ ಎನ್ನುವ ತತ್ವವನ್ನು ಅನುಸರಿಸಿಕೊಂಡು ಬಂದ ಸಂಸ್ಥೆ ಇದಾಗಿದೆ.

ಈ ಸಂಸ್ಥೆಯಲ್ಲಿ ಕಲಾಶಿಕ್ಷಣವಲ್ಲದೆ ಪೋಟೋ ಸ್ಟುಡಿಯೋ, ಪ್ರೇಂ ಕಲಾಕೃತಿ ತಯಾರಿಕೆ, ಸೀರೆಯ ಮೇಲೆ ಬ್ಲಾಕ್ ಪ್ರಿಂಟಿಂಗ್, ಸೈನ್ ಬೋರ್ಡ್ ತಯಾರಿಕೆ, ಬಾಟಿಕ್ ತಯಾರಿಕೆ ಮುಂತಾದವನ್ನು ಕಲಾತ್ಮಕವಾಗಿ ರೂಪಿಸುವ ಬಗ್ಗೆ ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಕಲೆಯ ಮೂಲಕ ಸ್ವಯಂ ಉದ್ಯೋಗದ ಮೂಲಕ ದಾರಿ ತೋರಿಸುವ ಹಿನ್ನೆಲೆಯಲ್ಲಿ ಈ ಸಂಸ್ಥೆ ಪ್ರಾರಂಭಿಕ ಹಂತದಲ್ಲಿ ಕಾರ್ಯ ನಿರ್ವವಿಸುತ್ತಾ ಬಂದಿದೆ. ನಂತರದ ದಿನಗಳಲ್ಲಿ ಕಲೆಯ ಗಂಭೀರವಾದ ಅಧ್ಯಯನಕ್ಕೆ ಈ ಸಂಸ್ಥೆ ತೊಡಗಿಕೊಂಡಿರುವುದು ಕಂಡುಬರುತ್ತದೆ. 'ಕಲಾ' ಎಂಬ ಮಾಸ ಪ್ರತಿಕೆಯ ಮೂಲಕ ಕಲೆಯ ಕುರಿತು ಇರುವ ಅನೇಕ ಕುಂದು ಕೊರತೆಗಳ ಬಗ್ಗೆ ಧ್ವನಿಯೆತ್ತಿದವರು ಈ ಸಂಸ್ಥೆಯನ್ನು ಹುಟ್ಟುಹಾಕಿದ ಅ.ನ.ಸು. ಅವರು ಮುಂದೆ ಚಿತ್ರಕಲಾ ಡಿಪ್ಲೋಮಾ ಪರೀಕ್ಷೆಗಾಗಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು. ಕಲೆಯ ಕುರಿತಾದ ಹಲವಾರು ವಿಧಾಯಕವಾದ ಕಾರ್ಯಕ್ರಮಗಳು, ರಾಷ್ಟ್ರಮಟ್ಟದ ಕಲಾಶಿಭಿರ, ಪ್ರದರ್ಶನ ಮತ್ತು ಸ್ಪರ್ಧೆಗಳನ್ನು ಏರ್ಪಾಡಿಸುತ್ತ ಬಂದ ಹಿರಿಮೆ ಈ ಸಂಸ್ಥೆಗಿದೆ, ಈಗ ಬಿ.ವಿ.ಎ ಪದವಿಯ ಕಲಾಶಿಕ್ಷಣವನ್ನು ಇಲ್ಲಿ ನೀಡಲಾಗುತ್ತಿದೆ. ಈ ಸಂಸ್ಥೆ ೨೦೧೯ಕ್ಕೆ ನೂರು ವಸಂತಗಳನ್ನು ಕಾಣಲಿದೆ.

೩). ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್, ಧಾರವಾಡ: ೧೯೩೫

೧೯೩೫ ರಲ್ಲಿ ಧಾರವಾಡದಲ್ಲಿ ಶ್ರೀ ಡಿ.ವಿ. ಹಾಲಭಾವಿಯವರು ಸ್ಕೂಲ್ ಆಫ್ ಆರ್ಟ್ಸನ್ನು ಪ್ರಾರಂಭಿಸಿರುತ್ತಾರೆ. ಜೆ.ಜೆ. ಸ್ಕೂಲ್, ಆಫ್ ಆರ್ಟ್‌ನಲ್ಲಿ ಅಧ್ಯಯನ ಮಾಡಿ ಬಂದ ಇವರು ಉತ್ತರ ಕರ್ನಾಟಕದಲ್ಲಿ ಕಲೆಯ ಶಿಕ್ಷಣವನ್ನು ವ್ಯವಸ್ಥಿತವಾಗಿ ನೀಡುವ ಯಾವುದೇ ಸಂಸ್ಥೆಗಳು ಇಲ್ಲದಿರುವುದನ್ನು ಗಮನಿಸಿ ಈ ಸಂಸ್ಥೆಯನ್ನು ಹುಟ್ಟು ಹಾಕಿರುತ್ತಾರೆ.ಈ ಸಂಸ್ಥೆಯು ಮುಂಬೈ ಪಬ್ಲಿಕ್ ಟ್ರಸ್ಟ್ ಯಾಕ್ಟ್‌ನಲ್ಲಿ ನೋಂದಣಿಯನ್ನು ಪಡೆದಿದೆ.ಈ ಸ್ಕೂಲ್ ಆಫ್ ಆರ್ಟ್‌ನಲ್ಲಿ ಈ ಕೆಳಗಿನ ವಿಷಯಗಳನ್ನು ಆಗ ಕಲಿಸಲಾಗುತ್ತಿತ್ತು.

೧). ರೇಖಾ ಚಿತ್ರಕಲೆ

೨).ವರ್ಣ ಚಿತ್ರಕಲೆ

೩).ಅನ್ವಯಿಕ ಕಲೆ

೪).ಛಾಯಾಚಿತ್ರಕಲೆ

೫).ಚಿತ್ರಕಲಾ ಶಿಕ್ಷಕರ ತರಬೇತಿ

೬).ಸಂಗೀತ

೭).ನೃತ್ಯ

೮). ಕರಕುಶಲ ಕಲೆಗಳು

ಈ ಮುಂತಾದ ಕಲೆಗಳನ್ನು ಶಾಸ್ತ್ರೋಕ್ತವಾಗಿ ಕಲಿಸುವ ವ್ಯವಸ್ಥೆಯನ್ನು ಈ ಸಂಸ್ಥೆ ಪ್ರಾರಂಭಿಕ ಹಂತದಲ್ಲಿ ಮಾಡಿಕೊಂಡು ಬಂದಿದೆ.ಈ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಮುಂಬೈನ ಜೆ.ಜೆ.ಸ್ಕೂಲ್ ಆಫ್ ಆರ್ಟ್ ಪರೀಕ್ಷೆಯನ್ನು ನೆಡೆಸುತ್ತಿತ್ತು. ನಂತರ ಬಹಳಷ್ಟು ಹೋರಾಟ ಮಾಡಿ ಧಾರವಾಡದಲ್ಲಿಯೇ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸಿರುತ್ತಾರೆ. ೧೯೫೬ ರ ವರೆಗೆ ಚಿತ್ರಕಲಾ ಪರೀಕ್ಷೆಗಳನ್ನು ಸ್ಕೂಲ್ ಆಫ್ ಆರ್ಟ್‌ನಿಂದಲೇ ನಿರ್ವವಿಸಲಾಗುತ್ತಿತ್ತು. ಮುಂಬೈ ಸರ್ಕಾರವು ೧೯೫೨ ರಲ್ಲಿ ಚಿತ್ರಕಲಾ ಶಿಕ್ಷಕರ ಪರೀಕ್ಷೆಗಳನ್ನು ನಡೆಸಲು ಅನುಮತಿಯನ್ನು ನೀಡಿತು. ಆಗ ಕರ್ನಾಟಕದಲ್ಲಿ ಏಕೈಕ ಚಿತ್ರಕಲಾ ಶಿಕ್ಷಕರ ಪರೀಕ್ಷಾ ಕೇಂದ್ರವಾದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕಾರ್ಯವನ್ನು ನಿರ್ವಹಿಸಿತು.ಇಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರಾಥಮಿಕ ಮತ್ತು ಪೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕವಾಗುತ್ತ ಬಂದಿರುವುದು ಗಮನಾರ್ಹ ಅಂಶವಾಗಿದೆ.

ಸಧ್ಯ ಈ ಕಲಾಸಂಸ್ಥೆಯು ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು. ಬದಲಾದ ಪಠ್ಯಕ್ರಮಕ್ಕನುಗುಣವಾಗಿ ಬಿ.ವ್ಹಿ.ಎ. ಪದವಿಯನ್ನು ನಡೆಸುತ್ತಿದೆ.

ವಿಜಯ ಕಲಾಮಂದಿರ ಗದಗ-೧೯೪೭

ಶ್ರೀ ಟಿ.ಪಿ. ಅಕ್ಕಿಯವರು ೧೯೪೭ ರಲ್ಲಿ ಗದಗದಲ್ಲಿ 'ವಿಜಯಕಲಾಮಂದಿರ' ಎಂಬ ಚಿತ್ರಕಲಾ ಶಾಲೆಯನ್ನು ಸ್ಥಾಪಿಸಿದರು. ೧೯೬೧ ರಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿ ಕೋರ್ಸಗಳಾದ ಡಿ.ಎಂ.ಸಿ.ಎ.ಎಂ. ಜೆ.ಡಿ.ಅರ್ಟ್ ಕೋರ್ಸ್‌ಗಳನ್ನು ಸರ್ಕಾರಿ ನಿಯಮಾವಳಿ ಪ್ರಕಾರ ಪ್ರಾರಂಭಿಸಲಾಯಿತು.೧೯೫೫-೬೬ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎಫ್.ಎ.ಸ್ನಾತ್ತಕೋತ್ತರ ಪದವಿಯನ್ನು ಸಹ ಪ್ರಾರಂಭಿಸಿದೆ.೨೦೦೬-೦೭ ರಲ್ಲಿ

ಈ ಸಂಸ್ಥೆಯು ಯು.ಜಿ.ಸಿ.ಯ ನ್ಯಾಕ್ ಸಂಸ್ಥೆಯಿಂದ ಮೌಲ್ಯಮಾಪನಗೊಂಡಿದ್ದು.ಅದು 'ಬಿ' ಗ್ರೇಡ್ ಮಾನ್ಯತೆ ನೀಡಿರುವುದನ್ನು ಗಮನಿಸಬಹುದಾಗಿದೆ.

ಕರ್ನಾಟಕದಲ್ಲಿ ಇದೇ ಮಾದರಿಯ ಅನೇಕ ಖಾಸಗಿ ಸಂಸ್ಥೆಗಳ ೩೦ ಲಲಿತಕಲಾ ಪದವಿ ಕಾಲೇಜುಗಳು ಮತ್ತು ೪೦ ಲಲಿತಕಲಾ ಡಿಪ್ಲೋಮಾ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಒಟ್ಟಾರೆ ಭಾರತದಲ್ಲಿ ಬ್ರಿಟಿಷರಿಂದ ಪ್ರಾರಂಭವಾದ ಕರಕುಶಲ ಮತ್ತು ಕಲೆಗಳ ಶಾಲೆಗಳು ಮುಂದೆ ಕಾಲೇಜುಗಳಾಗಿ ಈಗ ಸಂಪೂರ್ಣ ವಾಣಿಜ್ಯರಹಿತ ದೃಶ್ಯಕಲಾ ಕಾಲೇಜುಗಳಾಗಿ ಪರಿವರ್ತನೆಯಾಗಿವೆ. ಮತ್ತು ಡಿಪ್ಲೋಮಾಕ್ಕೆ ಸೀಮಿತವಾದ ಈ ಸಂಸ್ಥೆಗಳು ಪದವಿ ಹಂತದ ಕಾಲೇಜುಗಳಾಗಿ, ಹಾಗೆಯೇ ಸ್ನಾತ್ತಕೋತ್ತರ ಪದವಿ, ಎಂ,ಫಿಲ್. ಪಿ.ಹೆಚ್.ಡಿ. ಸಂಶೋಧನ ಅಧ್ಯಾಯನಕ್ಕೆ ಸಹ ಅಣಿಯಾಗಿವೆ, ಆಯಾ ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾವಣೆಯಾಗಿವೆ.

ಒಟ್ಟಾರೆ ಸ್ವತಂತ್ರ್ಯಪೂರ್ವ ಭಾರತದಲ್ಲಿ ಬ್ರಿಟಿಷರು ನಾಲ್ಕು ಕಲಾಶಾಲೆಗಳನ್ನು ಪ್ರಾರಂಭಿಸಿದಂತೆ, ಕರ್ನಾಟಕದಲ್ಲಿಯೂ ಸಹ ನಾಲ್ಕು ಕಲಾಶಾಲೆಗಳು ಕಾಕತಾಳೀಯವಾಗಿ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ.ಕರ್ನಾಟಕದಲ್ಲಿರುವ ಈ ಕಲಾಶಾಲೆಗಳು ಸಹ ಬ್ರಿಟಿಷ್ ದೃಶ್ಯಕಲಾ ಶಿಕ್ಷಣದ ಪಠ್ಯಕ್ರಮಕ್ಕೆ ಒಳಪ್ಪಟ್ಟರೂ ದೇಶಿಯವಾದ ಹಲವಾರು ಕಲೆಗಳ ಅಭ್ಯಾಸ ಮತ್ತು ಬೆಳವಣಿಗೆಗೆ ಪ್ರೋತ್ಸಾಹ ನೀಡಿರುವುದು ಗಮನಾರ್ಹ ಅಂಶ.

ಈ ಸ್ವಾತಂತ್ರ್ಯೋತ್ತರ ಕಾಲದ ಚಟಿವಟಿಕೆಗಳಿಂದ ಸಾಮಾನ್ಯವಾಗಿ ಮುಕ್ತವಾದ ಕೇವಲ ಸಾಹಿತ್ಯಿಕ ವಿಷಯಗಳಿಗೆ ಗಮನ ಕೊಡುತ್ತಿದ್ದ ಪತ್ರಿಕೆಗಳು ಬರು ಬರುತ್ತಾ ದೃಷ್ಟಿಮಾಧ್ಯಮಕ್ಕೂ ಪ್ರಾಧಾನ್ಯತೆ ಕೊಟ್ಟವು. ವಾಣಿಜ್ಯ ಕಲೆಯನ್ನು ಕರ್ನಾಟಕದ ಕಲಾವಿದರು ತಮ್ಮ ಸೂಕ್ಷ್ಮ ರಸದೃಷ್ಟಿಯನ್ನು ಬೆಳೆಸಿರುವುದು ಗಮನಾರ್ಹವಾಗಿದೆ. ಸಾಹಿತ್ಯ ಪ್ರಕಟಣೆಗಳ ಮುಖಪುಟ ವಿನ್ಯಾಸದಲ್ಲಿ ಜನರಿಗೆ ಕೇವಲ ಬುದ್ಧಿ ಕೊಡುವ ಬಣ್ಣ ರೂಪಗಳ ಬದಲಾಗಿ ಉತ್ತಮ ಕಲಾಮೌಲ್ಯದ ಚಿತ್ರಗಳನ್ನು ಮುದ್ರಿಸುವ ಆಸಕ್ತಿ, ಅಭಿರುಚಿಗಳು ಬೆಳೆದವು. ಇದಕ್ಕೆ ಕಾರಣ ನಮ್ಮ ಯುವ ಕಲಾವಿದರಾದ ಚಂದ್ರನಾಥ ಆಚಾರ್ಯ, ಸಿ.ಚಂದ್ರಶೇಖರ್, ಶ್ಯಾಮಸುಂದರ್, ವಿಜಯ ಬಾಗೊಡಿ, ಬಸವರಾಜ, ಮುಸವಳಗಿ, ಕಾಳಿದಾಸ ವತ್ತಾರ್, ಜಯಕುಮಾರ್ ಮುಂತಾದವರು ಮುದ್ರಣ ಕಲೆಯನ್ನು ಬರೋಡಾ, ಶಾಂತಿನಿಕೇತನದ ಗರಡಿಗಳಲ್ಲಿ ತರಬೇತು ಪಡೆದು ಹೊಸ ಆವಿಷ್ಕಾರಗಳನ್ನು ಕನ್ನಡ ಕಲೆಗೆ ತಂದಿದ್ದಾರೆ. ಅವು ಯಶಸ್ವಿಯಾದವು. ಇದರಿಂದ ನೋಡುಗನ ಹೊಸಬಣ್ಣ ರೇಖೆಗಳ ಸಂಯೋಜನೆಗೆ ಹೊಸ ಅನುಭವ ಪಡೆಯುವಂತಾಯಿತು.

ಆ ನಂತರ 'ನಾವು ನಾಲ್ವರು ಮತ್ತು ಪ್ಲಸ್" ಮೈಸೂರು ಆರ್ಟ್ ಕೌನ್ಸಿಲ್, ನೌಲ್ ಕೆನರಾ ಆರ್ಟ್‌ಕೌನ್ಸಿಲ್, ಚತುರ್ಥಿ ಕಲಾವಿದರು. ಗುಲ್ಬರ್ಗಾ ಆರ್ಟ್ ಕೌನ್ಸಿಲ್ ಸಂಯೋಜಿತ್ ಬೆಂಗಳೂರು ಕಲಾವಿದ ಕೂಟ ಮಂಗಳೂರು ರೇನೆಬೋ ಆರ್ಟ್ ಕೌನ್ಸಿಲ್, ಧಾರವಾಡ ಇವರೆಲ್ಲಾ ತಂಡಗಳನ್ನು ರೂಪಿಸಿಕೊಂಡು ಪ್ರಗತಿಶೀಲ ಪ್ರಯೋಗಗಳನ್ನು ನಡೆಸಿ ಪ್ರದರ್ಶಿಸಿದರು. ಈ ನಡುವೆ ಈ ಗುಂಪುಗಳಲ್ಲಿನ ಶ್ರೀಯುತರಾದ ವಿಜಯ ಸಿಂಧೂರ್, ಜಿ.ಎನ್.ಶೆಣೈ, ವಾಸುದೇವ್ ಎಂ.ಬಿ. ಪಾಟೀಲ್, ಜೆ.ಎನ್. ಖಂಡೇರಾವ್ ವಿ.ಜಿ.ಅಂಧಾನಿ, ಕಾಳಿದಾಸ ಪತ್ತಾರ್ ಯೂಸುಫ್ ಅರಕಲ್ ಪುಂಚಿತ್ತಾಯ, ಹಿರೇಗೌಡರ್, ಜೆ.ಎಂ.ಎಎಸ್. ಮಣಿ, ಪೀಟರ್ ಲೂಯಿಸ್ ವಿಜಯ ಹಾಗರಗುಂಡಗಿ, ಶಿವಪ್ರಸಾದ, ಎಂ.ವಿ.ಕಂಬಾರ್, ಶಂಕರ್ ಪಾಟೀಲ್, ರಾಮದಾಸ, ಎನ್.ಮರಿಶಾಮಚಾರ್, ಆರ್.ಎಂ.ಹಡಪದ್ ಅವರಲ್ಲದೇ ಹಲವಾರು ಮಹಿಳಾ ಕಲಾವಿದೆಯರಾದ ಎಸ್.ಧನಲಕ್ಷ್ಮೀ, ಪುಷ್ಪಾದ್ರಾವಿಡ್, ಕಮಲಾಕ್ಷಿ, ಸಾವಿತ್ರಿ,

* **ಪುಸ್ತಕದ ಹೆಸರು ದೃಶ್ಯಕಲಾ ಸಂಶೋಧನೆ ಡಾ॥ ಎಸ್ ಸಿ ಪಾಟೀಲ್, ಮುದ್ರಣ-೨೦೧೫**

ಉಮಾಶರ್ಮ, ಇನ್ನೂ ಅನೇಕ ಕಲಾವಿದರು ರಾಜ್ಯ ಹೊರರಾಜ್ಯಗಳಲ್ಲಿ ಪ್ರದರ್ಶನಗಳನ್ನು ನಡೆಸಿ ಹೆಚ್ಚಿನ ಅರಿವೆಗೆ ಜಾಗೃತಿಗೆ ಕಾರಣರಾದರು. ಇದರ ಪರಿಣಾಮವಾಗಿ ಅಲ್ಲಲ್ಲಿ ಹೊಸ ಕಲಾಸಂಘಗಳು ಹುಟ್ಟಿ ಕಾರ್ಯ ಪ್ರವೃತ್ತವಾದವು. ತರುಣರು ಕಲಾ ಶಿಕ್ಷಣದ ಬಗೆಗೂ ಆಸಕ್ತರಾದರೂ. ಇದರ ಫಲವಾಗಿ ಕರ್ನಾಟಕದ ಎಲ್ಲಾ ಕಡೆಯೂ ಕಲಾ ಶಾಲೆಗಳು ಬೆಳೆದವು ತರುಣ ಕಲಾವಿದರನ್ನು ರೂಪಿಸುವಲ್ಲಿ ಧಾರವಾಡ, ಹುಬ್ಬಳ್ಳಿ,ಬೆಂಗಳೂರು, ಗುಲ್ಬರ್ಗಾ, ಗದಗ, ಮೈಸೂರು, ದಾವಣಗೆರೆ ಶಾಲೆಗಳ ಪಾತ್ರ ಶ್ಲಾಘನೀಯ. ಇದರಂತೆಯೇ ಸರ್ಕಾರ ಹಾಗೂ ಸಾರ್ವಜನಿಕರ ನೆರವಿನೊಂದಿಗೆ ಆಯಾ ಭಾಗದ ಪ್ರಮುಖ ಕೇಂದ್ರಗಳಾದ ಚಿತ್ರಕಲಾ ಪರಿಷತ್ತು ಕುವೆಂಪು ಕಲಾ ಸಂಸ್ಥೆ ಮತ್ತು ಗುಲ್ಬರ್ಗಾದ ಐಡಿಯಲ್ ಫೈನ್ ಆರ್ಟ್ ಸಂಸ್ಥೆಗಳು ಮಾಡಿದ ಕಾರ್ಯ ರಾಷ್ಟ್ರಮಟ್ಟದ್ದಾಗಿವೆ.

ಈ ಸಂಸ್ಥೆಗಳಿಂದ ಹೊರಬಂದ ಕಲಾವಿದರು ತಮ್ಮದೇ ಆದ ಚಿಕ್ಕ ದೊಡ್ಡ ಕಲಾ ತಂಡಗಳಾಗಿ, ಕಲಾ ಶಿಬಿರಗಳನ್ನು ಕಲಾಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಿದರು. ಹೊರ ಒಳ ಕಲಾವಿದರೊಂದಿಗೆ ಒಡಗೂಡಿ ಕಲಾಮೇಳ, ಕಲಾಯಾತ್ರೆ, ಕಲಾಮಹೋತ್ಸವಗಳನ್ನು ನಡೆಸಿ ಹಿರಿಕಿರಿಯ ಕಲಾವಿದರ ಹಾಗೂ ಜನ ಸಾಮಾನ್ಯರ ಹೃದಯ ಬೆಸೆಯುವಂತೆ ಮಾಡಿದ್ದಲ್ಲದೆ, ಜನತೆ ಕಲೆಯನ್ನು ಮೆಚ್ಚುವಲ್ಲಿ, ಕೊಳುವಲ್ಲಿ ಆಸಕ್ತರಾಗುವಂತೆ ಮಾಡಿದರು. ಈ ಎಲ್ಲಾ ಬೆಳವಣಿಗೆ ಕಲಾವಿದರ ಹಾಗೂ ಕಲಾಸಂಘಗಳು ರಾಜ್ಯ ಮಟ್ಟದಲ್ಲಿ ತನ್ನತನ ಗುರುತಿಸುವಂತೆ ಮಾಡಿದೆ ಎಂದು ಹೇಳಬಹುದು. ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕೆಂದರೆ ಬೇರೆ ಕಡೆಯಿಂದ ಬರುವ ವಿದ್ಯಾರ್ಥಿಗಳಿಗೆ ಇರಲು ವಸತಿಯ ತೊಂದರೆಯನ್ನು ಕಲಾಶಾಲೆ ಎದುರಿಸಬೇಕಾಗುತ್ತಿತ್ತು. ಚಿತ್ರಕಲೆಯಲ್ಲಿ ರೇಖಾಚಿತ್ರ, ಭಾವಚಿತ್ರ, ಯಥಾದರ್ಶನ, ಶ್ರೀ ಧುರಂದರ ಅವರು ಪ್ರಖ್ಯಾತ ಶಿಲ್ಪಕಾರ ಶ್ರೀ ಆರ್.ಬಿ. ಗಣಪತರಾವ್ ಮತ್ತು ಅವರ ಮಗ ಶಾಮರಾವ್ ಮೂಲತಃ ಚಿತ್ರಕಲಾ ವಿಭಾಗದ ವಿದ್ಯಾರ್ಥಿಗಳಾಗಿದ್ದರು. ಅಲಂಕಾರ ಚಿತ್ರಗಳನ್ನು ಔದ್ಯೋಗಿಕ ದೃಷ್ಟಿಯಿಂದ ಚಿತ್ರಸುತ್ತಿದ್ದರು. ಚಿತ್ರಕಲಾ ಮತ್ತು ಮಾಡಲಿಂಗ್ ವಿದ್ಯಾರ್ಥಿಗಳಿಗೆ ಮನುಷ್ಯ ಹಾಗೂ ಪ್ರಾಣಿಗಳ ಪ್ರಮಾಣಬದ್ಧವಾದ ಚಿತ್ರ ಬರೆಯಲು ಹೇಳಿಕೊಡುತ್ತಿದ್ದರು. ಆಗ ಜೀವಂತ ವ್ಯಕ್ತಿಗಳನ್ನು ಎದುರಿಗೆ ಕೂಡ್ರಿಸಿ ಎಲ್ಲ ಕೋನಗಳಿಂದಲೂ ಅಭ್ಯಾಸ ಮಾಡುತ್ತಿದ್ದರು. Nude figure study ಮಾಡುತ್ತಿದ್ದರು ಹಾಗೂ ಕ್ಷೇತ್ರ ರೇಖಾ ಚಿತ್ರಗಳನ್ನು ಮಾಡುತ್ತಿದ್ದರು.

೧೯೪೯ ರಿಂದ ೧೯೧೮ ರವರೆಗೆ "ಶ್ರೀ ಸಿಸಿಲಿ ಬರ್ನಿಸ್" ಅವರು ಅಧಿಕಾರಕ್ಕೆ ಬಂದ ನಂತರ "ಪಠ್ಯಕ್ರಮದಲ್ಲಿ" ಬದಲಾವಣೆಯಾಗಿ (3rd grade) ಮೂರು ಗ್ರೇಡ್ ಪರೀಕ್ಷೆಗೆ ಬದಲಾಗಿ ಎಲಿಮೆಂಟರಿ ಹಾಗೂ ಇಂಟರ್ ಮೀಡಿಯೆಟ್ ಪರೀಕ್ಷೆ ಜಾರಿಗೆ ಬಂದವು. ವಾಸ್ತುಶಿಲ್ಪ ಹಾಗೂ ತಾಂತ್ರಿಕ ವರ್ಗಕ್ಕೆ ಸೇರಿದ ಕೆಲವು ವಿಷಯಗಳನ್ನು ಚಿತ್ರಕಲಾ ವಿಭಾಗದಿಂದ ಬೇರ್ಪಡಿಸಿದರು. ಯಥಾದರ್ಶನ, ಸರಳ ಗೈ ಚಿತ್ರಣ, ಜಾಮಿತಿ ಚಿತ್ರಣ ಇವೆಲ್ಲ ಸ್ವಲ್ಪ ಬದಲಾವಣೆ ಮಾಡಿದರು. ಲಿಥೊಗ್ರಾಫಿಕ್ ಪ್ರೊಜೆಕ್ಷನ್ ಹಾಗೂ ಪರಸ್ಪೆಕ್ಟಿವ್ ಎರಡು ವಿಷಯದ ಬದಲಾಗಿ ನಿಸರ್ಗದ ಎಲೆ ಚಿತ್ರಣ, ಸ್ಮರಣ ಚಿತ್ರಣ, ಬಣ್ಣದ ನಕ್ಷೆ ವಿಷಯಗಳನ್ನು ಸೇರಿಸಲಾಯಿತು.

ಕ್ರಿ.ಶ. ೧೯೧೫ ರಲ್ಲಿ ಇನ್ಸ್‌ಪೆಕ್ಟರ್ ಡ್ರಾಯಿಂಗ್ ಮತ್ತು ಕ್ರಾಫ್ಟ್ ವರ್ಕ್ಸ್ ಎಂಬ ಪರೀಕ್ಷೆ ಜಾರಿಗೆ ತಂದರು. ಎಲಿಮೆಂಟರಿ ಹಾಗೂ ಇಂಟರ್ ಮೀಡಿಯೆಟ್‌ಗೆ ವಿಷಯಗಳಲ್ಲಿ still life, plant drawing, design from plants, figure from cast sand design with figure A decarative floral design ಇದ್ದವು.

ನಂತರ Anotomy and Elementary prespective ಅಲ್ಲದೆ composition and Murals(ಭಿತ್ತಿ) ಗಳ ಪಠ್ಯಕ್ರಮದಲ್ಲಿ ಸೇರಿಕೊಂಡವು. ಕ್ರಿ.ಶ. ೧೯೧೦ ರಲ್ಲಿ "Art master" ಪರೀಕ್ಷೆಗಳು ಪ್ರಾರಂಭವಾದವು, ಶಿಕ್ಷಕರಾದವರೆಲ್ಲ ಮರು ಈ ಪರೀಕ್ಷೆಯನ್ನು ಬರೆದು ಪಾಸಾಗಬೇಕಾಯಿತು. ಈ ಪರೀಕ್ಷೆಗಳಲ್ಲಿ ಅಂಕಗಳ ಬದಲು ಗ್ರೇಡ್‌ಗಳನ್ನು ಕೊಡಲು ಪ್ರಾರಂಭಿಸಿದರು.

ಹೀಗೆ ವಿವಿಧ ವಿಭಾಗಗಳು ಹುಟ್ಟಿಕೊಂಡವು. ಕಲಾಶಾಲೆಗೆ ಪ್ರವೇಶ ಪಡೆಯುವವರನ್ನು ಮೊದಲಿಗೆ (ಮೂರುಗ್ರೇಡ್) ತ್ರೈಮಾಸಿಕ ಪರೀಕ್ಷೆಗಳಿಗೆ ಗುರಿಪಡಿಸುತ್ತಿದ್ದರು. ಹಾಳೆಯ ಆಕಾರಗಳನ್ನು ರೇಖಾ ಚಿತ್ರಗಳಲ್ಲಿ ಚಿತ್ರಿಸಿ ನಂತರ ನೆರಳು ಬೆಳಕಿನ ಛಾಯೆಯನ್ನು ಚಿತ್ರಿಸುತ್ತಿದ್ದರು. ಅಲ್ಲದೇ ನಿಸರ್ಗದ ಜೊತೆ ಪಾಠಶಾಲೆಯಿಂದ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ವಿವಿಧವಾದ ರೇಖೆಗಳನ್ನು ಅಭ್ಯಸಿಸಿಕೊಂಡು ಬರುವಂತೆ ಅಭ್ಯಾಸ ನೀಡುತ್ತಿದ್ದರು. ಇದರಿಂದ ಕಣ್ಣಿನ ಮೂಲಕ ವಸ್ತುಗಳ ಮೇಲಿನ ನಮೂನೆಗಳ ಕಲ್ಪನೆ ಚೆನ್ನಾಗಿ ಅಭ್ಯಸಿಸಿಕೊಳ್ಳಲು ಸಾಧ್ಯವಾಗುತ್ತದೆ. ಇವರಿಗಿರುವ ಪಾಠವೆಂದರೆ ಒಂದು ಘನಾಕೃತಿಯನ್ನು ಮುಂದಿರಿಸುತ್ತಿದ್ದರು. ಅದನ್ನು ಕನಿಷ್ಠ ೩-೪ ಬಾರಿ ರೇಖಾ ಚಿತ್ರಗಳನ್ನು ಮಾಡಿ ನೆರಳು ಬೆಳಕುಗಳನ್ನು ಚಿತ್ರಿಸಬೇಕು. ಈ ರೀತಿ ೩ ತ್ರೈಮಾಸಿಕ ಪರೀಕ್ಷೆಗೆ ಗುರಿಪಡಿಸುತ್ತಿದ್ದರು. ನಾಲ್ಕನೆಯದರಲ್ಲಿ ಪಾಸಾಗದಿದ್ದರೆ ಆ ವಿದ್ಯಾರ್ಥಿ ಚಿತ್ರಕಲೆ ಕಲಿಯಲು ಅರ್ಹನಲ್ಲ ಎಂದು ಹೊರಹಾಕುತ್ತಿದ್ದರು. ಸರಿಯಾಗಿ ಪ್ರಮಾಣಬದ್ಧವಾದ, ವಿವಿಧವಾದ, ರೇಖಾಚಿತ್ರ ರಚಿಸಲು ಸರಳ ಹಾಗೂ ಸುಂದರವಾಗಿ ರಚಿಸಲು ಬರುವಂತೆ ಜಾಮಿತಿಯ ಆಕೃತಿಗಳ ಮೂಲಕವು ಅಭ್ಯಾಸ ಮಾಡಿಸುತ್ತಿದ್ದರು. ಎರಡನೇ ವರ್ಷಕ್ಕೆ ೧) ಸರಳಸ್ಥಿರ ಚಿತ್ರ ೨) ಜಾಮಿತಿಕ ಚಿತ್ರ ೩) ಮೂರ್ತಿ ಚಿತ್ರ ೪) ದೃಶ್ಯ ಪದಗಳ ಅವ್ಯಗಳ ಪೂರ್ವ ಸಿದ್ಧತೆಯ ಚಿತ್ರವನ್ನು ಮೊದಲು ಮಾಡಿ ತೋರಿಸಬೇಕು. ಅದರಲ್ಲಿ ಯಾವುದಾದರೂ ಒಂದು ಮಾನ್ಯತೆ ಪಡೆಯದಿದ್ದರೆ ಅವರು ಮರುವರ್ಷ ಮತ್ತೆ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಈ ಪದ್ಧತಿಯು ತ್ರೈಮಾಸಿಕ ಪರೀಕ್ಷೆಗೂ ಇತ್ತು.

ಮೂರನೇ ವರ್ಷಕ್ಕೆ ಛಾಯಾಚಿತ್ರ ಅಥವಾ ಕಣ್ಣಿನಿಂದ ಚಿತ್ರ ರಚಿಸಿ ಮುಖವರ್ಣದಿಂದ ಛಾಯಾ ಪ್ರಕಾಶನವನ್ನು ವ್ಯಕ್ತಗೊಳಿಸುವುದು. ಮಣ್ಣಿನ ಶಿಲ್ಪ ಅಥವಾ ಮನೆ ಕಟ್ಟಡದಲ್ಲಿ ಹೊರಗಿನ ಹಾಗೆ ಮನೆ ಬಾಗಿಲುಗಳನ್ನು ಹಚ್ಚಿ ಶಿಲ್ಪದ ಉಬ್ಬು ತಗ್ಗುಗಳನ್ನು ಗುರುತಿಸುವುದು. ಛಾಯಾ ಚಿತ್ರದಂತೆ ನೆರಳು ಬೆಳಕುಗಳನ್ನು ತೋರಿಸುವ ಮಾದರಿ ಮತ್ತು Anthrographic projection ಇವು ವಿಷಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ A Excellent, B-good, C-Fair, II-Pass, E-Fail F-Indifference ಈ ರೀತಿ ಅಭ್ಯಾಸ ಕ್ರಮವಿತ್ತು

ಜೆ.ಜೆ. ಕಲಾಶಾಲೆಗೆ ಪ್ರವೇಶ ಪಡೆಯುವ ವಿದ್ಯಾರ್ಥಿ ಮೆಟ್ರಿಕ್ ಪಾಸಾಗಿರಬೇಕು. ಅಲ್ಲದೆ ಇಂಟರ್ ಮೀಡಿಯೆಟ್ ಪರೀಕ್ಷೆ ಫೈನಲ್ಲ ದಲ್ಲಿ ಪಾಸಾಗಿರಬೇಕು. ಹಾಗೂ ಇಂಗ್ಲೀಷ್ ಮಾತನಾಡಲು ಬರಬೇಕು. ಎಂಬ ಕರಾರುಗಳು ೧೯೧೭ ರಲ್ಲಿ ಬರ್ನೆಸ್ ನಿವೃತ್ತಿಯ ತನಕವೂ ಜಾರಿಯಲ್ಲಿದ್ದವು. ಇಷ್ಟೆಲ್ಲಾ ಇದ್ದರೂ ಈ ಚಿತ್ರಕಲಾ ವಿದ್ಯಾರ್ಥಿಗಳಿಗೆ ಅಷ್ಟೇನೂ ಸ್ವತಂತ್ರವಾಗಿ ಜೀವನ ನಡೆಸಲು ಸಹಾಯಕವಾಗಲಿಲ್ಲ. ಹಾಗೂ ಅವೆ ಇದರಿಂದಾಗಿ ಖಾಸಗಿ ಪಾಠಶಾಲೆಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಾರಂಭಿಸಿದರು. ಅವರೆಂದರೆ ಶ್ರೀ ಮಾಲವಕರ, ಶ್ರೀ ಹಳದನಕರ, ಶ್ರೀ ದಲವಿ, ಶ್ರೀ ರಮೇಶಕರರಾವ ಮುಂತಾದವರು.

ಈ ಎಲ್ಲಾ ಕಲಾಶಾಲೆಗಳ ಉಗಮದಿಂದ ಜೆ.ಜೆ. ಕಲಾಶಾಲೆಯ ಮೇಲೆ ಸ್ವಲ್ಪ ಮಟ್ಟಿಗೆ ಒತ್ತಡವಾಗಲು ಕಾರಣವಾಯಿತು. ಸರ್. ಜೆ.ಜೆ. ಕಲಾಶಾಲೆಯನ್ನು ಬ್ರಿಟಿಷರು ಸ್ಥಾಪಿಸಿದ್ದು, ರಾಯಲ್ ಅಕಾಡೆಮಿಯ ಸ್ವಾತಂತ್ರ್ಯ

ಪದವಿ ಹೊಂದಿದವರೇ ಈ ಕಲಾಶಾಲೆಯ ಡೈರೆಕ್ಟರ್ ಆಗಿರಬೇಕೆಂದು ಕಡ್ಡಾಯವಾಗಿತ್ತು. ಇದರಿಂದಾಗಿ ಅಭ್ಯಾಸ ಕ್ರಮದಲ್ಲೇನೂ ಬದಲಾವಣೆಗಳು ಕಂಡು ಬರಲಿಲ್ಲ. ವ್ಯಕ್ತಿಗತವಾಗಿ ಅಲ್ಪ ಸ್ವಲ್ಪ ಬದಲಾವಣೆ ಆಗಿರಬಹುದು ಅಷ್ಟೇ.

ಕ್ರಿ.ಶ. ೧೯೦೭ ರಲ್ಲಿ "ಆರ್.ಡಬ್ಲ್ಯೂ ರೋಬೋಥೋಮ್" ಅವರು ಡೈರೆಕ್ಟರ್ ಆಗಿ ಬಂದ ನಂತರ ಇವರೂ ಇಂಗ್ಲೆಂಡಿನ ರಾಯಲ್ ಸ್ಕೂಲ್ ಆಫ್ ಆರ್ಟನಿಂದಲೇ ಬಂದವರಾಗಿದ್ದರಿಂದ ಶಿಕ್ಷಣದ ಪದ್ಧತಿಯಲ್ಲೇನೂ ಬದಲಾವಣೆಯಾಗಲಿಲ್ಲ. ಆ ಪಠ್ಯದಲ್ಲಿಯೇ ನಾಲ್ಕು ವರ್ಷದಿಂದ ಡಿಪ್ಲೊಮ ಕೋರ್ಸ್ ಎಂದು ಮಾಡಿದರು ಕ್ರಿ.ಶ. ೧೯೨೨ ರಲ್ಲಿ ಇದೇ ಡಿಪ್ಲೊಮ ಕೋರ್ಸ್‌ಗಳು ಬ್ಯಾಚುಲರ್ ಡಿಗ್ರಿ ಆಗಿ "ವಿಶ್ವವಿದ್ಯಾಲಯದಿಂದ ಪರಿಗಣಿಸಲ್ಪಟ್ಟವು"

ಕ್ರಿ.ಶ. ೧೯೧೯ ರಲ್ಲಿ "ಕ್ಯಾಪ್ಟನ್ ಗ್ಲ್ಯಾಡ್‌ಸನ್ ಸಲೋಮನ್‌ರು" ಡೈರೆಕ್ಟರ್ ಆಗಿ ಬಂದರು. ಆಗ ತಾನೆ ಮೊದಲ ವಿಶ್ವ ಯುದ್ಧವಾಗಿದ್ದರಿಂದ ಫ್ರೆಂಚ್ ಪ್ರಭಾವ ಕಲೆಯ ಮೇಲೆ ಆಗಿತ್ತು. ಕಲೆಯ ಕ್ಷೇತ್ರದಲ್ಲಿ ನವಯುಗ ಪ್ರಾರಂಭವಾಗಿತ್ತು. ಆದರೆ ಸಲೋಮನ್‌ರು ಪಾರಂಪರಿಕ ಅಭ್ಯಾಸಕ್ಕೆ ಬಹಳ ಮಹತ್ವ ನೀಡಿದ್ದರು. ಇವರ ಶಿಷ್ಯರಾದ ಶ್ರೀ ಡಿ.ಜಿ. ಬಡಿಗೇರ್, ಎಂ. ಎ. ಚೆಟ್ಟಿ, ಜಿ.ಎಸ್. ದಂಡಾವತಿವಾಠ, ಎಂ.ವಿ. ಮುಣಜಿಗಿ, ಡಿ.ವಿ. ಹಾಲಭಾವಿ, ಅಮೀನ ಸಾಹೇಬ ಕಮಡೊಳ್ಳಿ, ಸಿ.ವಿ. ಕಾರಡಗಿ, ವೈ. ಸುಬ್ರಮಣ್ಯರಾಜು, ಎನ್.ಹನುಮಯ್ಯ ಮುಂತಾದವರಿದ್ದರು. ಜಿ. ಸಾಲೋಮನ್‌ರು ನಾಲ್ಕನೇ ವರುಷದ ತರಗತಿಗೆ ನಗ್ನ ವ್ಯಕ್ತಿಗಳ ಆಕೃತಿಗಳನ್ನು ಚಿತ್ತಿಸುವ ಪದ್ದತಿಯನ್ನು ಸೇರಿಸಿದರು. ಇದರಿಂದಾಗಿ ಮನುಷ್ಯ ಕೃತಿಗಳನ್ನೊಳಗೊಂಡ ಸಂಯೋಜನೆ ಚಿತ್ರಣವು ಉತ್ತಮವಾಗಿ ವಿದ್ಯಾರ್ಥಿಗಳು ಚಿತ್ರಿಸಲು ಪ್ರಾರಂಭಿಸಿದರು. ಭಿತ್ತಿಚಿತ್ರವನ್ನು ಮಾಡಲು ಅಜಂತಾಕ್ಕೆ ಹೋಗುತ್ತಿದ್ದರು. ಆದರೆ ಕಲಿಯಲು ಅವಧಿ ನಿಗದಿ ಮಾಡಿರಲಿಲ್ಲ. ಇವರು ಭಿತ್ತಿ ಚಿತ್ರಕ್ಕೆ ಕಲಿಯಲ್ಲಿ ಅವಧಿ ನಿಗದಿಪಡಿಸಿದರು. ಹಾಗೂ ಸರಳಗೈ ಚಿತ್ರಣ ಬಿಟ್ಟಿದ್ದನ್ನು ಮತ್ತೆ ಪಠ್ಯದಲ್ಲಿ ಸೇರಿಸಿಕೊಂಡರು. ಕ್ರಿ.ಶ. ೧೯೩೭ ರಲ್ಲಿ ಮಿ.ಜೆರಾರ್ಡ್ ಅವರು ಡೈರೆಕ್ಟರ್ ಆಗಿ ಬಂದರು, ಹೊಸತನ್ನು ಸೃಷ್ಟಿಸುವತ್ತ ಪ್ರಗತಿಯೆಡೆಗೆ ಗಮನ ಹರಿಸಿದರು. ಇದರಿಂದಾಗಿ ನವ್ಯ ಕಲೆಯತ್ತ ಸಾಗಲು ಸಾಧ್ಯವಾಯಿತು. ನವ್ಯತೆಯ ಪರಿಚಯ ಮಾಡಲು ತಮ್ಮ ಕಲಾ ಕೃತಿಗಳನ್ನೇ ಪ್ರದರ್ಶಿನಕ್ಕಿಟ್ಟರು. ಇದರಿಂದ ವಿದ್ಯಾರ್ಥಿಗಳು ಹೊಸ ಪ್ರಯೋಗದತ್ತ ಗಮನ ಸೆಳೆಯಲು ಸಾಧ್ಯವಾಯಿತು.

ಕ್ರಿ.ಶ. ೧೯೪೭ ಜನವರಿ ೩೧ ರಂದು ಜೆರಾರ್ಡ್ ಅವರು ನಿವೃತ್ತಿ ಹೊಂದಿದ್ದರು. ಆಗ ಭಾರತೀಯರೆ ಆದ ಶ್ರೀ ಅದುರಕರ ಅವರು ಡೈರೆಕ್ಟರ್ ಆಗಿ ನೇಮಕಗೊಂಡರು. ಇವರ ಅವಧಿಯಲ್ಲಿ "ಕಲಾ ಇತಿಹಾಸ ಮತ್ತು ಸೌಂದರ್ಯಶಾಸ್ತ್ರ" ವಿಷಯಗಳು ಪಠ್ಯಕ್ರಮ ಸೇರಿಕೊಂಡವು. ಮುಂದಿನ ೪೦ ರಿಂದ ೫೦ ವರ್ಷಗಳವರೆಗೆ ಪಠ್ಯಕ್ರಮದಲ್ಲಿ ಯಾವುದೇ ಬದಲಾವಣೆ ಆಗದಿರುವುದು ತಿಳಿದುಬರುತ್ತದೆ. ಮನುಷ್ಯಾಕೃತಿಗಳಿಗೆ ಪಠ್ಯಕ್ರಮದಲ್ಲಿ ಬಹಳ ಮಹತ್ವ ಕೊಟ್ಟಿದ್ದರು. ಇದಕ್ಕಾಗಿ ಸ್ವತಃ ಮನುಷ್ಯರ ದೇಹಗಳನ್ನು ಕತ್ತರಿಸಿ ಪ್ರತಿಯೊಂದು ಮಾಂಸಖಂಡಗಳ ಆಕಾರಗಳನ್ನು ಮನನಮಾಡಿಕೊಂಡರು. ಇದಕ್ಕಾಗಿಯೇ ವಾರಕ್ಕೆ ಒಂದು ಅವಧಿ ಜೆ.ಜೆ. ಆಸ್ಪತ್ರೆಗೆ ಹೋಗಬೇಕಾಗುತ್ತಿತ್ತು ಎಂಬುದನ್ನು ಶ್ರೀ ಜೆ.ಎನ್. ಖಂಡೇರಾವ್ ಅವರು ತಿಳಿಸುತ್ತಾರೆ.

ಜೆ.ಜೆ. ಸ್ಕೂಲ್ ಆಫ್ ಆರ್ಟನ್ ಅಧ್ಯಾಪಕರ ವರ್ಗ

ಸರ್. ಜೆ.ಜೆ.ಕಲಾಶಾಲೆಯಲ್ಲಿಯ ಅಧ್ಯಾಪಕ ವರ್ಗ, ಬ್ರಿಟಿಷ್ ಡೈರೆಕ್ಟರ್‌ರ ಕೆಳಗೆ ಪಳಗಿದಂತವರು

ಆದ್ದರಿಂದ ಅದೇ ಶಿಸ್ತು, ಠೀವಿ, ಕಾರ್ಯನಿಷ್ಠೆ ಎಲ್ಲಾ ಕಾರ್ಯಗಳು ನಿಯಮಬದ್ಧವಾಗಿ ನಡೆಯಬೇಕು ಮತ್ತು ಅಹಿತಕರ ವಾತಾವರಣವನ್ನು ಎಂದೂ ಸಹಿಸುವಂತಹವರಲ್ಲ. ನಮಗೆ ಕಲಿಸತಕ್ಕ ಗುರುವರ್ಯರು ದಪ್ಪ ಮೀಸೆಯ ಗಂಭೀರ ಮುಖಮುದ್ರೆಯನ್ನು ನೆನಸಿದರೆ ಸಾಕು ಭಯ ಭಕ್ತಿಯಿಂದ ತಲೆ ತಾನೇ ತಾನಾಗಿ ಬಾಗುತ್ತಿತ್ತು. ಅಂದಿನ ಆ ಗುರುಗಳ ಪೋಷಾಕು ಸಹ ಅಷ್ಟೇ ಠೀವಿಯಿಂದ ಇರುತ್ತಿತ್ತು. ಜೆ.ಜೆ. ಕಲಾ ಶಾಲೆಯ ಮೊದಲ ಶಿಕ್ಷಕ ವರ್ಗ ಶ್ರೀ ಕೃಷ್ಣರಾವ್ ಬಾಯಿ, ಶ್ರೀ ಗಣಪತಿರಾವ್ ಕೇದಾರಿ, ಶ್ರೀ ಸೋಕರ ಬಾಪೂಜಿ, ಶ್ರೀ ಮಂತ್ರಿ ಗೋಮ್ಸ್ ಹಾಗೂ ಶ್ರೀ ಪಾವಂಜೆ ಅವರಿದ್ದರು.

ಈ ರೀತಿಯಲ್ಲಿ "ಚಿತ್ರಕಲಾಶಾಲೆಗಳ ಹುಟ್ಟು, ಬೆಳವಣಿಗೆ, ಪ್ರಭಾವ, ಪ್ರೇರಣೆಗಳು ಬೆಳೆದು ಬಂದಿದ್ದು ಭಾರತ ಪ್ರಾಚೀನ ಕಾಲದಲ್ಲಿ ಚಿತ್ರಕಲಾ ಶಿಕ್ಷಣ, ಚಿತ್ರಕಲಾ ಶೈಲಿಗಳು ಹಾಗೂ ಪಾಶ್ಚಾತ್ಯರಲ್ಲಿ ಚಿತ್ರಕಲಾ ಶಿಕ್ಷಣ, ಚಿತ್ರಕಲಾ ಶಾಲೆಗಳ ಪ್ರಾರಂಭ ಕಲ್ಕತ್ತಾ, ಮದ್ರಾಸ್, ಮುಂಬಯಿ, ಲಾಹೋರ್ ಕಲಾ ಶಾಲೆಗಳಲ್ಲಿ ಕ್ರಮಬದ್ಧವಾದ ಕಲಾ ಶಿಕ್ಷಣದ ಪ್ರಾರಂಭ ಅದರಲ್ಲಿ ಪ್ರಮುಖವಾದ ಕಲ್ಕತ್ತಾ ಕಲಾ ಶಾಲೆಯು ಭಾರತೀಯ ಕಲೆಯ ಪುನರುಜ್ಜೀವನದ ಆಂದೋಲನ ಇತ್ಯಾದಿಯಾಗಿ ಬೆಳೆದರೆ ಮುಂಬಯಿಯ ಜೆ.ಜೆ. ಕಲಾಶಾಲೆ ಪಾಶ್ಚಾತ್ಯ ಶೈಲಿ ತಂತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ಕ್ಲಾಸಿಕಲ್ ಆರ್ಟನ್ನು ಬೆಳೆಸಿಕೊಂಡು ತನ್ನದೇ ಆದ ವೈಶಿಷ್ಟ್ಯವನ್ನು ಮೆರೆದಿರುವುದು ಈ ಕಲಾಶಾಲೆಗಳು ದೇಶದ ಇತರೆಡೆ ಕಲಾಶಾಲೆಗಳ ಬೆಳವಣೀಗೆಗೆ ನಾಂದಿಯಾದವು. ಅಂತೆಯೇ ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಕಲಾಶಿಕ್ಷಣವನ್ನು ನೀಡಿ ಪ್ರಮಾಣ ಪತ್ರವನ್ನು ನೀಡುವ ಕಲಾ ಸಂಸ್ಥೆಯಾಗಿ "ಹಾಲಭಾವಿ ಸ್ಕೂಲ ಆಫ್ ಆರ್ಟ್" ರಾಜ್ಯದ ಸಾಂಸ್ಕೃತಿಕ ನಗರದವಾದ ಧಾರಾವಾಡದಲ್ಲಿ ಪ್ರಾರಂಭವಾಯಿತು.

ಅಧ್ಯಾಯ : ಮೂರು

ಧಾರವಾಡದ ಸಾಂಸ್ಕೃತಿಕ ಪರಿಸರ ಮತ್ತು ಹಾಲಭಾವಿಯವರ ಸ್ಕೂಲ್ ಆಫ್ ಆರ್ಟ್ಸ್ ಸ್ಥಾಪನೆ

ಅಧ್ಯಾಯ : ಮೂರು

ಧಾರವಾಡದ ಸಾಂಸ್ಕೃತಿಕ ಪರಿಸರ ಮತ್ತು ಹಾಲಭಾವಿಯವರ ಸ್ಕೂಲ್ ಆಫ್ ಆರ್ಟ್ಸ್ ಸ್ಥಾಪನೆ

ಧಾರವಾಡ ಜಿಲ್ಲೆಯನ್ನು ವಿದ್ಯಾಕಾಶಿ ಎಂದು ಕರೆಯುತ್ತಾರೆ. ಆದಿಕವಿ ಪಂಪ, ಕುಮಾರವ್ಯಾಸರಂತಹ ಆದಿಕವಿಗಳಿಂದ ಇಂದಿನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕರ್ನಾಟಕದ ಪ್ರಥಮದಲ್ಲಿ ವಿ. ಕೃ. ಗೋಕಾಕ, ದ. ರಾ. ಬೇಂದ್ರೆ, ಗಿರೀಶ್ ಕರ್ನಾಡ್, ನಾಡೋಜ ಚೆನ್ನವೀರ ಕಣವಿಯಂತಹ ಕವಿಗಳು ಒಂದೆಡೆಯಾದರೆ ಸಂಗೀತ ದಿಗ್ಗಜರಲ್ಲಿ ಮಲ್ಲಿಕಾರ್ಜುನ ಮನಸೂರ, ಬಸವರಾಜ ರಾಜಗುರು, ಭೀಮಸೇನ ಜೋಶಿ ಗಂಗಭಾಯಿ ಹಾನಗಲ್ಲ, ಕೃಷ್ಣಾಹಾನಗಲ್, ಪುಟ್ಟರಾಜ ಗವಾಯಿಗಳು, ಗವಾಯಿ ಗಂದರ್ವರು ತಮ್ಮ ಸಂಗೀತದ ಮೂಲಕ ವಿಶೇಷ ಕೊಡುಗೆಯನ್ನು ನೀಡುತ್ತಿದ್ದಾರೆ. ಕನ್ನಡ ಭಾಷಾ ಶಿಕ್ಷಣದ ರುವಾರಿ ಡೆಪ್ಯೂಟಿ ಚೆನ್ನಬಸಪ್ಪ ನಡೆದಾಡುವ ವಿಶ್ವಕೋಶ ಖ್ಯಾತಿಯ ಡಾ. ಪಾಟೀಲ ಪುಟ್ಟಪ್ಪನಂಥ ಸಾಹಿತ್ಯಗಳನ್ನು ಸ್ಮರಿಸದೆ ಇರಲಾಗದು ಉನ್ನತ ಮಟ್ಟದ ಸಾಧನೆಯಲ್ಲಿ ತೊಡಗಿದ ಶಿಕ್ಷಕರು, ಪ್ರಾಧ್ಯಾಪಕರು ಸಮಾಜ ಸುಧಾರಕರು, ಸಂಶೋಧಕರು ಈ ಜಿಲ್ಲೆಯಲ್ಲಿದ್ದಾರೆ.

ಧಾರವಾಡ ಕರ್ನಾಟಕದ ವಿದ್ಯಾಗಿರಿ, ಕವಿ, ಸಾಹಿತಿ, ಕಲಾವಿದರ ನೆಲೆಬೀಡು ಇದಾಗಿದೆ. ರಾಜ್ಯದ ಮಾದರಿ ವಿಶ್ವವಿದ್ಯಾಲಯಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ ಕರ್ನಾಟಕ ವಿದ್ಯಾವರ್ಧಿಕ ಸಂಘ, ಕರ್ನಾಟಕ ಕಾಲೇಜು, ಸಂಗೀತ ಗುರುಕುಲಶಾಲೆ, ಹೈಕೋರ್ಟ್ ಪೀಠ ಪ್ರಮುಖವಾಗಿದೆ. ಅದರಂತೆ ಚಿತ್ರಕಲಾ ಕ್ಷೇತ್ರದಲ್ಲಿ ಉನ್ನತ ಸಾಧನೆಗೈದ ಡಿ.ವಿ.ಹಾಲಭಾವಿಯವರು ಉತ್ತರ ಕರ್ನಾಟಕದಲ್ಲಿಯೇ ಪ್ರಪ್ರಥಮ ಕಲಾಶಾಲೆ ತಂದ ಕೀರ್ತಿಗೆ ಭಾಗಿಯಾಗಿದ್ದಾರೆ. ಸ್ವತಂತ್ರ ಪೂರ್ವ ಅಂದರೆ ೧೯೩೫ ರಲ್ಲಿಯೇ ಧಾರವಾಡದಲ್ಲಿ ಕಲಾಶಾಲೆ ಪ್ರಾರಂಭಿಸಿದರೆನ್ನುವುದು ಧಾರವಡಕ್ಕೆ ಹೆಮ್ಮೆಯ ವಿಷಯ. ಧಾರವಾಡ ಅನೇಕ ಜನಪದ ಕಲಾತಂಡಗಳು ತಮ್ಮ ಕಲೆಯನ್ನು ಪ್ರದರ್ಶಿಸಲು ಅನವು ಮಾಡಿಕೊಡುವ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ಜರುಗುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಪ್ರದರ್ಶನ ಕಲೆಗಳಲ್ಲಿ ಲಲಿತಕಲೆಗಳಿಗೆ ಮತ್ತು ಕಲಾವಿದರಿಗೆ ಉತ್ತೇಜನ ನೀಡಲು "ಧಾರವಾಡ ಉತ್ಸವ" ದಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಧಾರವಾಡ ಜಿಲ್ಲೆಯ ಸಾಂಸ್ಕೃತಿಕ ಪರಿಸರದಲ್ಲಿ ಜನಪದ ಆಚರಣೆಗಳು ಇನ್ನು ಸಾಕಷ್ಟು ಜೀವಂತವಾಗಿವೆ. ನಂಬಿಕೆಗಳು, ಆಚರಣೆಗಳು ವಿಶೇಷವಾದ ನಂಟು. ಪ್ರತಿಯೊಂದು ಹುಣ್ಣಿಮೆ, ಅಮವಾಸ್ಸೆಗಳು ಇಲ್ಲಿ ವಿಶೇಷವಾಗಿ

ಪ್ರೋ ದಮಯಂತಿ ನರೆಗಲ್ಲ ಕಲಾತಪಸ್ವಿ ಡಿ.ವ್ಹಿ.ಹಾಲಬಾವಿ ಜೀವ ಚರಿತ್ರೆ ಪುಟ-೩

ಆಚರಿಸಲ್ಪಡುತ್ತವೆ. ಜೊತೆಗೆ ಹೊಸ ವರ್ಷದ ಮೊದಲ ದಿನವಾದ ಯುಗಾದಿ ಹಬ್ಬದಂದು ಮನೆಗೆಲ್ಲ ಸಗಣಿ ಕಾರಣೆಗಳನ್ನು ಮಾಡಿ ತೋರಣ ಕಟ್ಟುವರು. ಧಾರವಾಡ ಜಿಲ್ಲೆ ಕೃಷಿ ಪ್ರಧಾನವಾದ ಪ್ರದೇಶವಾದ್ದರಿಂದ ಬಸವನಿಗೆ ಇಲ್ಲಿ ವಿಶೇಷ ಪ್ರಾಧಾನ್ಯವಿದೆ. ರೈತರಿಗೆ ಯತ್ತೇ ಸರ್ವಸ್ವ ಕಾರಹುಣ್ಣಿಮೆ ಸಂದರ್ಭದಲ್ಲಿಯೂ ಅವರು ದನ-ಕರುಗಳನ್ನು ಸಿಂಗರಿಸಿ, ಮೆರವಣಿಗೆ ಮಾಡಿ ಹೆಮ್ಮೆಯಿಂದ ಆನಂದಿಸುವರು. ಕಾರ ಹುಣ್ಣಿಮೆಯಂದು ಕರಿ ಹರಿಯುವ ಆಚರಣೆ ಈ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದೆ. ಮಣ್ಣೆತ್ತಿನ ಅಮವಾಸ್ಸೆ ಈ ಸಂದರ್ಭದಲ್ಲಿಯೂ ಕೂಡ ರೈತ ಮಣ್ಣಿನಿಂದ ಎತ್ತುಗಳನ್ನು ಮಾಡಿ ಪೂಜಿಸುತ್ತಾನೆ. ಆಷಾಡ ಮಾಸದಲ್ಲಿ ಪ್ರತಿ ಮಂಗಳವಾರ ಹೆಣ್ಣು ಮಕ್ಕಳು ಫಲವಂತಿಕೆ ಹಾಗೂ ಸಮೃದ್ದಿಯ ಕೋರಿಕೆಯಾಗಿ ಗುಳ್ಳವ್ವನ ಆಚರಣೆ ಮಾಡುತ್ತಾರೆ. ಗುಳ್ಳಾವ್ವನ ಆಚರಣೆ ಈ ಜಿಲ್ಲೆಗೆ ಅದರಂತೆ ಉತ್ತರ ಕರ್ನಾಟಕಕ್ಕೆ ವಿಶಿಷ್ಟವಾದದು. ಶ್ರಾವಣ ಸೋಮುವಾರ ಧಾರವಾಡ ಜಿಲ್ಲೆಯಲ್ಲಿ ಮಹತ್ವದ ಆಚರಣೆಗಳು ನಡೆಯುತ್ತವೆ.

ಧಾರವಾಡ ಉಳವಿ ಬಸಪ್ಪನ ಗುಡಿಯಲ್ಲಿ ಕಲಾಪ್ರದರ್ಶನಗಳು ಇರುತ್ತವೆ. ಭದ್ರವಾದ ಶುದ್ದ ತದಿಗೆ ಚೌತಿಯಂದು ಗೌರಿ ಗಣೇಶನ ಹಬ್ಬ ಆಚರಿಸುವರು. ಚೌತಿಯಂದು ಮಣ್ಣಿನಿಂದ ಮಾಡಿದ ಗಣಪತಿಗೆ ಪೂಜೆ, ಸಲ್ಲಿಸುವುದು. ಲೋಕಮಾನ್ಯ ತೀಲಕರ ಪ್ರಭಾವದಿಂದ ಮಹಾರಾಷ್ಟ್ರದಲ್ಲಿ ಗಣೇಶನ ಹಬ್ಬ ಸಾರ್ವಜನಿಕ ಹಬ್ಬವಾದಂತೆ ಧಾರವಾಡ ಜಿಲ್ಲೆಯಲ್ಲಿಯೂ ಅದು ಸಾರ್ವಜನಿಕ ಉತ್ಸವವೇ ಆಗಿದೆ.

ಧಾರವಾಡ ಜಿಲ್ಲೆಯಲ್ಲಿ ನಾಡಹಬ್ಬವು ಸಂಭ್ರಮದಿಂದ ಆಚರಿಸಲ್ಪಡುತ್ತದೆ. ಹತ್ತುದಿನಗಳ ಈ ಹಬ್ಬದಲ್ಲಿ ಕೊನೆಯ ದಿನ ವಿಜಯ ದಶಮಿ. ಆ ದಿನ ಸಂಜೆ ಸ್ಥಾನಿಕ ದೇವರ ಪಲ್ಲಕ್ಕಿ ಮೆರವಣಿಗೆ ಹೊರಟು ಶಮೀಮರದ ಹತ್ತಿರ ಬರುತ್ತದೆ. ಅಲ್ಲಿ ದೇವರಿಗೆ ಶಮೀಪತ್ರ ಅರ್ಪಿಸಿ ಜನರು ಪರಸ್ಪರ ಬನ್ನಿ ಮುಡಿದು ಅಭಿನಂದಿಸುವರು ಶುಕ್ರವಾರ ಪೇಟೆಯ ಲಕ್ಷ್ಮಿನಾರಾಯಣ ಗುಡಿಯಲ್ಲಿ ನವರಾತ್ರಿ ಉತ್ಸವದಲ್ಲಿ ದೇವರಿಗೆ ದಿನಕ್ಕೊಂದು ರೀತಿ ಅಲಂಕಾರ ಮಾಡುವರು. ಸೀಗೆ ಉಣ್ಣಿಮೆಯಲ್ಲಿ ಹೊಲದಲ್ಲಿ ಐದು ಕಲ್ಲುಗಳನ್ನು ನೆಟ್ಟು ಪಾಂಡವರ ಹೆಸರಿನಲ್ಲಿ ಪೂಜಿಸಿ ನೈವೆದ್ಯ ಸಲ್ಲಿಸುವರು. ಹೋಳಿ ಹುಣ್ಣಿಮೆಯೂ ಈ ಜಿಲ್ಲೆಯಲ್ಲಿ ವೈಶಿಷ್ಟ್ಯ ಪೂರ್ಣವೇ ಹುಬ್ಬಳ್ಳಿ, ಧಾರವಾಡಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ರತಿಕಾಮರನ್ನು ಕೂರಿಸಿ ಹಬ್ಬ ಆಚರಿಸುವರು. ಬಣ್ಣದ ಹೋಳಿ ಆಡುವರು ಸಂಜೆ ಮೆರವಣಿಗೆಯಲ್ಲಿ ಕಾಮನನ್ನು ಒಯ್ದು ದಹಿಸುವರು. ಹೋಳಿಯನ್ನು ಹದಿನೈದು ಇಪ್ಪತ್ತು ದಿನಗಳವರೆಗೆ ಆಡುತ್ತಿದ್ದುದು ಉಂಟು. ರಂಗಪಂಚಮಿಯವರೆಗೆ ಆಡುವರು" ಹೀಗೆ ಧಾರವಾಡ ಜಿಲ್ಲೆಯ ಹಬ್ಬ ಹುಣ್ಣಿಮೆಗಳಿಗೆ ಸಂಬಂಧಪಟ್ಟ ಆಚರಣೆಗಳು ವೈಶಿಷ್ಟಪೂರ್ಣವಾಗಿದ್ದು, ಕೃಷಿಗೆ ಸಂಬಂಧಸಿದಂತೆ ಸಾಮರಸ್ಯ ಕಾರಣವಾಗಿ ಅವು ಆಚರಣೆಗೊಳ್ಳುತ್ತಿರುವುದನ್ನು ಗುರುತಿಸಬಹುದಾಗಿದೆ. ಇವುಗಳೊಂದಿಗೆ ಅನೇಕ ಮಠಗಳು ಬಸದಿಗಳು, ಮಸೀದಿಗಳು, ಚರ್ಚುಗಳು ಈ ಜಿಲ್ಲೆಯಲ್ಲಿದ್ದು ಅವು ಕೂಡ ಜನರ ನಂಬಿಕೆಯ ಪೂಜೆಯ ತಾಣವಾಗಿವೆ.

ಕರ್ನಾಟಕದ ಚಿತ್ರಕಲಾಕ್ಷೇತ್ರಕ್ಕೆ ಧಾರವಾಡ ಜಿಲ್ಲೆಯ ಕೊಡುಗೆ ಅತ್ಯಮೂಲ್ಯವಾಗಿದೆ. ೧೯೬೬ ರಲ್ಲಿ ದಂಡಾವತಿಮಠ ಅವರು ಧಾರವಾಡದಲ್ಲಿ ಮಂದಬುದ್ದಿಯ ಮಕ್ಕಳಿಗಾಗಿ ಕಲಾಶಿಕ್ಷಣ ಶಾಲೆಯೊಂದನ್ನು ತೆರೆದಿದ್ದರು. ಹುಬ್ಬಳ್ಳಿಯ ಫೈನ್ ಆರ್ಟ್ ಸೊಸೈಟಿ ಮತ್ತು ರೈನ್ ಬೋ ಕಲಾವೃಂದದ ವತಿಯಿಂದಲೂ ಕಲಾ ಶಾಲೆಗಳ ನಡೆಯುತ್ತಿದ್ದವು. ಶ್ರೀ.ಡಿ.ಜಿ.ಬಡಿಗೇರ ಅವರು ೧೯೩೩ ರಲ್ಲಿಯೇ ಕರ್ನಾಟಕ ಆರ್ಟ್ ಸೊಸೈಟಿಯನ್ನು ಆರಂಭಿಸಿದ್ದು ೧೯೪೦ ರ ವೇಳೆಗೆ ಬೆಳಗಾವಿ ಕಲ್ಕತ್ತ, ದೆಹಲಿ ಹಾಗೂ ಮುಂಬಯಿಗಳಲ್ಲಿ ಮೂರು ಪ್ರದರ್ಶನಗಳನ್ನು

ನೀಡಿದ್ದರು. ಸಾಹಿತಿಗಳಿಂದ ಕಲೆಯ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಡಿ.ಪಿ ಹಾಲಭಾವಿ ಅವರು ಪೋಸ್ಟ್ ಡಿಪ್ಲೊಮಾ ಆರ್ಟ್‌ಕ್ಲಬ್ ಆರಂಭಿಸಿದ್ದರು. ಹುಬ್ಬಳ್ಳಿಯಲ್ಲಿ ಶ್ರೀ. ಎಂ.ಜಿ. ಪಾಟೀಲ, ಶ್ರೀ ಕೃಷ್ಣಕತ್ರಿ ಮತ್ತು ಶ್ರೀ ಕೆ.ಆರ್. ಸುಬ್ಬಣ್ಣ ಅವರುಗಳು ಸೇರಿ ತ್ರಿವಳಿಗಳು ಎಂಬ ಹೆಸರಿನ ಸಂಘಟನೆಯಿಂದ ಹಲವಾರು ರಸ್ತೆ ಬದಿಯ ಕಲಾಪ್ರದರ್ಶನಗಳನ್ನು ಮಾಡಿದರು. ಧಾರವಾಡದಲ್ಲಿ ೧೯೮೨ ರಲ್ಲಿ ರಸ್ತೆ ಬದಿಯ ಕಲಾಪ್ರದರ್ಶನಗಳನ್ನು ಮಾಡಿದರು. ಧಾರವಾಡದಲ್ಲಿ ೧೯೮೨ ರಲ್ಲಿ ಶ್ರೀ ಎಂ.ಆರ್. ಬಾಳೇಕಾಯಿ, ಶ್ರೀ.ಭರತ್‌ಕುಮಾರ, ಶ್ರೀಮತಿ ರೇಣುಕಾ ಮಾರ್ಕಂಡೆ ಮುಂತಾದವರ ರೈನ್‌ಬೋ ಕಲಾತಂಡ ಹುಬ್ಬಳ್ಳಿಯಲ್ಲಿ ೧೯೮೭ ರಲ್ಲಿ ಶ್ರೀ.ಎಂ.ಸಿ.ಚೆಟ್ಟಿ, ಶ್ರೀ.ಎಂ.ಜಿ. ಬಂಗ್ಲೆವಾಲೆ, ಶ್ರೀಮತಿ ಗಾಯತ್ರಿಗೌಡರ ಅವರುಗಳ ಜಾಗೃತಿ ಕಲಾವಿದರ ಕಲಾತಂಡ ಹಾಗೂ ಅಲ್ಲಿಯೇ ೧೯೮೮ ರಲ್ಲಿ ಶ್ರೀ ಕುಂದಣಗಾರ್ ಶ್ರೀ.ಎಸ್.ಸಿ. ದೇಸಾಯಿ, ಶ್ರೀ ಚಿಕ್ಕಣ್ಣವರ ಅವರುಗಳ ಸೃಜನಶೀಲರ ಕಲಾತಂಡ ಇತ್ಯಾದಿ ಹಲವಾರು ಕಲಾತಂಡಗಳು ಕಲೆಯ ಕುರಿತು ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಧಾರವಾಡದಲ್ಲಿ ೧೯೯೭ ರಲ್ಲಿ ಆರಂಭವಾದ ಧಾರವಾಡ ನಗರ ಚಿತ್ರಕಲಾವಿದರ ತಂಡದಲ್ಲಿ ಶ್ರೀ ಸುರೇಶ ಹಾಲಭಾವಿ, ಡಾ.ಎಸ್.ಸಿ ಪಾಟೀಲ್ ಮುಂತಾದವರಿದ್ದು ಪ್ರತಿ ವರ್ಷ ವರ್ಣಮೇಳ ಆಚರಿಸುತ್ತಿದ್ದು ಕಲಾಶಿಕ್ಷಕರ ಉಪನ್ಯಾಸ ಇತ್ಯಾದಿಗಳನ್ನು ಏರ್ಪಡಿಸುತ್ತಿದೆ. ಇವಲ್ಲದೆ ಆರ್ಟ್‌ಶೀಲ್ಡ್, ರಾಷ್ಟ್ರಿಯ ದೃಶ್ಯಕಲಾ ಅಕಾಡೆಮಿ, ಕಲಾರಶ್ಮಿ ಕಲಾಸಂಸ್ಥೆ, ಕರ್ನಾಟಕ ಚಿತ್ರಕಲಾವಿದರ ಸಂಘ, ರೇನಬೋ ಕಲಾಸಂಸ್ಥೆ, ರಾಜ್ಯ ಚಿತ್ರಕಲಾ ಶಿಕ್ಷಕರ ಹಾಗೂ ಚಿತ್ರಗಾರರ ಸಂಘ, ಕರ್ನಾಟಕ ಚಿತ್ರಕಲಾ ಶಾಲೆಗಳ ಸಿಬ್ಬಂದಿಗಳ ಸಂಘ, ಚಿತ್ರಾ ಕಲಾವಿದರ ಕಲಾಬಳಗ, ಬ್ಲೂಗ್ರೂಪ್ ಕಲಾವಿದರು ಕಲಾಮಂಡಲ, ರಂಗತರಂಗ ಇತ್ಯಾದಿ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ.

ಧಾರವಾಡ ಜಿಲ್ಲೆಯ ಚಿತ್ರಕಲಾಕ್ಷೇತ್ರಕ್ಕೆ ನೀಡಿದ ಬಹು ದೊಡ್ಡ ಕೊಡುಗೆ ಎಂದರೆ ಕಲಾಶಾಲೆಗಳು. ೧೯೩೫ರಲ್ಲಿ ಶ್ರೀ ಡಿ,ವಿ ಹಾಲಭಾವಿಯವರ ಸ್ಕೂಲ್ ಆಫ್ ಆರ್ಟ್ ಉತ್ತರ ಕರ್ನಾಟಕದ ಮೊದಲ ಕಲಾಶಾಲೆ, ನಂತರ ೧೯೫೫ ಡಾ.ಎಂ.ವಿ. ಮಿಣಜಿಗಿಯವರ ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ. ೧೯೭೦ರಲ್ಲಿ ಭಾರತೀಯ ಕಲಾಕೇಂದ್ರ, ೧೯೭೪ರಲ್ಲಿ ಸರಕಾರಿ ಚಿತ್ರಕಲಾ ಶಾಲೆ, ೧೯೯೨ರಲ್ಲಿ ಸೃಜನಾ ಕಲಾಮಹಾವಿದ್ಯಾಲಯವನ್ನು ಪ್ರಾರಂಭಿಸಲಾಯಿತು. ಶಿಕ್ಷಣ ಸಂಸ್ಥೆಗಳು ಈ ಭಾಗದಲ್ಲಿ ಅನೇಕ ಖ್ಯಾತನಾಮ ಕಲಾವಿದರನ್ನು ನಾಡಿಗೆ ನೀಡಿವೆ ಮತ್ತು ಕಲಾಕ್ಷೇತ್ರ ಇವರಿಂದ ಪ್ರಕಾಶಗೊಳ್ಳುತ್ತದೆ. ಕಲೆ ಮತ್ತು ಕಲಾವಿದರು ಮುಂದೆ ಬಂದಂತೆ ಅವರ ನೀರಿಕ್ಷೆಗಳು ಹೆಚ್ಚಾಗ ತೊಡಗುತ್ತವೆ. ಅದಕ್ಕೆ ಬೇಕಾದ ವಾತಾವರಣ ಅವಕಾಶಗಳನ್ನು ಕೆಲವು ಸಲ ಅವರೇ ಸೃಷ್ಟಿಸಿಕೊಳ್ಳುತ್ತಾರೆ. ಇಲ್ಲವೇ ಅದಕ್ಕಾಗಿ ಹೊಸ ಹೊಸ ಯೋಜನೆಗಳನ್ನು ರೂಪಿಸಲು ಅವರೇ ಮುಂದಾಗುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಲಲಿತಕಲೆಯ ಎಲ್ಲ ಆಯಾಮಗಳು ಹೊಸ ಹೊಸ ಪ್ರಯೋಗಗಳಿಂದ ಮಿಂಚುತ್ತಿವೆ. ಮಿಂಚಲು ಅವಕಾಶವನ್ನು ಇಲ್ಲಿಯ ಸಹೃದಯ ಮಾಡಿಕೊಡುತ್ತಾರೆ. ಕಲಾಪ್ರದರ್ಶನ ಮಾಡಲು ಇಲ್ಲಿ ವ್ಯವಸ್ಥಿತ ಕಲಾಗ್ಯಾಲರಿಗಳಿವೆ. ಅವು ಇಂತಿವೆ. ಧಾರವಾಡದಲ್ಲಿ ಸರಕಾರಿ ಆರ್ಟ್ ಗ್ಯಾಲರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಂಸ್ಕೃತಿಕ ಸಮುಚ್ಚಯದ ಆರ್ಟ್‌ಗ್ಯಾಲರಿ, ಧಾರವಾಡ ಕಲಾಮಂಡಳದ ಆರ್ಟ್‌ಗ್ಯಾಲರಿ ಹುಬ್ಬಳ್ಳಿಯ ಗ್ಲಾಸ್ ಹೌಸ್‌ನಲ್ಲಿರುವ ಶ್ರೀ.ಎಂ.ವಿ.ಮಿಣಜಗಿ ಆರ್ಟ್‌ಗ್ಯಾಲರಿ ವಿದ್ಯಾನಗರ

* ಬಿ.ಎಂ.ಪಾಟೀಲ್ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ ಕಿರುಪ್ರಬಂಧ ಪುಟ-೨

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಚಿಕ್ಕವೀರಯ್ಯ ಆರ್ಟ್‌ಗ್ಯಾಲರಿ ಈ ಗ್ಯಾಲರಿಗಳು ಈ ಭಾಗದ ಜನರಿಗೆ ಕಲಾರಸ ಸಾಧನೆಯ ಕೇಂದ್ರಗಳಾಗಿವೆ.

ಒಟ್ಟಾರೆಯಾಗಿ ಧಾರವಾಡ ಜಿಲ್ಲೆಯ ಅಹ್ಲಾದಕರವಾದ ಪ್ರಶಾಂತನಗರವೆಂದು ಗುರುತಿಸಲ್ಪಡುತ್ತದೆ. ಉತ್ತಮ ಆರೋಗ್ಯದಾಯಕ ವಾತಾವರಣ ಹೊಂದಿ ವಿದ್ಯೆಗಳ ತವರೂರಾಗಿ, ಜನಪದ ಕಲೆಗಳ ಬೀಡಾಗಿ ಸಂಗೀತ, ಸಾಹಿತ್ಯ, ಚಿತ್ರಕಲೆಯ ಕ್ಷೇತ್ರವಾಗಿ ಲಲಿತಕಲೆಗಳನ್ನು ಸಮೃದ್ಧವಾಗಿ ಬೆಳೆಯಿಸಿಕೊಂಡು ತನ್ನ ಓರಿಮೆಯನ್ನು ಹೆಚ್ಚಿಸಿಕೊಂಡಿದೆ.

ಧಾರವಾಡದ ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಹೇಳುವ ಒಂದು ಮಾತು ಪ್ರಚಲಿತವಾಗಿದೆ. ಪ್ರಶಾಂತ ಪ್ರಕೃತಿಯ ಮಡಿಲಲ್ಲಿ ಮೆರೆಯುವ ಧಾರವಾಡ ಶಾಶ್ವತ ಲೋಕಕ್ಕೆ ಹಲವು ದಿಗ್ಗಜಗಳನ್ನು ನೀಡಿದ ಹೆಮ್ಮೆ ಪಡೆದಿದೆ. ಅದರಂತೆ ಲಲಿತಕಲೆಗಳ ಎಲ್ಲ ಪ್ರಕಾರಗಳಲ್ಲೂ ಧಾರವಾಡದ ಸುಂದರ ಪರಿಸರದಿಂದ ಪ್ರಭಾವಿತರಾಗಿ ಹೆಸರು ಮಾಡಿದವರು ಅನೇಕ ಜನಮಹನೀಯರು. ಸಂಸ್ಕೃತಿ ಎನ್ನುವುದು ಅನೇಕ ಗುಣ ವಿಶೇಷಗಳ ಸುಂದರ ಸಮುಚ್ಚಯ, ಕಲೆಯನ್ನು ಮೆಚ್ಚಿಕೊಳ್ಳುವ ದೃಷ್ಠಿಯನ್ನು ಪಡೆದವನೆನ್ನುವ ಕಾರಣದಿಂದ ಮನ ಸೆಳೆಯುವ ಹಸಿರು ಗಿಡಗಳ ಪೊದೆಯ ಮೆರೆಯಲ್ಲಿ ಕಾಜಾಣ, ಕೋಗಿಲೆಗಳ ಇಂಚರ ಕವಿ ಹೃದಯ ಬಡಿದೆಬ್ಬಿಸಿ ನೂರಾರು ಸುಂದರ ಕಾವ್ಯಸೃಷ್ಠಿಗೆ ಕಾರಣವಾಗಿದ್ದರೆ, ಸಂಜೆ ರವಿಯ ಹೊಂಗಿರಣ ಮತ್ತು ಬಸುರಿಯ ಕೆಂಬಣ್ಣ ವನರಾಜಿಗೆ ಉಡಿಸಿದ ಸುಂದರ ಉಡಿಗೆಯಾಗಿ ಚಿತ್ರಕಲಾವಿದನ ಅಂತಃ ಸತ್ವ ಸುರಿಸಿ ನೂರಾರು ಸುಂದರ ಕನಸುಗಳು ಕ್ಯಾನವಾಸನಲ್ಲಿ ಪೇಪರ್‌ನಲ್ಲಿ ರೂಪಗೊಳ್ಳುವಂತೆ ಮಾಡಿದೆ.

ಯು.ಬಿ.ಹಿಲ್ಸ್. ಎಂದೇ ಹೆಸರಾದ ಉಳವಿ ಬಸವಣ್ಣನ ಗುಡ್ಡ ಪ್ರಕೃತಿ ತಾನೇತಾನಾಗಿ ಮೆರೆಯುವ ಸುಂದರವಾದ ಬಡಾವಣೆ, ವಿಶಾಲವಾದ ಕಟ್ಟಡಗಳು ನಾನಾ ತರಹದ ಮಂಗಳೂರು ಹಂಚಿನ ಮನೆಗಳು ನೀವೂ ಹಾಗೆ ಮುಖ್ಯ ಬೀದಿ ಹಿಡಿದು ಸಾಗುವಾಗ ಬಲಗಡೆಯ ಒಂದು ಓಣಿ ಹೊಕ್ಕರೆ ನಾಲ್ಕು ಹೆಜ್ಜೆ ಹೋದಾಗ ಒಂದು ಮನೆಯೆದುರು ಬಂದಾಗ ನಿಮ್ಮನ್ನು ತಬಲಾದ "ನ್ನಾಧಿ ಧಿನ್ನಾ" ಸ್ವಾಗತಿಸಬಹುದು. ಇಲ್ಲವೆ ಕುಮಾರ ಗಂಧರ್ವರಂಥ ಮಧುರ ರಾಗದ ಮೋಡಿ ಮರಳು ಮಾಡಬಹುದು.

ಸಾಂಸ್ಕೃತಿಕ ನಗರ ಧಾರವಾಡ ಸಾಹಿತ್ಯ, ಸಂಗೀತ, ಲಲಿತಕಲೆಗಳನ್ನು ಪ್ರೋತ್ಸಾಹಿಸಿದ ಬೀಡು, ಅದರಲ್ಲಿ ಒಂದಾದ ಚಿತ್ರಕಲೆಯ ಉಗಮ, ಬೆಳವಣಿಗೆಗೆ ಸ್ಥಾಪಿತವಾದ ಹಾಲಭಾವಿ ಸ್ಕೂಲ ಆಫ್ ಆರ್ಟ್ ಎಲ್ಲರಿಗೂ ಗೋತ್ತು. ಧಾರವಾಡದ ಪ್ರಖ್ಯಾತ ಕಲಾವಿದರಾಗಿದ್ದ ಶ್ರೀಮಾನ್ ಡಿ.ವಿ. ಹಾಲಭಾವಿಯವರು ಧಾರವಾಡದಂತಹ ಸಣ್ಣ ನಗರದೊಳಗೆ ಚಿತ್ರಕಲಾ ಶಾಲೆಯನ್ನು 'ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಎಂಬ ಹೆಸರಿನಲ್ಲಿ ಪ್ರಾರಂಭಿಸಿ ತಾವು ಮುಂಬೈಯ 'ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಿತು ಬಂದ ಚಿತ್ರಕಲೆಯ ಉಳಿವಿಗಾಗಿ ಪ್ರಚಾರ-ಪ್ರಸಿದ್ಧಿಗಾಗಿ ತಮ್ಮ ಹೋರಾಟದ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಇಂದಿನ ಧಾರವಾಡದಲ್ಲಿ ಚಿತ್ರಕಲೆಯು ವೈಭವದಿಂದ ಮೆರೆಯುತ್ತಿದ್ದರೆ ಅದಕ್ಕೆ ಕಾರಣಪುರುಷರಾಗಿದ್ದವರು ಶ್ರೀ ಡಿ.ವಿ. ಹಾಲಭಾವಿಯವರು, ಚಿತ್ರಕಲೆಯ ಮಹಾ ವಿಧ್ಯಾಲಯವನ್ನು ಅವರು ಕಳೆದ ಶತಮಾದದ ೩೦ ರ ದಶಕದಲ್ಲಿ ಸ್ಥಾಪಿಸಿದ್ದಲ್ಲದೇ ಧಾರವಾಡದ ವಿಶಿಷ್ಟ ಚಿತ್ರಕಲಾ ಪರಂಪರೆಯನ್ನೇ ಹುಟ್ಟಾಹಾಕಿದರು. ಧಾರವಾಡದ ಚಿತ್ರಕಲಾ

ಪರಂಪರೆಗೆ ನಮ್ಮ ನಾಡಿನ ಚಿತ್ರಕಲಾ ಲೋಕದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಹೊರನಾಡಿನಲ್ಲಿ ಧಾರವಾಡ ಚಿತ್ರಕಲಾವಿದರಿಗೆ ಅವರದೆ ಗೌರವದ ಸ್ಥಾನಮಾನವಿದೆ.

ಶ್ರೀ ಡಿ.ವಿ ಹಾಲಭಾವಿಯವರ ಮನಸ್ಸಿನಲ್ಲಿ ತಮ್ಮ ನಾಡಿನಲ್ಲಿ ಒಂದು ಕಲಾಶಾಲೆಯನ್ನು ಜೆ.ಜೆ. ಸ್ಕೂಲಿನಂತಹ ಕಲಾಶಾಲೆಯನ್ನು ಸ್ಥಾಪಿಸುವ ಹಂಬಲ, ಅದರ ರೂಪರೇಷೆಗಳನ್ನು ಕುರಿತು ಕನಸುಗಳು, ಅವರ ಜೆ.ಜೆ.ಸ್ಕೂಲಿನಲ್ಲಿ ಕಲಿಯುತ್ತಿರುವಾಗಲೇ ಮೂಡಿರಬೇಕು. ಅವರಿಗೆ ಆಗ ಇಪ್ಪತ್ತರ ಆಸು–ಪಾಸೀನ ವಯಸ್ಸು, ಇಂಥದೆಲ್ಲ ವಿಚಾರ ಮಾಡುವ ವಯಸ್ಸಲ್ಲ ಅದು. ಆ ವಯಸ್ಸಿನಲಿ ಸಹಸಾ ಎಲ್ಲ ಹುಡುಗರು ವಿಚಾರ ಮಾಡುವುದು ತಮ್ಮ ಭವಿಷ್ಯದ ಬಗ್ಗೆ ಉನ್ನತ ಹುದ್ದೆ, ಒಳ್ಳೆ, ಸಂಪಾದನೆ, ಪ್ರತಿಷ್ಠೆ, ಸ್ವಂತ ಕಾರು–ಮನೆ, ಇತ್ಯಾದಿಗಳ ಬಗ್ಗೆ ಮಾಡುವ ವಯಸ್ಸು ಅದು ಆದರೆ ಹಾಲಭಾವಿಯವರು ಎಲ್ಲರಂತಲ್ಲ, ಆ ವಯಸ್ಸಿನಲ್ಲಿ ಅವರು ಕರ್ನಾಟಕದಲ್ಲಿ ಕಲಾಶಿಕ್ಷಣದ ಏಳಿಗೆಗಾಗಿ ಶ್ರಮಿಸುವ ನಿರ್ಧಾರಕ್ಕೆ ಬಂದರು. ಎನ್ನವುದನ್ನು ನೆನೆಸಿದರೆ. ಒಟ್ಟು ಕಲಾಶಿಕ್ಷಣದ ಬಗ್ಗೆ ಉತ್ತರ ಕರ್ನಾಟಕದ ಬಗ್ಗೆ ವಿಶೇಷವಾಗಿ ಎಷ್ಟು ಕಳಕಳಿಯಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಉತ್ತರ ಕರ್ನಾಟಕದ ಕ್ಷೇತ್ರದಲ್ಲಿ ಕಾಲಗರ್ಭದಲ್ಲಿ ಹೂತು ಹೋದ ನಮ್ಮ ಪೂರ್ವಿಕರ ಕಲಾನಿಧಿಯನ್ನು ಹುಡುಕಿ ತೆಗೆಯಬೇಕೆಂಬುದೂ ಅವರ ಇನ್ನೊಂದು ಹಂಬಲವಾಗಿತ್ತು.

ತಾರುಣ್ಯದಲ್ಲಿ ಅನೇಕರು ಇಂತಹ ಕನಸುಗಳನ್ನು ಕಟ್ಟುವವರು ಆದರೆ ಅದನ್ನು ದೃಢನಿರ್ಧಾರದಿಂದ ಸಾಧಿಸಲು ಪ್ರಯತ್ನಿಸುವವರು ಬಹಳ ಅಪರೂಪ ಹಾಲಭಾವಿಯವರು ಅಂತಹರಲೊಬ್ಬರು. 'ಚಿತ್ರಾಕ್ಷಿ'ಯಲ್ಲಿ ಅವರು ಬರೆದ ಲೇಖನದಲ್ಲಿ ಹೇಳಿದ್ದಾರೆ. "I remembered the difticulties, I had faced to educate my self in art and therfore decided to take up art education as my career and goal. There was no art school in the thirties here In 1935, I started the school of art." ಅಷ್ಟು ಸಣ್ಣ ವಯಸ್ಸಿನಲ್ಲಿ ಕಲಾಶಾಲೆಯನ್ನು ಅದೂ ಜೆ.ಜೆ. ಮಹಾವಿದ್ಯಾಲಯದಂತಹ ಕಲಾಶಾಲೆಯನ್ನು ಧಾರವಾದಂತಹ ಊರಿನಲ್ಲಿ ಸ್ವಂತ ಹಣವನ್ನು ತೊಡಗಿಸಿ ಪ್ರಾಂಭಿಸುವ ಅವರ, ನಿರ್ಧಾರವನ್ನು ಸುತ್ತಲಿನ ಜನ ಹುಂಬತನ ಎಂದರು. ಇನ್ನು ಕೆಲವರು 'ಅವ್ಯವಹಾರಿಕ' ಎಂದುರು. ಆದರೆ ಹಾಲಭಾವಿಯವರು ಅದರಿಂದ ವಿಚಲಿತರಾಗಲಿಲ್ಲ. ಅವರಿಗೆ ತಮ್ಮ ಸಾಹಸದಲ್ಲಿ ಮುನ್ನುಗ್ಗಲು ಅವರ ತಂದೆಯ ಬೆಂಬಲವೊಂದೇ ಸಾಕಿತ್ತು. ೧೯೩೫ರಲ್ಲಿ ಮಹಾವಿದ್ಯಾಲಯವನ್ನು ಸ್ಥಾಪಿಸಿಯೇ ಬಿಟ್ಟರು ಕೇವಲ ಇಬ್ಬರು ವಿದ್ಯಾರ್ಥಿಗಳೊಂದಿಗೆ ಕಲಾಶಾಲೆ ಪ್ರಾರಂಭವಾಯಿತು.

ಹಾಲಭಾವಿ ಕಲಾಶಾಲೆ ಮೊದಲು ಒಂದು ವರ್ಷ ಧಾರವಾಡದ ಆರ್.ಎಲ್.ಎಸ್. ಹೈಸ್ಕೂಲಿನ ಕಟ್ಟಡದಲ್ಲಿ ನಡೆಯಿತು. ನಂತರ ಸುಮಾರು ಮೂರು ವರ್ಷಗಳ ಕಾಲ ಎಂದರೆ ೧೯೩೯ ರ ವರೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡದಲ್ಲಿ ನಡೆಯಿತು. ಅಷ್ಟರಲ್ಲಿ ಹರಸಾಹಸ ಮಾಡಿ ಹಾಲಭಾವಿಯವರು ತಮ್ಮ ಶಾಲೆಗಾಗಿ ಸ್ವಂತ ಕಟ್ಟಡವನ್ನು ಕಟ್ಟಸುವ ಮಹಾತ್ವಾಕಾಂಕ್ಷೀ ಯೋಜನೆಯನ್ನು ಕೈಗೊಂಡರು. ಕೇವಲ ಇಬ್ಬರೇ ವಿದ್ಯಾರ್ಥಿಗಳೊಡನೆ ಪ್ರಾರಂಭವಾದ ಶಾಲೆ ಮೊದಲ ವರ್ಷಗಳಲ್ಲಿ ಎದುರಿಸಿದ ತಾಪತ್ರಯಗಳೇನೂ ಕಡಿಮೆಯಿರಲಿಲ್ಲ. ಅಂತಹ ಸಮಯದಲ್ಲಿ ಶಾಲೆ ಪ್ರಾರಂಭವಾಗಿ ಐದು ವರ್ಷಗಳಲ್ಲಿಯೇ ಸ್ವಂತ ಕಟ್ಟಡವನ್ನು ಕಟ್ಟಿಸುವ ಪ್ರಯತ್ನಕ್ಕೆ ಕೈಹಾಕುವುದು. ಮಹಾ ಸಾಹಸವೇ. ಎನ್ನಬಹುದು. ತಾವೇ ಸ್ವತಃ ಕಟ್ಟಡದ ರೂಪ ರೇಷಗಳನ್ನು ರಚಿಸಿ ಧಾರವಾಡದ ಪ್ರಮುಖ ಸ್ಥಳಗಳಲ್ಲೊಂದಾದ ಕೋರ್ಟ್ ಸರ್ಕಲ್‌ನಲ್ಲಿ ಮಹಾವಿದ್ಯಾಲಯಕ್ಕಾಗಿ

* ಎಸ್.ಕೆ. ಹುಗಾರ್ ಡಿ.ವ್ಹಿ.ಹಾಲಭವಿ ಪು.ಸಂ.೪
* ಬಿ.ಎಂ.ಪಾಟೀಲ್ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ ಕಿರುಪ್ರಬಂಧ ಪುಟ–೨

ಒಂದು ಭವ್ಯ ಕಟ್ಟಡವನ್ನು ನಿರ್ಮಿಸಿದರು. ಹಾಲಭಾವಿ ಕಲಾಶಾಲೆಯ ಕಟ್ಟಡ ಧಾರವಾಡದ ನೋಡತಕ್ಕಂತಹ ಕಟ್ಟಡಗಳಲ್ಲೊಂದಾಗಿತು. ನಮ್ಮ ಶಾಲೆಯ ದಿನಗಳಲ್ಲಿ ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬರುತ್ತಿದ್ದ ಶಾಲೆಯ ಮಕ್ಕಳ ಪ್ರವಾಸದ ತಂಡಗಳು ಧಾರವಾಡದ ಅಕಾಶವಾಣಿ ಕೇಂದ್ರ, ಕರ್ನಾಟಕದ ವಿದ್ಯಾವರ್ಧಕ ಸಂಘದ ಕಟ್ಟಡಗಳಂತೆ ಹಾಲಭಾವಿ ಕಲಾಶಾಲೆಯು ಕಟ್ಟಡ ಹೊಂದಿತ್ತು.

೧೯೪೦ ರಲ್ಲಿ ಧಾರವಾಡ ಅಂದಿನ ಕಲೆಕ್ಟರ್‌ರಾಗಿದ್ದ ಎ.ಎಲ್.ಡಾಯಸ್ ಅವರಿಂದ ಹೊಸ ಕಟ್ಟಡದ ಉಧ್ಘಾಟನೆಯಾಗಯಿತು. ಹೊಸ ಕಟ್ಟಡಕ್ಕೆ ಬಂದ ಮೇಲೆ ಶಾಲೆಯ ವಿಕಾಸಕ್ಕೊಂದು ಹೊಸ ಜೀವ ಬಂತು. ಹಾಲಭಾವಿಯವರಲ್ಲೂ ನವಚೇತನ ತುಂಬಿಕೊಂಡಿತ್ತು. ಶಾಲೆಯಲ್ಲಿ ಡ್ರಾಯಿಂಗ್ ಗ್ರೇಡ್, ಪೇಂಟಿಂಗ್ ಕೋರ್ಸ್‌ಗಳಲ್ಲದೇ ಪೋಟೋಗ್ರಾಫಿಯನ್ನು, ನೃತ್ಯ ಸಂಗೀತದಂತಹ ಲಲಿತಕಲೆಗಳನ್ನು ಕಲಿಸುವ ವ್ಯವಸ್ಥೆ ಮಾಡಿದರು.

೧೯೪೧ ರಲ್ಲಿ ಪ್ರಾಥಮಿಕ ಚಿತ್ರಕಲೆ ಹಾಗೂ ಇಂಟರ್ ಮೀಡಿಯಟ್ ಚಿತ್ರಕಲೆ ಎಂಬ ಎರಡು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು. ಈ ಶಾಲೆಯಲ್ಲಿಯೇ ಧಾರವಾಡದಲ್ಲಿ ಪ್ರಪ್ರಥಮ ಡ್ರಾಯಿಂಗ್ ಪರೀಕ್ಷೆಗಳ ಕೇಂದ್ರ ಪ್ರಾರಂಭವಾಯಿತು. ಶಾಲೆ ಹುಟ್ಟಿ ೫ ವರ್ಷಗಳಲ್ಲಿಯೇ ಹಾಲಭಾವಿಯವರು ಕಷ್ಟಪಟ್ಟು ತಮ್ಮ ಕಲಾಶಾಲೆಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಪೂರೈಸಿದರು. ತರಗತಿಗಳನ್ನು ನಡೆಸಲು ವಿದ್ಯಾರ್ಥಿಗಳೆದುರಿಗೆ ಕಲೆಯ ಪ್ರಾತ್ಯಕ್ಷಿಕೆಗಳನ್ನು ನಡೆಸಲು ಶಿಬಿರಗಳನ್ನು ನಡೆಸಲು ಮುಂಬಯಿಯಿಂದ ತರಬೇತಿಗೊಂಡ ಶಿಕ್ಷಕರನ್ನು, ತಜ್ಞರನ್ನು ಕರೆತರುತ್ತಿದ್ದರು. ಸಂವಾದಕ್ಕಾಗಿ ಭಾಷಣಗಳಿಗಾಗಿ ಸ್ಥಾನೀಯ ಕಲಾವಿದರು ಶಿಕ್ಷಕರು, ಕವಿಗಳು, ಸಾಹಿತಿಗಳು, ಎಲ್ಲರನ್ನು ಶಾಲೆಗೆ ಆಮಂತ್ರಿಸಿದರೂ ಸ್ಥಾನೀಯ ವ್ಯಕ್ತಿಗಳು ಶಿಕ್ಷಕರು ಅನೇಕರು ಅವರ ನೆರವಿಗೂ ಬಂದರು. ಅವರಲ್ಲಿಯ ಅನೇಕರ ಹೆಸರುಗಳನ್ನು ಹಾಲಭಾವಿಯವರು 'ಚಿತ್ರಾಕ್ಷಿಯ ತಮ್ಮ ಲೇಖನದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. "There were a few envouraging friends and colleagues I must remember them, some are no longer with us Sarvashri R.S.Bangera, V.C.Pavate, D.C. Pavate, G.C.Bellad, Tara pawar, D.G. Badiger, N.G. Badiger, C.R.Giriyappa navar, V.M.Itigatti, Rudrayya Amargolmath, N.G. Mugekekar, H.J. Mulla, R.M.Ambli".

ಯಾವುದೇ ಬಗೆಯ ಸರ್ಕಾರಿ ಅಥವಾ ಸಾರ್ವಜನಿಕ ಸಹಾಯವಿಲ್ಲದೇ ಪದೇ ಪದೇ ಆರ್ಥಿಕ ಮುಗ್ಗಟ್ಟನ್ನೆದುರಿಸುತ್ತಾ ತಮ್ಮ ಮತ್ತು ತಮ್ಮ ಕುಟುಂಬದ ಸುಖ-ಸೌಕರ್ಯಗಳನ್ನು ಪಣಕ್ಕೆ ಹಚ್ಚಿ ಹಾಲಭಾವಿಯವರು ತಮ್ಮ ಕಲಾಶಾಲೆಯ ವಿಕಾಸಕ್ಕೊಂದು ಭದ್ರವಾದ ಬುನಾಧಿಯನ್ನು ಹಾಕಿದರು. ಕಲಾಶಾಲೆಯ ಬೆಳವಣಿಗೆಯ ಭರವನ್ನು ಕಂಡು ರಾಜ್ಯ ಸರ್ಕಾರ ಚಿತ್ರಕಲಾ ಶಿಕ್ಷಕರ ಪರೀಕ್ಷೆಗಳನ್ನು ಶಾಲೆಯಲ್ಲಿ ನಡೆಸಲು ಅನುಮತಿ ನೀಡಿತು. ಇದರಿಂದಾಗಿ ಶಾಲೆಯಲ್ಲಿ ಶಿಕ್ಷಕರ ತರಬೇತಿ ಕಾರ್ಯಕ್ರಮಕ್ಕೆ ಒಂದು ಹೊಸ ಸ್ಫೂರ್ತಿ ಬಂದಂತಾಯಿತು. ಅಷ್ಟರಲ್ಲಿಯೇ ಸುದೈವದಿಂದ ಮಧ್ಯಮಿಕ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ನೇಮಕಾತಿಯ ಕರೆಯಲಾಗಿದ್ದು ಕಲಾಶಾಲೆಯ ವಿಕಾಸಕ್ಕೆ ಇನ್ನೂ ಹೆಚ್ಚು ಭರವಸೆಯನ್ನು ತಂದಿತು. ವಿದ್ಯಾರ್ಥಿಗಳ ಸಂಖ್ಯೆ ಗುಣಮಟ್ಟ ಇನ್ನು ಹೆಚ್ಚಾಯಿತು. ಆಗ ಹಾಲಭಾವಿ ಕಲಾಶಾಲೆ ರಾಜ್ಯದಾದ್ಯಂತ ಮಾಧ್ಯಮಿಕ ಶಾಲೆಗಳಿಗೆ ಆಧುನಿಕ ಚಿತ್ರಕಲೆಯ ಪಠ್ಯಕ್ರಮದಲ್ಲಿ ತರಬೇತಿಗೊಂಡ ಹಾಗೂ ಕಲಾ ಪ್ರಪಂಚದಲ್ಲಿಯ ಜಾಗತೀಕ ಆಗು ಹೋಗುಗಳ ಅರಿವುಳ್ಳ ಶಿಕ್ಷಕರನ್ನು ಪೂರೈಸಬಲ್ಲ ಏಕಮೇವ ಸಂಸ್ಥೆಯಾಗಿತ್ತು. ಮಾಧ್ಯಮಿಕ ಶಾಲಾ ಶಿಕ್ಷಕರಾಗಿ

* ಬಿ.ಎಂ.ಪಾಟೀಲ್ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ ಕಿರುಪ್ರಬಂಧ ಪುಟ-೨

ಬೇಡಿಕೆ ಹೆಚ್ಚಾದಂತೆ ಮುಂದೆ ಉತ್ತರ ಕರ್ನಾಟಕದಲ್ಲಿ ಅನೇಕ ಖಾಸಗಿ ಶಾಲೆಗಳು ತಲೆಯತ್ತಿದವು. ಉತ್ತರ ಕರ್ನಾಟಕದ ಚಿತ್ರಕಲಾ ಶಿಕ್ಷಕರು ರಾಜ್ಯದ್ಯಂತ ಹರಡಿಕೊಂಡರು. ಉತ್ತರ ಕರ್ನಾಟಕದಲ್ಲಾದ ಈ ಬೆಳವಣಿಗೆಗಳ ಬಗ್ಗೆ ಡಾ.ಅ.ಲ.ನರಸಿಂಹನ್ ಅವರ ಶಬ್ದಗಳನ್ನು ಗಮನಿಸಬಹುದು.

ಡ್ರಾಯಿಂಗ್ ಗ್ರೇಡ್, ಪೇಂಟಿಂಗ್, ಕೋರ್ಸ್‌ಗಳ ಜೊತೆಗೆ ಫೋಟೋಗ್ರಾಫಿ, ನೃತ್ಯ, ಸಂಗೀತದಂತ ಲಲಿತಕಲೆಗಳಲ್ಲಿ ಶಿಕ್ಷಣವನ್ನು ಹಾಲಭಾವಿಯವರು ನೀಡಲಾರಂಭಿಸಿದರು. ಪರೀಕ್ಷಾ ಕೇಂದ್ರವನ್ನು ಧಾರವಾಡದಲ್ಲಿ ಮಾಡಿದರು. ೫ ವರ್ಷಗಳ ಕಾಲಾವಧಿಯಲ್ಲಿ ಕಲಾಮಂದಿರಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಪೂರೈಸಿದ ಡಿ.ವಿ.ಹಾಲಭಾವಿಯವರು ೧೯೩೯ ರಲ್ಲಿ ಅನಾರೋಗ್ಯಕ್ಕೆ ತುತ್ತಾದರು. ೨ ಸಲ ಶಸ್ತ್ರ ಚಿಕಿಸ್ತೆಗೆ ಒಳಗಾದರು. ದೇವಿಯ ದಯೆ ಹಾಗೂ ಕಲಾಭಿಮಾನಿಗಳಿಂದ ಅವರ ಆರೋಗ್ಯ ಕ್ರಮೇಣ ಸುಧಾರಿಸಿಕೊಂಡಿತು. ೧೯೪೧ ರಲ್ಲಿ ಹೊಸದಾಗಿ ಎರಡು ಕೋರ್ಸ್‌ಗಳನ್ನು ಪ್ರಾರಂಭಿಸಿದರು. ಅದರಲ್ಲಿ ೧.ಪ್ರಥಮಿಕ ಚಿತ್ರಕಲೆ ೨.ಇಂಟರ್ ಮೇಡಿಯಟ್ ಚಿತ್ರಕಲೆ ಎಂಬ ವಿಷಯಗಳನ್ನು ಕಲಾವಿದ್ಯಾರ್ಥಿಗಳಿಗೆ ಪರಿಚಯಿಸಿದರು.

ಇವುಗಳ ತರಗತಿಯ ನಿರ್ವಹಣೆಗಾಗಿ ಪ್ರಾಚಾರ್ಯರು ಮುಂಬೈನಿಂದ ಪರಿಣಿತರಾದ ಶಿಕ್ಷಕರನ್ನು ಕರೆತಂದರು. ಇದರಿಂದ ಕಲಾವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಯಿತು. ಮತ್ತು ಕಲಾಶಾಲೆಯ ಗುಣಮಟ್ಟವು ಹೆಚ್ಚಾಯಿತು. ೧೯೫೭ ರವರೆಗೆ ಎಲ್ಲಾ ಚಿತ್ರಕಲಾ ಪರೀಕ್ಷೆಗಳನ್ನು ಈ ಕಲಾಮಂದಿರದ ವತಿಯಿಂದಲೇ ನಿರ್ವಹಿಸಲಾಯಿತು. ಯಾವಾಗ ಧಾರವಾಡ, ಕಾರವಾರ, ಬಿಜಾಪುರಗಳೆಲ್ಲವೂ ಮೈಸೂರು ಸರಕಾರದ ಅಧೀನಕ್ಕೆ ಒಳಪಟ್ಟವೋ ಆಗ ಮೈಸೂರು ಸರಕಾರವೇ ಕೆಲವು ಪರೀಕ್ಷಾ ಕೇಂದ್ರಗಳನ್ನು ಪ್ರಾರಂಭಿಸಿದವು. ಈಗಿನ ಯು.ಪಿ.ಹೈಸ್ಕೂಲಿನಲ್ಲಿ ಮೊದಲು ಪರೀಕ್ಷಾ ಕೇಂದ್ರ ಪ್ರಾರಂಭಿಸಿದರು. ಈಗ ಕರ್ನಾಟಕ ವಿಶ್ವವಿದ್ಯಾಲಯ ಆಧೀನಕ್ಕೆ ಒಳಪಟ್ಟಿದೆ.

ಕಲಾಶಾಲೆ ತೀವ್ರ ಬೆಳವಣಿಗೆ ಆಗುವುದನ್ನು ಕಂಡು ಮೈಸೂರು ಸರ್ಕಾರವು ಚಿತ್ರಕಲಾ ಶಿಕ್ಷಕರ ಪರೀಕ್ಷೆಗಳನ್ನು ಕೈಗೊಳ್ಳಲು ಅನುಮತಿ ನೀಡಿತು. ಕರ್ನಾಟಕದಾದ್ಯಂತ ಕಲಾವಿದ್ಯಾರ್ಥಿಗಳಿಗೆ ಸಿಕ್ಕ ಅನುಮತಿಯಂತೆ ಮೊದಲು ೧೫ ಜನ ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾದರು. ಹೀಗೆ ಕಲಾನುಕ್ರಮವಾಗಿ ೨೫ ರಿಂದ ೪೦ ರವರೆಗೂ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಫಲಿತಾಂಶ ಅತ್ಯಂತ ತೃಪ್ತಿಕರವಾಗಿದ್ದು ಕಂಡುಬಂದಿತು. ಪರೀಕ್ಷಾ ಫಲಿತಾಂಶ ಪ್ರಕಟವಾದ ಕೂಡಲೇ ಉತ್ತೀರ್ಣರಾದ ಅನೇಕ ಕಲಾವಿದ್ಯಾರ್ಥಿಗಳು ಪ್ರೌಡಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕರ್ನಾಟಕ ಹಾಗೂ ಕರ್ನಾಟಕೇತರ ಭಾಗಗಳಲ್ಲಿ ನೇಮಕಗೊಂಡರು. ಹೀಗೆ ಹಾಲಭಾವಿಯವರು ಕಟ್ಟಿ ಬೆಳೆಸಿದ ಕಲಾಶಾಲೆ ಅನೇಕ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ನೀಡುವುದರ ಮೂಲಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ಒಂದು ಹೊಸ ಆಯಾಮವನ್ನು ನೀಡಿತು.

ಡಿ.ವಿ.ಹಾಲಭಾವಿಯವರಿಗೆ ೧೭-೧-೧೯೫೯ ರಂದು ಕರಾಳ ದಿನವಾಯಿತು. ಯಾಕೆಂದರೆ ಅವರ ಸಾಧನೆಗೆ ಕಾರಣೀಭೂತರಾದ ಪ್ರೀತಿಯ ತಂದೆ ವೀರಭದ್ರಪ್ಪನವರು. ತೀರಿಕೊಂಡರು ಮತ್ತು ಸ್ವಲ್ಪದಿನ ಹಾಲಭಾವಿಯವರು ಚೇತರಿಸಿಕೊಂಡು ಈ ಹಿಂದೆ ಅಂದುಕೊಂಡಿದ್ದ ವಿದೇಶಿ ಪ್ರವಾಸ ಚಿಂತೆ ಮತ್ತೆ ಅವರನ್ನು ಕಾಡತೊಡಗಿತು. ಮೂರು ತಿಂಗಳ ಮಟ್ಟಿಗಾದರೂ ಇಟಲಿಗೆ ಹೋಗಲೇಬೇಕೆಂದು ನಿರ್ಧರಿಸಿದರು. ಮತ್ತೆ ಸ್ಕಾಲರಶಿಪ್‌ಗಾಗಿ ಸರಕಾರಕ್ಕೆ ಅರ್ಜಿಹಾಕಿ, ಬೆಲೆಯುಳ್ಳ ಕ್ಯಾಮರ ಸಾಮಾಗ್ರಿಗಳನ್ನು ಮಾರಿಕೊಂಡು

ಹಣ ಸಂಗ್ರಹಿಸಿದರು. ಪಾಸ್‌ಪೋರ್ಟ್ ಕೂಡ ದೊರೆಯಿತು. ಆದರೆ ಆವಾಗ ಕಟ್ಟುನಿಟ್ಟಿನ ನಿಯಮಗಳಿದ್ದ ಕಾರಣಕ್ಕೆ ಸರಕಾರದಿಂದ ಹೋಗಲಿಕ್ಕೆ ಪರಿವಾನಿಗೆ ಸಿಗಲಿಲ್ಲ. "ದೇವರು ವರಕೊಟ್ಟರೆ ಪೂಜಾರಿ ವರಕೊಡಲಿಲ್ಲವೆಂಬಂತೆ" ಕೂಡಿಹಾಕಿದ ಹಣದಿಂದ ಮತ್ತೆ ತಮ್ಮ ಕ್ಯಾಮರಾ ಸಾಮಗ್ರಿಗಳನ್ನು ಖರೀದಿಸಿ ಪೋಟೋಗ್ರಾಫಿಯನ್ನು ಪ್ರಾರಂಭಿಸುವುದರ ಜೊತೆ ಅವರ ನೆಚ್ಚಿನ ಕಲಾ ಸಂಸ್ಥೆ ಬೆಳವಣಿಗೆಯ ಬಗ್ಗೆ ಹೆಚ್ಚಿನ ಗಮನ ಹರಿಸಿದರು.

ಕಲಾಶಾಲೆಯ ಆಡಳಿತ

ಸಾಮಾಜಿಕ ಜೀವನದಲ್ಲಿ ಕಲಾ ಶಿಕ್ಷಣವು ಬಹುಮುಖ್ಯ ಪಾತ್ರವಹಿಸಿತು. ಅದರಲ್ಲೂ ವಿಶೇಷವಾಗಿ ಕಲಾ ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣ ಅವಶ್ಯಕವಾಗಿರುತ್ತದೆ. ಕಲಾ ಶಿಕ್ಷಣ ಎಂಬುದು ಸಾಮಾಜಿಕ ಜೀವನದ ಕನ್ನಡಿ ಇದ್ದಂತೆ ಅದು ಸಮಾಜದಿಂದ ಪ್ರತಿಬಿಂಬಿತವಾಗಿರುತ್ತದೆ. ಧಾರವಾಡ ಪ್ರದೇಶವು ಆಡಳಿತಾತ್ಮಕವಾಗಿ ಹಿಂದೆ ಮುಂಬೈ ಆಡಳಿತಕ್ಕೆ ಒಳಪಟ್ಟಿತ್ತು. ಕಲಾಶಾಲೆಯಲ್ಲಿ ೧೫ ಜನ ಆಡಳಿತಗಾರರು ಇರುತ್ತಿದ್ದರು.

೧. ಶಿಕ್ಷಣ ಸಚಿವರು

೨. ಜೆ.ಜೆ ಸ್ಕೂಲ್ ಆಫ್ ಆರ್ಟ್‌ನ ೨ ಜನಸದಸ್ಯರು

೩. ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಮುಂಬೈ

೪. ಚಿತ್ರಕಲಾ ಪರೀವಿಕ್ಷಕರು, ಮುಂಬೈ

೫. ಕಲಾ ಶಾಲೆ ನಿರ್ದೇಶಕರು

೬. ವಾಸ್ತು ಶಿಲ್ಪ ಪ್ರಾಧ್ಯಾಪಕರು

ಈ ಎಲ್ಲಾ ಆಡಳಿತಗಾರರು ಕಲಾ ಶಿಕ್ಷಣದ ಸಲಹಾ ಮಂಡಳಿಯ ಸದಸ್ಯರಾಗಿರುತ್ತಿದ್ದರು. ಇದರೊಂದಿಗೆ ಆರು ಜನರು ಆಡಳಿತಕೊಳಪಡದ ಪ್ರತಿನಿಧಿಗಳಾಗಿ ಕಲೆಯ, ಬೇರೆ ವಿಭಾಗಗಳನ್ನು ಪ್ರತಿನಿಧಿಸುತ್ತಿದ್ದರು. ಅವರಲ್ಲಿ ಮೂರು ಜನರು ನೇಮಕ ಮಾಡಲ್ಪಟ್ಟವರಾಗಿರುತ್ತಿದ್ದರು.

೧. ಒಬ್ಬರು ವಾಸ್ತು ಶಿಲ್ಪಿ

೨. ವರ್ಣ ಮತ್ತು ಶಿಲ್ಪಕಲೆಯ ಪರಿಣಿತರಾಗಿರಬೇಕು

೩. ಒಬ್ಬರು ಚಿತ್ರಕಲಾಶಿಕ್ಷಕರು,

೪) ಒಬ್ಬರು ವಾಣಿಜ್ಯ ಚಿತ್ರಕಲಾವಿದರೂ,

೫) ಒಬ್ಬರು ಕುಶಲಕಲಾ ಶಿಕ್ಷಕರು.

ಈ ಮೇಲಿನ ಸದಸ್ಯರಲ್ಲಿ ಮೂರು ಜನರು ಸಮಾಜದ ವಿವಿಧ ಸ್ಥಾನಗಳಿಂದ ಬಂದವರಾಗಿರಬೇಕು. ಇವರಲ್ಲಿ ನೇಮಕಗೊಳ್ಳುವ ಸದಸ್ಯರು ಸರಕಾರಿ ನೌಕರರು ಅಥವಾ ಸರಕಾರೇತರರು ಅಥವಾ ಕಲಾವಿದರೂ

* ಬಿ.ಎಂ.ಪಾಟೀಲ್ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ ಕಿರುಪ್ರಬಂಧ ಪುಟ-೨
* ಪ್ರೊ.ದಮಯಂತಿ ನರೇಗಲ್ ಕಲಾತಪಸ್ವಿ ಜೀವ ಚರಿತ್ರೆ

ಆಗಿರಬೇಕು. ಈ ಕಲಾಶಾಲೆಯ ಆಡಳಿತವು ಸಲಹಾ ಮಂಡಳಿಯ ಆದೇಶ ಮತ್ತು ಶಿಕ್ಷಣ ಸಚಿವರ ಆದೇಶಗಳ ಅನ್ವಯ ಕಲಾಶಿಕ್ಷಣಕ್ಕೆ ಸಂಬಂಧಿಸಿದ್ದಿರಬೇಕು ಎಂಬ ನಿಯಮಗಳಿದ್ದವು. ಈ ಎಲ್ಲ ನಿಯಮಗಳನ್ನು ಅಚ್ಚುಕಟ್ಟಾಗಿ ಸ್ಕೂಲ್ ಆಫ್ ಆರ್ಟ್ ಸಂಸ್ಥೆಯ ಸಂಸ್ಥಾಪಕರು ಪ್ರಾಚಾರ್ಯರು ಆದ ಡಿ.ವಿ.ಹಾಲಭಾವಿಯವರು ತದೇಕ ಚಿತ್ತದಿಂದ ಪಾಲಿಸಿಕೊಂಡು ಬಂದಿದ್ದಾರೆ.

ಕಲಾಶಾಲೆ ಸಿಬ್ಬಂದಿ

೧. ಯಾಂತ್ರಿಕ ಕಲಾವಿದರು ಮತ್ತು ನಕ್ಷಾ ಚಿತ್ರ ರಚನಾಕಾರರು

೨. ಶಿಲ್ಪಿ ಮತ್ತು ವಾಣಿಜ್ಯ ಕಲೆಯಲ್ಲಿ ಬಲ್ಲವರಾಗಿರಬೇಕು ಅಥವಾ

೩. ಚಿತ್ರಕಲೆಯಲ್ಲಿ ತತ್ಸಮಾನ ಶಿಕ್ಷಣ ಪಡೆದಿರಬೇಕು

ಕಲಾಶಾಲೆಯಲ್ಲಿ ಸಿಬ್ಬಂದಿ ವರ್ಗವು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಹೆಚ್ಚುತ್ತಾ ಹೋಗಬೇಕು. ಪ್ರತಿ ೨೫ ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರಂತೆ ನೇಮಕಾತಿಯನ್ನು ಮಾಡಲಾಗುತ್ತಿತ್ತು. ಮತ್ತು ಇವರೊಂದಿಗೆ ಅತಿಥಿ ಉಪನ್ಯಾಸಕರ ನೆರವನ್ನು ಪಡೆಯುತ್ತಿದ್ದರು.

ಹೀಗೆ ಹಾಲಭಾವಿ ಸ್ಕಲ್ ಆಫ್ ಆರ್ಟ್‌ನ ಸ್ಥಾಪನೆಯೊಂದಿಗೆ ಬೆಳವಣಿಗೆಯಾಗುತ್ತ ಬಂದಿರುತ್ತದೆ.

ಅಡಿ ಟಿಪ್ಪಣೆಗಳು

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್ ಸ್ಕೂಲ್ ಆಫ್ ಆರ್ಟ್ ಧಾರವಾಡ ಪುಟ ೨೩–೨೪

ಡಿ.ವ್ಹಿ.ಹಾಲಭಾವಿ, ನನ್ನ ಸಿಲೋನ ಪ್ರವಾಸ ಪುಟ ೨

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್‌ದ ಸ್ಕೂಲ್ ಆಫ್ ಆರ್ಟ್ ಧಾರವಾಡ ಪುಟ ೨೪–೨೫

ಡಿ.ವಿ.ಹಾಲಭಾವಿ, ನನ್ನ ಸಿಲೋನ ಪ್ರವಾಸ ಪುಟ ೧–೨

ಡಿ.ವಿ.ಹಾಲಭಾವಿ, ನನ್ನ ಸಿಲೋನ ಪ್ರವಾಸ ಪುಟ ೧೪

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್‌ದ ಸ್ಕೂಲ್ ಆಫ್ ಆರ್ಟ್ ಧಾರವಾಡ ಪುಟ ೨೭–೨೮

ಅಧ್ಯಾಯ : ನಾಲ್ಕು
ಸ್ಕೂಲ್ ಆಫ್ ಆರ್ಟ್‌ನ ಹುಟ್ಟು ಬೆಳವಣಿಗೆಯ ವಿವಿಧ ಆಯಾಮಗಳು

ಅಧ್ಯಾಯ : ನಾಲ್ಕು

ಸ್ಕೂಲ್ ಆಫ್ ಆರ್ಟ್‌ನ ಹುಟ್ಟು ಬೆಳವಣಿಗೆಯ ವಿವಿಧ ಆಯಾಮಗಳು ಮತ್ತು ಪಠ್ಯಕ್ರಮ

ಧಾರವಾಡವು ರೋಮ್ ನಗರದಂತೆ ಏಳುಗುಡ್ಡಗಳ ಮೇಲೆ ನಿರ್ಮಾಣವಾಗಿದೆ. ಅದರ ಉಬ್ಬು ತಗ್ಗುಗಳನ್ನು ನಿಸರ್ಗ ನಿರ್ಮಿಸಿದ್ದರೆ, ಒಪ್ಪ ಓರಣಗಳನ್ನು ಮನುಷ್ಯ ನಿರ್ಮಿಸಿದ್ದಾನೆ. ಯಾವುದೇ ಒಂದು ಊರನ್ನು ತಿಳಿದುಕೊಳ್ಳಬೇಕಾದರೆ, ಆ ಊರನ್ನು ಕಟ್ಟಿದ ಜನರನ್ನು ತಿಳಿದುಕೊಳ್ಳಬೇಕು, ಆದರೆ ಜನರು ಅನ್ನ ಒಂದರಿಂದಲೇ ಬದುಕುವುದಿಲ್ಲ. ಅವರು ನಿಜವಾಗಿ ಬದುಕುವುದು ವಿಚಾರದಿಂದ. ವಿಚಾರ ಮಾಡುವ ಜನರೇ ತಮ್ಮ ನಗರಕ್ಕೆ ವೈವಿಧ್ಯತೆಯನ್ನು ವಿಶಿಷ್ಟ ಸಂಸ್ಕೃತಿಯನ್ನು ತಂದುಕೊಟ್ಟಿರುತ್ತಾರೆ. ವಿಚಾರ ದೃಷ್ಟಿಯಿಂದಾಗಲಿ ಅಥವಾ ಸಾಂಸ್ಕೃತಿಕ ದೃಷ್ಟಿಯಿಂದಾಗಲಿ ನೋಡಿದರೆ, ಧಾರವಾಡಕ್ಕೆ ತನ್ನದೆ ಆದ ಒಂದು ಸ್ಥಾನವಿದೆ.

ರಾಷ್ಟ್ರಮಟ್ಟದ, ಅಂತರರಾಷ್ಟ್ರೀಯ ಮಟ್ಟದ ಕಲಾಕಾರರ ಕರ್ಮಭೂಮಿ ಧಾರವಾಡ. ಮಲೆನಾಡಿನ ಸೆರಗಿನಲ್ಲಿದ್ದರೂ ಕೂಡಾ, ಬಯಲುಸೀಮೆಯ ಕೆಚ್ಚನ್ನು ಹೊಂದಿದೆ. ರಾಜ್ಯದ ಸಾಂಸ್ಕೃತಿಕ ರಾಜಧಾನಿಯೆಂದೂ, ವಿದ್ಯೆಯ ತವರೂರೆಂದೂ, ಧಾರವಾಡವನ್ನು ಕರೆಯುವುದರಲ್ಲಿ ಔಚಿತ್ಯವಿದೆಯೆನಿಸುತ್ತದೆ. ಈ ಜಿಲ್ಲೆಯಲ್ಲಿ ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿ ಪಡೆದವರಿದ್ದು, "ಜ್ಞಾನಪೀಠ" ಪ್ರಶಸ್ತಿಯನ್ನು ಪಡೆದ ಕವಿ ಮತ್ತು ಸಾಹಿತಿಗಳಿದ್ದಾರೆ. ಸಂಗೀತ ದಿಗ್ಗಜರಿದ್ದಾರೆ. "ಕೆ. ವೆಂಕಟಪ್ಪ ಪ್ರಶಸ್ತಿ" ಪಡೆದವರಿದ್ದಾರೆ. ಸಂಶೋಧಕರು, ಇತಿಹಾಸಕಾರರು, ಶಿಕ್ಷಣ ತಜ್ಞರು, ಶಿಲ್ಪ, ಚಿತ್ರ, ನಾಟ್ಯ ಮುಂತಾದ ಲಲಿತಕಲಾ ಕ್ಷೇತ್ರದಲ್ಲಿ ಪ್ರಖ್ಯಾತಿಗಳಿಸಿದ ಕಲಾವಿದರಿದ್ದಾರೆ. ಅಲ್ಲದೇ ಧಾರ್ಮಿಕವಾಗಿ, ರಾಜಕೀಯವಾಗಿ ಶೈಕ್ಷಣಿಕವಾಗಿ, ಐತಿಹಾಸಿಕವಾಗಿ, ತನ್ನದೇ ಆದ ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿದ ಕೀರ್ತಿ ಈ ಜಿಲ್ಲೆಯಲ್ಲಿದೆ.

ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ, ಚಿತ್ರಕಲೆಯು ಉತ್ತರ ಕರ್ನಾಟಕದಲ್ಲಿ ವಿಫುಲವಾಗಿ ಬೆಳೆದಿರುವುದು ಕಂಡುಬರುತ್ತದೆ. ಚಾಲುಕ್ಯರ ಸಂಪ್ರದಾಯದಲ್ಲಿ ಬೆಳೆದ ಕಲಾಕೃತಿ, ಕಲಾವಿದರು, ವಿವಿಧ ಕಡೆ ಹೋಗಿ ಕಲೆಯನ್ನು ಬೆಳೆಸಿದರು. ಗದಗ ಲಕ್ಕುಂಡಿಯಿಂದ ಹೋದ ಕಲಾವಿದರು. ಹೋಯ್ಸಳ ಕಲಾವಿದರಾಗಿ ಬೆಳೆದಿದ್ದು ಕಂಡುಬರುತ್ತದೆ. ಅನೇಕ ಕ್ಷೇತ್ರಗಳಲ್ಲಿ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಗಳಿಂದ ನಾಡಿನ ಜನರ ಗಮನ ಸೆಳೆದ ಧಾಡವಾಡವು ಚಿತ್ರಕಲಾ ಶಿಕ್ಷಣದ ಕೊರತೆ ಹೊಂದಿರುವುದನ್ನು ಗಮನಿಸಿ ಅಖಂಡ ಕರ್ನಾಟಕದಲ್ಲಿಯೇ

ಪ್ರಪ್ರಥಮಬಾರಿಗೆ "ಚಿತ್ರಕಲಾ ಶಿಕ್ಷಕರ ತರಬೇತಿ ಶಿಕ್ಷಣವನ್ನು ಶಾಸ್ತ್ರೀಯ ನೆಲೆಯಲ್ಲಿ ಪ್ರಾರಂಭಿಸಿದ ಕೀರ್ತಿಯು ಶ್ರೀದಾನಪ್ಪ ಹಾಲಭಾವಿಯವರಿಗೆ ಸಲ್ಲುತ್ತದೆ. ಕನ್ನಡ ನಾಡಿನ ಸಾಂಸ್ಕೃತಿಕ ರಾಜಧಾನಿಯಾಗಿ ಹೊರಹೊಮ್ಮಿದ ಧಾರವಾಡಕ್ಕೆ "ಹಾಲಭಾವಿ ಸ್ಕೂಲ್ ಆಫ್ ಆರ್ಟ್" ಮತ್ತೊಂದು ಗರಿಯಾಗಿದೆ. ಸ್ವಾತಂತ್ರ ಪೂರ್ವದಲ್ಲಿಯೇ ಪ್ರಾರಂಭವಾಗಿ ಶತಮಾನೋತ್ಸವದ ಕಡೆ ಮುನ್ನುಗುತ್ತಿದೆ.





ಪ್ರೊ ಪಿ.ಜಿ.ಮಾರಿಹಾಳ್, ಶಿಕ್ಷಣ ಸಂಪದ ಅಭಿನಂದನ ಗ್ರಂಥ ಡಾ॥ ಎಸ್.ಸಿ.ಪಾಟೀಲ್

[illegible]







Class Room



Clay Modeling Class School Of Art Dharwad
Shri B.B. Badiger Coaching




Dharwad School Of Art Students Sketching [illegible]



Smt . Sarojini . Mahishi To England SendOff 8-6-66



ಡಿ.ಎಸ್.ಎ. ಬೆಳ್ಳಿ ಮಹೋತ್ಸವದಲ್ಲಿ ಗುಲ್ಬರ್ಗಾದ ಶ್ರೀ [illegible]
ರವರು ಚಿತ್ರಿಸುತ್ತಿರುವ ಚಿತ್ರ ದಿ ೨೫-೧-೫೧



ಲಲಿತ ಕಲಾ ಮಹಾವಿದ್ಯಾಲಯದ [illegible] ನಿವೃತ್ತ ಪ್ರಾಂಶುಪಾಲ ಶ್ರೀ [illegible] ರವರು
ಸ್ಕೂಲ್ ಆಫ್ ಆರ್ಟ್ ಧಾರವಾಡದ ನಿರ್ದೇಶಕರಾದ ಶ್ರೀ ಡಿ.ವಿ. ಹಾಲಭಾವಿಯವರ ಭಾವಚಿತ್ರವನ್ನು
ತೆಗೆದು ಕೊಂಡಿದ್ದು.



School Inspection



ಶ್ರೀ .ಡಿ. ವಿ. ಹಾಲಭಾವಿಯವರು ತಮ್ಮ ರಿಪೋರ್ಟ್ ಓದುತ್ತಿದ್ದಾರೆ





ಗೊಟ್ಟಗೂಡಿ (ಶಿಗಾಂವ) ಯಲ್ಲಿ ದೊಡ್ಡ ಆಲದ ಮರದಲ್ಲಿ ಡಿ.ವ್ಹಿ. ಹಾಲಭಾವಿಯವರು
ಕಲಾಶಾಲೆಯಲ್ಲಿ ಪ್ರಾತಕ್ಷಿಕೆ ನೀಡುತ್ತಿರುವರು



ಚಿತ್ರಕಲಾ ಶಿಕ್ಷಣದ ಹಿನ್ನೆಲೆ

ಚಿತ್ರಕಲೆ ಒಂದು ನಾಡಿನ, ಒಂದು ಜನಾಂಗದ ಇತಿಹಾಸವನ್ನು ತಿಳಿಸುವ ಮಹತ್ವದ ಸಾಧನವಾಗಿದೆ. ಒಂದು ಚಿತ್ರ ಇಲ್ಲವೇ ಶಿಲ್ಪಕೃತಿ, ಸಾವಿರಾರು ವರ್ಷಗಳ ಇತಿಹಾಸವನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸುವ ಶಕ್ತಿಯನ್ನು ಪಡೆದಿರುತ್ತದೆ. ಸರ್ವ ಕಲೆಗಳಿಗೆ ಆಧಾರಭೂತವಾದುದು ಚಿತ್ರಕಲೆಯೇ ಎಂಬ ಅಭಿಪ್ರಾಯಗಳು ಶಾಸನಗಳಲ್ಲಿ ಸಿಗುತ್ತದೆ.

"ಸರ್ವಕಲಾಧಾರಭೂತ ಚಿತ್ರಕಲಾಭಿಜ್ಞೇನ ವಿಶ್ವಕರ್ಮ ಚಾರಣೇಂದಂ ಶಾಸನಂ ಲಿಖಿತ" ಎಂಬ ವಿಚಾರಗಳನ್ನು ನೋಡಿದಾಗ, ಚಿತ್ರಕಲೆ ಅನೇಕ ಕಲೆಗಳಿಗೆ ಆಧಾರ ಶಾಸ್ತ್ರವೆಂಬುದು ಪರಿಗಣಿಸಬೇಕಾಗುತ್ತದೆ. ಚಿತ್ರಕಲೆಯ ಜ್ಞಾನವಿಲ್ಲದೆ ಯಾವೊಂದೂ ಕರಕುಶಲ ಕಲೆಗಳು, ಸರಿಯಾದ ರೀತಿಯಲ್ಲಿ ನಿರ್ಮಾಣವಾಗಲಾರವು. ಈ ಹಿನ್ನೆಲೆಯಲ್ಲಿಯೇ ಪ್ರಾಚೀನರು ಚಿತ್ರಕಲೆಗೆ ಮಿಗಿಲಾದ ಸ್ಥಾನವನ್ನು ಕೊಟ್ಟಿರುವಂತಿದೆ. ನಮ್ಮ ಕಾಲವೂ ಕಲೆಗೆ ಉಪೇಕ್ಷ ಮಾಡಿಲ್ಲ. ಬ್ರಿಟೀಷರು ಬಂದ ನಂತರ, ಭಾರತದಲ್ಲಿ ಹಲವಾರು ಸುಧಾರಣೆಗಳನ್ನು ಜಾರಿಗೆ ತಂದರು. ಕಲೆಯ ಹಿನ್ನೆಲೆಯನ್ನು ಅವಲೋಕಿಸಿದಾಗ ಭಾರತದಲ್ಲಿ ಬ್ರಿಟೀಷ್ ನಿರೂಪಣಾ ಕಲಾಶಾಲೆಗಳನ್ನು ಪ್ರಾರಂಭಿಸಿದ್ದು ಕ್ರಿ.ಶ. ೧೮೫೪ರಲ್ಲಿ ಕಲ್ಕತ್ತಾದಲ್ಲಿ ಕಲಾಶಾಲೆಯನ್ನು ಪ್ರಾರಂಭಿಸುವ ಮೂಲಕ ಕಲಾ ಶಿಕ್ಷಣಕ್ಕೆ ಪೀಠಿಕೆಯನ್ನು ಹಾಕಿದರು. ಅದರ ಪಠ್ಯಕ್ರಮ ಕಲೆಯನ್ನು ಕಲಿಸುವ ವಿಧಾನ, ವಿದ್ಯಾರ್ಥಿಗಳಿಗೆ ಕಲೆಯ ಕುರಿತಾದ ತಿಳುವಳಿಕೆ ಹೊಂದಲು, ಪಾಶ್ಚಾತ್ಯ ಕಲಾಕೃತಿಗಳು ಕಲಾವಿದರ ಕಲಾಕೃತಿಗಳ ಕುರಿತಾದ ಪುಸ್ತಕಗಳು, ಕ್ಯಾಟಲಾಗ್‌ಗಳನ್ನು ಭಾರತಕ್ಕೆ ತಂದು ಪರಿಚಯಿಸಿದರು. ಅದರಂತೆ ನಮ್ಮ ದೇಶದಲ್ಲಿ ಸಮಗ್ರ ಶಿಕ್ಷಣದ ಸುಧಾರಣೆಯ ಹಿನ್ನೆಲೆಯಲ್ಲಿ ಅನೇಕ ಆಯೋಗಗಳನ್ನು ರೂಪಿಸಿ ವರದಿಗಳನ್ನು ಸಂಗ್ರಹಿಸಿ, ಕಾರ್ಯಪ್ರವೃತ್ತರಾದರು. ಈ ಹಿನ್ನೆಲೆಯಲ್ಲಿ ರಚನೆಗೊಂಡ ವರದಿಗಳು ಈ ಕೆಳಗಿನಂತಿವೆ.

* ೧೮೫೪ರಲ್ಲಿ "ಕಳಿಂಗ್‌ವುಡ್‌ನ" ವರದಿಯು ಶಿಕ್ಷಣದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿತು. ಇದರಿಂದಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಬೆಳೆಯಿತು.

* ೧೯೦೨ರಲ್ಲಿ "ಪ್ರಾಥಮಿಕ ಶಿಕ್ಷಣ ಆಯೋಗ"ವು ಲಾರ್ಡ್ ಕರ್ಜನ್‌ನ ಶಿಫಾರಸ್ಸಿನ ಮೇರೆಗೆ ಜಾರಿಗೆ ಬಂದಿತು. ಇದರಲ್ಲಿ ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಚಿತ್ರಕಲೆ, ಭೂಗೋಳ, ಚರಿತ್ರೆ, ಗಾಯನ, ಬೇಸಾಯ ಹೀಗೆ ಮುಂತಾದ ವಿಷಯಗಳೊಂದಿಗೆ ಚಿತ್ರಕಲೆಗಳಿಗೂ ಪ್ರೋತ್ಸಾಹ ಸಿಕ್ಕಿತು.

* ೧೯೧೩ರಲ್ಲಿ ಗೋಖಲೆಯವರು ಮಂಡಿಸಿದ ಶಿಕ್ಷಣ ಮಸೂದೆಯನ್ನು ತಿರಸ್ಕರಿಸಿದರು.

* ೧೯೧೩ರ ಫೆಬ್ರುವರಿ ೨೧ರಂದು ಭಾರತ ಸರ್ಕಾರವು ತನ್ನ ಶಿಕ್ಷಣ ನೀತಿಯ ಬಗ್ಗೆ ನಿರ್ಣಯವೊಂದನ್ನು ಶಿಫಾರಸ್ಸು ಮಾಡಿತು. ಇದರಿಂದಾಗಿ ಕೆಳದರ್ಜೆಯ ಪ್ರಾಥಮಿಕ ಶಾಲೆಗಳನ್ನು ಸಾಕಷ್ಟು ವಿಸ್ತರಿಸಿ, ಅಲ್ಲಿ ಅಂಕ-ಗಣಿತ, ಓದು, ಬರಹ, ಚಿತ್ರಕಲೆ, ಗ್ರಾಮನಕ್ಷೆ, ಪ್ರಕೃತಿ ಅಧ್ಯಯನ, ದೈಹಿಕ ವ್ಯಾಯಾಮಗಳನ್ನು ಒದಗಿಸುವ ಕುರಿತು ಶಿಫಾರಸ್ಸುಗಳನ್ನು ಮಾಡಲಾಯಿತು.

* ೧೯೩೭ರಲ್ಲಿ "ವುಡ್ ಮತ್ತು ಅಬ್ಬಾಟ್" ವರದಿಯು ಅನೇಕ ಶೈಕ್ಷಣಿಕ ವಿಚಾರಗಳೊಂದಿಗೆ, ಕಲೆಗಳು ಮತ್ತು ಕುಶಲ ಕೈಗಾರಿಕೆಗಳ ಬೋಧನೆಗೆ ಪ್ರೋತ್ಸಾಹ ಕೊಡಬೇಕೆಂದು ಮತ್ತು ಶಿಕ್ಷಕರ ತರಬೇತಿಯ

ಸಲುವಾಗಿ ಶಿಫಾರಸ್ಸು ಮಾಡಿದರು. ೧೯೩೭ರಲ್ಲಿ ಸಮಾವೇಶಗೊಂಡ ಕೇಂದ್ರ ಸಲಹಾ ಮಂಡಳಿಯು ಶಿಕ್ಷಣದ ತಜ್ಞರಾಗಿದ್ದ ಎ. ಎಬ್ಬಾಟ್ ಮತ್ತು ಎಸ್.ಎಚ್. ವುಡ್ ಅವರನ್ನು ಭಾರತಕ್ಕೆ ಆಹ್ವಾನಿಸಿ ಅವರು ದೇಶಾದ್ಯಂತ ಸಂಚರಿಸಿ ತಮ್ಮ ಈ ಮೇಲಿನ ವರದಿಯನ್ನು ಸಲ್ಲಿಸಿದರು.

* ಹೀಗೆ ೧೯೩೭ರವರೆಗೆ ಬಂದಿರುವ ಹಲವಾರು ವರದಿಗಳು ಬಂದಿದ್ದರೂ ಕೂಡ ಅವು ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ಮೀಸಲಾಗಿಹೋಯಿತು. ಮಾಧ್ಯಮಿಕ ಶಾಲೆಯ ಕಲಾ ಶಿಕ್ಷಣದ ಪ್ರಗತಿಗಾಗಿ, ಅಂತಹ ಯಾವುದೇ ಸುಧಾರಣೆಯು ಕಂಡುಬರುವುದಿಲ್ಲ.

* ೧೯೩೭ರಿಂದ ೧೯೪೭ರ ಅವಧಿಯಲ್ಲಿ ಮಾಹಾತ್ಮಾ ಗಾಂಧೀಜಿಯವರಿಂದ ರೂಪಿಸಲ್ಪಟ್ಟ ಮೂಲ ಶಿಕ್ಷಣದ ಪದ್ಧತಿ ಅಥವಾ ವರ್ಧಾಯೋಜನೆಯಲ್ಲಿ ಲಲಿತ ಕಲೆಗಳಿಗೆ ಪ್ರಾಶಸ್ತ್ಯ ದೊರಕಿತು. ನೂಲುವಿಕೆ ನೇಕಾರಿಕೆ ಮರಗೆಲಸ, ಬೇಸಾಯ, ತೋಟಗಾರಿಕೆ, ವ್ಯಾಯಾಮ ಮುಂತಾದ ಕಲೆಗಳ ಅಭಿವೃದ್ಧಿಗೆ ಅವಕಾಶ ಕಲ್ಪಿಸಲಾಯಿತು. ಇದು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸಂಬಂಧಿಸಿದ ಕ್ರಾಂತಿಕಾರಿ ಘಟನೆಯಾಗಿದೆ.

* ಸ್ವಾತಂತ್ರ್ಯದ ನಂತರದಲ್ಲಿ ಮಾಧ್ಯಮಿಕ ಶಿಕ್ಷಣದೊಂದಿಗೆ ಉನ್ನತ ಶಿಕ್ಷಣದವರೆಗೂ ಕಲೆಗೆ ಸಂಬಂಧಿಸಿದಂತೆ ಬಹಳಷ್ಟು ಶಿಫಾರಸ್ಸುಗಳು ಬಂದವು.

* ೧೯೫೨ರಲ್ಲಿ ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್ ವರದಿಯಲ್ಲಿ ವಿಜ್ಞಾನಕಲೆ, ವಾಣಿಜ್ಯ, ತಾಂತ್ರಿಕ, ಬೇಸಾಯ, ಲಲಿತಕಲೆಗಳು, ಗೃಹವಿಜ್ಞಾನಗಳಿಗೆ ಸಂಬಂಧಿಸಿದ ಯಾವುದಾದರೂ ಮೂರು ವಿಷಯಗಳನ್ನು, "ಐಚ್ಛಿಕವಾಗಿ ಕಲಿಯಬೇಕು" ಎಂದು ಸಲಹೆ ಮಾಡಲಾಯಿತು. ಹಾಗೆಯೇ ಮಾಧ್ಯಮಿಕ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಣ ಪೂರಕ ವಿಷಯವಾಗಿತ್ತು.

* ೧೯೬೨ರವರೆಗೆ ಪೂಣಾದಲ್ಲಿ ಎಸ್.ಎಸ್.ಸಿ ಬೋರ್ಡ್ ಈ ಪರೀಕ್ಷೆಗಳನ್ನು ನಡೆಸುತ್ತಿತ್ತು.

* ೧೯೬೨ರ ನಂತರ ಬೆಂಗಳೂರಿನಲ್ಲಿ ಎಸ್.ಎಸ್.ಸಿ. ಬೋರ್ಡ್ ಪ್ರಾರಂಭವಾಯಿತು. ಆಗಿನಿಂದ ಎಲ್ಲಾ ಚಿತ್ರಕಲೆಯ ಪರೀಕ್ಷೆಗಳು ಇಲ್ಲಿಯೇ ನಡೆಯಲಾರಂಭಿಸಿದವು.

* ೧೯೬೨ರಲ್ಲಿ ಸರಕಾರದವರು ರಾಜ್ಯ ಲಲಿತಕಲಾ ಅಕಾಡೆಮಿಯನ್ನು ಸ್ಥಾಪಿಸಿ, ಕಲಾಭಿವೃದ್ಧಿಯ ಹಲವಾರು ಚಟುವಟಿಕೆಗಳನ್ನು ಪ್ರಾರಂಭಿಸಿತು.

* ೧೯೬೫ರಲ್ಲಿ ದಾವಣಗೇರಿಯ ಸರಕಾರಿ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿದರು.

* ಈ ಮೊದಲೇ ಪ್ರಾರಂಭವಾದ ಜಯಚಾಮರಾಜೇಂದ್ರ ಟೆಕ್ನಿಕಲ್ ಕಲಾಶಾಲೆಯ ಅಭಿವೃದ್ಧಿಗಾಗಿ ಧನಸಹಾಯ ಮಾಡುತ್ತಿದ್ದರು.

* ೧೯೬೪ರಲ್ಲಿ ಕೊತಾರಿ ಆಯೋಗದಲ್ಲಿ ಚಿತ್ರಕಲೆ ಪಠ್ಯವಸ್ತುವಿನಲ್ಲೆ ಬರುವುದರ ಕುರಿತು ಶೀಫಾರಸ್ಸು ಮಾಡಲಾಗಿದೆ.

ಪ್ರೊ ವಿ.ಜಿ.ಮಾರಿಹಾಳ್, ಶಿಕ್ಷಣ ಸಂಪದ ಅಭಿನಂದನ ಗ್ರಂಥ ಡಾ॥ ಎಸ್.ಸಿ.ಪಾಟೀಲ್

ಶಂಕ್ರಪ್ಪ ಕುಂದಗೋಳ್ ಡಿ.ವ್ಹಿ ಹಾಲಭಾವಿ

* ೧೯೮೬ರಲ್ಲಿ "ರಾಷ್ಟ್ರೀಯ ಸಮಗ್ರ ಶಿಕ್ಷಣ ನೀತಿ" ಕಲೆ ಹಾಗೂ ಸೃಜನಾತ್ಮಕ ಅಭಿವ್ಯಕ್ತಿಯೆಂದು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಹಂತದಲ್ಲಿ ಚಿತ್ರಕಲಾ ಪಠ್ಯವನ್ನು ತಯಾರಿಸಿದ್ದು, ಚಿತ್ರಕಲೆಗೆ ೧೫% ಎಸ್.ಯು.ಪಿ.ಡಬ್ಲೂ (ಸಮಾಜ) ಉಪಯೋಗಿ ಉತ್ಪಾದನಾ ಕಾರ್ಯಕ್ಕೆ ೧೫% ರಷ್ಟು ಇವೆರಡಕ್ಕೂ ಸೇರಿ ೩೦% ರಷ್ಟು ಆದರೆ ಉಳಿದ ೪೦% ರಲ್ಲಿ ವಿಜ್ಞಾನ, ಗಣಿತ, ಸಮಾಜ ಅಲ್ಲದೇ ಮೂರು ಭಾಷೆಗಳನ್ನು ಅಧ್ಯಯನ ಮಾಡುವುದು ಆಗಿದೆ. ಉಳಿದ ಶೇ. ೧೫% ರಷ್ಟು ಶಾರೀರಿಕ ಮತ್ತು ೧೫% ನೈತಿಕತೆ ಮತ್ತು ಆಧ್ಯಾತ್ಮಿಕತೆಗೆ ಅವಕಾಶವಿದೆ. ಈ ಹೊಸ ಶಿಕ್ಷಣ ನೀತಿಯಲ್ಲಿ ನಿಜವಾಗಿಯೂ ಈ ಹಿಂದೆ ಸಿಗದೇ ಇರುವ ಪ್ರಾಮುಖ್ಯತೆ ಚಿತ್ರಕಲಾ ಶಿಕ್ಷಣಕ್ಕೆ ಸಿಕ್ಕಿದೆ.

* ನಮ್ಮ ಕಾಲವೂ ಕಲೆಗೆ ಉಪೇಕ್ಷೆ ಮಾಡಿಲ್ಲ. ಚಾಲುಕ್ಯರು, ರಾಷ್ಟ್ರಕೂಟರು, ಕದಂಬರು, ವಿಜಯನಗರಗಳ ಕಲಾಭಾಗ್ಯ ಕಂಡ ಈ ಪ್ರದೇಶವು ನಿದ್ರೆ ಹೋಗುತ್ತಿಲ್ಲ. ಬ್ರಿಟೀಷರ ಆಳ್ವಿಕೆಯಲ್ಲಿ ಕರ್ನಾಟಕವು ಪ್ರಾಂತೀಯವಾಗಿ ವಿಭಜಿಸಲ್ಪಟ್ಟಿತು. ಮುಂಚೆ ಕರ್ನಾಟಕವು ರಾಜಕೀಯವಾಗಿ ಮುಂಬೈ ಸರ್ಕಾರದ ಅಧೀನದಲ್ಲಿತ್ತು. ಅವರು ಒಪ್ಪಿಕೊಳ್ಳಲ್ಪಟ್ಟ ಪಠ್ಯಕ್ರಮ, ಅಭ್ಯಾಸಪತ್ರಿಕೆ, ಪಠ್ಯಪುಸ್ತಕಗಳು ಮತ್ತು ಕಲಿಸುವ ವಿಧಿ ವಿಧಾನಗಳು, ಪ್ರಚಲಿತವಿದ್ದವು. ಕಲಾಶಿಕ್ಷಣಕ್ಕಾಗಿ ಮುಂಬೈ ಒಂದು ಮಹತ್ವದ ಕೇಂದ್ರವಾಗಿತ್ತು.

೧೮೫೭ರಲ್ಲಿ ಸ್ಥಾಪನೆಗೊಂಡ ಸರ್.ಜೆ.ಜೆ ಸ್ಕೂಲ್ ಆಫ್ ಆರ್ಟ್ ಕಲಾ ಸಂಸ್ಥೆ. ಏಷ್ಯಾದಲ್ಲಿಯೇ ಪ್ರಪ್ರಥಮವಾದ ಪಾಶ್ಚಾತ್ಯ ಮಾದರಿಯ ಕಲಾಶಾಲೆ ಇದು ಕಲಾ ಶಿಕ್ಷಣದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿತ್ತು. ಬ್ರಿಟೀಷ್ ನಿರೂಪಣಾ ಕಲಾಶಾಲೆಗಳಿಗೆ ಮುಖ್ಯಸ್ಥರಾಗಿ ಬಂದವರು, ಲಂಡನ್ನಿನ "ರಾಯಲ್ ಅಕಾಡೆಮಿ ಆಫ್ ಆರ್ಟ್" ನಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದವರು ಮಾತ್ರ, ಭಾರತದಲ್ಲಿಯ ಕಲಾಶಾಲೆಗಳ ಮೇಲ್ವಿಚಾರಕರಾಗಿ ಬರುತ್ತಿದ್ದರು.

ಸಹಜವಾಗಿಯೇ ಬ್ರಿಟೀಷರ ಶಿಸ್ತು, ಸಮಯಪ್ರಜ್ಞೆ, ಗಂಭೀರತೆ ಮೈಗೊಂಡು ಬರುತ್ತಿದ್ದ ಮೇಲಾಧಿಕಾರಿಗಳ ಪ್ರಭಾವ. ಕಲಾಶಾಲೆಯ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿ ವೃಂದದ ಮೇಲೆ ಪರಿಣಾಮಗಳು ಬರುತ್ತಿದ್ದವು. ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಕನ್ನಡಿಗರದೇ ಸಿಂಹಪಾಲು. ನಮ್ಮ ಕನ್ನಡ ಕಲಾವಿದರ ಅಚ್ಚುಮೆಚ್ಚಿನ ಗುಂಪನ್ನು ನೋಡಿ ಬಹುಜನರು ಆಶ್ಚರ್ಯಪಟ್ಟರು. ಎಲ್ಲರೂ ಒಬ್ಬರಕ್ಕಿಂತ ಒಬ್ಬರು ಶ್ರೇಷ್ಠ ದರ್ಜೆಯ ಅಭ್ಯಾಸವನ್ನು ಮಾಡುತ್ತಾ, ಹಾಡುತ್ತಾ, ಕುಣಿಯುತ್ತಾ ವಿನೋದದಿಂದ ಸಪ್ತವರ್ಣಗಳಂತಿದ್ದ ನಮ್ಮ ಕನ್ನಡಿಗರ ಗುಂಪಿನಲ್ಲಿ ೧) ಶ್ರೀ ಡಿ.ಜಿ. ಬಡಿಗೇರ ೨) ಶ್ರೀ ಜಿ.ಎಸ್. ದಂಡಾವತಿಮಠ ೩) ಶ್ರೀ ಎಂ.ವಿ. ಮಿಣಜಗಿ ೪) ಶ್ರೀ ಡಿ. ಹಾಲಭಾವಿ ೫) ಶ್ರೀ ಎಂ.ಎ. ಚೆಟ್ಟಿ ೬) ಸಿ.ವ್ಹಿ ಕಾರಡಗಿ. ೭) ಶ್ರೀ ಅಮೀನ ಸಾಹೇಬ ಕಮಡೊಳ್ಳಿ. ಇವರೆಲ್ಲ "ಸಪ್ತವರ್ಣದ" ಕಲಾವಿದರಾಗಿ ಒಗ್ಗಟ್ಟಿನಿಂದ ಆತ್ಮೀಯತೆಯಿಂದಿರುವ ಗುಂಪನ್ನೇ ದಂಡಾವತಿಮಠ ಅವರು ೧೯೨೫ರ ಅವಧಿಯಲ್ಲಿ "ಸಪ್ತವರ್ಣದ ಕನ್ನಡ ಗುಂಪು" ಎಂದು ಕರೆದುಕೊಂಡಿದ್ದರು.

ಈ ಅವಧಿಯಲ್ಲಿಯೇ ಮುಂಬಯಿಯ ಸರ್. ಜೆ.ಜೆ. ಕಲಾಶಾಲೆಯಲ್ಲಿ ತರಬೇತಿ ಹೊಂದಿ ಬಂದ ಕರ್ನಾಟಕದ ಹಲವು ಕಲಾವಿದರು, ಕರ್ನಾಟಕದಲ್ಲಿ ಖಾಸಗಿಯಾಗಿ ಚಿತ್ರಕಲಾ ಶಾಲೆಗಳನ್ನು ಪ್ರಾರಂಭಿಸಿದರು. ಅವರಲ್ಲಿ ಡಿ.ವ್ಹಿ. ಹಾಲಭಾವಿಯವರೇ ಮೊದಲಿಗರು. ಉತ್ತರ ಕರ್ನಾಟಕದಲ್ಲಿ ಶಾಲೆಯನ್ನು ಪ್ರಾರಂಭಿಸುವುದರ

ಬಿ.ಎಂ.ಪಾಟೀಲ್ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ ಕಿರುಪ್ರಬಂಧ ಪುಟ-೨

ಜೊತೆಗೆ ಕಲಾಕ್ಷೇತ್ರಕ್ಕೆ ಮಹತ್ವವಾದ ಕೊಡುಗೆಯನ್ನು ನೀಡಿದರು.

ಡಿ. ವ್ಹಿ. ಹಾಲಭಾವಿಯವರು ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನ ಪೇಂಟಿಂಗ್ ಕ್ಲಾಸ್‌ನಲ್ಲಿ ಅಧ್ಯಯನ ಮಾಡುತ್ತಿರುವಾಗ ಅದೇ ಕ್ಲಾಸಿನ ಇಟಲಿ ವಿದ್ಯಾರ್ಥಿನಿಯೊಬ್ಬಳು ಸ್ನೇಹಿತಳಾಗಿದ್ದಳು. ಅವಳಿಂದ ಇಟಲಿ ಭಾಷೆಯನ್ನು ಸ್ವಲ್ಪ ಕಲಿತರು. ಇವರಿಬ್ಬರ ಸ್ನೇಹದಿಂದಾಗಿ ಹಾಲಭಾವಿಯವರು ಇಟಲಿಗೆ ಹೋಗಬಾರದೇಕೆ ಎಂದುಕೊಂಡರು. ಅದಕ್ಕೆ ಕಾರಣವಿಷ್ಟೆ ಇವರ ಸ್ನೇಹಿತರಾದ ಶ್ರೀ ಡಿ.ಜಿ. ಬಡಿಗೇರ ಮತ್ತು ಶ್ರೀ ಎಂ.ವ್ಹಿ. ಮಿಣಜಗಿ ಅವರು ಇಂಗ್ಲೆಂಡಿಗೆ ಹೋಗಿಬಂದಿದ್ದರು. ಇದರಿಂದಾಗಿ ತಾವೂ ಇಟಲಿಗೆ ಹೋಗಿ ಅಲ್ಲಿಯ ಜಗದ್ವಿಖ್ಯಾತ ಕಲಾವಿದರಾದ ಫ್ರಾನ್ಸಿಸ್ಕೋ ಬಾಟಿಸೆಲ್ಲಿ, ಲಿಯೋನಾರ್ಡೋ-ಡ-ವಿಂಚಿ, ಮೈಕಲೇಂಜಿಲೋ, ರಾಫೆಲ್, ಪಿಕಾಸೋ, ವಿನ್ಸೆಂಟ್ ವ್ಯಾನ್‌ಗಾಗ್ ಮುಂತಾದವರ ಕಲಾಕೃತಿಗಳನ್ನು ನೋಡಿ ಅಭ್ಯಸಿಸಲು ಮತ್ತು ಅಲ್ಲಿಯ ಚಿತ್ರಕಲಾ ಶಾಲೆಯಲ್ಲಿ ಅಭ್ಯಸಿಸಲಿಕ್ಕೆ ಹೋಗಲೇಬೇಕೆಂದು ಮನದಲ್ಲಿ ಮಹಾತ್ವಾಕಾಂಕ್ಷೆಯನ್ನು ಇಟ್ಟುಕೊಂಡಿದ್ದರು. ಆದರೆ ಮುಪ್ಪಿನ ತಂದೆ ವೀರಭದ್ರಪ್ಪನವರು, ಮನೆಯಲ್ಲಿ ನನ್ನನ್ನು ಬಿಟ್ಟು ನೀನು ವಿದೇಶಕ್ಕೆ ಹೋದರೆ, ನನ್ನ ಗತಿ ಯಾರು? ಎಂದು ದಾನಪ್ಪನವರನ್ನು ಪ್ರಶ್ನಿಸಿದಾಗ, ತುಂಬಾ ನೊಂದುಕೊಂಡಿರುವುದಾಗಿ ತಾವೇ ಬರೆದ ನನ್ನ ಸಲೋನ್ ಸಂದರ್ಶನ ಗ್ರಂಥದಲ್ಲಿ ಹೇಳಿದ್ದಾರೆ. ಆದ್ದರಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳಲು ಸಾಧ್ಯವಾಗಲಿಲ್ಲವೆಂದಿರುವರು. ಬಹುಶಃ ಈ ವಿದೇಶದಲ್ಲಿಯ ಅಧ್ಯಯನ ತಪ್ಪಿರುವುದೇ ಮುಂದೆ ಕಲಿತ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಂತಹ ಸಂಸ್ಥೆಯನ್ನು ಧಾರವಾಡದಲ್ಲಿ ಸ್ಥಾಪಿಸಬೇಕು ಎಂಬ ಹೆಬ್ಬಯಕೆ ಉಂಟಾಗಲು ಕಾರಣವಾಗಿರಬೇಕು, ಇನ್ನೊಂದೆಡೆ ಮುಂಬೈಗೆ ಹೋಗಲು ಸಾಧ್ಯವಾಗದ ಅಸಂಖ್ಯ ಕಲಾಭಿಮಾನಿಗಳ ಅಧ್ಯಯನಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದಲೇ (ಕಲಾಶಾಲೆಯನ್ನು) ಸ್ಕೂಲ್ ಆಫ್ ಆರ್ಟ್‌ನ್ನು ಪ್ರಾರಂಭಿಸಿದರು.

ಕರ್ನಾಟಕದಲ್ಲಿ ಕಲಾಸಂಘಟನೆಗಳು ಮಾಡಬೇಕು ಅನ್ನುವ ಮಹಾದಾಸೆಯನ್ನು ಹೊಂದಿದ್ದು ನಾನು ಚಿತ್ರಕಲೆಯಲ್ಲಿ, ಅಂದರೆ ನಮ್ಮದೇ ಆದ ಕಲಾವಲಯದಲ್ಲಿ ಏನಾದರೂ ಒಂದು ಮಹತ್ವದ ಕೆಲಸ ಮಾಡಬೇಕು ಅನ್ನುವ ಕುರಿತು ಯೋಚಿಸಿ, ಸುಂದರವಾದ ಪರಿಸರವನ್ನು ಹೊಂದಿದ್ದು ಶೈಕ್ಷಣಿಕ ವಲಯದಲ್ಲಿ ಸಾಂಸ್ಕೃತಿಕ ರಾಜಧಾನಿಯಾಗಿರುವ ಈ ಸ್ಥಳದಲ್ಲಿ ಕಲೆಯ ಶಿಕ್ಷಣ ನೀಡುವಂತಹ ಸಂಸ್ಕೃತಿಯನ್ನು ಕಟ್ಟಿ ಅದರಲ್ಲಿ ಕಲೆಯ ಕುರಿತಾದ ಸಂಶೋಧನೆಗಳು ನಡೆಯುವಂತಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದ, ಎನ್ನುವ ಇವರು ಒಬ್ಬ ಕ್ರಾಂತಿಕಾರರಾಗಿ, ತಮ್ಮ ೨೮ನೇ ವಯಸ್ಸಿನಲ್ಲಿ ೧೯೩೫ ಜೂನ್ ೧೦ ರಂದು ಆರ್.ಎಲ್.ಎಸ್. ಹೈಸ್ಕೂಲ್‌ದಲ್ಲಿ, ಸ್ಕೂಲ್ ಆಫ್ ಆರ್ಟ್ ಸ್ಥಾಪನೆ ಮಾಡುವುದರ ಜೊತೆಗೆ, ತಮ್ಮ ಕಲಾಪೂಜೆಯನ್ನು ಪ್ರಾರಂಭಿಸಿಯೇಬಿಟ್ಟರು. ಮೊದಲನೇ ವರುಷದಲ್ಲಿ ಕಲಿಯಲು ಬಂದ ವಿದ್ಯಾರ್ಥಿಗಳ ಸಂಖ್ಯೆ ಕೇವಲ ಎರಡು ಜನ ಮಾತ್ರ, ೧೯೩೫ ಜೂನ್ ೧೦ ರಿಂದ ೧೯೩೬ ಅಕ್ಟೋಬರ್‌ವರೆಗೆ ಅಂದರೆ ಒಂದು ವರುಷ ನಾಲ್ಕು ತಿಂಗಳ ಮಾತ್ರ ಆರ್.ಎಲ್.ಎಸ್. ಹೈಸ್ಕೂಲ್‌ದಲ್ಲಿದ್ದು, ನಂತರ ೧೯೩೬ ಅಕ್ಟೋಬರ್‌ದಿಂದ ೧೯೩೮ ಜೂನ್‌ವರೆಗೆ ಕರ್ನಾಟಕ ವಿದ್ಯಾವರ್ಧಕ ಸಂಸ್ಥೆಯಲ್ಲಿ ಈ ಶಾಲೆಯಲ್ಲಿ ನಡೆಸಲಾಯಿತು.

ನಂತರದಲ್ಲಿ ಸ್ವತಃ ದಾನಪ್ಪ ಹಾಲಭಾವಿಯವರೇ ಸ್ಕೂಲ್ ಆಫ್ ಆರ್ಟ್ ಕಟ್ಟಡ ಹೇಗಿರಬೇಕೆಂದು ಯೋಚಿಸಿ, ಕಟ್ಟಡದ ರೂಪುರೇಷೆಗಳನ್ನು ರಚಿಸಿ ತಮಗಿರುವ ಆಧುನಿಕ ತೊಂದರೆಯನ್ನು ಗಮನಿಸದೇ

ಸ್ವಪ್ರಯತ್ನ ಹಾಗೂ ಪರಿಶ್ರಮದಿಂದ ಧಾರವಾಡದ ಸಿವಿಲ್ ಕೋರ್ಟ್ ಎದುರಿಗೆ, ಸುಂದರವಾದ ಕಟ್ಟಡವನ್ನು ನಿರ್ಮಿಸಿದರು. ಆಗ ಅದೊಂದು ಹೊಸ ನಮೂನೆಯ ಕಟ್ಟಡವಾಗಿ, ದೂರದಿಂದ ಕಣ್ಣಿಗೆ ಬೀಳುವಂತಾಯಿತು. ಆ ಬಯಲು ಪ್ರದೇಶದಲ್ಲಿ ಕಲಾಶಾಲೆಯ ಕಟ್ಟಡವೊಂದೇ ಎತ್ತರವಾಗಿ ಕಂಡುಬರುತ್ತಿತ್ತು. ಅದರ ಎತ್ತರವು ಅದರ ಧ್ಯೇಯದ ಎತ್ತರಕ್ಕೆ ಸಂಕೇತವಾಗಿ ಪರಿಣಮಿಸಿತು.

ಈ ಸ್ಕೂಲ್ ಆಫ್ ಆರ್ಟ್‌ನ ಕಟ್ಟಡವನ್ನು ೧೯೪೦ರಲ್ಲಿ ಧಾರವಾಡದ ಕಲೆಕ್ಟರ್ ಆಗಿದ್ದ ಶ್ರೀ ಎ.ಎಮ್.ಡಾಯಸ್ ಅವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಿಸುವ ವಿಷಯಗಳು:

೧. Drawing Grade

೨. ರೇಖಾಚಿತ್ರ ಮತ್ತು ವರ್ಣ ಚಿತ್ರಕಲೆ – Drawing & Painting

೩. ಅನ್ವಯಿಕ ಕಲೆ – Applied Art

೪. ಛಾಯಾಚಿತ್ರಕಲೆ – Photography

೫. ಚಿತ್ರಕಲಾ ಶಿಕ್ಷಕರ ತರಗತಿ – Drawing Teacher Course

೬. ಸಂಗೀತ – Music

೭. ನೃತ್ಯ – Dance

೮. ಕರಕುಶಲಕಲೆ – Craft

ಈ ರೀತಿಯಾದ ವಿಷಯಗಳ ಕುರಿತು ಕಲಾಶಿಕ್ಷಣ ನೀಡುವ ಸಂಸ್ಥೆಯಾಗಿ ಬೆಳೆಯಿತು. ಇಲ್ಲಿ ಬಹಳ ಪರಿಶ್ರಮಪಟ್ಟು ಬೆಳೆದ ವಿದ್ಯಾರ್ಥಿಗಳು, ಕಲಾವಿದರಿಗೆ, ಕಲಾಶಿಕ್ಷಕರಾಗಿ, ಕಲಾ ಇತಿಹಾಸಕಾರರಾಗಿ ಹೊರಹೊಮ್ಮಬೇಕು. ನನ್ನ ವಿದ್ಯಾರ್ಥಿಗಳು ಈ ಕಲಾಶಾಲೆಯಿಂದ ಹೊರಹೋದ ನಂತರ ಕಲಾ ಸಂಶೋಧನೆಗಳನ್ನು ಮಾಡಿ ಕಲೆಯ ಪುನರುತ್ಥಾನ ಮಾಡುವಂತಾಗಬೇಕು ಎಂಬ ಹೆಬ್ಬಯಕೆಯನ್ನು ಹೊಂದಿದ್ದರು.

ಈವರೆಗೂ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನವರೇ ಪರೀಕ್ಷೆಗಳನ್ನು ನಡೆಸುತ್ತಿದ್ದರು. ವಿದ್ಯಾರ್ಥಿಗಳಿಗಾಗುತ್ತಿದ್ದ ತೊಂದರೆಯನ್ನು ತಪ್ಪಿಸಲು ಪರೀಕ್ಷಾ ಕೇಂದ್ರವನ್ನು ಧಾರವಾಡದಲ್ಲಿಯೇ ಪ್ರಾರಂಭ ಮಾಡಿದರು. ೫ ವರ್ಷಗಳ ಕಾಲಾವಧಿಯಲ್ಲಿಯೇ ಕಲಾಮಂದಿರಕ್ಕೆ ಬೇಕಾದ ಎಲ್ಲ ಸೌಕರ್ಯಗಳನ್ನು ಪೂರೈಸಿದರು. ಕಲಾಶಾಲೆಗೆ ಬದ್ಧಬುನಾಧಿಯನ್ನು ಹಾಕಿದರು. ೧೯೪೦ರಲ್ಲಿ ಹೊಸದಾಗಿ ಎರಡು ಕೋರ್ಸುಗಳನ್ನು ಪ್ರಾರಂಭ ಮಾಡಿದರು.

೧. ಪ್ರಾಥಮಿಕ ಚಿತ್ರಕಲೆ – Primary Art

೨. ಮಾಧ್ಯಮಿಕ ಚಿತ್ರಕಲೆ – Intermedia Art – ಎಂಬ ಹೊಸ ವಿಷಯಗಳನ್ನು ಕಲಾವಿದ್ಯಾರ್ಥಿಗಳಿಗೆ

ಪರಿಚಯಿಸಿದರು. ಇವುಗಳ ನಿರ್ವಹಣೆಗಾಗಿ ಪರಿಚಿತ ಶಿಕ್ಷಕರನ್ನು ತುಂಬಿಸಿಕೊಂಡಿದ್ದರಿಂದ ಮಹಾವಿದ್ಯಾಲಯದ ಗುಣಮಟ್ಟ ಹೆಚ್ಚಾಗಿ, ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಯಿತು. ೧೯೫೬ರ ವರೆಗೆ ಎಲ್ಲ ಚಿತ್ರಕಲಾ ಪರೀಕ್ಷೆಗಳನ್ನೂ ಈ ಸ್ಕೂಲ್ ಆಫ್ ಆರ್ಟ್‌ನಿಂದಲೇ ನಿರ್ವಹಿಸಲಾಗುತ್ತಿತ್ತು. ಯಾವಗ ಮುಂಬೈ ಪ್ರಾಂತ್ಯವು ಮೈಸೂರು ಸರ್ಕಾರದ ಅಧೀನಕ್ಕೆ ಬಂದಿತೋ, ಆಗ ಮೈಸೂರು ಸರಕಾರವೇ ಪರೀಕ್ಷಾ ಕೇಂದ್ರಗಳನ್ನು ಪ್ರಾರಂಭಿಸಿದರು.

ಎ.ಕೆ. ಗೌರ್‍ನಮೆಂಟ್ ಹೈಸ್ಕೂಲ್‌ದಲ್ಲಿ ಮೊದಲು ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಬೇಕು. ಅದು ಈಗಿನ ಕರ್ನಾಟಕದ ವಿಶ್ವವಿದ್ಯಾಲಯದ ಅಧೀನದಲ್ಲಿದೆ. ಹಾಲಭಾವಿ ಕಲಾಶಾಲೆ ತೀವ್ರ ಬೆಳವಣಿಗೆ ಆಗುವುದನ್ನು ಕಂಡು ಕಂಡ ಮುಂಬೈ ಸರ್ಕಾರವು ಚಿತ್ರಕಲಾ ಶಿಕ್ಷಕರ ಪರೀಕ್ಷೆಗಳನ್ನು ಕೈಗೊಳ್ಳಲು ೧೯೫೨ರ ಮಾರ್ಚ್ ೪ ರಂದು ಅನುಮತಿ ನೀಡಿತು. ಕರ್ನಾಟಕದಾದ್ಯಂತ ಏಕೈಕ ಚಿತ್ರಕಲಾ ಶಿಕ್ಷಕರ ಪರೀಕ್ಷೆ ಕೇಂದ್ರವಾಗಿ ಹೊರಹೊಮ್ಮಿದ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದಲ್ಲಿ ಮೊದಲಿಗೆ ೧೫ ಜನ ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾದರು. ವಿದ್ಯಾರ್ಥಿಗಳ ಫಲಿತಾಂಶವು ಅತ್ಯಂತ ತೃಪ್ತಿಕರವಾದದ್ದು ಕಂಡುಬರುತ್ತದೆ. ಉತ್ತೀರ್ಣರಾದ ಅನೇಕ ವಿದ್ಯಾರ್ಥಿಗಳು, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕರ್ನಾಟಕದ ಒಳಗೆ ಮತ್ತು ಹೊರಗೆ ನೇಮಕಗೊಂಡರು. ಹೀಗೆ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಚಿತ್ರಕಲಾ ಶಿಕ್ಷಣವನ್ನು ನೀಡುವುದರೊಂದಿಗೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಒಂದು ಹಂತದ ಹೊಸ ಆಯಾಮವನ್ನು ನೀಡಿತು.

೧೯೫೫ರಲ್ಲಿ "ಸ್ಕೂಲ್ ಆಫ್ ಆರ್ಟ್" ಕಲಾಶಾಲೆಯನ್ನು ಮುಂಬೈ ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ ರಜಿಷ್ಟ್ರೇಶನ್ ಮಾಡಿಸಿದ್ದು, ಈ ಕುರಿತು ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಖ್ಯಾತ ಕವಿಗಳಾದ ದ. ರಾ ಬೇಂದ್ರೆ ಅವರು ಅತಿಥಿಗಳಾಗಿ ಬಂದು, ಸ್ಕೂಲ್ ಆಫ್ ಆರ್ಟ್, ಧಾಡವಾಡಕ್ಕೆ ತನ್ನದೇ ಆದ ವಿಶಿಷ್ಠ ಕೊಡುಗೆಯನ್ನು ನೀಡಿದ್ದಾರೆ, ೧೯೩೫ರಲ್ಲಿ ಸ್ಥಾಪಿಸಿದ ಕಲಾಶಾಲೆಯು, ಅನೇಕ ಕಲಾವಿದ್ಯಾರ್ಥಿಗಳಿಗೆ ಕಲಾತೀರ್ಥವಾಗಿ ಪರಿಣಮಿಸಿದೆ. ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ, ಪ್ರಸಾದ ನಿಲಯ, ಪಾಠಶಾಲೆಗಳ ನೆರವಿವಾಗಿ ಧಾಡವಾಡಕ್ಕೆ ಕಲಾಶಾಲೆಯನ್ನೊದಗಿಸಿದ ಕೀರ್ತಿಯು ದಾನಪ್ಪ ಹಾಲಭಾವಿಯವರದು. ಇಂದು ಈ ಕಲಾಶಾಲೆಯು ಸರ್ಕಾರದಿಂದ ಅಧಿಕೃತ ಮಾನ್ಯತೆಯನ್ನು ಪಡೆಯುವಂತಾಗಿದೆ ಎಂದರು.

೧೯೫೭ರಲ್ಲಿ ಸ್ಕೂಲ್ ಆಫ್ ಆರ್ಟ್ ವಿದ್ಯಾರ್ಥಿಗಳು, ಹಂಪೆಯ ಕ್ಯಾಂಪಿನಲ್ಲಿ ರಚಿಸಿದ "ಕಲಾಕೃತಿಗಳ ಮೂವಿ ಫಿಲ್ಮ್" ತಯಾರಿಸಿದ ಶ್ರೀ ದಾನಪ್ಪ ಹಾಲಭಾವಿಯವರು, ಅದನ್ನು ಬಿಡುಗಡೆ ಮಾಡಿಸಲು ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ಕುವೆಂಪು ಅವರನ್ನು ಕರೆಸಿ ಬಿಡುಗಡೆ ಮಾಡಿಸಿದರು. ೧೯೫೮ರಲ್ಲಿ ಸ್ಕೂಲ್ ಆಫ್ ಆರ್ಟ್‌ಗೆ ಸಂದರ್ಶನ ಮಾಡಿದ ಸಹಾಯಕ ನಿರ್ದೇಶಕರಾದ ಶ್ರೀ ಎ.ಸಿ ದೇವೇಗೌಡ ಬೆಂಗಳೂರು ಅವರು ಈ ಕಲಾಶಾಲೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿರುವರು. ೧೯೬೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಉಪಕುಲಪತಿಗಳಾದ ಶ್ರೀ ಸದಾಶಿವ ಒಡೆಯರ್ ಅವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಸ್ಕೂಲ್ ಆಫ್ ಆರ್ಟ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಹೀಗೆ ಹಲವಾರು ಕಾರ್ಯಕ್ರಮಗಳನ್ನು, ಜೊತೆಗೆ ಸಂಸ್ಥೆಯ ಹಿತದೃಷ್ಟಿಯಿಂದ ಮಕ್ಕಳಲ್ಲಿ ಕಲಾತ್ಮಕ ಮನೋಜ್ಞಾನವನ್ನು ಮೈಗೂಡಿಸಿಕೊಳ್ಳುವುದಕ್ಕಾಗಿ ಅತ್ಯಂತ ಪರಿಣಿತ ಶಿಕ್ಷಕರನ್ನು ಶ್ರೀದಾನಪ್ಪ ಹಾಲಭಾವಿಯವರು ನೇಮಕ ಮಾಡುತ್ತಿದ್ದರು.

ಸ್ಕೂಲ್ ಆಫ್ ಆರ್ಟ್ ಬೆಳ್ಳಿ ಮಹೋತ್ಸವ

ಬಿ.ಎಂ.ಪಾಟೀಲ್ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ ಕಿರುಪ್ರಬಂಧ ಪುಟ-೨

ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ್ನು ೨೫ ವರ್ಷಗಳಲ್ಲಿ ಕರ್ನಾಟಕದಾದ್ಯಂತ ಕಲಾವಾತಾವರಣವನ್ನು ನಿರ್ಮಿಸಿತು. ೧೯೬೭ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದ "ಬೆಳ್ಳಿ ಹಬ್ಬವನ್ನು" ಆಚರಿಸಿಕೊಂಡಿತು. ಅಂತಾರಾಷ್ಟ್ರೀಯ ಕಲಾವಿದ "ಪದ್ಮಶ್ರೀ ಕೆ.ಕೆ. ಹೆಬ್ಬಾರ್" ಅವರು ಮುಖ್ಯ ಅಥಿತಿಗಳಾಗಿ ಬಂದಿದ್ದು ಕಲಾ ಪ್ರಾತ್ಯಾಕ್ಷಿಯನ್ನು ನೀಡುವುದರೊಂದಿಗೆ ತಮ್ಮ ಅನುಭವವನ್ನು ಹಂಚಿಕೊಂಡರು. "ಬೆಳ್ಳಿ ಮಹೋತ್ಸವದ" ಕಾರ್ಯಕಾರಿ ಸಮೀತಿಯ ಅಧ್ಯಕ್ಷರಾದ "ಪದ್ಮವಿಭೂಷಣ ಡಾ. ಡಿ.ಸಿ. ಪಾವಟೆ" ಅವರು ಅಧ್ಯಕ್ಷೀಯ ಭಾಷಣದಲ್ಲಿ ಹಾಲಭಾವಿ ಅವರನ್ನು ಮತ್ತು ಕಲಾಶಾಲೆಯ ಕುರಿತು ಕೊಂಡಾಡಿದರು. ಪಂಜಾಬದ ರಾಜ್ಯಪಾಲರಾದ ಶ್ರೀಮತಿ ಡಾ.ಸರೋಜಿನಿ ಮಹಿಷಿ ಅವರು "ಹಳೆಯ ಮತ್ತು ಹೊಸ ವಿದ್ಯಾರ್ಥಿಗಳ" ಸಮಾವೇಶವನ್ನು ಉದ್ಘಾಟಿಸಿದರು.

"ಧಾರವಾಡದ ಹಳೆಯ ಚಿತ್ರಕಲಾ ಶಿಕ್ಷಕರ" ಸಭೆಯ ಅಧ್ಯಕ್ಷತೆಯನ್ನು ಶ್ರೀ ಎನ್.ಎಂ. ನೇರ್ಲೇಕರ್ ಅವರು ವಹಿಸಿದ್ದರು. ಅಂತಿಮವಾಗಿ ಕಲಾ ಶಾಲೆಯ ವಿದ್ಯಾರ್ಥಿಗಳಿಂದ ಮನರಂಜನೆಯ ಕಾರ್ಯಕ್ರಮವನ್ನು ಮಾಡುವುದರೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು. ೧೯೬೭ ರಲ್ಲಿ "ಮೈಸೂರು ದಸರಾ ಉತ್ಸವಕ್ಕೆ" ಸ್ಕೂಲ್ ಆಫ್ ಆರ್ಟನ್ ವಿದ್ಯಾರ್ಥಿ ಮತ್ತು ಶಿಕ್ಷಕರಿಂದ "ಕಿತ್ತೂರು ಚೆನ್ನಮ್ಮ" (ಟೆಬಿಲೋ) ಸ್ತಬ್ದ ಚಿತ್ರಣವನ್ನು ಮಾಡಿಕಳಿಸಲಾಯಿತು.

೧೯೬೩ ರಲ್ಲಿ ಬೆಂಗಳೂರಿನ ಡಿ.ಪಿ.ಆಯ್ ಶ್ರೀ ಟಿ.ವ್ಹಿ. ವಾಸುದೇವಯ್ಯ ಸ್ಕೂಲ್ ಆಫ್ ಆರ್ಟಗೆ ಸಂದರ್ಶಿಸಿ ಮೆಚ್ಚುಗೆಯನ್ನು ಸೂಚಿಸಿರುವರು. ೧೯೬೪ ರಲ್ಲಿ "ಫೇಡ್ ರೇಷನ್ ಆಪ್ ಆರ್ಟ ಇನಸ್ಟಿಟ್ಯೂಷನ್ ಮುಂಬೈ" ದವರಿಂದ ಚಿತ್ರಕಲಾ ಪ್ರದರ್ಶನವನ್ನು ಧಾರವಾಡದಲ್ಲಿ ಹಾಲಭಾವಿ ಸ್ಕೂಲ ಆಫ್ ಆರ್ಟದವರು ಏರ್ಪಡಿಸಿರುವುದರಿಂದ ಕಲಾ ಶಾಲೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಸ್ಪೂರ್ತಿಯನ್ನು ನೀಡಿತ್ತು. ೧೯೬೫ ರಲ್ಲಿ "ಎಲ್ಲೋರಾ ಮತ್ತು ಅಜಂತಾ" ದಲ್ಲಿ ಸ್ಕೂಲ್ ಆಪ್ ಆರ್ಟನ ವಿದ್ಯಾರ್ಥಿಗಳು ರಚಿಸಿದ ಕಲಾಕೃತಿಗಳು ಪ್ರದರ್ಶನವನ್ನು ಡಾ. ತಾವಡೆ ಉಪಕುಲಪತಿಗಳು ಔರಂಗಬಾದ ವಿಶ್ವವಿದ್ಯಾಲಯ ಇವರು ಉದ್ಘಾಟಿಸಿದರು. ಈ ಪ್ರದರ್ಶನಕ್ಕೆ ಫಡರೇಷನ್ ಆಫ್ ಆರ್ಟ ಇನ್‌ಸ್ಟಿಟ್ಯೂಷನ್ ಆಫ್ ಮುಂಬೈದವರ ಸಹಕಾರದೊಂದಿಗೆ (ಸ್ಕೂಲ್ ಆಫ್ ಆರ್ಟನವರ) ಪ್ರದರ್ಶನದ ವ್ಯವಸ್ಥೆಯನ್ನು ಮಾಡಲಾಯಿತು.

೧೯೬೫ರಲ್ಲಿ ಸ್ಕೂಲ್ ಆಪ್ ಆರ್ಟದಿಂದ ಹಾಲಭಾವಿ ದಾನಪ್ಪನವರು ಲಲಿತ ಕಲೆಯ ಪ್ರಸಾರಕ್ಕಾಗಿ ರಾಜ್ಯದಲ್ಲಿ ಪ್ರಥಮ ಭಾರಿಗೆ "ಆರ್ಟಗಿಲ್ಡ್" ಎಂಬ ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಕಲಾ ಪ್ರತಿಕೆಯೊಂದನ್ನು ಪ್ರಾರಂಭಸಿದರು. ೧೯೬೬ ರಲ್ಲಿ ಚಿತ್ರಕಲಾ ಶಿಕ್ಷಕರಿಗೆ ಡೆಪುಟೇಷನ್ ಮೇಲೆ ತರಬೇತಿಯನ್ನು ಮಾಡಿಕೊಳ್ಳಲು ಸರಕಾರವು ಆದೇಶ ಹೊರಡಿಸಿತು. ಆದೇಶ ಸಂಖ್ಯೆ ಡಿ.ಪಿ.ಐ.ಎಸ್. Memo No. T.R.S.೪೯-೫೦ DPT ೧೬/೬೫-೬೬ Dated ೧೫-೧೦-೧೯೬೬ ಅವಕಾಶ ಮಾಡಿಕೊಟ್ಟಿತ್ತು. ಇದರಿಂದಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿರುವ ಚಿತ್ರಕಲಾ ಶಿಕ್ಷಕರಿಗೆ ಹೊಸ ವಿಷಯ ಮತ್ತು ತಂತ್ರಗಳು ಕುರಿತು ಅಧ್ಯಯನ ಮಾಡಲು ಅವಕಾಶ ಒದಗಿಸಿರುವುದು. ಹೊಸ ಚೇತನವನ್ನೇ ಚಿತ್ರಕಲಾ ಶಿಕ್ಷಕರಿಗೆ ತುಂಬಿದಂತಾಯಿತು.

ಮುಂಬೈ ಸರಕಾರದ ಆಧೀನದಲ್ಲಿದ್ದ ಚಿತ್ರಕಲಾ ಶಾಲೆಗಳು ೧೯೬೫ರಲ್ಲಿ "Mysore Government Higher Art Examinations" ನಡೆಸುವುದಾಗಿ ಒಪ್ಪಿಕೊಂಡಿದ್ದು, ಆಗ ಮತ್ತೆ ಚಿತ್ರಕಲೆಯ ವಿಷಯಗಳಲ್ಲಿ

ಬದಲಾವಣೆಗಳಾದವು ಜೊತೆಗೆ ಪರೀಕ್ಷಾ ಕೇಂದ್ರಗಳು ಹೆಚ್ಚಾದವು ಅವು ಕೆಳಗಿನಂತಿವೆ.

"Mysore Government Higher Art Examinations ೧೯೬೫" Course

೧. Kala Prathama Examination	Dharwad, Gadag
೨. Kala Madyama Examination	Belgaum, Banglore
೩. Inter Mediate Examination & Drawing & Painting	Mysore
೪. Kala Proudha (Painting) Examination	
೫. Advance Examination in Drawing & Painting	Dharwad & Mysore
೬. Diploma Examination in Drawing & Painting	

ಈ ರೀತಿಯಲ್ಲಿ ಮೈಸೂರು ಸರಕಾರದ ಅಧೀನದಲ್ಲಿ ಬದಲಾವಣೆಯಾಗುತ್ತ ಕಲಾಶಾಲೆಗಳು ಬೆಳೆಯುತ್ತಿದ್ದು, ೧೯೬೬ ರಲ್ಲಿ ಸ್ಕೂಲ್ ಆಫ್ ಆರ್ಟಗೆ ಮೈಸೂರು ಸರಕಾರವು ಗ್ರ್ಯಾಂಟ್ ಇನ್ ಏಡ್‌ಕೋಡ ಪ್ರಕಾರ ೨.೮೦೦=೦೦ ರೂಪಾಯಿಗಳ ಅನುದಾನವನ್ನು ನೀಡಿತು. ಹೀಗಾಗಿ ಕಲಾಶಾಲೆಗೆ ಮತ್ತೆ ಚೇತನ ಬಂದಂತಾಯಿತು.

೧೯೬೬ರಲ್ಲಿ ಖ್ಯಾತ ಕಲಾವಿದ ಎಂ.ವ್ಹಿ.ಮಿಣಜಗಿಯವರು "ಜಪಾನ ಪ್ರವಾಸ" ಮಾಡಿ ಬಂದ ನಂತರ ಸ್ಕೂಲ್ ಆಫ್ ಆರ್ಟನ ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗೆ ಅಲ್ಲಿಯ ಕಲೆಯ ಕುರಿತಾದ ಅನುಭವಗಳನ್ನು ಹಂಚಿಕೊಳ್ಳಲು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ೧೯೭೬ ಫೆಬ್ರುವರಿ ೨೫ ರಂದು "The Fedaration of Art Institute Bombay"ದ ಚಿತ್ರಕಲಾ ಪ್ರದರ್ಶವನ್ನು ಧಾರವಾಡದ ಸ್ಕೂಲ ಆಫ್ ಆರ್ಟನವರು ಹಮ್ಮಿಕೊಂಡಿದ್ದು. ಕರ್ನಾಟಕ ವಿಶ್ವವಿದ್ಯಾಲಯದ ಭಾಷಾ ವಿಭಾಗದಲ್ಲಿ ಏರ್ಪಡಿಸಲಾಗಿತ್ತು. ೧೯೬೮ರಲ್ಲಿ ಶ್ರೀ ದಾನಪ್ಪ ಹಾಲಭಾವಿ ಅವರು "೬೦ ನೇ ಹುಟ್ಟು ಹಬ್ಬದ ಸತ್ಕಾರ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಖ್ಯಾತ ರಾಷ್ಟ್ರೀಯ ಕಲಾವಿದ ಆರ್.ಕೆ. ಫಿಲ್ಮನ ಕಲಾನಿರ್ದೇಶಕರಾದ ಶ್ರೀ ಎಂ.ಆರ್. ಆಚರೇಕರ್ ಅವರು ಶ್ರೀ ದಾನಪ್ಪ ಹಾಲಭಾವಿಯವರ "ಭಾವಚಿತ್ರದ" ಪ್ರಾತ್ಯಾಕ್ಷಿಕೆಯನ್ನು ನೀಡಿದರು. ೧೯೭೨ರಲ್ಲಿ ಖ್ಯಾತಕಲಾವಿದ ಜಿ. ಎಸ್. ದಂಡಾವತಿಮಠ ಅವರಿಂದ "Still - Life ಪಾತ್ಯಕ್ಷಿಕೆ" ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ಹಾಲಭಾವಿ ಸ್ಕೂಲ ಆಫ್ ಆರ್ಟದಲ್ಲಿ ಹಮ್ಮಿಕೊಳ್ಳಲಾಗಿತ್ತು. ೧೯೭೩ ರಲ್ಲಿ ಕಲಾವಿದ ಕೆ,ಜಿ. ಕುಲಕರ್ಣಿ ಅವರಿಂದ "ನವ್ಯಕಲೆಯ ಕುರಿತು" ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ೧೯೭೭ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟಗೆ ಪ್ರಾಚಾರ್ಯರಾಗಿ ಶ್ರೀಮತಿ ತಾರಾ ಪವಾರ ಅವರು ಬಂದರು ಇದೇ ಸಂದರ್ಭದಲ್ಲಿ "ಪೋಸ್ಟ ಡಿಪ್ಲೋಮಾ ಕ್ಲಬ್‌ದ ಪ್ರಥಮ ಚಿತ್ರಕಲಾ ಪ್ರದರ್ಶನವನ್ನು" ಏರ್ಪಡಿಸಲಾಗಿತ್ತು. ಅದರ ಉದ್ಘಾಟನೆಯನ್ನು ಶ್ರೀಮತಿ ತಾರಾ ಪವಾರ ಅವರು ನೆರವೇರಿಸಿದರು.

ಸ್ಕೂಲ್ ಆಫ್ ಆರ್ಟದ ಕಲಾಚಟುವಟಿಕೆಗಳೊಂದಿಗೆ ಸ್ಕೂಲಿನ ಅಭಿವೃದ್ಧಿಯನ್ನು ಮಾಡಿದ ಪ್ರಾಚಾರ್ಯರು

ಮತ್ತು ನಿರ್ದೇಶಕರು ೧೯೭೮ ರಲ್ಲಿ ಸ್ಕೂಲ್ ಆರ್ಟ ವಿದ್ಯಾರ್ಥಿಗಳನ್ನು ಹೈದಾರಾಬಾದ ಪ್ರವಾಸಕ್ಕೆ ಕರೆದುಕೊಂಡು ಹೋಗಿ "ಸಾಲಾರಜಂಗ್" ಮ್ಯೂಜಿಯಂನಲ್ಲಿಯ ಕಲಾಕೃತಿಗಳನ್ನು ಕಲಾವಿದರ ಅದ್ಭುತ ಕೈಚಳಕವನ್ನು ವೀಕ್ಷಿಸಿದ ಕಲಾವಿದ್ಯಾರ್ಥಿಗಳು ಪುಲಕಿತಗೊಂಡರು ೧೯೭೯ ರಲ್ಲಿ "ಪೋಸ್ಟ ಡಿಪ್ಲೊಮಾ ಕ್ಲಬ್‌ದ" ವತಿಯಿಂದ "ಚಿಕ್ಕಮಕ್ಕಳ ಚಿತ್ರಕಲಾ ಪ್ರದರ್ಶನವನ್ನು" ಸ್ಕೂಲ್ ಆಫ್ ಆರ್ಟದಲ್ಲಿ ಏರ್ಪಡಿಸಿಸಲಾಗಿತ್ತು. ೧೯೭೯ ರಲ್ಲಿ ಸ್ಕೂಲ್ ಆಫ್ ಆರ್ಟನ ಪ್ರಾಚಾರ್ಯರಾಗಿ ಶ್ರೀ ಸುರೇಶ ಹಾಲಭಾವಿಯವರು ಬಂದರು. ೧೯೮೦ ರಲ್ಲಿ "ಟಿ.ಪಿ. ಅಕ್ಕಿ ಅವರಿಗೆ ರಾಜ್ಯ ಪ್ರಶಸ್ತಿ ದೊರೆತಿರುವುದರಿಂದ ಹಾಲಭಾವಿ ಸ್ಕೂಲ್ ಆಫ್ ಆರ್ಟದ ವತಿಯಿಂದ ಸನ್ಮಾನಿಸಲಾಯಿತು. ೧೯೮೧ ರಲ್ಲಿ ಸ್ಕೂಲ್ ಆಫ್ ಆರ್ಟ ವಿದ್ಯಾರ್ಥಿಗಳನ್ನು ಬದಾಮಿ, ಪಟ್ಟದಕಲ್ಲುಗಳಲ್ಲಿ ನಿಸರ್ಗ ದೃಶ್ಯಗಳ ರಚನೆ ಮಾಡಲು ಕರೆದುಕೊಂಡು ಹೋಗಲಾಗಿತ್ತು. ಹಲವಾರು ಕಲಾಕೃತಿಗಳನ್ನು ರಚಿಸಿಕೊಂಡು ಬಂದಿರುವರು.

ಸ್ಕೂಲ್ ಆಫ್ ಆರ್ಟದ ಕಲಾಚಟುವಟಿಕೆಗಳನ್ನು ಶಾಲಾಪ್ರಾಚಾರ್ಯರು ಮತ್ತು ನಿರ್ದೇಶಕರು ಸ್ಕೂಲಿನ ಅಭಿವೃದ್ಧಿಯತ್ತ ಗಮನಹರಿಸಿದರು. ೧೯೮೨ ರಲ್ಲಿ ಖ್ಯಾತ ಕಲಾವಿದರಾದ ಶ್ರೀ ಎ.ಎ. ಅಲಮೇಲಕರ ಅವರು ಮುಂಬೈದಿಂದ ಧಾರವಾಡದ ಸ್ಕೂಲ ಆಫ್ ಆರ್ಟಗೆ ಬೆಟ್ಟಿಕೊಟ್ಟು ಅತ್ಯಮೂಲ್ಯವಾದ ಮೂರು ಕಲಾಕೃತಿಗಳನ್ನು ಕಾಣಿಕೆಯಾಗಿ ನೀಡಿದರು. ೧೯೮೪ ರಲ್ಲಿ ಸ್ಕೂಲ್ ಆಫ್ ಆರ್ಟದ ಹಳೆಯ ವಿದ್ಯಾರ್ಥಿಯಾದ ಶ್ರೀ ಶ್ರೀಶೈಲ ಚಿನ್ನಣ್ಣವರ್ ಅವರಿಗೆ "ರಾಜ್ಯಪ್ರಶಸ್ತಿ" ದೊರೆತಿರುವುದಕ್ಕೆ ಸ್ಕೂಲ್ ಆಫ್ ಆರ್ಟದಿಂದ ಅಭಿನಂದನಾ ಸಮಾರಂಭವನ್ನು ಮಾಡಲಾಯಿತು ಇನ್ನೊರ್ವ ಹಳೆಯ ವಿದ್ಯಾರ್ಥಿ ಶ್ರೀ ಈಶ್ವರ ಮುರುಗೋಡ ಅವರು ಕಲೆಯಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಹಿಂದಿರುಗಿರುವುದಕ್ಕೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸ್ಕೂಲ್ ಆಫ್ ಆರ್ಟ ಸುವರ್ಣ ಮಹೊತ್ಸವ

೧೯೮೫ ರಲ್ಲಿ ಸ್ಕೂಲ್ ಆಫ್ ಆರ್ಟವು ೫೦ ವರ್ಷಗಳನ್ನು ಪೂರೈಸಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿದ್ದು ಕಿಟಲ್ ಕಾಲೇಜ್‌ನಲ್ಲಿಯ ಟ್ಯಾಗೂರ್ ಹಾಲ್‌ನಲ್ಲಿ ಕಲಾವಿದ ಶ್ರೀ ವ್ಹಿ, ಬಿ. ಹಿರೇಗೌಡರ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಸೋಮಶೇಖರ ಸಾಲಿಯವರ ಭಾವಚಿತ್ರದ ಪ್ರಾತ್ಯಕ್ಷಿಕೆಯನ್ನು ನೀಡಿದರು. ಹುಬ್ಬಳ್ಳಿಯ ಮೂರು ಸಾವಿರಮಠದ ಶ್ರೀ ಮನ್ನಿರಂಜನ ಗಂಗಾಧರ ರಾಜಯೋಗೇಂದ್ರ ಮಹಾಸ್ವಾಮಿಗಳು ಜ್ಯೋತಿಯನ್ನು ಬೆಳಗಿಸಿ ಉದ್ಘಾಟನಾ ಭಾಷಣವನ್ನು ಮಾಡಿದರು. ಜೆ. ಎಸ್. ಎಸ್. ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎನ್.ವಜ್ರಕುಮಾರ ಅವರು "ಸ್ಮರಣ ಸಂಚಿಕೆಯನ್ನು" ಬಿಡುಗಡೆ ಮಾಡಿದರು. ಅತಿಥಿಗಳಾಗಿ ಆಗಮಿಸಿದ ರಾಜ್ಯ ಸರಕಾರದ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾದ ಶ್ರೀ ಬಿ.ಆರ್.ಯಾವಗಲ್ ಅವರು ಮಾತನಾಡುತ್ತ ಕಲಾಶಾಲೆಯ ಬೆಳವಣಿಗೆಯನ್ನು ಕುರಿತು ಶ್ಲಾಘಿಸಿದರು ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಶ್ರೀ ಸೋಮಶೇಖರ ಸಾಲಿಯವರು ಸಭೇಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಈ ಸಂಸ್ಥೆಯಲ್ಲಿ ಅಧ್ಯಯನ ಮಾಡಿದವರು ದೇಶ ವಿದೇಶಗಳಲ್ಲಿರುವ ಕಲೆಯ ಕುರಿತು ವಿಶ್ವವಿದ್ಯಾಲಯ ಮಟ್ಟದ ಅಭ್ಯಾಸ ಕ್ರಮದಲ್ಲಿಯೇ ಸೇರ್ಪಡೆಗೊಳ್ಳಬೇಕು. ಹಂಪೆಯಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆಯಾಗುವುದು ಅಗತ್ಯವೆಂದು ನುಡಿದರು. ಆರ್ಟಗ್ಯಾಲರಿ ಹಾಗೂ ಆರ್ಟ ಸಂಶೋಧನಾ ಕೇಂದ್ರವಾಗಬೇಕು ಎಂದರು - ಸ್ಕೂಲ್ ಆಫ್ ಆರ್ಟ್ ಸಂಸ್ಥಾಪಕರಾದ ಶ್ರೀ ಡಿ.ವ್ಹಿ.ಹಾಲಭಾವಿಯವರು ಇದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸುವರ್ಣ ಮಹೋತ್ಸವದ ಅಂಗವಾಗಿ "ವಿಚಾರ ಸಂಕಿರಣ"ವನ್ನು ಏರ್ಪಡಿಸಿದ್ದು, ಉಪನ್ಯಾಸಕರಾಗಿ ವಿಜಯ ಮಹಾಂತೇಶ ಲಲಿತಕಲಾ ಮಂದಿರ ಹುಬ್ಬಳ್ಳಿಯ ಪ್ರಾಚಾರ್ಯರಾದ ಶ್ರೀ ಪಿ.ಎಸ್. ಹಿರೇಮಠ ಅವರು ಮತ್ತು ಉಪ್ಪಿನ ಬೆಟಗೇರಿ ಕಾಲೇಜಿನ ಉಪನ್ಯಾಸಕರಾದ ಡಾ.ಎಸ್.ಸಿ.ಪಾಟೀಲ ಹಾಗೂ ಚಿತ್ರಕಲಾ ಶಿಕ್ಷಕರಾದ ಶ್ರೀ ಎಂ.ಜಿ.ವಾಚೇದಮಠ ಅವರು ಉಪನ್ಯಾಸ ಮಂಡಿಸಿದರು. ಅತಿಥಿಗಳಾಗಿ ಶ್ರೀ ಸೋಮಶೇಖರ ಸಾಲಿ ಅವರು ಭಾಗವಹಿಸಿದ್ದು, ಅಧ್ಯಕ್ಷತೆಯನ್ನು ಶಾಲಾ ಸಂಸ್ಥಾಪಕರಾದ ಶ್ರೀ ಡಿ.ವ್ಹಿ. ಹಾಲಭಾವಿ ಅವರು ವಹಿಸಿಕೊಂಡಿದ್ದರು. ತದ ನಂತರ ಶ್ರೀ ಡಿ.ವ್ಹಿ. ಹಾಲಭಾವಿಯವರು ಬರೆದ "ಸಿಲೋನ ಸಂದರ್ಶನ" ಎಂಬ ಗ್ರಂಥದ ಬಿಡುಗಡೆಯನ್ನು ಗದುಗಿನ ಪೂಜ್ಯಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ನೇರವೇರಿಸಿದರು. ಕೊನೆಯಲ್ಲಿ ಶಾಲೆಯ ವಿದ್ಯಾರ್ಥಿಗಳು ಮನರಂಜನೆಯ ಕಾರ್ಯಕ್ರಮವನ್ನು ಹಮ್ಮಿಕೊಂಡರು ಹೀಗೆ ಸುಮಾರು ಎರಡ್ಮೂರು ದಿನಗಳವರೆಗೆ ಅದ್ದೂರಿಯಾಗಿ ಎಡಬಿಡದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ನಿರಂತರವಾಗಿ ನಡೆಯುವ ಕಲಾಚಟುವಟಿಕೆಯನ್ನು ಗಮನಿಸುತ್ತಿರುವ ಸಾರ್ವಜನಿಕರಿಂದ ಸಹಜವಾಗಿಯೇ ಕಲಾಶಾಲೆಯ ಜನತೆಯನ್ನು ಹೊಂದುತ್ತಾ ಇರುವದರಿಂದಾಗಿ ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಾ ಬಂದಿತು. ಇದರಿಂದಾಗಿ ೧೯೮೬ ರಲ್ಲಿ ಮತ್ತೆ ಬೋಧಕ ಸಿಬ್ಬಂದಿಯನ್ನು ತುಂಬುವುದು ಅನಿವಾರ್ಯವಾಯಿತು. ಈ ಭಾರಿ ಅಧಿಕೃತವಾಗಿ ನಾಲ್ಕು ಜನ ಉಪನ್ಯಾಸಕರನ್ನು ೩೦/೧೦/೧೯೮೬ ರಂದು ತುಂಬಿಕೊಳ್ಳಲಾಯಿತು. ಈ ನಾಲ್ಕು ಜನ ಉಪನ್ಯಾಸಕರನ್ನು ಸರಕಾರವು ಅನುಮತಿ ನೀಡಿ ಅನುಮೋದನೆಯನ್ನು ಕೊಟ್ಟಿತು. ೧೯೯೦ ರಲ್ಲಿ "ಸ್ಕೂಲ್ ಆಫ್ ಆರ್ಟವು ಖಾಯಂ ಮನ್ನಣೆಯನ್ನು" ಸರಕಾರದಿಂದ ಹೊಂದಿತ್ತು. ೧೯೯೧ ರಲ್ಲಿ ರಾಜ್ಯದ ಕಲಾಶಾಲೆಗಳಿಗೆ ಸರ್ಕಾರವು ಈಗಾಗಲೇ ನೀಡುತ್ತಿರುವ ೮೦% ರಷ್ಟು ಅನುದಾನವನ್ನು ಶೇಕಡಾ ೧೦೦ ಕ್ಕೆ ೧೦೦ ರಷ್ಟು ಮಾಡಲು ಆದೇಶ ಹೊರಡಿಸಿತು.

"ಸರ್ಕಾರದ ಆದೇಶ ಸಂಖ್ಯೆ: ಇಡಿ ೯ ಎಂ.ಫಿ.ಎಸ್. ೯೦ ಬೆಂಗಳೂರು, ದಿನಾಂಕ: ೨೭-೦೩-೧೯೯೧ ಈವರೆಗೂ ಅಕಾಡೆಮಿಕ್ ಶೈಲಿಗೆ ಅಂಟಿಕೊಂಡು ರಚನೆಯಾಗುತ್ತಿದ್ದ ಕಲಾಕೃತಿಗಳು ಹೊಸ ಸಿಬ್ಬಂದಿಯಿಂದಾಗಿ ಸಮಕಾಲೀನ ಕಲೆಯತ್ತ ಕಲಾಶಾಲೆಯು ಕಾಲಿಡಲು ಪ್ರಾರಂಭಿಸಿತು. ಪ್ರಾರಂಭಿಕ ಹಂತದಲ್ಲಿ ಎರಡು ತೊಡಕುಗಳನ್ನು ಬೋದಕ ಸಿಬ್ಬಂದಿಯು ಅನುಭವಿಸಬೇಕಾಯಿತು. ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿಸಿರುವುದರಿಂದ ಗ್ರ್ಯಾಂಟ್ ಇನ್ ಏಡ್ ಕೋಡ್ ಆದರಿಸಿ ವಿದ್ಯಾರ್ಥಿಗಳಿಗುಣವಾಗಿ ಸಿಬ್ಬಂದಿಯನ್ನು ತುಂಬಿಕೊಳ್ಳಲು ಸರಕಾರದ ಅನುಮತಿಯನ್ನು ಪಡೆದು ಮತ್ತೆ ೪ ಜನ ಉಪನ್ಯಾಸಕರನ್ನು ಒಬ್ಬರು ಕರುಣಿಕರನ್ನು ಮತ್ತು ಒಬ್ಬ ಜವಾನನ್ನು ಒಟ್ಟು ೬ ಜನರನ್ನು ೧೯೯೧ ರಲ್ಲಿ ತುಂಬಿಕೊಳ್ಳಲಾಯಿತು. ಆದರೆ ಆರ್ಥಿಕ ಮಿತವ್ಯಯ ಕಾರಣದಿಂದಾಗಿ, ೧೯೯೩ ರವರೆಗೆ ಕಾಯಬೇಕಾಯಿತು. ನಂತರ ಹಾಲಿ ಆರ್ಥಿಕ ಮಿತವ್ಯಯ ಸಡಿಲಿಸಿ, ಸದರಿ ಹುದ್ದೆಗಳನ್ನು ವೇತನ ಅನುದಾನಕ್ಕೆ ಒಳಪಡಿಸಿ, ಸರ್ಕಾರ ಆದೇಶವನ್ನು ಹೊರಡಿಸಿತು. ಸರ್ಕಾರಿ ಆದೇಶ ಸಂಖ್ಯೆ: ಇಡಿ೨೬ ಎಂ.ಪಿ.ಎಸ್.೯೨, ಬೆಂಗಳೂರು ದಿನಾಂಕ: ೧೭ ನೇ ಮಾರ್ಚ್, ೧೯೯೩'.

ಈ ಎಲ್ಲ ೬ ಜನರು ಅನುದಾನ ಸಹಿತವಾಗಿ ದಿನಾಂಕ ೧೭ ನೇ ಮಾರ್ಚ್ ೧೯೯೩ ರಿಂದ ಅನ್ಮೋಮದನೆಯನ್ನು ಹೊಂದಿದ್ದು, ಕಲಾಶಾಲೆಯು ಮತ್ತಷ್ಟು ಚೇತನಗೊಂಡಿತು. ವಿದ್ಯಾರ್ಥಿಗಳು ಪ್ರತಿವರ್ಷ ಶೈಕ್ಷಣಿಕ ಪ್ರವಾಸ ಕೈಗೊಂಡು, ಅಲ್ಲಿ ಸ್ಕೆಚ್ ಮಾಡುವುದು, ಪೇಂಟಿಗ್ ಮಾಡುವುದು. ಪೋಟೋಗ್ರಾಫ್

ಮಾಡುವುದು, ಸುಂದರವಾದ ಭೂದೃಶ್ಯಗಳನ್ನು ಮಾಡುವುದು, ಅಜಂತಾ, ಎಲ್ಲೋರಾ, ಹಂಪೆ, ಬೇಲೂರು, ಹಳೇಬೀಡು, ಬದಾಮಿ, ಐಹೊಳೆ, ಪಟ್ಟದಕಲ್ಲುಗಳಂತಹ ಸುಂದರವಾದ ಸ್ಥಳಗಳಿಗೆ ಸಂದರ್ಶನ ನೀಡಿರುವರು ಖ್ಯಾತ ಕಲಾವಿದರಿಂದ ಕಲೆಯ ಪ್ರಾತ್ಯಕ್ಷಿಕೆಯನ್ನು, ಕಲಾತಜ್ಞರಿಂದ ಮತ್ತು ಸಾಹಿತಿಗಳಿಂದ, ವಿಚಾರ ಸಂಕೀರಣವನ್ನು ಕಲೆಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳಿಗೆ ಕಲಾ ಸೌಂದರ್ಯವನ್ನು ನೀಡುವುದರಿಂದ ನೈಸರ್ಗಿಕವಾಗಿಯೇ ಕಲೆಯು ಬೆಳವಣಿಗೆ ಆಗಿರುವುದು ಕಂಡುಬರುತ್ತದೆ. ಇದರಿಂದಾಗಿ ಕಲಾವಿದ್ಯಾರ್ಥಿಗಳಿಗೆ ಮತ್ತು ಕಲಾಶಾಲೆಗೆ ಸಾಂಸ್ಕೃತಿಕ ನಗರದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವುದನ್ನು ಕಾಣುತ್ತೇವೆ.

Movie films ಹಾಗೂ ಕಲಾಶಾಲೆಯ ಕಲಾಚಟುವಟಿಕೆಗಳನ್ನು Recording ಮಾಡಿಕೊಳ್ಳುವುದು ಕಲಾಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಆಗಾಗ ಅವುಗಳನ್ನು ಸಹಾಯಕಾರಿಯಾಗುವುದು. ಇದರಿಂದಾಗಿ ಕಲಾಶಿಕ್ಷಣವನ್ನು ನಮ್ಮ ದೇಶದಲ್ಲಿ ಸಾರ್ವತ್ರಿಕವಾಗಿ ಬೆಳೆಸಬೇಕು ಎಂಬ ಹೆಬ್ಬಯಕೆಯೊಂದಿಗೆ ಕಲಾಶಾಲೆಯನ್ನು ಕಟ್ಟಿ ಬೆಳೆಸುತ್ತಿರುವರು. ಈ ಅವಧಿಯಲ್ಲಿ ಕಲಾಶಾಲೆಯು ಅತ್ಯಂತ ಉನ್ನತ ಮಟ್ಟಕೇರಿತು ಎಂಬುದು ತಿಳಿದುಬರುತ್ತದೆ.

ಉತ್ಸಾಹ ಬೋಧಕ ಸಿಬ್ಬಂದಿಯು ಸಮಕಾಲೀನ ಕಲೆಯ ಕುರಿತು ಗಂಭೀರವಾಗಿ ಚಿಂತಿಸುತ್ತ ಖ್ಯಾತ ಕಲಾವಿದರನ್ನು ಸಾಹಿತ್ಯಕ್ಷೇತ್ರದ ದಿಗ್ಗಜರನ್ನು ಕಲಾಮಂದಿರಕ್ಕೆ ಆಮಂತ್ರಿಸಿ "ಸಮಕಾಲೀನ ವಿಷಯವಸ್ತು, ತಂತ್ರಗಳ ಕುರಿತು ಚರ್ಚಿಸುತ್ತ ಸೃಜನಾತ್ಮಕವಾಗಿಯೇ ಕಲಾಶಾಲೆಯನ್ನು ಬೆಳೆಸಲು ಇಡೀ ಸಿಬ್ಬಂದಿಯೇ ಪ್ರಾಚಾರ್ಯರೊಂದಿಗೆ ಕೈಜೋಡಿಸಿ ನಿಂತುಕೊಂಡಿತು. ಇದರಿಂದಾಗಿ ಕಲಾಶಾಲೆಯ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಯನ್ನು ಕಲಾಕೃತಿಗಳನ್ನು ರಾಜ್ಯಕೇಂದ್ರ ಮಟ್ಟಗಳವರೆಗೆ ಸ್ಪರ್ಧೆಗೆ ಕಳುಹಿಸಿ ಪ್ರಶಸ್ತಿಯನ್ನು ಬಾಚಿಕೊಳ್ಳುತ್ತಿರುವುದು. ಮತ್ತಷ್ಟು ಸ್ಕೂಲ್ ಆಫ್ ಆರ್ಟ್‌ನ ಮೆರುಗನ್ನು ಹೆಚ್ಚಿಸಿತು. ಈ ಜನತೆಯಿಂದಾಗಿ, ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿತು. ಕಲಾಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ನೂರನ್ನು ದಾಟಿತು. ಎರಡನೂರಿಂದ ಮೂರುನೂರು ವಿದ್ಯಾರ್ಥಿಗಳ ಹೆಸರನ್ನು ನೊಂದಾಯಿಸಲು ಪ್ರವೇಶಕ್ಕೆ ಅರ್ಜಿಯನ್ನು ಸಲ್ಲಿಸಿ ರಾಜಕಾರಣಿಗಳ, ಸಾಹಿತಿಗಳ, ಹಿರಿಯರ ಪರಿಚಯ ಪತ್ರದೊಂದಿಗೆ ಶಾಲೆಯ ಪ್ರವೇಶಕ್ಕಾಗಿ ಕಾಯುವ ಸಂದರ್ಭ ಬಂದಿತು. ಅದರಲ್ಲಿ ಪ್ರಥಮ ವರ್ಷಕ್ಕೆ ೪೦ ವಿದ್ಯಾರ್ಥಿಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಾಗುತ್ತಿತ್ತು. ಉಳಿದವರು ನಿರಾಶರಾಗಿ ಬೇರೆ ಕಲಾಶಾಲೆಗಳತ್ತ ಹೊರಡುವ ಸ್ಥಿತಿ ನಿರ್ಮಾಣವಾಯಿತು. ಧಾರವಾಡ ನಗರದಲ್ಲಿಯೇ ೪ ಡಿಪ್ಲೋಮಾ ಕಲಾ ಶಾಲೆಗಳಿವೆ. ೨ ಕಲಾ ಮಹಾವಿದ್ಯಾಲಯಗಳನ್ನು ಹೊಂದಿದ್ದರೂ ಕೂಡಾ "ಹಾಲಭಾವಿ ಸ್ಕೂಲ್ ಆಫ್ ಆರ್ಟ", ತನ್ನದೇ ಆದ ವೈಶಿಷ್ಟ್ಯತೆಯಿಂದ ಮಿನುಗುತ್ತಿತ್ತು. ರಾಜ್ಯದಲ್ಲಿ ಒಟ್ಟು ೪೦ ಕಲಾ ಶಾಲೆಗಳು ಹುಟ್ಟಿಕೊಂಡಿದ್ದು ಉತ್ತರ ಕರ್ನಾಟಕದಲ್ಲಿಯೇ ೫೨ ಕಲಾಶಾಲೆಗಳಿವೆ. ಅದರಲ್ಲಿ ೧೪ ಅನುದಾನಿತ ಶಾಲೆಗಳನ್ನು ರಾಜ್ಯದ ಕಲಾಶಾಖೆಗಳಲ್ಲಿಯೇ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಕಲಾಶಾಲೆಯ ಬೆಳವಣಿಗೆಯನ್ನು ಅವಲೋಕಿಸಿದರೆ "ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್" ಧ್ರುವತಾರೆಯ ಹಾಗೆ ತನ್ನದೇ ಆದ ವಿಶಿಷ್ಟ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು ತಿಳಿದು ಬರುತ್ತಿದೆ.

"ಸ್ಕೂಲ್ ಆಫ್ ಆರ್ಟ ವಜ್ರಮಹೋತ್ಸವ"

೧೯೯೫ರಲ್ಲಿ ಸ್ಕೂಲ್ ಆಫ್ ಆರ್ಟವು ೬೦ ಸಂವತ್ಸರಗಳನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿಕೊಂಡು

ವಜ್ರಮಹೋತ್ಸವವನ್ನು ಆಚರಿಸಿಕೊಂಡಿತು. ಫೈನ್ ಆರ್ಟ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ ಅವರು ಸ್ಕೂಲ್ ಆಫ್ ಆರ್ಟ ಪ್ರಾಚಾರ್ಯರು ಹಾಗೂ ಸಿಬ್ಬಂದಿಯ ಸಭೆಯನ್ನು ಮಾಡಿ ವರ್ಷವಿಡೀ ವಜ್ರಮಹೋತ್ಸವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ನಿರ್ಧರಿಸಲಾಯಿತು. ಅಂತೆಯೇ ವಜ್ರಮಹೋತ್ಸವದ ಮೊದಲನೇಯ ಕಾರ್ಯಕ್ರಮವು "ಜಲವರ್ಣ ಮತ್ತು ರೇಖಾಚಿತ್ರ" ಶಿಬಿರವು ಅಗಸ್ಟ್ ೩೧ ರಿಂದ ಸೆಪ್ಟಂಬರ ೩ರವರೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡದಲ್ಲಿ ನೆರೆಯಿತು.

ಶಿಬಿರದ ನಿರ್ದೇಶಕರಾಗಿ, ದಾವಣಗೇರೆಯ ಸರಕಾರಿ ಕಲಾಶಾಲೆಯ ಪ್ರಾಚಾರ್ಯರಾದ ಶ್ರೀ ವ್ಹಿ.ಬಿ. ಹಿರೇಗೌಡರ ಅವರು ವಹಿಸಿಕೊಂಡಿದ್ದರು. ಶಿಬಿರದ ಉದ್ಘಾಟನೆಯನ್ನು ಶ್ರೀ ಎಚ್. ಆರ್. ರಘುನಾಥ ಭಟ್, ಮುಖ್ಯಸ್ಥರು, ಪ್ರಾಚೀನ ಭಾರತೀಯ ಇತಿಹಾಸ ವಿಭಾಗ, ಕ.ವಿ.ವಿ. ಧಾರವಾಡ ಇವರಿಂದ ನೆರವೇರಿತು. ಸೆಪ್ಟೆಂಬರ್ ೧ರಂದು "ಇಂಪ್ರೆಷನಿಷ್ಠ ಕಲಾವಿದರ ಕಲಾಕೃತಿಗಳ ಸ್ಲೈಡ್‌ಷೋ ಮತ್ತು ಉಪನ್ಯಾಸ"ವನ್ನು ಹುಬ್ಬಳ್ಳಿಯ ಬಿ.ವ್ಹಿ.ಬಿ. ಪಾಲಿಟೆಕ್ನಿಕ್ ಕಾಲೇಜದ ಇಂಟೀರಿಯರ್ ಡಿಜೈನ್ ವಿಭಾಗದ ಮುಖ್ಯಸ್ಥರಾದ, ಶ್ರೀಮತಿ ರೇಖಾ ಶೆಟ್ಟರ, ಬಿ.ಎಸ್.ಸಿ. ಟೆಕ್ (ಯು.ಕೆ.) ಅವರು ತುಂಬಾ ಅರ್ಥಪೂರ್ಣವಾಗಿ ನಡೆಸಿಕೊಟ್ಟರು.

ಇನ್ನೋರ್ವ ಉಪನ್ಯಾಸಕರಾಗಿ ಆಗಮಿಸಿದ ಡಾ. ಎಸ್.ಸಿ. ಪಾಟೀಲ ಉಪ್ಪಿನ ಬೆಟಗೇರಿ ಕಾಲೇಜಿನ ಉಪನ್ಯಾಸಕರು "ಜಾನಪದ ಚಿತ್ರಕಲೆಯ" ಕುರಿತು ಉಪನ್ಯಾಸ ಮಂಡಿಸಿದರು. ಶಿಬಿರದ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಬೆಲ್ಲದ ಅವರು ವಹಿಸಿಕೊಂಡಿದ್ದರು. ಅತಿಥಿಗಳಾಗಿ ಡಾ. ನಿತಿನ್‌ಚಂದ್ರ ಹತ್ತಿಕಾಳ ಅವರು ಹಾಗೂ ನ್ಯಾಯವಾದಿಗಳಾದ ಶ್ರೀ ಮಲ್ಲಿಕಾರ್ಜುನ ನಡಕಟ್ಟಿಯವರು ಆಗಮಿಸಿದ್ದರು. ಶಿಬಿರದಲ್ಲಿ ರಚನೆಗೊಂಡ ಕಲಾಕೃತಿಗಳ ಪ್ರದರ್ಶನವನ್ನು ಸೆಪ್ಟೆಂಬರ್ ೭ರವರೆಗೆ ಪ್ರದರ್ಶನಕ್ಕೆ ಇಡಲಾಗಿತ್ತು. ನಗರದ ಕಲಾವಿದರಿಗೆ ಕಲಾ ವಿದ್ಯಾರ್ಥಿಗಳಿಗೆ ಮತ್ತು ಕಲಾಭಿಮಾನಿಗಳಿಗೆ ಸಂತಸವನ್ನುಂಟು ಮಾಡಿತು. ಈ ಶಿಬಿರದ ಸಂಚಾಲಕರಾಗಿ ಶ್ರೀಮತಿ ಗಾಯತ್ರಿ ಗೌಡರ ಅವರು ಕಾರ್ಯನಿರ್ವಹಿಸಿದರು.

ವಜ್ರಮಹೋತ್ಸವದ ಎರಡನೇ ಕಾರ್ಯಕ್ರಮ "ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು" ಎಂಬ ವಿಷಯವಾಗಿ ವಿಚಾರ ಸಂಕೀರಣ ಸಪ್ಟೆಂಬರ್ ೨೯ರಿಂದ ಅಕ್ಟೋಬರ್ ೧ರವರೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಈ ವಿಚಾರ ಸಂಕೀರಣದ ಉದ್ಘಾಟನೆಯನ್ನು ಲೋಕಸಭೆಯ ಉಪಾಧ್ಯಕ್ಷರಾಗಿರುವ ಮಾನ್ಯಶ್ರೀ ಎಸ್.ಮಲ್ಲಿಕಾರ್ಜುನಯ್ಯ, ದೆಹಲಿ ಇವರು ನೆರವೇರಿಸಿದರು. ಅತಿಥಿಗಳಾಗಿ ಸಾಹಿತಿ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಎಸ್. ರಾಮೇಗೌಡ ಅವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಸಂಯೋಜಕರಾಗಿ, ಸಂಚಾಲಕರಾಗಿ ಡಾ. ಎಸ್.ಸಿ. ಪಾಟೀಲ ಅವರು ಕಾರ್ಯನಿರ್ವಹಿಸಿದರು. ಚಿತ್ರಕಲೆಗೆ ಸಂಬಂಧಪಟ್ಟ ವಿವಿಧ ವಿಷಯಗಳ ಉಪನ್ಯಾಸಗಳನ್ನು ಆಯಾ ವಿಷಯಗಳ ಪರಿಣಿತರಿಂದ ಮಂಡಿಸಲ್ಪಟ್ಟಿತು.

೧. "ಚಿತ್ರಕಲೆ ಮತ್ತು ವಾಣಿಜ್ಯೋದ್ಯಮ" ೨. "ಚಿತ್ರಕಲೆ ಮತ್ತು ಸಂಗೀತ" ೩. ಚಿತ್ರಕಲೆ ಮತ್ತು ನೃತ್ಯ" ೪. "ಚಿತ್ರಕಲೆ ಮತ್ತು ಶಿಲ್ಪ" ೫. "ಚಿತ್ರಕಲೆ ಮತ್ತು ಸಮಾಜ" ೬. "ಚಿತ್ರಕಲೆ ಮತ್ತು ವಿಮರ್ಶೆ" ೭. "ಚಿತ್ರಕಲೆ ಮತ್ತು ಮನಃಶಾಸ್ತ್ರ" ೮. "ಚಿತ್ರಕಲೆ ಮತ್ತು ಶಾಸನಗಳು" ೯. "ಚಿತ್ರಕಲೆ ಮತ್ತು ಸಮಕಾಲೀನತೆ" ೧೦. "ಚಿತ್ರಕಲೆ ಮತ್ತು ರಂಗಭೂಮಿ" ೧೧. "ಚಿತ್ರಕಲ ಮತ್ತು ಶಿಕ್ಷಣ" ೧೨. "ಚಿತ್ರಕಲೆ ಮತ್ತು ಇತಿಹಾಸ" ಈ

ವಿಚಾರ ಸಂಕೀರಣದ ಮುಕ್ತಾಯ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಖ್ಯಾತ ಕವಿ ಚೆನ್ನವೀರ ಕಣವಿಯವರ "ಚಿತ್ರಕಲೆ ಮತ್ತು ಕಾವ್ಯ" ವಿಷಯವಾಗಿ ಮಾತನಾಡಿದರೆ ಇನ್ನೋರ್ವ ಅತಿಥಿ ಖ್ಯಾತ ಸಾಹಿತಿ, ಡಾ. ಗುರುಲಿಂಗ ಕಾಪಸೆ ಅವರು "ಚಿತ್ರಕಲೆ ಹಾಗೂ ಸಾಹಿತ್ಯ" ವಿಷಯದ ಕುರಿತು ಮಾತನಾಡಿದರು. ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಎಸ್.ಎಸ್. ಒಡೆಯರ್ ನಿವೃತ್ತ ಕುಲಪತಿಗಳು, ಕ.ವಿ.ವಿ. ಧಾರವಾಡ ಅವರು "ಕಲೆಯ ಔಚಿತ್ಯ" ದ ಕುರಿತು ಮಾತನಾಡಿದರು. ಈ ಎಲ್ಲ ಉಪನ್ಯಾಸಗಳು ಕಲಾಪ್ರಪಂಚಕ್ಕೆ ಅತ್ಯಂತ ಉಪಯುಕ್ತವಾದವುಗಳಾಗಿದ್ದು, ಅವುಗಳನ್ನು ಎಲ್ಲ ಕಲಾಪ್ರೇಮಿಗಳಿಗೆ ಮುಟ್ಟಿಸಬೇಕೆಂಬ ಸದುದ್ದೇಶದಿಂದ ಈ ಮೇಲಿನ ಎಲ್ಲ ಉಪನ್ಯಾಸಗಳನ್ನು ಕೂಡಿಸಿ, ಪುಸ್ತಕ ರೂಪದಲ್ಲಿ ಪ್ರಕಟಿಸಿ ವಜ್ರಮಹೋತ್ಸವದ ಮುಕ್ತಾಯ ಸಮಾರಂಭದಲ್ಲಿ "ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು" ಎಂಬ ಪುಸ್ತಕ ಬಿಡುಗಡೆಗೊಳಿಸಲಾಯಿತು.

ಡಿಸೆಂಬರ ೨೨ ರಂದು "ಚಿಕ್ಕಮಕ್ಕಳ ಚಿತ್ರಕಲಾ ಸ್ಪರ್ಧೆ" ಏರ್ಪಡಿಸಲಾಗಿತ್ತು. ಸುಮಾರು ೩೦೦ ಕ್ಕೂ ಹೆಚ್ಚು ಮಕ್ಕಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಅತ್ಯುತ್ತಮ ಕಲಾಕೃತಿಗಳಿಗೆ ಬಹುಮಾನವನ್ನು ಕೊಡಲಾಯಿತು. ಈ ಕೃತಿಗಳ ಪ್ರದರ್ಶವನ್ನು ಏರ್ಪಡಿಸಲಾಯಿತು. ಇದರ ನಿರ್ವಹಣೆಯನ್ನು ಶ್ರೀ ಎ.ಪಿ. ಕುಲಕರ್ಣಿ ಮತ್ತು ಶ್ರೀ ಎಂ ಆರ್ ಬಾಳೀಕಾಯಿಯವರು ನಿರ್ವಹಿಸಿದರು. ಡಿಸೆಂಬರ ೨೩ ರಂದು ಸ್ಕೂಲ ಆಫ್ ಆರ್ಟದ ಹಳೆಯ ವಿದ್ಯಾರ್ಥಿಗಳು (ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿಕೊಂಡಿರುವವರಲ್ಲಿ ಕೆಲವರು ಮಾತ್ರ ಅಂದರೆ) ಸುಮಾರು ೨೫ ಜನ ಕಲಾವಿದರನ್ನು ಆಯ್ಕೆ ಮಾಡಿ ಓಲೆಯನ್ನು ಬರೆಯಲಾಗಿತ್ತು. ಅದರಲ್ಲಿ ಸುಮಾರು ೨೦ ಜನ ಕಲಾವಿದರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಶ್ರೀ ವ್ಹಿ. ಬಿ ಹಿರೇಗೌಡರ ದಾವಣಗೇರಿ, ಶ್ರೀ ಭೀಮರಾವ್ ಮುರಗೋಡ, ದೆಹಲಿ, ಶ್ರೀ ಶಂಕರ ಪಾಟೀಲ, ದಾವಣಗೆರೆ, ಶ್ರೀ ಕಾಳಿದಾಸ ಪತ್ತಾರ ಮೈಸೂರು, ಶ್ರೀ ಎಂ. ಆರ್, ಬಾಳೆಕಾಯಿ-ಧಾರವಾಡ, ಶ್ರೀ ಬಿ.ಕೆ. ಹುಬ್ಬಳ್ಳಿ, ಬೆಳಗಾಂವ್. ಶ್ರೀ ಎಂ.ಬಿ ಪಾಟೀಲ, ಬೆಂಗಳೂರು, ಶ್ರೀ ವ್ಹಿ ಎ. ದೇಶಪಾಂಡೆ- ಮೈಸೂರು, ಶ್ರೀ ಆರ್.ಬಿ. ಗರಗ, ಹುಬ್ಬಳ್ಳಿ, ಶ್ರೀ ಫ಼ಿ.ಎಸ್ ಕಡೇಮನಿ, ವಿಜಾಪೂರ, ಶ್ರೀ ಬಿ.ಆರ್. ಕೂರ್ತಿ ದಾವಣಗೇರಿ, ಶ್ರೀಮತಿ ವಿಮಲಾ ಶೀಲವಂತ ದಾಂಡೇಲಿ, ಶ್ರೀ ಮಧು ದೇಸಾಯಿ ಧಾರವಾಡ, ಶ್ರೀ ಎನ್.ಎನ್. ಪತ್ತಾರ ಮಂಗಳೂರು, ಶ್ರೀ ಬಿ. ಮಾರುತಿ ಧಾರವಾಡ, ಕುಮಾರಿ ವಿದ್ಯಾ ಗೋವೆಕರ್ ಕಾರವಾರ, ಕುಮಾರಿ ಜ್ಯೋತಿಸಿಂಗ್ ದಾಂಡೇಲಿ, ಶ್ರೀಮತಿ ತಿಮ್ಮನಗೌಡರ ಧಾರವಾಡ, ಶ್ರೀ ಎಂ.ಎಸ್. ಚೌದರಿ ಧಾರವಾಡ, ಶ್ರೀ ಶಂಕರಗೌಡ ಪಾಟೀಲ ಗದಗ, ಈ ಎಲ್ಲ ಕಲಾವಿದರ ಚಿತ್ರಕಲಾ ಶಿಬಿರವನ್ನು ಪ್ರಖ್ಯಾತ ಕಲಾವಿದ ವಿಜಯ್ ಸಿಂಧೂರ ಅವರು ಉದ್ಘಾಟಿಸಿದರು. ಶಿಕ್ಷಣ ತಜ್ಞರಾದ ಶ್ರೀ ಶಿವಶಂಕರ ಹಿರೇಮಠ ಅವರು ಅತಿಥಿಗಳಾಗಿ ಭಾಗವಹಿಸಿದ್ದರು.

ಕಲಾಶಿಬಿರದ ಮುಕ್ತಾಯ ಸಮಾರಂಭಕ್ಕೆ ಅತಿಥಿಗಳಾಗಿ ಶ್ರೀ ಬಸವರಾಜ್ ಹೊರಟ್ಟಿಯವರು ಭಾಗವಹಿಸಿದ್ದು. ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಬೆಲ್ಲದ ಅವರು ವಹಿಸಿದ್ದರು. ಈ ಶಿಬಿರದ ಸಂಚಾಲಕರಾಗಿ ಶ್ರೀಮತಿ ರೇಣುಕಾ ಮಾರ್ಕಂಡೇ ಅವರು ನಿರ್ವಹಿಸಿದರು. ಕಲಾವಿದರು ಶಿಬಿರದಲ್ಲಿ ರಚಿಸಿದ ಕಲಾಕೃತಿಗಳ ಪ್ರದರ್ಶನವನ್ನು, ರಾಜ್ಯ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಅವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಶ್ರೀ ಆನಂದ್ ದೇವ್‌ರವರು ವಹಿಸಿದ್ದರು.

ವಜ್ರಮಹೋತ್ಸವದ ಕಳಸ ಪ್ರಾಯದಂತಿರುವ ಕಾರ್ಯಕ್ರಮ ಸಮಾರೋಪ ಸಮಾರಂಭವು ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಾಡಿದ ಪೂಜ್ಯ ಶ್ರೀ ಸಿದ್ಧರಾಮ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಜರುಗಿದವು. ಈ ಎಲ್ಲ ಕಾರ್ಯಕ್ರಮಕ್ಕೆ ಕೇಂದ್ರ ಬಿಂದುವಾಗಿರುವ ವಯೋವೃದ್ಧ ಶ್ರೀ ಡಿ.ವಿ. ಹಾಲಭಾವಿಯವರಿಗೆ ಸನ್ಮಾನದ ನಂತರ "ಹಾಲಭಾವಿ ಸ್ಕೂಲ ಆಫ್ ಆರ್ಟ"ನ ೬೦ ನೇ ವರ್ಷದ ಸವಿನೆನಪಿಗಾಗಿ "ಚಿತ್ರಾಕ್ಷಿ" ಸ್ಮರಣ ಸಂಚಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ಸಚಿವೆ ಶ್ರೀಮತಿ ಬಿ.ಟಿ ಲಲಿತಾ ನಾಯಕ ಅವರಿಂದ ಬಿಡುಗಡೆಗೊಳಿಸಲಾಯಿತು. ಧಾರವಾಡದ ಹಿರಿಯ ನ್ಯಾಯವಾದಿ ಶ್ರೀ ಜಿ. ಎಂ ಪಾಟೀಲ ಅವರು "ಚಿತ್ರಕಲೆ ಮತ್ತು ಪೂರಕ್ಷೇತ್ರಗಳು" ಗ್ರಂಥ ಬಿಡುಗಡೆ ಮಾಡಿದರು. ಮುಖ್ಯ ಅತಿಥಿಗಳಾಗಿ ಕಲಾಗುರು ಶ್ರೀ ಆರ್.ಎಂ. ಹಡಪದ ಅವರು ಹಾಗೂ ಚಿತ್ರನಟ ಶ್ರೀ ಸುರೇಶ ಹೆಬ್ಳಿಕರ್ ಆಗಮಿಸಿದ್ದರು. ಗುಲಬರ್ಗಾದ ಕಲಾವಿದ ಶ್ರೀ ವಿ.ಜಿ.ಅಂದಾನಿಯವರು ಭಾಗವಹಿಸಿದ್ದು. ಫೈನ್ ಆರ್ಟ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ ಜನಪ್ರೀಯ ಶಾಸಕರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಎಲ್ಲ ಕಾರ್ಯಕ್ರಮಗಳು ಮುಗಿದ ನಂತರ, ಶಾಲೆಯ ವಿದ್ಯಾರ್ಥಿಗಳಿಂದ ವಿವಿಧ ರೀತಿಯ ಮನರಂಜನಾ ಕಾರ್ಯಕ್ರಮಗಳು ಎಲ್ಲರ ಮೆಚ್ಚುಗೆಯನ್ನು ಪಡೆದವು. ಈ ಕಾರ್ಯಕ್ರಮದ ನಿರ್ವಹಣೆಯನ್ನು ಉಪನ್ಯಾಸಕ ಶ್ರೀ ಬಿ.ಎಂ ಪಾಟೀಲ ಅವರು ವಹಿಸಿದ್ದರು.

ವರ್ಷವಿಡಿ ಇಷ್ಟೆಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ, ಅರ್ಥ ಪೂರ್ಣವಾಗಿ, ವಿಜ್ರಂಭಣೆಯಿಂದ ನೆರೆವೇರಲು ಕಾರಣ ಸ್ಕೂಲ ಆಫ್ ಆರ್ಟ ಆಡಳಿತ ಮಂಡಳಿ, ವಿಶೇಷವಾಗಿ ಸ್ಕೂಲ ಆಫ್ ಆರ್ಟ ವಜ್ರ ಮಹೋತ್ಸವ ಕಮೀಟಿ ಹಾಗೂ ಸ್ಕೂಲ ಆಫ್ ಆರ್ಟನ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿವರ್ಗ ಶಾಲಾ ಸಂಸ್ಥಾಪಕರಾದ ಶ್ರೀ ಡಿ.ವ್ಹಿ ಹಾಲಭಾವಿಯವರ ಮಾರ್ಗದರ್ಶನದಲ್ಲಿ ಅತ್ಯಂತ ಯಶಸ್ವಿಯಾದ ವಜ್ರಮಹೋತ್ಸವದ ಕಾರ್ಯಕ್ರಮಗಳು ಎಲ್ಲರಿಗೂ ಮೇಲಕು ಹಾಕುವಂತೆ ಮಾಡಿದವು. ಪ್ರಾರಂಭದಲ್ಲಿ ಕಲಾಮಹಾವಿದ್ಯಾಲಯ ಹಲವಾರು ತೊಂದರೆಗಳನ್ನು ಎದುರಿಸಿತು. ಕಲಾಸೇವೆಯು ತಮ್ಮ ಸುಧೀರ್ಘ ಅವಧಿಯ ಬಾಳಿನಲ್ಲಿ ಶ್ರೀ ದಾನಪ್ಪ ಹಾಲಭಾವಿಯವರು ನಿರಾಶೆಗೆ ಕಾರಣವಾಗುವ ಹಲವು ಸನ್ನಿವೇಶಗಳನ್ನು ಎದುರಿಸಿದ್ದಾರೆ. ಆದರೆ ಅವರು ತಮ್ಮ ನಿಷ್ಠೆ, ಸಹನೆ, ಜಿಗುಟುತನಗಳಿಂದ ಕಲಾಸೇವೆಯನ್ನು ಧೀರತನದಿಂದಲೇ ಮುಂದುವರೆಸುತ್ತ ಸುಮಾರು ೪೦ ವರ್ಷಗಳ ಕಾಲಶಾಲೆಯ ಸಂಸ್ಥಾಪಕರಾಗಿ, ಪ್ರಾಚಾರ್ಯರಾಗಿ ಸಮಸ್ಯೆಗಳನ್ನು ಎದುರಿಸಿದರೆ, ಸುಮಾರು ೨೮ ವರ್ಷಗಳವರೆಗೆ ಕಲಾಶಾಲೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ, ಅವರ ಅಂತಿಮ ದಿನಗಳವರೆಗೂ ಸರ್ವತೋಮುಖವಾಗಿ ಬೆಳೆದು ಬಂದಿತು.

ಶ್ರೀ ಸುರೇಶ ಹಾಲಭಾವಿಯವರು ೧೦ ವರುಷ ಉಪನ್ಯಾಸಕರಾಗಿ ೨೮ ವರ್ಷ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದು, ಪ್ರಾರಂಭದ ದಿನಗಳಲ್ಲಿ ಶಾಲೆಯನ್ನು ನಡೆಸಿಕೊಂಡು ಹೋಗುವುದು ತೊಂದರೆಯಾಗಿ ಕಂಡುಬಂದರೂ ತಂದೆಯವರ ಮಾರ್ಗದರ್ಶನ ಇವರ ತಾಳ್ಮೆಯ ಬೆಳವಣಿಗೆಗೆ ಭದ್ರ ಬುನಾದಿಯಾಯಿತು. ಇವರ ಅವಧಿಯಲ್ಲಿ ಅಂಥರೆ ೧೯೯೦ ರಿಂದ ೨೦೦೦ ರವರೆಗೆ ಕಲಾಶಾಲೆ ಉನ್ನತ ಮಟ್ಟವನ್ನು ತಲುಪಿತು. ತದನಂತರ ಶ್ರೀ ಸುರೇಶ ಹಾಲಭಾವಿಯವರ ಸೇವೆಯ ಅಂತಿಮ ದಿನಗಳಲ್ಲಿ ಕಲಾಶಾಲೆಗೆ ಮತ್ತೆ ತೊಂದರೆಗಳು ಪ್ರಾರಂಭವಾದವು.

* ೧೯೯೯ರಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು (ಅನುದಾನಿತ ಶಾಲೆಗಳಲ್ಲಿ) ತುಂಬದೇ ಇರುವಂತೆ ಆದೇಶವನ್ನು ಹೊರಡಿಸಿದ್ದು.

* ೨೦೦೧ ರಲ್ಲಿ ನೂತನ ಪಠ್ಯಕ್ರಮ ಜಾರಿಗೆ ಬಂದು ಚಿತ್ರಕಲಾ ತರಬೇತಿ ಕೇಂದ್ರಗಳನ್ನು ಚಿತ್ರಕಲಾ ಮಹಾವಿದ್ಯಾಲಯಗಳಿಂದ ಬೇರ್ಪಡಿಸಿದ್ದು.

* ೨೦೦೬ ರಿಂದ ಹಂಪೆಯ ಕನ್ನಡ ವಿಶ್ವವಿದ್ಯಾಲಯದಿಂದ ರಾಜ್ಯದ ಚಿತ್ರಕಲಾ ಶಾಲೆಗಳನ್ನು ಬೇರ್ಪಡಿಸುತ್ತಿದ್ದುದು.

ಸಂಸ್ಥೆಗೆ ಹಣಕಾಸಿನ ನೆರವು

ಮೈಸೂರು ಸರಕಾರವು ಕಲಾಸಂಸ್ಥೆಗೆ ಒದಗಿಸುತ್ತಿದ್ದ ಆರ್ಥಿಕ ಸಹಾಯವು ತುಂಬಾ ಕಡಿಮೆಯಾಗಿತ್ತು. ಸರಕಾರ ನೀಡುವಂತಹ ಅನುದಾನ ಸಹಾಯ ರೂಪದಲ್ಲಿ ರೂಪದರ್ಶಿಗಳಿಗೆ ಕೊಡುತ್ತಿರುವ ವ್ಯಕ್ತಿಗಳಿಗೂ ಆ ಹಣ ಸಾಕಾಗುತ್ತಿರಲಿಲ್ಲ, ಆಡಳಿತದ ಕ್ರಿಯಾಶೀಲತೆ ಹಣಕಾಸಿನ ವ್ಯವಹಾರದಲ್ಲಿ ಬಲ್ಲಿದವರಾದ ಡಿ.ವಿ.ಹಾಲಭಾವಿಯವರು ಸರಕಾರಕ್ಕೆ ಮತ್ತು ಶಿಕ್ಷಣ ಇಲಾಖೆಗೆ ಅರ್ಜಿಸಲ್ಲಿಸಿದರು. ಶಿಕ್ಷಣ ಅಧಿಕಾರಿಗಳು ಕಲಾಶಿಕ್ಷಣ ಸಂಸ್ಥೆಯನ್ನು ಮತ್ತು ಮಕ್ಕಳ ಫಲಿತಾಂಶ, ಶಿಕ್ಷಣ ಗುಣಮಟ್ಟವನ್ನು ಪರಿಶೀಲಿಸಿ ಸಂತೃಪ್ತಿರಾಗಿ ಶಿಕ್ಷಣ ಇಲಾಖೆಯವರು ಕಲಾಸಂಸ್ಥೆಗೆ ವಾರ್ಷಿಕ ೧೫೦ ರೂ ಗಳ ಧನಸಹಾಯವನ್ನು ಮಂಜೂರು ಮಾಡಿದರು. ಅನುದಾನವು ವಿಶೇಷವಾಗಿದ್ದು ಕಲಾ ಚರಿತ್ರೆಯಲ್ಲಿಯೆ ಮಹತ್ವದ್ದಾಗಿದೆ. ಕಾಲಾನಂತರದಲ್ಲಿ ನಿರ್ವಹಣೆ ವೆಚ್ಚವು ೫೦೦೦ ರೂ ಗಳಿಗೆ ಏರಿತು.

'ಚಿತ್ರಾಕ್ಷಿ' ಸ್ಮರಣ ಸಂಚಿಕೆ

ಕರ್ನಾಟಕದಲ್ಲಿ ಕಲೆ ಉಳಿಯಬೇಕು ಬೆಳೆಯಬೇಕು, ಬೆಳೆಗಬೇಕು ಎಂಬ ಉದ್ದೇಶದೊಂದಿಗೆ ಸ್ಥಾಪನೆಗೊಂಡ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದ ವಜ್ರಮಹೋತ್ಸವದ ಸ್ಮರಣೆಗಾಗಿ 'ಚಿತ್ರಾಕ್ಷಿ' ಎಂಬ ಸ್ಮರಣ ಸಂಚಿಕೆಯನ್ನು ತಂದಿರುತ್ತದೆ. ಈ ಸ್ಮರಣ ಸಂಚಿಕೆಗೆ ಗದುಗಿನ ಪರಮಪೂಜ್ಯ ಶ್ರೀ ಮನ್ನಿರಂಜನ ಜಗದ್ಗುರು ತೋಟಂದ ಸಿದ್ದಲಿಂಗ ಮಹಾಸ್ವಾಮಿಗಳು ರಾಜ್ಯದ ನಾಯಕರು ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಎಸ್ ನಿಜಲಿಂಗಪ್ಪನವರು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮಾನ್ಯ ಶ್ರೀ.ವೈ.ಕೆ.ಮುದ್ದುಕೃಷ್ಣ ಕಾರ್ಯದರ್ಶಿಗಳಾದ ಶ್ರೀ.ಅ.ರಾ.ಚಂದ್ರಹಾಸ ಗುಪ್ತಾ ಅವರು ಶುಭ ಹಾರೈಸಿರುವರು.

ನಾಡಿನ ಹಿರಿಯ ಕಲಾವಿದರೂ ಸ್ಕೂಲ್ ಆಪ್ ಆರ್ಟ್ ಹಿತೈಷಿಗಳು ಆದ ಮಾನ್ಯ ಶ್ರೀ.ಆರ್.ಎಂ ಹಡಪರು 'ಚಿತ್ರಾಕ್ಷಿ'ಗೆ ಮುನ್ನುಡಿ ರೂಪದ ಕೆಲವು ಮಾತುಗಳನ್ನು ಬರೆದುಕೊಟ್ಟು 'ಶುಭ ಹಾರೈಸಿದ್ದಾರೆ. "ಚಿತ್ರಾಕ್ಷಿ" ವೈವಿಧ್ಯಮಯವಾದ ಲೇಖನಗಳಿಂದ ಚೈತ್ರದ ಕೋಗಿಲೆಯಾಗಿ ಮೈದುಂಬಿಕೊಂಡು ಬರಲು ಶ್ರಮಿಸಿದೆ. ಈ ವಜ್ರಮಹೋತ್ಸವದ ಸ್ಮರಣ ಸಂಚಿಕೆಯ 'ಚಿತ್ರಾಕ್ಷಿ" ಯಲ್ಲಿ ಶ್ರೀ.ಡಿ.ವ್ಹಿ ಹಾಲಭಾವಿಯವರ ಜೀವನ ಸಾಧನೆಗಳು ಕುರಿತಾದ ಲೇಖನಗಳು ಹೀಗಿವೆ.

* ವಜ್ರಮಹೋತ್ಸವ ಸ್ಮರಣ ಸಂಚಿಕೆ "ಚಿತ್ರಾಕ್ಷಿ" ಡಾ ಎಸ್.ಸಿ. ಪಾಟೀಲ್

೦೧. ಕಲಾಚಾರ್ಯ ಶ್ರೀ ದಾನಪ್ಪ ವೀರಭದ್ರಪ್ಪ ಹಾಲಭಾವಿ. ಡಾ.ದ.ರಾ.ಬೇಂದ್ರೆವರು

೦೨. ಕಲಾಕ್ಷೇತ್ರದಲ್ಲಿ ಶ್ರೀ ಹಾಲಭಾವಿಯವರು ಶ್ರೀಮತಿ ಸರೋಜಿನಿ ಮಹಿಷಿ

೦೩. ಕಲಾವಿದ ಶ್ರೀ.ಡಿ.ವ್ಹಿ. ಹಾಲಭಾವಿ – ಡಾ.ಪಾಟೀಲ ಪುಟ್ಟಪ್ಪ

೦೪. ಕರ್ನಾಟಕ ಕಲಾರತ್ನ (ಕವನ) ಎನ್.ಕೆ.ಹಾಲಕೇರಿ

೦೫. ಹಾಲಭಾವಿಯವರು ಕಟ್ಟಿದ ಕಲಾಮಂದಿರ, ಶ್ರೀ.ಎನ್.ಕೆ.ಕುಲಕರ್ಣಿ

೦೬. ಮಧುರ ನೆನಹುಗಳು ಶ್ರೀ.ಜಿ.ಎಸ್.ದಂಡಾವತಿಮಠ

೦೭. ಹಿರಿಯ ಕಲಾವಿದ ದಾನಪ್ಪ ಹಾಲಭಾವಿ–ಶ್ರೀಮತಿ ಶಾಂತಾದೇವಿ ಮಾಳವಾಡ

೦೮. ಕಲಾ–ಪ್ರಸಾದಿ ಹಾಲಭಾವಿ ಶ್ರೀ ದಾನಪ್ಪ–ಶ್ರೀ ತಲ್ಲೂರ ರಾಯನಗೌಡ ಪಾಟೀಲ

೦೯. ಕಲಾವಿದನೊಂದಿಗೆ ಕ್ಷಣಕಾಲ–ಸುಬ್ರಾಯ ಕೋಡಶಿಂಗೆ

೧೦. ಶ್ರೀ ದಾನಪ್ಪ ವೀರಭದ್ರಪ್ಪ ಹಾಲಭಾವಿ – ಎಂ.ಎ.ಚೆಟ್ಟಿ

೧೧. ಕನಸುಗಾರ ಕಲಾಗುರು–ದಾನಪ್ಪ ಹಾಲಭಾವಿ– ಬಿ.ವಲ್ಲಭ ದೇಸಾಯಿ

೧೨. ಅಪ್ರತಿಮ ಕಲಾಕಾರ ಶ್ರೀ ಹಾಲಭಾವಿಯವರು–ಶ್ರೀ.ಸಿ.ಎನ್.ಪಾಟೀಲ

೧೩. ಸಂತೃಪ್ತಿ ಕಲಾವಿದ ಶ್ರೀ.ಡಿ.ವ್ಹಿ.ಹಾಲಭಾವಿ – ಶ್ರೀ ಆರ್.ಜಿ.ರಾಯಕರ

೧೪. ಶ್ರೀ ಹಾಲಭಾವಿಯವರ ಬದುಕು, ಕಲಾಸಾಧನೆ – ಕೆಲವು ವಿಚಾರಗಳು ಪ್ರೋ.ಬಿ.ಎಂ.ಪಾಟೀಲ

೧೫. ಹಿರಿಯ ಕಲಾವಿದ ಶ್ರೀ.ಡಿ.ವ್ಹಿ.ಹಾಲಭಾವಿ – ಶ್ರೀ. ಅಶೋಕ ಅಕ್ಕಿ

೧೬. HIS MASTER PIECE- H.J.MULLA

೧೭. ART GALLERY – M.VIJAY PANCHAPPA

೧೮. A NON-ARTIST LOOKS AT ART – M.PANCHAPPA

೧೯. MERITED ARTIST HALBAVI- N.MARISHAMACHAR

೨೦. ಚಿತ್ರಕಲೆ ಮತ್ತು ಮನಸ್ಸು –ಶ್ರೀ.ಎಂ.ಎಸ್.ಚೌಧರಿ

* ವಜ್ರಮಹೋತ್ಸವ ಸ್ಮರಣ ಸಂಚಿಕೆ "ಚಿತ್ರಾಕ್ಷಿ" ಡಾ. ಎಸ್.ಸಿ. ಪಾಟೀಲ್

೨೧. MY LIFES MISSION- ART-EDUCATION-D.V.HALBHAVI

೨೨. THE IMPORTANCE OF ART SURESH HALBHAVI

೨೩. ವಜ್ರಮಹೋತ್ಸವ ವರ್ಷದಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳು – ಶ್ರೀಮತಿ ಪಾರ್ವತಿ ಸುರೇಶ ಹಾಲಭಾವಿ

೨೪. ಕಲಾನುಭಾವಿ – ಸೋಮಶೇಖರ ಎಂ.ಸಾಲಿ

"ಚಿತ್ರಾಕ್ಷಿ" ಸ್ಮರಣ ಸಂಚಿಕೆಯಲ್ಲಿ ಹಾಲಭಾವಿ ಕಲಾಶಾಲೆಯ ಬಗ್ಗೆ ಮಹನೀಯರ ಸಂದೇಶಗಳು

೧. ಶ್ರೀ.ಮನ್ನಿರಂಜನ ಜಗದ್ಗುರು ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳವರ ಸಂದೇಶ

ಕಲಾಶಾಲೆ ಸ್ಥಾಪಿಸುವುದು ದೊಡ್ಡದಲ್ಲ ಅದನ್ನು ನಿರಂತರವಾಗಿ ವ್ಯವಸ್ಥಿತವಾಗಿ ನಡೆಸಿಕೊಂಡು ಬರುವುದು ದೊಡ್ಡದು. ಆ ದಿಸೆಯಲ್ಲಿ ಈ ಶಾಲೆ ಪೂಜ್ಯನೀಯ ಶ್ರೀ.ಡಿವ್ವಿ. ಹಾಲಭಾವಿಯವರಿಂದ ಹಂತಹಂತವಾಗಿ ಬೆಳೆದು ಅವರ ಚಿರಂಜೀವಿ ಶ್ರೀ ಸುರೇಶ ಹಾಲಭಾವಿಯವರಿಂದ ಸ್ಮಾರ್ಥಕವಾಗಿ ಮುನ್ನಡೆದಿದೆ. ಈ ಸಂಸ್ಥೆಯ ಶ್ರೀಯಸ್ಸಿಗೆ ಕಳಸ ಎನ್ನುವಂತ ಈ ವರ್ಷ ಮಾನ್ಯ ಶ್ರೀ.ಡಿ.ವ್ವಿ.ಹಾಲಭಾವಿಯವರಿಗೆ ಕರ್ನಾಟಕ ಸರಕಾರ ಪ್ರತಿಷ್ಠಿತ ಕಲಾಪ್ರಶಸ್ಥಿಯಾದ "ಕೆ.ವೆಂಕಟಪ್ಪ" ಪ್ರಶಸ್ತಿಯನ್ನು ಪಡೆಯುವುದರ ಮೂಲಕ ಕಲಾ ಮುಖವನ್ನು ಹೆಚ್ಚಿಸಿದ್ದಾರೆ. ಉತ್ತರ ಕರ್ನಾಟಕದ ಗೌರವದ ಕಲಾಕೀರಿಟಕ್ಕೆ ಮತ್ತೊಂದು ಹೆಮ್ಮೆಯ ಗರಿಯನ್ನು ಸೇರಿಸಿದ್ದಾರೆ. ಈ ಕಲಾಸಂಸ್ಥೆ ಇನ್ನು ಉತ್ತರೋತ್ತರವಾಗಿ ಬೆಳೆಯಲೆಂದು ಹಾರೈಕೆ.

೨. ಎಸ್. ನಿಜಲಿಂಗಪ್ಪ ಅವರ ಸಂದೇಶ

ಕರ್ನಾಟಕದಲ್ಲಿ ಮಾನವ ಜೀವನಕ್ಕೆ ಒಂದು ಅರ್ಥವನ್ನು ಉಂಟುಮಾಡತಕ್ಕವುಗಳು ಸರ್ವ ವಿಧದಿಂದ ಕಲೆಗಳು ಕರ್ನಾಟಕದಲ್ಲಿ ಎಲ್ಲಾ ಕಲೆಗಳಿಗೂ ವತ್ತುಕೊಟ್ಟು ಪೋತ್ಸಾಹಿಸಿ ಅವುಗಳನ್ನು ಬೆಳೆಯಿಸುತ್ತಿರುವ ಕೇಂದ್ರಗಳಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದೆ ಧಾರವಾಡ. ಅಲ್ಲಿಯ ಸ್ಕೂಲ್ ಆಫ್ ಆರ್ಟ್‌ಗೆ ೬೦ ವರ್ಷಗಳಿಗೆ ಮುಂಚೆಯಿಂದಲೂ ಬೆಳೆದು ಬಂದಿದೆ. ಅದಕ್ಕೆ ಅಸ್ಥಿಭಾರವಾದವರು ಶ್ರೀ.ಹಾಲಭಾವಿ ಅವರು. ಹುಬ್ಬಳ್ಳಿಯಿಂದ ಧಾರವಾಡಕ್ಕೆ ಹೋದಾಗಲೆಲ್ಲಾ ಧಾರವಾಡದ ಭಾಗಿಲಲ್ಲಿಯೇ ಈ ಸಂಸ್ಥೆಯ ದರ್ಶನ ಆಗುತ್ತದೆ. ೪೦ ವರ್ಷಗಳು ನನ್ನ ಅನುಭವ ನೋಡಿ ಸಂತೋಷ ಪಟ್ಟಿದ್ದೇನೆ. ಶ್ರೀ ಹಾಲಭಾವಿಯವರನ್ನು ಮನಸ್ಸಿನಲ್ಲಿಯೇ ಮೆಚ್ಚಿ ಹೊಗಳಿದ್ದೇನೆ. ಆಗ ಈ ಸಂಸ್ಥೆ ಬೃಹದಾಕಾರವಾಗಿ ಬೆಳೆದು ಸಮಾಜದ ಮೆಚ್ಚಿಗೆಗೆ ಪಾತ್ರವಾಗಿ ವಜ್ರಮಹೋತ್ಸವವನ್ನು ಆಚರಿಸುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಇದರ ಅಂಗವಾಗಿ ಸ್ಮಾರಕ ಗ್ರಂಥವನ್ನು ಹೊರತರುತ್ತಿರುವುದೂ ಅಷ್ಟೇ ಹರ್ಷದ ಸಂಗತಿ ವಜ್ರಮಹೋತ್ಸವವು ಯಶಸ್ವಿ ಆಗಲಿ ಸಂಸ್ಥೆಯು ಕಲಾಸೇವೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸಮಾಜಕ್ಕೆ ಸಲ್ಲಿಸಲಿ ಯಶಸ್ವಿ ಆಗಲಿ ಎಂದು ಹಾರೈಸುತ್ತೇನೆ.

೩. ವೈ.ಕೆ.ಮುದ್ದುಕೃಷ್ಣ ಅವರ ಸಂದೇಶ

ನಾಡಿನ ಪ್ರಸಿದ್ದ "ಸ್ಕೂಲ್ ಆಫ್ ಆರ್ಟ್" ತನ್ನ ೬೦ ನೇಯ ವಾರ್ಷಿಕೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ತುಂಬ ಸಂತೋಷದ ಸಂಗತಿ. ತಮ್ಮ ಕಾರ್ಯಕ್ರಮ ಯಶಸ್ವಿಯಾಗಿ

ನಡಯಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

೪. ಅ. ರಾ. ಚಂದ್ರಹಾಸ ಗುಪ್ತ ಅವರ ಸಂದೇಶ

ಪ್ರಖ್ಯಾತ ಕಲಾವಿದರಾದ ಶ್ರೀ.ಡಿ.ವಿ.ಹಾಲಭಾವಿಯವರು ಸ್ಥಾಪಿಸಿರುವ ಕಲಾ ಶಾಲೆಯಲ್ಲಿ ೨೬-೧೨-೧೯೯೫ ರಂದು ವಜ್ರಮಹೋತ್ಸವವನ್ನು ಆಚರಿಸುವುದು ಪ್ರಶಂಸನೀಯ. ಈ ಸಂಸ್ಥೆ ಕಲಾಶಿಕ್ಷಣದಲ್ಲಿ ಸಲ್ಲಿಸುತ್ತಿರುವ ಸೇವೆ ಅನುಕರಣೀಯ ಸುಮಾರು ೮೦೦೦ ವಿದ್ಯಾರ್ಥಿಗಳು ಈ ಶಾಲೆಯಿಂದ ಶಿಕ್ಷಣವನ್ನು ಪಡೆದು ಕಲಾಕ್ಷೇತ್ರದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿರುತ್ತಾರೆ. ಅಲ್ಲದೇ, ಅನೇಕ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ಅಂತರರಾಷ್ಟ್ರ ಖ್ಯಾತಿಯನ್ನು ಪಡೆದಿರುತ್ತಾರೆ. ೬೦ ರ ಸಿರಿಯನ್ನು ಅನುಭವಿಸುತ್ತಿರುವ ಈ ಸಂಸ್ಥೆಗೆ ಸರ್ವಾಂಗೀಣ ಅಭ್ಯದಯವನ್ನು ಆಶೀಸುತ್ತೇನೆ.

ವಜ್ರಮಹೋತ್ಸವದ ಪತ್ರಿಕಾ ಪ್ರಕಟಣೆಗಳ ತುಣುಕುಗಳು

"ಶ್ರಮಕ್ಕೆ ಕೊನೆಗೂ ಮಾನ್ಯತೆ ಸಿಕ್ಕಿದೆ" ಧಾರವಾಡ ಡಿ-೨೩ ಚಿತ್ರಕಲೆಯ ಅಭಿವೃದ್ಧಿಗೆ ತಾವು ಪಟ್ಟ ಶ್ರಮಕ್ಕೆ ಕೊನೆಗೂ ಮಾನ್ಯತೆ ಸಿಕ್ಕಿದೆ ಎಂದು ವೆಂಕಟಪ್ಪ ಚಿತ್ರಕಲಾ ಪ್ರಶಸ್ತಿ ಪಡದಿರುವ ಇಲ್ಲಿನ ಹಿರಿಯ ಚಿತ್ರಕಲಾವಿದ ಡಿ.ವಿ. ಹಾಲಭಾವಿ ಅವರು ಅಭಿಪ್ರಾಯಪಟ್ಟಿದ್ದಾರೆ.

ವೆಂಕಟಪ್ಪ ಚಿತ್ರಕಲಾ ಪ್ರಶಸ್ತಿಗೆ ಆಯ್ಕೆಯಾಗಿರುವ ಅವರನ್ನು ಪ್ರಜಾವಾಣಿ ಅಭಿನಂದಿಸಿ ಪ್ರಶಸ್ತಿ ದೊರೆತ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಳಿದಾಗ ಮೇಲಿನಂತೆ ಪ್ರತಿಕ್ರಿಸಿದರು. ಚಿತ್ರಕಲೆಗೆ ಯಾವುದೇ ರೀತಿಯಾದ ಪ್ರೋತ್ಸಾಹ ಸಿಕ್ಕದೇ ಇದ್ದ ಕಾಲದಲ್ಲಿ ಧಾರವಾಡದಲ್ಲಿ 'ಸ್ಕೂಲ್ ಆಫ್ ಆರ್ಟ ಸಂಸ್ಥೆ ತೆರೆದು ತಮ್ಮ ಜೀವಿತದ ದುಡಿಮೆಯ ಹಣವನ್ನೆಲ್ಲಾ ಅದರ ಅಭಿವೃದ್ಧಿಗೆ ತೊಡಗಿಸಿದ್ದೆ. ನನ್ನ ಶ್ರಮಕ್ಕೆ ಕೊನೆಗೂ ಮಾನ್ಯತೆ ಸಿಕ್ಕಿದೆ ಎಂದು ಸಂತೋಷವಾಗಿದೆ ಎಂಧು ೮೮ ರ ವಯೋವೃದ್ಧಿ ಹಾಲಭಾವಿ ಅವರು ತಿಳಿಸಿದರು. ಹಾಲಭಾವಿ ಅವರು ಸುಮಾರು ೬೦ ವರ್ಷಗಳ ಹಿಂದೆ ಧಾರವಾಡ ನಗರದಲ್ಲಿ ಚಿತ್ರಕಲಾ ಸಂಸ್ಥೆಯನ್ನು ಆರಂಭಿಸಿ ಹಲವಾರು ವರ್ಷಗಳ ಕಾಲ ಅದರ ಪ್ರಾಚಾರ್ಯರಾಗಿ ನೂರಾರು ಕಲಾಸಕ್ತರಿಗೆ ಚಿತ್ರಕಲೆಯನ್ನು ಧಾರೆ ಎರೆದಿದ್ದಾರೆ. ಅವರು ಸ್ಥಾಪಿಸಿದ ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆ ಈಗ ವಜ್ರಮಹೋತ್ಸವ ಆಚರಿಸುತ್ತಿದೆ. ಡಿ-೨೩ ರಿಂದ ೨೭ ರವರಿಗೆ ಈ ಸಂಸ್ಥೆಯ ವಜ್ರಮಹೋತ್ಸವ ನಡೆಯಲ್ಲಿದೆ.

ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಪಠ್ಯಕ್ರಮ

೧. ಯಾಂತ್ರಿಕ ಕಲಾವಿದ ಮತ್ತು ನಕ್ಷಾ ಚಿತ್ರ ರಚನಾಕಾರ

೨. ಶಿಲ್ಪಿ ಮತ್ತು ವಾಣಿಜ್ಯ ಕಲೆಯನ್ನು ಬಲ್ಲವರಾಗಿರಬೇಕು

೩. ಚಿತ್ರಕಲೆಯಲ್ಲಿ ತತ್ಸಮಾನ ಶಿಕ್ಷಣ ಪಡೆದವನಾಗಿರಬೇಕು

ಹೀಗೆ ೧೫ ಜನರ ಕಮೀಟಿಯನ್ನು ಮಾಡಿರುತ್ತಿದ್ದರು. ಚಿತ್ರಕಲಾ ಶಾಲೆಗಳಿಗೆ ಸಂಬಂಧಪಟ್ಟ ಎಲ್ಲವನ್ನು ಇವರ ಮುಖಾಂತರವೇ ಅಂತಿಮಗೊಳ್ಳುತ್ತಿದ್ದವು. ಮೈಸೂರು ರಾಜ್ಯಕ್ಕೆ ಹಸ್ತಾಂತರಗೊಂಡಾಗ

೧. ಶಿಕ್ಷಣ ಸಚಿವರು

೨. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

೩. ಡಿ.ಪಿ.ಯ್. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

೪. ಎಸ್.ಎ.ಡಿ.ಪಿ.ಐ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

೫. ಚಿತ್ರಕಲಾ ಪರಿವೀಕ್ಷಕರು, ವಿಭಾಗೀಯ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

೬. ಡಿ.ಡಿ.ಪಿ.ಐ ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾಮಟ್ಟದಲ್ಲಿ.

ಹೀಗೆ ಚಿತ್ರಕಲಾ ಶಿಕ್ಷಣದಲ್ಲಿ ಇವರ ಮುಖಾಂತರವೇ ಎಲ್ಲ ಕಾರ್ಯಗಳು ಅಂತಿಮಗೊಳ್ಳುತ್ತಿವೆ. ಇಂದಿನವರೆಗೂ ಇದೇ ರೀತಿಯ ವ್ಯವಸ್ಥೆ ಮುಂದುವರಿದಿದ್ದು ಚಿತ್ರಕಲಾ ತಜ್ಞರು ಈ ಕಮಿಟಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಇರದೇ ಇರುವುದು. ಈ ವಿಭಾಗವು ಹಿಂದುಳಿಯಲು ಕಾರಣವಾಗಿದೆ. ಮುಂಬೈ ಸರಕಾರವು ರಚನೆ ಮಾಡಿದ೧೫ ಜನರ ಕಮೀಟಿಯು ವೈಜ್ಞಾನಿಕವಾಗಿದ್ದು ಚಿತ್ರಕಲಾ ಶಿಕ್ಷಣವು ಅಭಿವೃದ್ಧಿ ಹೊಂದಲು ಅನುಕೂಲವಾಗಿದೆ. ಅಂತೆಯೇ ತಜ್ಞರ ಸಮಿತಿಯನ್ನು ಹೊಂದಿದ ಪ್ರತ್ಯೇಕ ಆಡಳಿತ ವ್ಯವಸ್ಥೆ ಹೊಂದುವುದರೊಂದಿಗೆ ಇದರದೇ ಆದ ಒಂದು ವಿಶ್ವವಿದ್ಯಾಲಯದ ಅವಶ್ಯಕತೆ ಇದೆ. ಕೊನೆಗೆ ಒಂದೇ ವಿಶ್ವವಿದ್ಯಾಲಯದ ಅಧೀನದಲ್ಲಿ ರಾಜ್ಯದ ಎಲ್ಲ ಕಲಾಶಾಲೆಗಳಿದ್ದು ತಜ್ಞರ ಸಮಿತಿಯನ್ನು ರಚಿಸಿ, ಚಿತ್ರಕಲಾ ಶಿಕ್ಷಣದ ಬೆಳವಣಿಗೆಯ ಕುರಿತು ಸರಕಾರ ಯೋಚಿಸುವುದು ತುಂಬಾ ಅವಶ್ಯಕವಾಗಿದೆ.

ಸ್ಕೂಲ ಆಫ್ ಆರ್ಟ್‌ನ ಪಠ್ಯಕ್ರಮ ಮತ್ತು ತರಗತಿಗಳು

೧೯೩೫ ರಿಂದ ೧೯೪೦ ರವರೆಗೆ ಕಲಾ ಮಂದಿರದಲ್ಲಿ ಕಲಿಸುವ (ವಿಷಯಗಳು) ಪ್ರಾರಂಭದಲ್ಲಿ ಹವ್ಯಾಸಿ ಕೋರ್ಸ್‌ಗಳನ್ನು ಪ್ರಾರಂಭಿಸಿದರು.

೧. ಚಿತ್ರಕಲೆಯ ಗ್ರೇಡ್ ಶಿಕ್ಷಣ – Drawing Grade

೨. ವರ್ಣ ಮತ್ತು ರೇಖಾಚಿತ್ರಕಲೆ – Drawing and Painting

೩. ಅನ್ವಯಿಕ ಕಲೆ – Applied Art

೪. ಛಾಯಾ ಚಿತ್ರಕಲೆ – Photography

೫. ಚಿತ್ರಕಲಾ ಶಿಕ್ಷಕರ ತರಗತಿ – Drawing Teacher Cource

೬. ಸಂಗೀತ ತರಗತಿ – Music class

೭. ನೃತ್ಯ ತರಗತಿ – Dance Class

೮. ಕರಕುಶಲಕಲೆ – Craft class

೧೯೪೧ರಲ್ಲಿ ಮತ್ತೆ ಹೊಸದಾಗಿ ಎರಡು ಕೋರ್ಸ್‌ಗಳನ್ನು ಪ್ರಾರಂಭಿಸಿದರು.

೧. ಪ್ರಾಥಮಿಕ ಚಿತ್ರ, ೨. ಇಂಟರ್ ಮಿಡಿಯೇಟ್ ಚಿತ್ರಕಲೆ ಎಂಬ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು. ಪರೀಕ್ಷಾ ಕೇಂದ್ರವಾಗಿ ಧಾರವಾಡದ ಸ್ಕೂಲ ಆಫ್ ಆರ್ಟ್ ಮಾತ್ರ ಸೀಮಿತವಾಗಿತ್ತು. ೧೯೬೫ರಲ್ಲಿ ಮುಂಬೈ ಸರಕಾರದಿಂದ ಬೇರ್ಪಟ್ಟು ಮೈಸೂರು ಸರಕಾರದ ಅಧೀನದಲ್ಲಿ ಬಂದಾಗ ತರಗತಿಗಳು ಬೇರೆಯಾದವು. ಪರೀಕ್ಷಾ ಕೇಂದ್ರಗಳು ಹೆಚ್ಚಿದವು.

"Mysore Government Highter Art Examinations 1965"

Art Cource	Examination Centers
1. Kala Prathama	Dharwad ,Gadag, Belgaum
2. Kala Madyama	Bangalore, Mysore
3. Inter Mediate Drawing & Painting	
4. Kala Proudha (Painting)	
5. Advance in Drawing & Painting	
6. Diploma in Drawing & Painting	Dharwad and Mysore

ಹೀಗೆ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದಲ್ಲಿ ಹಲವಾರು ಕೋರ್ಸ್‌ಗಳು ಪ್ರಾರಂಭವಾದವು. ಮುಂಬೈ ಜೆ.ಜೆ.ಕಲಾಶಾಲೆಯ ಪಠ್ಯಕ್ರಮವನ್ನೇ ಆಧಾರವಾಗಿಟ್ಟುಕೊಂಡು, ತರಗತಿಗಳು ಪ್ರಾರಂಭವಾದವು. ಲೋವರ್ ಗ್ರೇಡ್ ಪರೀಕ್ಷೆಯನ್ನು ಪಾಸಾದವರು ಹಾಯರ್ ಗ್ರೇಡ್ ಪರೀಕ್ಷೆಗೆ ಕೂಡ್ರಲು ಅರ್ಹತೆಯನ್ನು ಪಡೆಯುತ್ತಿದ್ದರು. ಇವೆರಡೂ ಪರೀಕ್ಷೆಯಲ್ಲಿ ಪಾಸಾದವರು ಮುಂದಿನ ತರಗತಿಗಳಿಗೆ ಹೋಗಲು ಅನುಮತಿ ದೊರೆಯುತ್ತಿತ್ತು.

ಎ. ಪೇಂಟಿಂಗ್ ವರ್ಗಗಳು:–

1. Elementory Drawing and Painting
2. Intermediate Painting
3. Advance Drawing and Painting
4. Diploma in Drawing and Painting

ಈ ನಾಲ್ಕು ಕ್ಲಾಸಿನಲ್ಲಿ ಅಧ್ಯಯನ ಮಾಡಿದವರು ಶಿಕ್ಷಕರಾಗಲು ಬರುತ್ತಿರಲಿಲ್ಲ. ಶಿಕ್ಷಕರಾಗಬೇಕಾದರೆ ಬೇರೆ ಮೂರು ಕೋರ್ಸ್‌ಗಳನ್ನು ಮಾಡಬೇಕಾಗುತ್ತಿತ್ತು.

ಬಿ. ಚಿತ್ರಕಲಾ ಶಿಕ್ಷಕರ ತರಬೇತಿ ವರ್ಗಗಳು:–

5. Drawing Teacher training cource (D.T.C)
6. Drawing Master Cource (D.M.C.)
7. Art Master Cource (A.M.C.)

Elementary Drawing and Painting : ತರಗತಿಗೆ ಪ್ರವೇಶ ಪಡೆಯಲು ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು. ಇಲ್ಲವೇ Higher grade ಪರೀಕ್ಷೆಯನ್ನು ಪಾಸಾಗಿರಬೇಕು. ಅವರಿಗೆ ಮಾತ್ರ ಪ್ರವೇಶ ದೊರೆಯುತ್ತಿತ್ತು.

D.T.C.Course :- ವರ್ಗಕ್ಕೆ ಪ್ರವೇಶ ಪಡೆಯಲು ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು. ಇಲ್ಲವೇ ತತ್ಸಮಾನ ಪರೀಕ್ಷೆ ಪಾಸಾಗಿದ್ದರೆ ಪ್ರವೇಶ ದೊರೆಯುತಿತ್ತು.

D.M.Cource:- ಈ ತರಗತಿಗೆ ಪ್ರವೇಶ ಪಡೆಯಲು ಎಸ್.ಎಸ್.ಎಲ್.ಸಿ. ಪಾಸಾಗಿದ್ದು D.T.C. ಪರೀಕ್ಷೆಯನ್ನು ಪಾಸು ಮಾಡಿಕೊಂಡು ಪ್ರಾಥಮಿಕ ಇಲ್ಲವೇ ಪ್ರೌಢಶಾಲೆಯಲ್ಲಿ ಕನಿಷ್ಠ 4 ವರುಷ ಸೇವೆ ಸಲ್ಲಿಸಿದವರಿಗೆ ಪ್ರವೇಶ ನೀಡಲಾಗುತ್ತಿತ್ತು.

"Art Master Cource":- ಈ ತರಗತಿಗೆ ಪ್ರವೇಶ ಪಡೆಯಲು ಡಿ.ಎಮ್.ಕೋರ್ಸ್ ಪಾಸಾಗಿದ್ದು ಪ್ರಾಥಮಿಕ ಇಲ್ಲವೇ ಪ್ರೌಢಶಾಲೆಯಲ್ಲಿ ಕನಿಷ್ಠ ಒಂದು ವರುಷ ಸೇವೆ ಸಲ್ಲಿಸಿದವರಿಗೆ ಮಾತ್ರ ಪ್ರವೇಶವಿತ್ತು.

ಆಯಾ ತರಗತಿಗಳ ವಿಷಯಗಳು, ಪರೀಕ್ಷೆಯ ಅಂಕಗಳು ಕನಿಷ್ಠ ಪಡೆಯಬೇಕಾದ ಅಂಕಗಳ ವಿವರಗಳನ್ನು ಟೇಬಲ್‌ಗಳ ಮುಖಾಂತರ ತಿಳಿಸಲಾಗುವುದು.

Table 3.2 Syllabus of High Grade Examination

ಅ.ನಂ.	ಕಲಿಸುವ ವಿಷಯಗಳು	ಅಂಕಗಳು	ಕನಿಷ್ಠ ಪಡೆಯಬೇಕಾದ ಅಂಕಗಳು
01.	ವಸ್ತು ಚಿತ್ರಣ	100	40%
02.	ಸ್ಮರಣ ಚಿತ್ರಣ	100	40%
03.	ನಿಸರ್ಗ ಚಿತ್ರಣ	100	40%
04.	ನಕ್ಷಾ ಚಿತ್ರಣ	100	40%
05.	ಸರಳಗೈ ಚಿತ್ರಣ	100	40%
06.	ಜಾಮಿತಿ ಚಿತ್ರಣ	100	40%
	ಒಟ್ಟು	**600**	**40%**

Table 3.3 Syllabus of Elementary Drawing and Painting

ಅ.ನಂ.	ಕಲಿಸುವ ವಿಷಯಗಳು	ಅಂಕಗಳು	ಕನಿಷ್ಠ ಪಡೆಯಬೇಕಾದ ಅಂಕಗಳು
01.	ಸ್ಥಿರಚಿತ್ರಣ (Still life)	100	40%
02.	ಹೆಡ್‌ಫ್ರಾಮ್‌ಕಾಸ್ಟ್ (Head from Caste)	100	40%
03.	ಭಾವಚಿತ್ರಣ (Head from life)	100	40%
04.	ಅಲಂಕಾರಿಕ ನಕ್ಷೆ	100	40%

	(Decorative Desigen)		
05.	ಯಥಾದರ್ಶನ ಮತ್ತು ಜಾಮಿತಿಚಿತ್ರಣ (Perspective and Geometry)	100	40%
06.	ಸ್ಮರಣ ಚಿತ್ರಣ (Memory Drawing)	100	40%
	ಒಟ್ಟು	**600**	**40%**

Table 3.4 Syllabus of Inter Mediate Drawing and Painting

Sl.No	Subject for study	Marks	Minimum for passing
01.	Figure from, cast	100	40%
02.	Painting from life	100	40%
03.	Pictorial Design	100	40%
04.	Human Anatomy	100	40%
05.	Perspective	100	40%
06.	History of Art	100	40%
07.	Cut-doos Sketching	100	40%
	Total	**700**	

Table 3.5 Syllabus of Inter Mediate Drawing and Painting

Sl.No	Subject for study	Marks	Minimum for passing
01.	Human Anatomy	100	40%
02.	Time Sketch	100	40%
03.	Head from Life	100	40%
04.	Painting from life	100	40%
05.	Pictorial Composition	100	40%
06.	History of Art	100	40%
	Total	**600**	

Table 3.6 Syllabus of Diploma in Drawing and Painting

Sl.No	Subject for study	Marks	Minimum for passing
01.	Painting from life	100	40%
02.	History of Art	100	40%
03.	Sketching from Nature	100	40%
04.	Composition		
	a. Key Sketch	100	40%
	b. Furnishing colour Sketch	200	40%
	c. Final furnished composition	300	40%
05.	Viva and Oral	100	40%
	Total	**1000**	

Table 3.7 Syllabus of Teacher Training Cource (D.T.C.)

Sl.No	Subject for study	Marks	Minimum for passing
01.	Geometry	100	40%
02.	Perspective	100	40%
03.	Nature Drawing	100	40%
04.	Memory Drawing	100	40%
05.	Design Drawing	100	40%
06.	Clay Modelling	100	40%
07.	Clay Modelling	50	40%
08.	Lettering	50	
09.	Written Examination Methods	100	40%
10.	Practical Examination Methods	100	40%
	Total	**900**	

Table 3.8 Syllabus of Drawing Master Cource (D.M.C.)

Sl. No	Subject for study	Marks	Minimum for passing
1.	Moment from cost	100	40%
2.	Still Life	100	40%
3.	Design Drawing	100	40%
4.	Nature Drawing	100	40%
5.	Memory Drawing	100	40%
6.	Written Examination Method	100	40%
7.	Practical Examination Method	100	40%
	Total	**700**	

Table 3.8 Syllabus of Art Master Cource (A.M.C.)

Sl. No	Subject for study	Marks	Minimum for passing
01.	Figrue from life	100	40%
02.	Still Life	100	40%
03.	Design I	100	40%
04.	Design II	100	40%
05.	Figure from Cast	100	40%
06.	Memory Drawing	100	40%
07.	Written Examination Method	100	40%
08.	Practical Examination Method	100	40%
	Total	**800**	

೧೯೮೧ರಲ್ಲಿ ಪಠ್ಯಕ್ರಮ ಬದಲಾವಣೆ ಹೊಂದಿತು. "ಸರಕಾರಿ ಆದೇಶ ಸಂಖ್ಯೆ ನಂ.ಇ.ಡಿ.೨೧ ಎಂ.ಎ.ವಿ. ೮೦ ದಿ. ೨೯-೦೯-೧೯೮೦" ಇದರ ಅಂಗವಾಗಿ ರೂಪಗೊಂಡ ಉನ್ನತ ಚಿತ್ರಕಲಾ ಶಾಲೆಗಳಿಗೆ ಪಠ್ಯಕ್ರಮದಲ್ಲಿಯ ವಿಷಯ ಮತ್ತು ತರಗತಿ, ಅಂಕಗಳು ಕೆಳಗಿನಂತಿವೆ.

Syllabus for Preparatory Cource Ist Year

Sl. No	Subject for study	Marks	Minimum for passing
01.	Drawing from nature	100	50%
02.	Drawing from Models	100	50%
03.	Drawing from Memory	100	50%
04.	Design and Colour	100	50%
05.	Geometry and Perspective	100	50%
06.	Graphic Art and Craft	100	50%
07.	Practice Teachings and Class work	100	50%
08.	History of Art	100	35%
	Total	**800**	

Syllabus for Drawing Master Certificate Course IInd Year (D.M.C)

Sl. No	Subject for study	Marks	Minimum for passing
01.	Still life	100	50%
02.	Design and Colur	100	50%
03.	Craft	100	50%
04.	Drawing from Memory	100	50%
05.	Practice Teaching and class work	100	50%
06.	History of Art	100	35%
07.	Art Education	100	50%

Total 700

Syllabus for IIIrd Year Drawing and Painting

Sl.No	Subject for study	Max. Marks	Internal	External	Minimum for passing
01.	Portriat Paint	100	100	100	
02.	Drawing from life	100	100	100	
03.	Pictorical Composition	100	100	100	
04.	Graphic Art and Craft	100	-	50	
05.	Anatomy	100	100	100	
06.	History of Art	-	100	35	
	Total	**500**	**500**	**485**	

Syllabus for IVth Year Drawing and Painting

Sl.No	Subject for study	Max. Marks	Internal	External	Minimum for passing
01.	Painting from life	100	100	100	
02.	Portrait Painting	100	100	100	
03.	Composition	100	100	100	
04.	Graphic Art and Craft	100	-	50	
05.	History of Art	-	100	35	
	Total	**400**	**400**	**485**	

Syllabus for Vth Year Drawing and Painting

Sl.No	Subject for study	Max. Marks	Internal	External	Minimum for passing
01.	Painting from life	100	100	100	

02.	Composition	100	100	100
03.	Graphic Art and Craft	100	-	50
04.	History of Art	-	100	35
	Total	**300**	**300**	**485**

Syllabus for Art Masters Diploma

Sl.No	Subject for study	Max. Marks	Internal	External	Minimum for passin
01.	Painting from life	-	100	50	
02.	Pictorial Design	-	100	50	
03.	Crafts	-	100	50	
04.	Class works and Practice Teaching	100	-	50	
05.	History of Art	-	100	35	
06.	Art Education	-	100	35	
	Total	**100**	**500**	**485**	

ಸುಮಾರು 20 ವರ್ಷಗಳ ನಂತರ (1980 ರಿಂದ 2001 ರವರೆಗೆ) ಅಂದರೆ 2001 ಜೂನ್ 20ರಂದು ನೂತನ ಪಠ್ಯಕ್ರಮ ಜಾರಿಗೆ ಬಂದಿತು. " ಸರ್ಕಾರದ ಆದೇಶ ಸಂಖ್ಯೆ:ಇಡಿ37 ಎಂ.ಪಿ.ಎಸ್.99 ಬೆಂಗಳೂರು, ದಿನಾಂಕಃ 20-06-2001.

ಶ್ರೀ ಡಿ.ಪಿ.ಇಸ್ಸಾರ್ ಅವರ ನೇತೃತ್ವದ ತಜ್ಞರ ಸಮಿತಿಯು ಈ ಪಠ್ಯಕ್ರಮವನ್ನು ರಚನೆ ಮಾಡಿತ್ತು ಪಠ್ಯಕ್ರಮದಲ್ಲಿಯ ವಿಷಯ ಮತ್ತು ತರಗತಿ, ಅಂಕಗಳು ಕೆಳಗಿನಂತಿವೆ.

4. ಪಠ್ಯ ವಸ್ತು ಮತ್ತು ಪರೀಕ್ಷಾ ಕ್ರಮಗಳು – "ಪ್ರಥಮ ವರ್ಷದ ಪ್ರಾಥಮಿಕ ಹಂತ"

ವಿಷಯದ ಸಂಕೇತ	ಪಠ್ಯ ವಿಷಯ	ಗರಿಷ್ಠ ಅಂಕಗಳು	ಒಟ್ಟು	ಕನಿಷ್ಠ ಪರೀಕ್ಷೆಯ ಅಂಕಗಳು ಪಾಸಾಗಲು
Fl-01	ಸುಲಲಿತ ಹಸ್ತ ಚಿತ್ರ	40	60	40%
Fl-02	ವಿನ್ಯಾಸ-1, ಮೂಲತತ್ವಗಳು	60	90	40%
Fl-03	ಶಿಲ್ಪ ಕಲೆ	40	60	40%
Fl-04	ಮುದ್ರಣ ಕಲೆ	40	60	40%

Fl–05	ವಿಧಾನ & ಉಪಕರಣಗಳು	50	–	40%
Fl–06	ಕಲಾತತ್ವಗಳು	40	60	40%
Fl–07	ಕನ್ನಢ ಭಾಷೆ	40	60	40%
Fl–08	ಇಂಗ್ಲೀಷ ಭಾಷೆ	40	60	40%
	ಒಟ್ಟು	**350**	**450**	

ಪಠ್ಯ ವಸ್ತು ಮತ್ತು ಪರೀಕ್ಷಾ ಕ್ರಮಗಳು – "ದ್ವಿತೀಯ ವರ್ಷದ ಪ್ರಾಥಮಿಕ ಹಂತ"

ವಿಷಯದ ಸಂಕೇತ	ಪಠ್ಯ ವಿಷಯ	ಗರಿಷ್ಠ ಅಂಕಗಳು	ಒಟ್ಟು	ಕನಿಷ್ಠ ಪರೀಕ್ಷೆಯ ಅಂಕಗಳು ಪಾಸಾಗಲು
F2–01	ಸುಲಲಿತ ಹಸ್ತಚಿತ್ರ	40	60	40%
F2–02	ವಿನ್ಯಾಸ–2, ಮೂಲತತ್ವಗಳು	60	90	40%
F2–03	ಶಿಲ್ಪಕಲೆ	40	60	40%
F2–04	ಮುದ್ರಣಕಲೆ(ಗ್ರಾಫಿಕ್)	40	60	40%
F2–05	ವಿಧಾನ & ಉಪಕರಣಗಳು	50	–	40%
F2–06	ಕಲಾಶಾಸ್ತ್ರ	40	60	40%
F2–07	ಭಾಷೆಗಳು – ಕನ್ನಡ	60	40	40%
F2–08	ಭಾಷೆಗಳು – ಇಂಗ್ಲೀಷ'	60	40	40%
	ಒಟ್ಟು	**360**	**410**	

ಪಠ್ಯ ವಸ್ತು ಮತ್ತು ಪರೀಕ್ಷಾ ಕ್ರಮಗಳು–"ಮೂರನೇ ವರ್ಷದ ವಿಶೇಷ ಪರಿಣತಿ ಚಿತ್ರಕಲೆ"

ವಿಷಯದ ಸಂಕೇತ	ಪಠ್ಯ ವಿಷಯ	ಗರಿಷ್ಠ ಅಂಕಗಳು	ಒಟ್ಟು	ಕನಿಷ್ಠ ಪರೀಕ್ಷೆಯ ಅಂಕಗಳು ಪಾಸಾಗಲು
P3–01	ರೇಖಾಚಿತ್ರ	80	120	40%
P3–02	ಸೃಜನಶೀಲ ವರ್ಣಚಿತ್ರ	120	180	40%
P3–03	ಐಚ್ಛಿಕ ವಿಷಯ (ಮುದ್ರಣಕಲೆ)	100	–	40%
P3–04	ಕಲಾಇತಿಹಾಸ	40	60	40%
P3–05	ಕಲಾಸಿದ್ಧಾಂತ	40	60	40%

ಒಟ್ಟು	380	420

ಪಠ್ಯ ವಸ್ತು ಮತ್ತು ಪರೀಕ್ಷಾ ಕ್ರಮ–"ನಾಲ್ಕನೇ ವರ್ಷದ ವಿಶೇಷ ಪರಿಣತಿ ಚಿತ್ರಕಲೆ"

ವಿಷಯದ ಸಂಕೇತ	ಪಠ್ಯ ವಿಷಯ	ಗರಿಷ್ಠ ಅಂಕಗಳು	ಒಟ್ಟು	ಕನಿಷ್ಠ ಪರೀಕ್ಷೆಯ ಅಂಕಗಳು ಪಾಸಾಗಲು
P4–01	ರೇಖಾಚಿತ್ರ	80	120	40%
P4–02	ಸೃಜನಶೀಲ ವರ್ಣಚಿತ್ರ	120	180	40%
P4–03	ಐಚ್ಚಿಕ ವಿಷಯ (ಮುದ್ರಣಕಲೆ)	100	–	40%
P4–04	ಕಲಾಇತಿಹಾಸ	40	60	40%
P4–05	ಕಲಾಸಿದ್ಧಾಂತ	40	60	40%
	ಒಟ್ಟು	380	420	

೧೯೩೫ ರಿಂದ ೨೦೦೭ ರವರೆಗೆ ಅಂದರೆ ಸುಮಾರು ೭೧ ವರ್ಷಗಳಲ್ಲಿ "ಚಿತ್ರಕಲಾ ಪಠ್ಯಕ್ರಮವು" ಬದಲಾವಣೆ ಆದದ್ದು ಕೇವಲ ಎರಡು ಸಲ ಮಾತ್ರ.೧೯೪೧ ರಿಂದ ಜೆ.ಜೆ.ಸ್ಕೂಲ್ ಆಫ್ ಆರ್ಟನ ಪಠ್ಯಕ್ರಮವನ್ನು ಆಧಾರವಾಗಿಟ್ಟುಕೊಂಡು ಬೆಳೆದು ಬಂದ ರಾಜ್ಯದ ಕಲಾಶಾಲೆಗಳು ೧೯೮೦ ರಲ್ಲಿ ಬದಲಾವಣೆಯಾದದ್ದು ಪ್ರಥಮ ಬಾರಿಗೆ. ಆದರೆ ಈ ಪಠ್ಯಕ್ರಮವೂ ಜೆ.ಜೆ.ಸ್ಕೂಲ್ ಆಫ್ ಆರ್ಟದ ಪಠ್ಯಕ್ರಮವನ್ನೆ ಆಧಾರವಾಗಿ ರಚಿಸಲ್ಪಟ್ಟಿದೆ. ಆದಾಗ್ಯೂ ೧೯೮೦ ರಲ್ಲಿ ರಚನೆಯಾದಾಗ ಪಠ್ಯಕ್ರಮವು ಉತ್ಕೃಷ್ಟವಾದುದು. ಆದರೆ ೨೦೦೧ರಲ್ಲಿ ಬದಲಾವಣೆಯಾದ ಪಠಕ್ರಮ ಜಾರಿಯಾಗುವಾಗ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘ ಧಾರವಾಡ ಮತ್ತು ರಾಜ್ಯ ಚಿತ್ರಕಲಾ ಶಾಲೆಗಳ ಒಕ್ಕೂಟ , ಬೆಂಗಳೂರು ಇವೆರಡೂ ಸಂಘಟನೆಗಳು ವಿರೋಧಿಸಿದವು. ತಿದ್ದುಪಡಿಗೊಳ್ಳದೇ ಯಥಾವತ್ತಾಗಿಯೇ ಜಾರಿಗೆ ಬಂದಿತು.

೫. ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಮಟ್ಟದವರೆಗೆ ಮತ್ತು ಚಿತ್ರಕಲಾ ತರಬೇತಿ ತರಗತಿಗಳಲ್ಲಿ ಚಿತ್ರಕಲಾ ಶಿಕ್ಷಣವನ್ನು ಬೋಧಿಸುವ ಸಿಬ್ಬಂದಿಯ ಅರ್ಹತೆ:

ಅ. ವರ್ಗಗಳಲ್ಲಿ ಚಿತ್ರಕಲಾ ಶಿಕ್ಷಣ	**ವರ್ಗಗಳಲ್ಲಿ ಬೋಧಿಸುವವರ ವಿದ್ಯಾರ್ಹತೆ**
೧. ಪ್ರಾಥಮಿಕ ಹಂತದಲ್ಲಿ ಚಿತ್ರಕಲಾ ಶಿಕ್ಷಣ (೧ ರಿಂದ ೪ನೇ ವರ್ಗ)	೧. ಡಿ.ಟಿ.ಸಿ/ಡಿ.ಎಂ.ಸಿ/ಎ.ಟಿ.ಸಿ – ಪರೀಕ್ಷೆಯಲ್ಲಿ ಪಾಸಾಗಿರಬೇಕು
೨. ಮಾಧ್ಯಮಿಕ ಹಂತದಲ್ಲಿ ಚಿತ್ರಕಲಾ ಶಿಕ್ಷಣ (೫ ರಿಂದ ೭ನೇ ವರ್ಗ)	೨. ಡಿ.ಟಿ.ಸಿ/ಡಿ.ಎಂ.ಸಿ/ಎ.ಟಿ.ಸಿ – ಪರೀಕ್ಷೆಯಲ್ಲಿ ಪಾಸಾಗಿರಬೇಕು
೩. ಪ್ರೌಢಹಂತದಲ್ಲಿ ಚಿತ್ರಕಲಾ ಶಿಕ್ಷಣ	೩. ಫೈನ್ ಆರ್ಟ್ ಇನ್ ಡಿಪ್ಲೋಮಾ/

(೮ ರಿಂದ ೧೦ನೇ ವರ್ಗ) — ಎ.ಎಂ/ ಎ.ಈ.ಡಿ. ಪರೀಕ್ಷೆಯಲ್ಲಿ ಪಾಸಾಗಿರಬೇಕು.

೪. ಪದವಿ ಪೂರ್ವ ಹಂತದಲ್ಲಿ ಚಿತ್ರಕಲಾ ಶಿಕ್ಷಣ ಕಲಾಮೂಲ-೧ & ೨ ಪಾಸಾಗಿರಬೇಕು — ೪. ಪೋಸ್ಟ್ ಡಿಪ್ಲೋಮಾ/ಎಂ.ವಿ.ಎ/ ಎಂ.ಎಫ್.ಎ- ಪರೀಕ್ಷೆಯಲ್ಲಿ

೫. ಪದವಿ ಹಂತದಲ್ಲಿ ಚಿತ್ರಕಲಾ ಶಿಕ್ಷಣ ಡಿಪ್ಲೋಮಾ/ಬಿ.ವಿ.ಎ./ಬಿ.ಎಫ್.ಎ — ೫. ಪೋಸ್ಟ್ ಡಿಪ್ಲೋಮಾ/ಎಂ.ವಿ.ಎ/ ಎಂ.ಎಫ್.ಎ- ಪರೀಕ್ಷೆಯಲ್ಲಿ ಪಾಸಾಗಿರಬೇಕು

೬. ಸ್ನಾತಕೋತ್ತರ ಹಂತದಲ್ಲಿ — ೬. ಪೋಸ್ಟ್ ಡಿಪ್ಲೋಮಾ/ಎಂ.ವಿ.ಎ/ ಎಂ.ಎಫ್.ಎ- ಪರೀಕ್ಷೆಯೊಂದಿಗೆ ಪಿಹೆಚ್.ಡಿ. ನೆಟ್ ಪರೀಕ್ಷೆಯನ್ನು ಪಾಸಾಗಿರಬೇಕು

ಬ. ಚಿತ್ರಕಲಾ ತರಬೇತಿ ವರ್ಗಗಳು	**ವರ್ಗಗಳಿಗೆ ಬೋಧಿಸುವವರ ವಿದ್ಯಾಹರ್ತತೆ**
೧. ಎ.ಟಿ.ಸಿ. ವರ್ಗಗಳು ಎರಡು ವರುಷದ ಪೌಂಡೇಷನ್ ತರಗತಿಗಳಲ್ಲಿ ಪಾಸಾಗಿರಬೇಕು	೧. ಪೋಸ್ಟ್ ಡಿಪ್ಲೋಮಾ/ಎಂ.ವಿ.ಎ/ಎಂ.ಎಫ್.ಎ- ಪರೀಕ್ಷೆಯಲ್ಲಿ ಪಾಸಾಗಿರಬೇಕು
೨. ಎ.ಇಡಿ. ವರ್ಗಗಳು ಐದು ವರುಷದ ಡಿಪ್ಲೋಮೊ ತರಗತಿಗಳಲ್ಲಿ ಪಾಸಾಗಿರಬೇಕು	೨. ಪೋಸ್ಟ್ ಡಿಪ್ಲೋಮಾ/ಎಂ.ವಿ.ಎ/ಎಂ.ಎಫ್.ಎ -ದೊಂದಿಗೆ ಪಿಹೆಚ್‌ಡಿ/ನೆಟ್ ಪರೀಕ್ಷೆಯಲ್ಲಿ ಪಾಸಾಗಿರಬೇಕು

ಸ್ಕೂಲ್ ಆಫ್ ಆರ್ಟ್‌ನಲ್ಲಿಯ ಆಡಳಿತ ಮಂಡಳಿ ಮತ್ತು ಪ್ರಾಚಾರ್ಯರು ಹಾಗೂ ಸಿಬ್ಬಂದಿಯ ವಿವರ ಕೆಳಗಿನಂತಿದೆ. ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಪ್ರಮುಖ ಅಂಗ ಸಂಸ್ಥೆಯಾದ "ಫೈನ್ ಆರ್ಟ್ ಸೊಸಾಯಿಟಿ" ಯಲ್ಲಿ ಈ ವರೆಗೆ ಅಧ್ಯಕ್ಷರಾಗಿರುವ ಮಹನೀಯರು.

* ಶ್ರೀ ವಿ.ಸಿ. ಪಾವಟೆಯವರು ಮೈಸೂರು ಸರಕಾರದ ಜನಪ್ರಿಯ ಶಾಸಕರಾಗಿದ್ದರು. ಸಂಸ್ಥೆಯ ಪ್ರಥಮ 'ಅಧ್ಯಕ್ಷರಾಗಿದ್ದು' ೧೯೬೬ರವರೆಗೆ ಸೇವೆ ಸಲ್ಲಿಸಿರುವರು.
* ೧೯೬೬ರ ನಂತರ ಫೈನ್ ಆರ್ಟ್ ಸೊಸಾಯಿಟಿಯ 'ಅಧ್ಯಕ್ಷರಾಗಿ' ಆಯ್ಕೆಯಾದ ಡಾ. ಸರೋಜಿನಿ ಮಹಷಿಯವರು, ಲೋಕಸಭಾ ಸದಸ್ಯರಾಗಿದ್ದು ಉತ್ತಮ ಕಾರ್ಯಗಳೊಂದಿಗೆ ಜನಪ್ರಿಯರಾಗಿದ್ದು ಸಂಸ್ಥೆಯ ಕಾರ್ಯಗಳನ್ನು ಮಾಡಿದರು.
* ೧೯೭೪ ರಿಂದ ಫೈನ್ ಆರ್ಟ್ ಸೊಸಾಯಿಟಿಯ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಡಿ.ವಿ.ಹಾಲಭಾವಿಯವರು

ಸ್ಕೂಲ್ ಆಪ್ ಆರ್ಟ್‌ದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು ೧೯೭೭ರವರೆಗೆ ಅಂದರೆ ಅವರ ಅಂತ್ಯದವರೆಗೂ ಅಧ್ಯಕ್ಷರಾಗಿ ಶಾಲೆಯ ನಿರ್ದೇಶಕರಾಗಿ ಕಾರ್ಯವನ್ನು ನಿರ್ವಹಿಸಿದರು.

ಫೈನ್ ಆರ್ಟ್ ಸೊಸೈಟಿಯ ಚೇರ್‌ಮೆನ್‌ರಾಗಿರುವವರು

* ಫೈನ್ ಆರ್ಟ್ ಸೊಸಾಯಿಟಿ ಪ್ರಾರಂಭದಿಂದ ೧೯೮೬ರವರೆಗೆ ಶ್ರೀ ಆರ್. ಎಸ್.ಬಂಗೇರಾ ಅವರು ಚೇರ್‌ಮನ್‌ರಾಗಿದ್ದರು. ಇವರು ಮನಶಾಸ್ತ್ರಜ್ಞರಾಗಿದ್ಧು ಸಂಸ್ಥೆಯ ಕಾರ್ಯವನ್ನು ನಿರ್ವಹಿಸುತ್ತಿದ್ದರು.
* ೧೯೮೬ ರಿಂದ ಫೈನ್ ಆರ್ಟ್ ಸೊಸಾಯಿಟಿಯ ಚೇರಮನ್‌ರಾಗಿ ಆಯ್ಕೆಯಾದ ಶ್ರೀ ಜಿ.ಸಿ. ಬೆಲ್ಲದ ಅವರು ಖ್ಯಾತ ಉದ್ದಿಮೆದಾರರಾಗಿದ್ದರು. ಅವರು ಸಂಸ್ಥೆಯ ಕಾರ್ಯವನ್ನು ಈ ಮೊದಲಿನಿಂದಲೂ ಮಾಡುತ್ತಾ ಬಂದವರಾಗಿದ್ದರು.

ತ ೧೯೯೦ರಿಂದ ಶ್ರೀ ಚಂದ್ರಕಾಂತ ಬೆಲ್ಲದ ಜನಪ್ರಿಯ ಶಾಸಕರು, ಫೈನ್ ಆರ್ಟ್ ಸಂಸ್ಥೆಯ ಚೇರಮನ್‌ರಾಗಿ ಆಯ್ಕೆಯಾಗಿ ಇಲ್ಲಿಯವರೆಗೂ ಬಂದಿರುವರು

ಫೈನ್ ಆರ್ಟ್ ಸೊಸೈಟಿಯ ಖಜಾಂಚಿಯಾಗಿರುವವರು

* ಶ್ರೀ ಜಿ.ಸಿ. ಬೆಲ್ಲದ ಅವರು ಫೈನ್ ಆರ್ಟ್ ಸೊಸಾಯಿಟಿಯ ಪ್ರಾರಂಭದಿಂದ ೧೯೮೬ ರವರೆಗೂ ಖಜಾಂಚಿಯಾಗಿ ಸಂಸ್ಥೆಯಕಾರ್ಯವನ್ನು ಮಾಡಿದರು.
* ೧೯೮೬ ರಿಂದ ಫೈನ್ ಆರ್ಟ್ ಸೊಸಾಯಿಟಿಯ ಖಜಾಂಚಿಯಾಗಿ ಶ್ರೀ ಎಸ್.ಬಿ.ಜವಳಿಯವರು ಆಯ್ಕೆಯಾದರು. ಈ ಮೊದಲು ಸಂಸ್ಥೆಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು ಈಗಲೂ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿರುವರು.

ಫೈನ್ ಆರ್ಟ್ ಸೊಸೈಟಿಯ ಕಾರ್ಯದರ್ಶಿಯಾಗಿರುವವರು

* ಶ್ರೀ ದಾನಪ್ಪ ವಿ.ಹಾಲಭಾವಿಯವರು ಫೈನ್ ಆರ್ಟ್ ಸಂಸ್ಥೆಯ ಪ್ರಥಮ ಕಾರ್ಯದರ್ಶಿಯಾಗಿ ೧೯೭೪ರವರೆಗೆ ಶಾಲೆಯಎಲ್ಲಾ ಕಾರ್ಯಗಳನ್ನು ಮಾಡುತ್ತಾ ಸಂಸ್ಥೆಯ ಕಾರ್ಯದರ್ಶಿಯಾಗಿ ಕಾರ್ಯನಿವಶಹಿಸಿದರು.
* ೧೯೭೪ ರಿಂದ ಫೈನ್ ಆರ್ಟ್ ಸೊಸಾಯಿಟಿಯ ಕಾರ್ಯದರ್ಶಿಯಾಗಿ ಶ್ರೀ ಸಿ.ಟಿ. ಬಳಿಗಾರ ಅವರು ಆಯ್ಕೆಯಾಗಿ ಕಾರ್ಯನಿವಶಹಿಸಿದರು.
* ೧೯೮೦ ರಿಂದ ಫೈನ್ ಆರ್ಟ್ ಸೊಸಾಯಿಟಿಯ ಕಾರ್ಯದರ್ಶಿಯಾಗಿ ಶ್ರೀ ಸುರೇಶ ಡಿ. ಹಾಲಭಾವಿಯವರು ಆಯ್ಕೆಯಾಗಿ ಈವರೆಗೂ ಕಾರ್ಯನಿರ್ವಹಿಸುತ್ತಾ ಬಂದಿರುವರು.
* ೧೯೭೪ ರಿಂದ ಫೈನ್ ಆರ್ಟ್ ಸಂಸ್ಥೆಯ'ನಿರ್ದೇಶಕರಾಗಿ' ಶ್ರೀ ಡಿ.ವಿ.ಹಾಲಭಾವಿಯವರು ಆಯ್ಕೆಯಾಗಿ ೧೯೭೭ ರವರೆಗೂ ಕಾರ್ಯನಿರ್ವಹಿಸಿದರು.

ಸ್ಕೂಲ್ ಆಫ್ ಆರ್ಟ್‌ನ ಪ್ರಾಚಾರ್ಯರಾಗಿರುವವರು

* ೧೯೩೫ ರಿಂದ ಸ್ಕೂಲ್ ಆರ್ಟ್‌ದ ಪ್ರಥಮ ಪ್ರಾಚಾರ್ಯರಾಗಿದ್ದ ಶ್ರೀ ದಾನಪ್ಪ ಹಾಲಭಾವಿಯವರು ಪ್ರಾರಂಭಿಸಿದ ಕಲಾಶಾಲೆಯಲ್ಲಿ ೧೯೭೩ ರವರೆಗೆ ಅಂದರೆ ಸುಮಾರು ೩೮ ವರ್ಷ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದರು.

* ೧೯೭೩ ರಿಂದ ಸ್ಕೂಲ್ ಆಪ್ ಆರ್ಟದ ಪ್ರಾಚಾರ್ಯರಾಗಿದ್ದ ಶ್ರೀಮತಿ ತಾರಾ ಪವಾರ ಅವರು ೧೯೭೯ ರವರೆಗೆಅಂದರೆ ಸುಮಾರು ೬ ವರ್ಷ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದರು.

* ೧೯೭೯ ರಿಂದ ಫೈನ್ ಆರ್ಟ್‌ದ ಪ್ರಾಚಾರ್ಯರಾಗಿದ್ದ ಶ್ರೀ ಸುರೇಶ ಡಿ.ಹಾಲಭಾವಿಯವರು ೨೦೦೪ ರವರೆಗೆ ಅಂದರೆ ಸುಮಾರು ೨೫ ವರ್ಷ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದರು

* ೨೦೦೪ ರಿಂದ ಸ್ಕೂಲ್ ಆಪ್ ಆರ್ಟದ ಪ್ರಾಚಾರ್ಯರಾಗಿ ಶ್ರೀಮತಿ ಗಾಯತ್ರಿ ಗೌಡರ ಅವರು ಕಾರ್ಯನಿರ್ವಹಿಸುತ್ತಿರುವರು.

* ಶ್ರೀ ಎನ್ ಕೆ ಹಾಲ್‌ಕೆರಿರವರು ಪ್ರಾಚರ್ಯರಾಗಿ ಕಾರ್ಯನಿರ್ವಹಿಸರುವರು

ಪ್ರಸಕ್ತ ವರ್ಷದ ಸ್ಕೂಲ್ ಆಫ್ ಆರ್ಟ್ ಆಡಳಿತ ಮಂಡಳಿ

ಚೇರ್‌ಮೆನ್‌ರು	–	ಶ್ರೀ ಚಂದ್ರಕಾಂತ ಬೆಲ್ಲದ, ಮಾಜಿ ಶಾಸಕರು
ಕಾರ್ಯದರ್ಶಿ	–	ಶ್ರೀ ಸುರೇಶ ಡಿ. ಹಾಲಭಾವಿ
ಖಜಾಂಚಿ	–	ಶ್ರೀ ಎಸ್.ಬಿ.ಜರಳಿ
ಸದಸ್ಯರು	–	ಶ್ರೀ ಎಂ.ಪಂಚಪ್ಪ
		ಶ್ರೀ ಬಿ.ಎಂ.ಹನುಮನಾಳ
		ಡಾ. ಲಕ್ಷ್ಮಣಕುಮಾರ ಸಣ್ಣೆಲ್ಲಪ್ಪನವರ
		ಡಾ. ಎಸ್.ರಾಜಶೇಖರ
		ಶ್ರೀ ಬಸವರಾಜ್ ಬಿಕ್ಕಣ್ಣವರ್

ಪ್ರಸಕ್ತ ವರ್ಷದ ಸ್ಕೂಲ್ ಆಫ್ ಆರ್ಟ್‌ನ ಸಿಬ್ಬಂದಿ ವರ್ಗ

ಪ್ರಾಚಾರ್ಯರು	–	ಶ್ರೀಮತಿ ಡಾ. ರೇಣುಕಾ ಮಾರ್ಕಂಡೆ
ಉಪನ್ಯಾಸಕರು	–	ಡಾ. ಬಿ.ಎಂ.ಪಾಟೀಲ
	–	ಶ್ರೀ ಸಿ. ಜಿ. ಪಾಟೀಲ
	–	ಶ್ರೀ ಎಸ್. ಎಂ. ಲೋಹಾರ
	–	ಶ್ರೀ ಎನ್. ಎನ್. ಚಿನ್ನಣ್ಣವರ್
ಕರುಣಿಕರು	–	ಶ್ರೀಮತಿ ಪಾರ್ವತಿ ಎಸ್. ಹಾಲಭಾವಿ

ಜವಾನ – ಶ್ರೀ ಅರ್ಜುನ ಅಂಬಿಗೇರ

(ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ದಾಖಲಾತಿಗಳಿಂದ)

೧೯೩೫ ರಿಂದ ಶ್ರೀ ಡಿ.ವಿ.ಹಾಲಭಾವಿಯವರು ಸಂಸ್ಥಾಪಕರಾಗಿ, ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ನಿರ್ದೇಶಕರಾಗಿ ಕಾರ್ಯೋನ್ಮುಖರಾಗಿದ್ದರು.

೧೯೫೮-೫೯ರಲ್ಲಿಯ ಸಿಬ್ಬಂದಿ	**ಹುದ್ದೆ**	**ಸೇವೆಗೆ ಸೇರಿದ ಇಸ್ವಿ**
೧. ಶ್ರೀ ಡಿ.ವಿ.ಹಾಲಭಾವಿ,	ಪ್ರಾಚಾರ್ಯರು	೧೯೩೫
೨. ಶ್ರೀಮತಿ ತಾರಾ ಪವಾರ	ಉಪನ್ಯಾಸಕರು	೧೯೫೮
೩. ಶ್ರೀ ಬಿ.ಬಿ.ಬಡಿಗೇರ	ಉಪನ್ಯಾಸಕರು	೧೯೫೮
೪. ಶ್ರೀ ಎನ್.ಜಿ. ಬಡಿಗೇರ	ಉಪನ್ಯಾಸಕರು	೧೯೫೦
೫. ಶ್ರೀ ಎಸ್.ಜೆ.ದೇಶದಾಂಡೆ	ಉಪನ್ಯಾಸಕರು	೧೯೫೮
೬. ಶ್ರೀಮತಿ ಲೀಲಾ ಕಿತ್ತೂರ	ಕರುನೀಕರು	೧೯೫೮
೭. ಶ್ರೀಮತಿ ಕಮಲವ್ವ ಮಾನೆ	ಜವಾನರು	೧೯೫೮

೧೯೬೦-೭೦ರಲ್ಲಿಯ ಸಿಬ್ಬಂದಿ	**ಹುದ್ದೆ**
೧. ಶ್ರೀ ಡಿ.ವಿ.ಹಾಲಭಾವಿ	ಪ್ರಾಚಾರ್ಯರು
೨. ಶ್ರೀಮತಿ ತಾರಾ ಪವಾರ	ಉಪನ್ಯಾಸಕರು
೩. ಶ್ರೀ ಎಸ್.ಜೆ.ದೇಶಪಾಂಡೆ	ಉಪನ್ಯಾಸಕರು
೪. ಶ್ರೀ ಎನ್.ಜೆ.ಬಡಿಗೇರ	ಉಪನ್ಯಾಸಕರು
೫. ಶ್ರೀ ಬಿ.ಬಿ.ಬಡಿಗೇರ	ಉಪನ್ಯಾಸಕರು
೬. ಶ್ರೀ ಆರ್.ಎಸ್.ಮಣಿಯೂರ	ಉಪನ್ಯಾಸಕರು
೭. ಶ್ರೀಮತಿ ಲೀಲಾ ಕಿತ್ತೂರ	ಕರುಣಿಕರು
೮. ಶ್ರೀಮತಿ ಗಂಗವ್ವ ತೇಗೂರ	ಜವಾನ

೧೯೭೦ ರಿಂದ ೭೬ರಲ್ಲಿಯ ಸಿಬ್ಬಂದಿ	**ಹುದ್ದೆ ಮತ್ತು ವೇತನ ಶ್ರೇಣಿ**
೧. ಶ್ರೀ ಡಿ.ವಿ.ಹಾಲಭಾವಿ	ಪ್ರಾಚಾರ್ಯರು, ೧೯೩೫ ರಿಂದ

೨. ಶ್ರೀಮತಿ ತಾರಾ ಪವಾರ	ಉಪನ್ಯಾಸಕರು, ಗೌರವ ಧನವನ್ನು ನೀಡಲಾಗುತ್ತಿತ್ತು
೩. ಶ್ರೀ ಡಿ.ವಿ.ಹಾಲಭಾವಿ	ಉಪನ್ಯಾಸಕರು, ಗೌರವ ಧನವನ್ನು ನೀಡಲಾಗುತ್ತಿತ್ತು
೪. ಶ್ರೀ ಆರ್.ಬಿ. ಗರಗ	ಉಪನ್ಯಾಸಕರು, ಗೌರವ ಧನವನ್ನು ನೀಡಲಾಗುತ್ತಿತ್ತು
೫. ಶ್ರೀ ವಿ. ಸಿ. ಸಿಂಧೆ	ಉಪನ್ಯಾಸಕರು, ಗೌರವ ಧನವನ್ನು ನೀಡಲಾಗುತ್ತಿತ್ತು
೬. ಶ್ರೀ ಜೆ. ಎಂ. ಬಡಿಗೇರ	ಉಪನ್ಯಾಸಕರು, ಗೌರವ ಧನವನ್ನು ನೀಡಲಾಗುತ್ತಿತ್ತು
೭. ಶ್ರೀಮತಿ ಗಂಗವ್ವ ತೇಗೂರ	ಆವಾನ, ೬೦-೦೦

೧೧-೦೩-೭೭ರಂದು ಸರಕಾರದಿಂದ ಅನುಮೋದನೆಗೊಂಡ ಸಿಬ್ಬಂದಿ (ಹುದ್ದೆ ಮತ್ತು ವೇತನ ಶ್ರೇಣಿ)

೧. ಶ್ರೀಮತಿ ತಾರ ಪವಾರ	ಪ್ರಾಚಾರ್ಯರು	೯೪+೫೦+೭೧+೧೦ =	೨೨೫-೦೦
೨. ಶ್ರೀ ಸುರೇಶ.ಡಿ.ಹಾಲಭಾವಿ	ಉಪನ್ಯಾಸಕರು	೯೭+೭೧+೧೦ =	೧೭೫-೦೦
೩. ಶ್ರೀಮತಿ ಗಂಗವ್ವತೇಗೂರ	ಆವಾನ	೩೦+೨೫+೧೦ =	೬೫-೦೦

ಈ ಮೂರು ಹುದ್ದೆಗಳು ಸರಕಾರದಿಂದ ಅನುಮೋದಿತಗೊಂಡಿದ್ದು ನಂ ಎ.ಆರ್ಟ್ ೨-ಜಿ.ಸಿ.-೨೨:೭೬-೭೭ ದಿನಾಂಕ. ೧೧-೩-೧೯೭೭ ಸ್ಕೂಲ್ ಆಫ್ ಆರ್ಟ್‌ಗೆ ಸರಕಾರದಿಂದ ವೇತನ ಪ್ರಾರಂಭವಾಯಿತು.

೧೯೭೮ ರಿಂದ ೧೯೮೫ ರವರೆಗೆ ಸಿಬ್ಬಂದಿ & ಹುದ್ದೆ	**ವೇತನ ಶ್ರೇಣಿ**
೧. ಶ್ರೀ ಡಿ.ವಿ.ಹಾಲಭಾವಿ, ಪ್ರಾಚಾರ್ಯರು,೧೯೭೮	೩೦೦+೫೦+೧೪೬+೧೩=೫೦೯-೦೦
೨. ಶ್ರೀ ಎನ್.ಜಿ.ಮುತ್ತೆಗೇಕರ್, ಉಪನ್ಯಾಸಕರು ೧೯೭೬	೮೦+೭೧+೧೦= ೧೬೧-೦೦
೩. ಶ್ರೀ ಆರ್.ಎಂ.ಅಂಬ್ಲೀಮಠ, ಉಪನ್ಯಾಸಕರು ೧೯೮೦	೮೦+೭೧+೧೦= ೧೬೧-೦೦
೪. ಶ್ರೀ ಎನ್.ಕೆ.ಹಾಲಕೇರಿ, ಉಪನ್ಯಾಸಕರು ೧೯೮೧	೮೦+೭೧+೧೦= ೧೬೧-೦೦
೫. ಶ್ರೀ ಹೆಚ್.ಜೆ.ಮುಲ್ಲಾ, ಉಪನ್ಯಾಸಕರು ೧೯೮೦	೮೦+೭೧+೧೦= ೧೬೧-೦೦
೬. ಕುಮಾರಿ ಗಾಯಿತ್ರಿಗೌಡರ, ಉಪನ್ಯಾಸಕರು ೧೯೮೪	೮೦+೭೧+೧೦= ೧೬೧-೦೦
೭. ಶ್ರೀಮತಿ ಗಂಗವ್ವತೇಗೂರ, ಜವಾನ ೧೯೭೦	೫೦+೭೧+೧೦= ೧೩೧-೦೦

ಶ್ರೀ ಡಿ.ವಿ. ಹಾಲಭಾವಿಯವರು ನಿರ್ದೇಶಕರು

ಸಿಬ್ಬಂದಿ ವರ್ಗ	**ಸೇವೆಗೆ ಸೇರಿದ ಇಸ್ವಿ**	**ವೇತನ ಶ್ರೇಣಿ**
೧. ಶ್ರೀ ಸುರೇಶ ಡಿ.ಹಾಲಭಾವಿ, ಪ್ರಾಚಾರ್ಯರು	೧೯೭೮	

೨. ಶೀ ಎನ್.ಕೆ.ಹಾಲಕೇರಿ ಉಪನ್ಯಾಸಕರು	೧೯೮೬	೧೪೦೦ ರಿಂದ ೨೭೫೦-೦೦
೩. ಶ್ರೀಮತಿ ಗಾಯಿತ್ರಿ ಗೌಡರ ಉಪನ್ಯಾಸಕರು	೧೯೮೬	೧೪೦೦ ರಿಂದ ೨೭೫೦-೦೦
೪. ಶ್ರೀಮತಿ ರೇಣುಕಾ ಮಾರ್ಕಂಡೇ ಉಪನ್ಯಾಸಕರು	೧೯೮೬	೧೪೦೦ ರಿಂದ ೨೭೫೦-೦೦
೫. ಶ್ರೀ ವಿ. ಆರ್. ಬಡಿಗೇರ ಉಪನ್ಯಾಸಕರು	೧೯೮೬	೧೪೦೦ ರಿಂದ ೨೭೫೦-೦೦
೬. ಶ್ರೀಮತಿ ಗಂಗವ್ವ ತೇಗೂರ ಜವಾನ	೧೯೭೦	೭೮೦ ರಿಂದ ೧೦೪೦

ಈ ಮೇಲಿನ ನಾಲ್ಕು ಜನ ಉಪನ್ಯಾಸಕರು ಹುದ್ದೆಗಳು ಸರಕಾರದಿಂದ ಅನುಮೋದನೆಗೊಂಡಿದ್ದು ೩೦-೧೦-೧೯೮೬ರಲ್ಲಿ ಅಧಿಕೃತವಾಗಿ (ನಾಲ್ಕು ಜನ ಉಪನ್ಯಾಸಕರನ್ನು) ಸ್ಕೂಲ ಆಫ್ ಆರ್ಟ್‌ಗೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬೋಧನೆಯ ಅವಶ್ಯಕತೆಯ ಹಿನ್ನೆಲೆಯಲ್ಲಿ ಸರಕಾರವು ಅನುಮತಿ ನೀಡಿ ಒಟ್ಟು ೬ ಸಿಬ್ಬಂದಿಗೆ ೮೦% ವೇತನವನ್ನು ನಿಗದಿಗೊಳಿಸಿತು.

೧೯೯೧ರಲ್ಲಿ ರಾಜ್ಯದ ಕಲಾಶಾಲೆಗಳಿಗೆ ಸರ್ಕಾರವು ಈಗಾಗಲೇ ನೀಡುತ್ತಿರುವ ೮೦% ರಷ್ಟು ಅನುದಾನವನ್ನು ಶೇಕಡಾ ೧೦೦ಕ್ಕೆ ಹೆಚ್ಚಿಸಲು ಆದೇಶ ಹೊರಡಿಸಿತು. (**ಸರ್ಕಾರ ಆದೇಶ ಸಂಖ್ಯೆ: ಇಡಿ-ಎಂ-ಪಿ-ಎಸ್ ೯೦ ಬೆಂಗಳೂರು ದಿನಾಂಕ ೨೭-೦೩-೧೯೯೧**): ವಿದ್ಯಾರ್ಥಿಗಳು ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋದಂತೆ ಸಿಬ್ಬಂದಿಯ ಕೊರತೆಯ ಹಿನ್ನಲೆಯಲ್ಲಿ ಸಿಬ್ಬಂದಿಯನ್ನು ತುಂಬಿಕೊಳ್ಳಲು ಸರಕಾರದ ಅನುಮತಿಯನ್ನು ಪಡೆದು ಮತ್ತೆ ೬ ಜನ ಸಿಬ್ಬಂದಿಯನ್ನು ೧೯೯೧ ರಲ್ಲಿ ತುಂಬಿಕೊಳ್ಳಲಾಯಿತು.

* ೧೯೯೧ರಲ್ಲಿ ಅಧಿಕೃತವಾಗಿ ಸಿಬ್ಬಂದಿಯನ್ನು ತುಂಬಿಕೊಂಡು ೧೦೦% ವೇತನವನ್ನು ತೆಗೆದುಕೊಂಡಿದ್ದು

ಕ್ರಸಂ.	**ಅಭ್ಯಥಿಯ ಹೆಸರು & ಹುದ್ದೆ**	**ವರ್ಷ**	**ವೇತನ ಶ್ರೇಣಿ**
	ಶ್ರೀ ಡಿ.ವಿ.ಹಾಲಭಾವಿ, ನಿರ್ದೇಶಕರು	೧೯೩೫	-
೦೧.	ಶ್ರೀ ಸುರೇಶ.ಡಿ.ಹಾಲಭಾವಿ, ಪ್ರಾಚಾರ್ಯರು	೧೯೭೯	-
೦೨.	ಶ್ರೀ ಎನ್.ಕೆ.ಹಾಲಕೇರಿ, ಉಪನ್ಯಾಸಕರು	೧೯೮೬	೧೪೦೦ ರಿಂದ ೨೭೦೦
೦೩.	ಶ್ರೀಮತಿ ಗಾಯಿತ್ರಿ ಗೌಡರ, ಉಪನ್ಯಾಸಕರು	೧೯೮೬	೧೪೦೦ ರಿಂದ ೨೭೦೦
೦೪.	ಶ್ರೀಮತಿ ರೇಣುಕಾ ಮಾರ್ಕಂಡೆ, ಉಪನ್ಯಾಸಕರು	೧೯೮೬	೧೪೦೦ ರಿಂದ ೨೭೦೦
೦೫.	ಶ್ರೀ ಬಿ.ಎಂ.ಪಾಟೀಲ, ಉಪನ್ಯಾಸಕರು	೧೯೯೧-೯೩	೧೪೦೦ ರಿಂದ ೨೭೦೦

೦೬.	ಶ್ರೀ ಸಿ.ಜಿ.ಪಾಟೀಲ, ಉಪನ್ಯಾಸಕರು	೧೯೯೧-೯೩	೧೪೦೦ ರಿಂದ ೨೬೦೦
೦೭.	ಶ್ರೀ ಎಸ್.ಎಂ.ಲೋಹಾರ, ಉಪನ್ಯಾಸಕರು	೧೯೯೧-೯೩	೧೪೦೦ ರಿಂದ ೨೬೦೦
೦೮.	ಶ್ರೀ ಎನ್.ಎನ್.ಚಿನ್ನಣ್ಣವರ, ಉಪನ್ಯಾಸಕರು	೧೯೯೧-೯೩	೧೪೦೦ ರಿಂದ ೨೬೦೦
೦೯.	ಶ್ರೀಮತಿ ಪಾರ್ವತಿ ಹಾಲಭಾವಿ, ಕರುಣಿಕರು	೧೯೯೧-೯೩	೧೪೦೦ ರಿಂದ ೨೬೦೦
೧೦.	ಶ್ರೀಮತಿ ಗಂಗವ್ವ ತೇಗೂರ, ಜವಾನಳು	೧೯೭೦	-
೧೧.	ಶ್ರೀ ಅರ್ಜುನ ಅಂಬಿಗೇರ, ಕಾವಲುಗಾರ/ಜವಾನ	೧೯೯೧-೯೩	೭೮೦ ರಿಂದ ೧೦೪೦

೧೯೩೫ರಲ್ಲಿ ಪ್ರಾರಂಭವಾದ ಈ ಸ್ಕೂಲ ಆಫ್ ಆರ್ಟ್‌ದಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿ ವರ್ಗದ ಹೆಸರುಗಳು ಮತ್ತು ಸೇವೆಗೆ ಸೇರಿದ ದಿನಾಂಕ ಇಸವಿ ಯಾವ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವವರು, ತೆಗೆದುಕೊಂಡ ವೇತನ ಶ್ರೇಣಿಯನ್ನು ತಿಳಿಸುವುದರೊಂದಿಗೆ ಸಿಬ್ಬಂದಿಯ ವಿವರವಾದ ಮಾಹಿತಿಯನ್ನು ನೀಡುತ್ತ ಹಾಲಭಾವಿ ಸ್ಕೂಲ ಆಫ್ ಆರ್ಟ್‌ವು ಸರಕಾರದ ಅನುಮತಿಯನ್ನು ಹೊಂದಿದೆ.

ಸಮಕಾಲೀನ ಸ್ಥಿತಿಗತಿಗಳು

ಈ ಮೇಲೆ ತಿಳಿಸಿದ ಎಲ್ಲಾ ವರ್ಗಗಳಿಗೂ ಪಠ್ಯಕ್ರಮ ಸಿದ್ದಗೊಂಡಿದ್ದು ಶೈಕ್ಷಣಿಕ ಆಯೋಗಗಳ ವರದಿಯನ್ನಾಧರಿಸಿ ಶಿಕ್ಷಣ ತಜ್ಞರು, ಮನಶಾಸ್ತ್ರಜ್ಞರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ರಚಿತವಾದ ಪಠ್ಯಕ್ರಮವು ಸರಕಾರದಿಂದ ಮಾನ್ಯತೆಯನ್ನೂ ಪಡೆದಿದೆ. ಆದಾಗ್ಯೂ ಕ್ರಮಬದ್ದವಾದ ಚಿತ್ರಕಲಾ ಶಿಕ್ಷಣ ದೊರೆಯುತ್ತಿಲ್ಲ. ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ, ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಹಂತದಲ್ಲಿ ಕೇವಲ ಪಠ್ಯೇತರ ಚಟುವಟಿಕೆಯಾಗಿ ಮಾತ್ರ ಉಳಿದುಕೊಂಡಿದ್ದು ಒಂದೆಡೆ ಆದರೆ, ರಾಜ್ಯದಲ್ಲಿಯ ಚಿತ್ರಕಲಾ ಶಾಲೆಗಳು ಪದವಿ ಹಂತದ ಚಿತ್ರಕಲಾ ಪಠ್ಯಕ್ರಮವನ್ನು ಹೊಂದಿದ್ದು ಎಸ್.ಎಸ್.ಎಲ್.ಸಿ. ನಂತರ ಎರಡು ವರ್ಷಗಳ ಕಲಾಮೂಲ ತರಗತಿಗಳನ್ನು, ನಂತರ ಮೂರು ವರ್ಷಗಳ ಡ್ರಾಯಿಂಗ್ ಮತ್ತು ಪೇಂಟಿಂಗ್‌ದಲ್ಲಿ ವಿಶೇಷ ಪರಿಣಿತಿಯನ್ನು ಹೊಂದುತ್ತಿದ್ದು (ಎಸ್.ಎಸ್.ಎಲ್.ಸಿ ನಂತರ ೨+೩). ಈ ಕಲಾಶಾಲೆಗಳನ್ನು ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಮುಂದುವರೆಸುತ್ತ ಕೆ.ಎಸ್.ಇ ಬೋರ್ಡಿನಿಂದ ಪ್ರಮಾಣ ಪತ್ರಗಳು ದೊರೆಯುತ್ತಿರುವುದು ಅವೈಜ್ಞಾನಿಕವಾದುದು ಎಂಬುದನ್ನು ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘ, ಧಾರವಾಡ ಮತ್ತು ಚಿತ್ರಕಲಾ ಮಹಾವಿದ್ಯಾಲಯ ಸಂಸ್ಥೆಗಳ ಒಕ್ಕೂಟ ಬೆಂಗಳೂರು ಇವೆರಡೂ ಸಂಘಟನೆಗಳ ಹೋರಾಟದಿಂದಾಗಿ ಹಾಗೂ ಶಿಕ್ಷಣ ತಜ್ಞರು ಮತ್ತು ರಾಜಕೀಯ ಮುತ್ಸದ್ದಿಗಳ ಬೆಂಬಲದೊಂದಿಗೆ ಫಲದೊರೆತಿದೆ.

ಕಳೆದ ಮೂರು ವರ್ಷಗಳಿಂದ ಕನ್ನಡ ವಿಶ್ವವಿದ್ಯಾಲಯ ಹಂಪೆಯು ರಾಜ್ಯದ ಚಿತ್ರಕಲಾ ಶಾಲೆಗಳ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಪರೀಕ್ಷೆ ನಡೆಸಿಕೊಂಡು ಪ್ರಮಾಣಪತ್ರಗಳನ್ನು ನೀಡುತ್ತಿರುವುದು ರಾಜ್ಯದ ಕಲಾಶಾಲೆಗಳ ಆಡಳಿತ ಮಂಡಳಿ ಮತ್ತು ಶಾಲೆಯ ಸಿಬ್ಬಂದಿ ವರ್ಗ ಹಾಗೂ ಚಿತ್ರಕಲಾ ವಿದ್ಯಾರ್ಥಿಗಳಿಗೆಲ್ಲ ಹೆಮ್ಮೆಯ ವಿಷಯವಾಗಿತ್ತು. ಆದರೆ ಅದು ಬಹಳ ದಿನ ಉಳಿಯಲಿಲ್ಲ. ೨೦೦೬-೦೭ನೇ ಸಾಲಿನಿಂದ ಕನ್ನಡ ವಿಶ್ವ ವಿದ್ಯಾಲಯಚಿತ್ರಕಲಾ ಶಾಲೆಗಳನ್ನು ಕೈಬಿಡುತ್ತಿದ್ಧು ಯಥಾವತ್ತಾಗಿ ಆಯಾ ವಿಶ್ವವಿದ್ಯಾಲಯಗಳ ಅಧಿನಿಯಮಗಳಿಗನುಸಾರವಾಗಿ ಚಿತ್ರಕಲಾ ಶಾಲೆಗಳು ಆಯಾ ವಿಶ್ವವಿದ್ಯಾಲಯಗಳ ಅಧೀನದಲ್ಲಿರಬೇಕು. ಇಲ್ಲವೇ ಮರಳಿ ಕೆ.ಎಸ್.ಇ. ಬೋರ್ಡಿಗೆ ಬರಬೇಕು ಅನ್ನುವ ಸರಕಾರಿ ಆದೇಶವನ್ನು ಅರಗಿಸಿಕೊಳ್ಳುವುದು

ಕಷ್ಟವಾಗಿದೆ. ರಾಜ್ಯದ ಕಲಾಶಾಲೆಗಳು ಅಲ್ಲಿಯ ಅಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿಗಳಿಗೆ ತೀವ್ರ ಗೊಂದಲವನ್ನುಂಟು ಮಾಡಿದೆ.

ಒಟ್ಟಾರೆಯಾಗಿ ರಾಜ್ಯದ ಕಲಾಶಾಲೆಗಳು ಈ ಸರಕಾರಿ ಆದೇಶದಿಂದ ಅತಂತ್ರ ಸ್ಥಿತಿಯನ್ನು ಎದುರಿಸಬೇಕಾಗಿದೆ. ಈ ಹಂತದಲ್ಲಿ ಉದ್ಭವವಾಗಿರುವ ಎಲ್ಲಾ ಸಮಸ್ಯೆಗಳನ್ನು ಗಂಭೀರವಾಗಿ ಪರಿಹರಿಸಲು "ರಾಜ್ಯದ ಎಲ್ಲಾ ಚಿತ್ರಕಲಾ ಶಾಲೆಗಳನ್ನು ಮಹಾವಿದ್ಯಾಲಯಗಳನ್ನಾಗಿ ಮಾಡಿ , ಕನ್ನಡ ವಿಶ್ವವಿದ್ಯಾಲಯದ ಅಧೀನದಲ್ಲಿಯೇ ಮುಂದುವರೆಸಲು" ಸರಕಾರವು ದೃಢ ನಿರ್ಧಾರ ತೆಗೆದುಕೊಳ್ಳುವುದು ತುಂಬಾ ಅವಶ್ಯವಾಗಿದೆ. ಈ ಕುರಿತು ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘ ಧಾರವಾಡ ಹಾಗೂ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಒಕ್ಕೂಟ ಬೆಂಗಳೂರು ಹಾಗೂ ಎಲ್ಲಾ ಚಿತ್ರಕಲಾ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಅಧ್ಯಾಪಕವರ್ಗ, ಗಂಭೀರವಾದ ಚಿಂತನೆಯನ್ನು ಮಾಡಿ ಒಂದು ಒಳ್ಳೆಯ ನಿರ್ಧಾರಕ್ಕೆ ಬಂದು ಸರಕಾರದ ಗಮನಕ್ಕೆ ತಂದು ಸರಕಾರದಿಂದ ಒಂದು ನಿರ್ದಿಷ್ಟವಾದ ಆದೇಶವನ್ನು ರಾಜ್ಯದ ಕಲಾಶಾಲೆಗಳ ಭವಿಷ್ಯದ ಹಿನ್ನೆಲೆಯಲ್ಲಿ ರೂಪಿಸುವುದನ್ನು ಮಾಡಬೇಕಾಗಿದೆ ಎಂಬುದನ್ನು ಮರೆಯುವಂತಿಲ್ಲ.

ಅಡಿಟಿಪ್ಪಣಿ

ಶ್ರೀ ಡಿ.ವ್ಹಿ. ಹಾಲಬಾವಿಯವರ ಫೋಟೋಗ್ರಾಪ್ಸ್ ಅಲ್ಬಾಮ್ ದಿಂದ
ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ದಾಖಲೆ ಪುಸ್ತಕ
ನನ್ನ ಸಿಲೋನ್ ಪ್ರವಾಸ ಪುಟ ೩-೪
ಡಾ. ಎಸ್.ಸಿ.ಪಾಟೀಲ್ (ಸಂ) ಸುರೇಶ್ ಹಾಲಭಾವಿ (ಪ್ರ.ಸಂ) ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು
ಎಸ್.ಕೆ.ಹೂಗಾರ, ಡಿ.ವ್ಹಿ. ಹಾಲಭಾವಿ
ಡಾ॥ ಎಸ್.ಸಿ.ಪಾಟೀಲ್ ಚಿತ್ರಾಕ್ಷಿ
ಶಂಕ್ರಪ್ಪ ಎಂ. ಕುಂದಗೋಳ-ಚಿತ್ರಕಲಾವಿದ-ಡಿ.ವ್ಹಿ. ಹಾಲಭಾವಿ ಪುಟ-೧೫, ೫೫-೬೬
ಪ್ರೋ ದಮಯಂತಿ ನರೆಗಲ್ಲ್ ಕಲಾತಪಸ್ವಿ ಡಿ.ವ್ಹಿ ಹಾಲಭಾವಿ ಜೀವಚರಿತ್ರೆ ಪುಟ-೨೪, ೫೩-೬೭
ಮಂಜುನಾಥ ಕೆ ಮಾನೆ ಚಿತ್ರಕಲಾ ಶಿಕ್ಷಣ
ಎನ್ ಎನ್ ಚಿನ್ನಣ್ಣವರ್ ಕೀರುಪ್ರಬಂಧ -ಸುರೇಶ ಹಾಲಭಾವಿಯವರ ಕಲೆ ಮತ್ತು ಬದುಕು
ಚನ್ನಪ್ಪಗೌಡ ಗು ಪಾಟೀಲ ಜೆ ಎಸ್ ಎಸ್ ಸ್ಕೂಲ್ ಆಪ್ ಆರ್ಟ್ ಧಾರವಾಡದಲ್ಲಿ ಸಂಗ್ರಾ"ತ ಕಲಾಕೃತಿಗಳು ಒಂದು ಅಧ್ಯಯನ ಪುಟ ಸಂಖ್ಯೆ-೨೫-೩೭
ದೃಶ್ಯಕಲಾ ಸಂವೇದನೆ-ಪ್ರೋ ಎಸ್ ಸಿ ಪಾಟೀಲ ಪುಟ ೧-೩೧
ಶ್ರೀ ಡಿ.ವ್ಹಿ. ಹಾಲಭಾವಿ ಆರ್ಟ್ ಗೈಡ್ ಮೈ ವಿಸಿಟ್ & ಇಂಪ್ರೆಸನ್ ಆಫ್ ಸೈಲೋನ್
ಕನ್ನಡಿಗ ವಾರಪತ್ರಿಕೆ ೧೯೫೫ ಸ್ಕೂಲ್ ಆಫ್ ಆರ್ಟ್ ಧಾರವಾಡ ವಜ್ರಮಹೋತ್ಸವ
ಡಿ.ವ್ಹಿ.ಹಾಲಭಾವಿ ಮೈ ಆರ್ಟ್‌ಟಿಸ್ಟ್
ಡಾ.ಎಸ್. ಪಾಟೀಲ ವರ್ಣ ಸಂಚಯ
ಅರವತ್ತರ ಬಸಗೆ (ಸಂ) ತಾರಾ ಪವಾರ (ಪ್ರ ಸಂ) ಸ್ಕೂಲ್ ಆಫ್ ಆರ್ಟ್ ಧಾರವಾಡ
ಕೆ.ವಿ. ಸುಬ್ರಮಣ್ಯಂ ಕಲಾಸಂವೇದನೆಯ ಒಳನೋಟಗಳು
ಸವಿತಾ ಬಡಿಗೇರ ಎಂ.ಫಿಲ್ ಪ್ರಬಂಧ, ಧಾರವಾಡ ಜಿಲ್ಲೆಯ ಚಿತ್ರಕಲೆ.

ಅಧ್ಯಾಯ : ಐದು

ಸ್ಕೂಲ್ ಆಫ್ ಆರ್ಟ್‌ನ ಬೋಧಕವರ್ಗ ಮತ್ತು ವಿದ್ಯಾರ್ಥಿ ಸಮುದಾಯ

ಅಧ್ಯಾಯ : ಐದು

ಸ್ಕೂಲ್ ಆಫ್ ಆರ್ಟ್‌ನ ಬೋಧಕವರ್ಗ ಮತ್ತು ವಿದ್ಯಾರ್ಥಿ ಸಮುದಾಯ



೧೯೩೫ರಲ್ಲಿ ಪ್ರಪ್ರಥಮ ಕಲಾ ಶಾಲೆ ಸ್ಥಾಪಿಸಿದ ಹಿರಿಯ ಕಲಾಚೇತನ ಶ್ರೀ ಡಿ.ವಿ ಹಾಲಭಾವಿಯವರು ಕರ್ನಾಟಕದ ಕಲೆ, ಕಲಾಶಿಕ್ಷಣ, ಕಲಾಸಾಹಿತ್ಯಕ್ಕಾಗಿ ತಮ್ಮ ತನು ಮನ ಧನ ಅರ್ಪಣೆ ಮಾಡಿದ್ದನ್ನು ಧಾರವಾಡದ ಕಲಾಭಿಮಾನಿಗಳು ಎಂದಿಗೂ ಮರೆಯಲಾರರು. ಅದು ಹಚ್ಚಿದ ಆ ಕಲಾಜ್ಯೋತಿ ಇಂದಿಗೂ ಮೈಸೂರಿನ ಸುತ್ತೂರ ಪೂಜ್ಯ ಶ್ರೀಗಳ ಸಂರಕ್ಷಣೆಯಲ್ಲಿ ಪ್ರಜ್ವಲಿಸುತ್ತಿದೆ. ಹಾಗೂ 'ಜೆ ಎಸ್ ಎಸ್ ಹಾಲಭಾವಿ ಕಲಾಶಾಲೆ' ಎಂಬ ಶಿರೋನಾಮದೊಂದಿಗೆ ಶತಮಾನೋತ್ಸವ ಆಚರಣೆಯತ್ತ ಮುನ್ನುಗ್ಗುತ್ತಿದೆ. ಇಂದಿನ ಜೆ.ಎಸ್.ಎಸ್. ಹಾಲಭಾವಿ ಕಲಾಶಾಲೆಯ ಸಲಹಾ ಮಂಡಳಿಯ ಖಾಯಂ ಸದಸ್ಯರಾದ ಶ್ರೀ.ಸುರೇಶ ಡಿ. ಹಾಲಭಾವಿ ಶ್ರೀಮತಿ ಪಾರ್ವತಿ ಹಾಲಭಾವಿಯವರು ಹಾಗೂ ಇಂದಿನ ಪ್ರಾಚಾರ್ಯರಾದ ಶ್ರೀಮತಿ ರೇಣುಕಾ ಮಾರ್ಕಂಡೆ. ಅಲ್ಲದೇ ಕಲಾಶಾಲೆಯ ಯಶಸ್ವಿಯಾಗಿ ಶ್ರಮಿಸುತ್ತಿರುವ ಅಲ್ಲಿನ ಉಪನ್ಯಾಸಕರಾಗಿ ಶ್ರೀ ಸಿ.ಜಿ. ಪಾಟೀಲ್, ಶ್ರೀ ಬಿ.ಎಂ ಪಾಟೀಲ್, ಶ್ರೀ.ಎಸ್.ಎಂ,ಲೋಹರ್, ಶ್ರೀ ಎನ್.ಎನ್ ಚಿನ್ನಣ್ಣವರ ಹಾಗೂ ಅಲ್ಲಿನ ಭೋಧಕೇತರ ಸಿಬ್ಬಂದಿಯಾದ ಸಿಪಾಯಿ ಶ್ರೀ ಅರ್ಜುನ ಅಂಬಿಗೇರ ಇವರೆಲ್ಲರೂ ಕಲಾಶಾಲೆಯ ಅಭಿವೃದ್ದಿಗೆ ಒಮ್ಮನದಿಂದ ಶ್ರಮಿಸುತ್ತಿದ್ದಾರೆ. ಕಲಾಶಿಕ್ಷಕರ ಆಲ್ಮೋನ್ನತಿ ಹಾಗೂ ನಿರಂತರ ಸಿದ್ದಿ ಸಾಧನೆಗಳು ಬಹುಮುಖ್ಯವಾಗಿದೆ. ಸಾಧನೆ ಗೈಯುತ್ತ ಬೋಧನೆ ಮಾಡುತ್ತಿರುವ ಮೇಲಿನ ಎಲ್ಲ ಬೋಧಕ ಸಿಬ್ಬಂದಿಯ ಬಗೆಗೆ ಸಂಕ್ಷಿಪ್ತ ಮಾಹಿತಿ ಅವರ ಸಾಧನೆಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ.

ಶ್ರೀ ಸುರೇಶ.ಡಿ ಹಾಲಭಾವಿ ವಿಶ್ರಾಂತ ಪ್ರಾಚಾರ್ಯರು

೧೯೭೯ ರಿಂದ ಸ್ಕೂಲ್ ಆಫ್ ಆರ್ಟ್‌ನ ಪ್ರಾಚಾರ್ಯರಾಗಿದ್ದು, ೨೦೦೪ ನವೆಂಬರ್‌ನಲ್ಲಿ ನಿವೃತ್ತಿ ಹೊಂದಿದ ಇವರು ಶ್ರೀ ಡಿ.ವ್ಹಿ ಹಾಲಭಾವಿಯವರ ಪುತ್ರರಾಗಿದ್ದಾರೆ. ೧೯೬೪ ರಿಂದ ೧೯೬೯ ರಲ್ಲಿ ಸರ್.ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಮರ್ಶಿಯಲ್ ಡಿಪ್ಲೋಮಾ ಪಡೆದು ಮರಳಿ ಧಾರವಾಡಕ್ಕೆ ಬಂದು ೧೯೭೩ ರಲ್ಲಿ ಆರ್ಟ್ ಮಾಸ್ಟರ್ ಹಾಗೂ ಜಿ.ಡಿ. ಪದವಿ ಪಡೆದರು. ಹಾಲಭಾವಿ ಕಲಾಶಾಲೆಯ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಕಲಾಮಮದಿರದ ಏಳಿಗೆಗಾಗಿ ಸಾಕಷ್ಟು ಶ್ರಮವಹಿಸಿ ತನು, ಮನ, ಧನದ ಅರ್ಪಣೆಯೊಂದಿಗೆ



ಶಾಲೆಯ ನೇತೃತ್ವವಹಿಸಿ ಉಳಿಸಿ ಬೆಳೆಸಿದ್ದು ಶ್ರೀಯುತ ಸುರೇಶ ಹಾಲಭಾವಿಯವರು. ಸ್ವಭಾವತಃ ಸಂಭಾವಿತರಾಗಿದ್ದಾರೆ. ಎಲ್ಲರ ಸ್ನೇಹ, ಪ್ರೀತಿಗೆ ಪಾತ್ರರಾಗಿದ್ದರು. ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ರಾಜ್ಯ ಚಿತ್ರ ಕಲಾಮಹಾವಿದ್ಯಾಲಯಗಳ ಸಿಬ್ಬಂದಿ ಸಂಘದ ಪದಾಧಿಕಾರಿಯಾಗಿ ಸದಾ ಕ್ಷೇತ್ರದ ಅಭಿವೃದ್ಧಿಗಾಗಿ ಚಿಂತಿಸುವ ಸಹೃದಯರಾಗಿದ್ದಾರೆ. ತಮ್ಮ ಬಿಡುವಿನ ವೇಳೆಯಲ್ಲಿ ಇವರು ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ನಿಸರ್ಗ ಚಿತ್ರ ಹಾಗೂ ಭಾವಚಿತ್ರಗಳನ್ನು ಉತ್ತಮವಾಗಿ ಚಿತ್ರಿಸುತ್ತಾರೆ. ಅನೇಕ ಕಲಾಶಿಬಿರ ಹಾಗೂ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೇ ಹಲವು ಕಲಾಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಕಡೆ ನಿರ್ಣಾಯಕರಾಗಿ, ಮಾರ್ಗದರ್ಶಕರಾಗಿ ಗೌರವ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಶ್ರೀಮತಿ ಡಾ. ರೇಣುಕಾ ಮಾರ್ಕಂಡೆ ಪ್ರಸಕ್ತ ಪ್ರಾಚಾರ್ಯರು

ಹಿರಿಯ ಕಲಾವಿದೆಯಾದ ಶ್ರೀಮತಿ ರೇಣುಕಾ ಮಾರ್ಕಂಡೆ ಇವರು ಹಾಲಭಾವಿ "ಸ್ಕೂಲ್ ಆಫ್ ಆರ್ಟ್‌ನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೯೧ರಲ್ಲಿ ಎಂ. ಎ ೧೯೯೩ ರಲ್ಲಿ ಬಿ.ಎಫ್.ಎ ಪದವಿ ಹಾಗೂ ಆರ್ಟ್ ಮಾಸ್ಟರ್ ಪದವಿ, ಎಂ.ವಿ.ಎ ಪದವಿಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಡೆದಿರುವ ಇವರು ಹುಬ್ಬಳ್ಳಿ, ಮುಂಬೆ, ಧಾರವಾಡ, ಬೆಂಗಳೂರು ಹಾಗೂ ಇನ್ನಿತರೆಡೆ ತಮ್ಮ ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ಮಾಡಿದ್ದಾರೆ. ಅಲ್ಲದೇ ಜಕಾರ್ತಿ, ಸ್ವಿಜರಲ್ಯಾಂಡ್‌ಗಳಲ್ಲಿ ಇವರ ಕಲಾಕೃತಿಗಳು ಆಯ್ಕೆಯಾಗಿವೆ. ರಾಜ್ಯ ಅಕಾಡೆಮಿಯವರ ಸಮಕಾಲಿನ ಕಲಾವಿದರ ಪ್ರದರ್ಶನದಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ದೆಹಲಿಯ ಐಫೆಕ್ಸ್‌ನಲ್ಲಿ ಅಲ್ಲದೆ ಹೈದಾರಾಬಾದ್ ೩ ಬಾರಿ ಕ್ಯಾಮ್ಲಿನ್, ೩ ಬಾರಿ ಮದ್ರಾಸ್ ಅಕಾಡೆಮಿಗೆ ಹೀಗೆ ಅನೇಕ ರಾಷ್ಟ್ರೀಯ ಮಟ್ಟದ ಕಲಾಪ್ರದರ್ಶನಕ್ಕೆ ಕೃತಿಗಳು ಆಯ್ಕೆಗೊಂಡು ಪ್ರದರ್ಶನಗೊಂಡಿವೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಲಾ ಶಿಬಿರಗಳಲ್ಲಿಯೂ ಇವರು ಭಾಗವಹಿಸಿದ್ದಾರೆ. ೨೦೦೦ ದಲ್ಲಿ ಕೆ.ಕೆ.ಹೆಬ್ಬಾರ ಪ್ರಶಸ್ತಿ, ೨೦೦೧ ರಲ್ಲಿ ಕರ್ನಾಟಕ ಲಲಿತಕಲಾ ಪ್ರಶಸ್ತಿ, ೨೦೦೧ ರಲ್ಲಿ ಟಿಳಕ ಸ್ಮಾರಕ ಪ್ರಶಸ್ತಿ, ಪುಣೆ ಹೀಗೆ ಕಲಾಪ್ರಶಸ್ತಿಗಳನ್ನು ಪಡೆದಂತಹ ಇವರು ಸಮಕಾಲೀನ ವಿಚಾರ ಹಾಗೂ ಕಲಾಕೃತಿ ರಚನೆಯಲ್ಲಿ ವಿಶೇಷ ಆಸಕ್ತಿ ವಹಿಸಿದ್ದಾರೆ. ಈಗ ೨೦೧೩ ರಲ್ಲಿ 'ಕರ್ನಾಟಕ ವೈಷ್ಣವ ಪರಂಪರೆಯ ಚಿತ್ರಕಲೆ' ಎಂಬ ಪಿ.ಎಚ್.ಡಿ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿರುವರು.

ಶ್ರೀ. ಸಿ. ಜಿ. ಪಾಟೀಲ

ಹಾವೇರಿ ಜಿಲ್ಲೆಯ ಹಿರೇಕೇರೂರು ತಾಲೂಕಿನ ರಟ್ಟಹಳ್ಳಿ' ಗ್ರಾಮದಲ್ಲಿ ಜನಿಸಿದ್ದಾರೆ. ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ೧೯೮೬ರಲ್ಲಿ ಆರ್ಟ ಮಾಸ್ಟರ್ ಪದವಿ ಹಾಗೂ ೨೦೦೧ ರಲ್ಲಿ ಬಿ.ಎಫ್.ಎ ಪದವಿ ಪಡೆದುಕೊಂಡಿದ್ದಾರೆ. ಪ್ರಸ್ತುತದಲ್ಲಿ ಜೆ.ಎಸ್.ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಸ್ವಾರ್ಕ್ ೯೪ ಸ್ಕೂಲ್ ಆಫ್ ಆರ್ಟ್ ಸಿಬ್ಬಂದಿಯವರು ಚಿತ್ರಕಲಾ ಪ್ರದರ್ಶನ ೨೦೧೧ ರಿಂದ ೨೦೧೩ ರವರೆಗೆ ಪ್ರತಿ ವರ್ಷ ಮೈಸೂರಿನ ಸುತ್ತೂರು ಜಾತ್ರೆಯ ಪ್ರದರ್ಶನ, ಅಲ್ಲದೇ ವರ್ಣಮೇಳ ಧಾರವಾಡ, ಧಾರವಾಡ ಉತ್ಸವ, ೨೦೧೨ ರಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಸಮೂಹ ಪ್ರದರ್ಶನ, ೧೯೯೧ರಲ್ಲಿ ಬೀದಿ ಚಿತ್ರಕಲಾ ಪ್ರದರ್ಶನ ಧಾರವಾಡ, ೧೯೯೩ರಲ್ಲಿ

ವರ್ಣವೇಳ ಸಂಘಟನೆಯ ಪ್ರದರ್ಶನ, ಬಿಜಾಪುರದ ರಾಜ್ಯಮಟ್ಟದ ಕಲಾಪ್ರದರ್ಶನ ಬೆಂಗಳೂರಿನಲ್ಲಿನ ರಾಜ್ಯ ಸಿಬ್ಬಂದಿ ಸಂಘದ ಅಡಿಯಲ್ಲಿ ಮಾಡಿದ ಪ್ರದರ್ಶನ ಹಾಗೂ ೧೯೯೩ರಲ್ಲಿ ನಗರ ಕಲಾವಿದರು, ಧಾರವಾಡದ ವತಿಯಿಂದ ಸಂಘಟಿಸಿದ ಪ್ರದರ್ಶನಗಳಲ್ಲಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

ಅಲ್ಲದೇ ಇದೇ ರೀತಿ ೧೯೯೮ರ ಸರಕಾರಿ ಶಾಲೆಯ ಹಳೇ ವಿದ್ಯಾರ್ಥಿಗಳ ಪ್ರದರ್ಶನ ೨೦೦೦ ರಿಂದ ೨೦೦೪ ರವರೆಗೆ ಹಾಲಭಾವಿ ಕಲಾ ಸಿಬ್ಬಂದಿ ಪ್ರದರ್ಶನ ಧಾರವಾಡ, ೨೦೦೬-೨೦೦೭ ಧಾರವಾಡ ಜಿಲ್ಲಾ ಉತ್ಸವದ ಕಲಾಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಅಲ್ಲದೇ ೧೯೯೭ರಲ್ಲಿ ಜಲವರ್ಣ ಶಿಬಿರ ಧಾರವಾಡ ೨೦೦೦ರಲ್ಲಿ ಕ್ಯಾಂಪ್ ಧಾರವಾಡ, ೨೦೦೧ರಲ್ಲಿ ಪೋಟೋ ಎಚ್ಚಿಂಗ್ ಕ್ಯಾಂಪ್ ೨೦೦೬-೨೦೦೭ರ ಜಿಲ್ಲಾ ಉತ್ಸವ ಕಲಾವಿದರ ಶಿಬಿರ, ೨೦೧೯ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್ ವತಿಯಿಂದ ಹಮ್ಮಿಕೊಂಡ "ರಾಷ್ಟ್ರೀಯ ಕಲಾಶಿಬಿರ" ೨೦೧೦ ಹಿರಿಯ ಕಲಾವಿದರ ಶಿಬಿರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೦೧೧ರಲ್ಲಿ ಕಲಾವಿದರ ಶಿಬಿರ ಪುರಾತತ್ವ ಇಲಾಖೆ, ಧಾರವಾಡ ಹೀಗೆ ಶಿಬಿರದಲ್ಲಿ ಭಾಗವಹಿಸಿ ಸಂಯೋಜನಾ ಚಿತ್ರಕೃತಿ, ಭಾವಚಿತ್ರ ಕೃತಿಗಳನ್ನು ರಚಿಸಿಕೊಟ್ಟಿದ್ದಾರೆ. ಇವರ ಕಲಾಕೃತಿಗಳು ಧಾರವಾಡ, ಗುಲ್ಬರ್ಗಾ, ಮೈಸೂರು, ಕುಪ್ಪಳ್ಳಿ, ಬೆಂಗಳೂರು ಮುಂತಾದೆಡೆ ಸಂಗ್ರಹಗೊಂಡಿವೆ. ಇವರು ರಚಿಸಿದ ಕಲಾಕೃತಿಗಳು ಪೂನಾ, ಬಿಜಾಪುರ ಮುಂತಾದೆಡೆ ಆಯ್ಕೆಗೊಂಡು ಪ್ರದರ್ಶನಗೊಂಡಿವೆ. ಇವರು ಭಾವಚಿತ್ರ, ವ್ಯಕ್ತಿಚಿತ್ರ, ಸ್ಟಿಲ್‌ಲೈಫ್ ಮತ್ತು ನಿಸರ್ಗ ಚಿತ್ರರಚನೆ ಸಮಕಾಲೀನ ಸಂಯೋಜನಾ ಚಿತ್ರಗಳನ್ನು ಉತ್ತಮವಾಗಿ ರಚಿಸುವರು.

ಡಾ. ಬಿ. ಎಂ ಪಾಟೀಲ

ಇವರು ಧಾರವಾಡದ ಜೆ.ಎಸ್.ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದಲ್ಲಿಯೇ ಕಲಾಭ್ಯಾಸ ಮಾಡಿ, ಈಗ ಉಪನ್ಯಾಸಕರಾಗಿ ಕಳೆದ ೨೦ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ೧೯೮೮ ರಲ್ಲಿ ಆರ್ಟ್ ಮಾಸ್ಟರ್ ಪದವಿ. ೨೦೦೧ ರಲ್ಲಿ ಬಿ.ಎಫ್.ಎ ಪದವಿ ೨೦೦೬ರಲ್ಲಿ ಎಂ.ಬಿ.ಎ ಸ್ನಾತ್ತಕೋತ್ತರ ಪದವಿ, ೨೦೦೭ ರಲ್ಲಿ ಎಂ.ಫಿಲ್ ಪದವಿ ಪಡೆದುಕೊಂಡಿರುತ್ತಾರೆ. ಧಾರವಾಡ, ಬೀದರ, ಬೆಂಗಳೂರು, ಹಂಪಿ, ಚನ್ನೈ, ಪೂನಾ, ಮುಂಬೈ, ಪಾಟ್ನಾಗಳಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಬೆಂಗಳೂರಿನ ಚಿತ್ರಕಲಾ ಪರಿಷತ್ತು ಹಾಗೂ ಭಾರತೀಯ ಶಿಕ್ಷಣ ಮಂಡಳಿಯವರು. ಮುಂಬೈನಲ್ಲಿ ಏರ್ಪಡಿಸಿದ ರಾಷ್ಟ್ರೀಯ ಚಿತ್ರಕಲಾ ಪದರ್ಶನಕ್ಕೆ ಹಾಗೂ ರಾಜ್ಯ ಲಲಿತಕಲಾ ಅಕಾಡೆಮಿಗೆ ಇವರ ಕಲಾಕೃತಿಗಳು ಆಯ್ಕೆಗೊಂಡಿವೆ. ದೆಹಲಿಯ ಮಾನವ ಸಂಪನ್ಮೂಲ ಇಲಾಖೆಯವರು ಏರ್ಪಡಿಸಿದ ಭಿತ್ತಿಚಿತ್ರ ಶಿಬಿರ, ಮೈಸೂರು, ಧಾರವಾಡದ ಆರ್ಟ್ ಸೆಂಟರ್ ಏರ್ಪಡಿಸಿದ ಜಲವರ್ಣ ಚಿತ್ರಕಲಾ ಶಿಬಿರ ಹಾಗೂ ಕನ್ನಡ ಮತ್ತು ಸಂಸ್ಕೃತ ಇಲಾಖೆಯವರು ಏರ್ಪಡಿಸಿದ ಕದಂಬೋತ್ಸವ ಕಲಾಶಿಬಿರ ಬನವಾಸಿ ಮಂಡ್ಯದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಯುವ ಕಲಾವಿದರ ಕಲಾಶಿಬಿರ ಮುಂತಾದ ಹಲವು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಮುಂಬೈನಲ್ಲಿ ಭಾರತೀಯ ಶಿಕ್ಷಣ ಮಂಡಳಿಯವರ ಚಿತ್ರಕಲಾ ಪ್ರದರ್ಶನದ ಸ್ಪರ್ದೆಯಲ್ಲಿ "ಪ್ರಥಮಸ್ಥಾನ" ಪಡೆದಿದ್ದಾರೆ. ಇವರ ಕಲಾಕೃತಿಗಳು ಕನ್ನಡ ವಿ.ವಿ. ಹಂಪಿ ಕರ್ನಾಟಕ ವಿ.ವಿ ಧಾರವಾಡ ಕುವೆಂಪು

ವಿಶ್ವವಿದ್ಯಾಲಯ ದಾವಣಗೆರೆ, ಸರಕಾರಿ ಆರ್ಟ್ ಗ್ಯಾಲರಿಗಳಲ್ಲಿ ಸಂಗ್ರಹಿಸಲಾಗಿವೆ.

೨೦೦೦ದಲ್ಲಿ "ಶಿಲಾಶಿಲ್ಪ" ಎಂಬ ಲೇಖನವನ್ನು ವಿಶ್ವಕೋಶ ೨ರಲ್ಲಿ (ಹಂಪಿ ಕನ್ನಡ ವಿಶ್ವವಿದ್ಯಾಲಯ), ೨೦೦೩ ರಲ್ಲಿ "ಚಿತ್ರಕಲಾ ಕ್ಷೇತ್ರ್ಕಕೆ ಧಾರವಾಡ ಜಿಲ್ಲೆಯ ಕೊಡುಗೆ" ೨೦೦೬ ರಲ್ಲಿ ಹಾಲಭಾಪಿ ಸ್ಕೂಲ್ ಆಫ್ ಆರ್ಟ್ ಒಂದು ಐತಿಹಾಸಿಕ ಅಧ್ಯಯನ. ಎಂ.ವ್ಹಿ.ಎ ಕಿರು ಪ್ರಬಂಧ, ೨೦೦೭ ರಲ್ಲಿ "ನಿಪ್ಪಾಣಿವಾಡೆ ಭಿತ್ತಿಚಿತ್ರಗಳು ಒಂದು ಐತಿಹಾಸಿಕ ಅಧ್ಯಯನ" ಎಂ. ಫಿಲ್ ಪ್ರಬಂಧ, ೨೦೦೭ರಲ್ಲಿ ಕರ್ನಾಟಕದ ಕಿರುರೂಪ ಚಿತ್ರಗಳು; ಕರ್ನಾಟಕದ ಕಲಾದರ್ಶನ; ಗ್ರಂಥಕ್ಕೆ ಲೇಖನ ಬರೆದಿದ್ದಾರೆ. ೨೦೧೩ ರಲ್ಲಿ ಕಲಾವಿದ ಕೆ.ಬಿ ಕುಲಕರ್ಣಿ ಎಂಬ ಪುಸ್ತಕವನ್ನು ಇವರು ಬರೆದಿದ್ದು ಲಲಿತಕಲಾ ಅಕಾಡೆಮಿ ಬೆಂಗಳೂರಿನಿಂದ ಪ್ರಕಟಗೊಂಡಿದೆ. ಈಗ ಹಲವಾರು ವಿಚಾರ ಸಂಕೀರಣಗಳಲ್ಲಿ ಭಾಗವಹಿಸಿ ವಿಷಯ ಮಂಡಿಸಿರುವರು. ೨೦೧೩ ರಲ್ಲಿ ಹಂಪೆ ವಿಶ್ವವಿದ್ಯಾಲಯಕ್ಕೆ "ಕರ್ನಾಟಕ ವೀರಶೈವ ಪರಂಪರೆಯ ಚಿತ್ರಕಲೆ" ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಸಲ್ಲಿಸಿರುತ್ತಾರೆ. ಇವರು ಕಲಾಕ್ಷೇತ್ರದ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯ ಸಿಬ್ಬಂದಿ ಸಂಘದ ಕಾರ್ಯದರ್ಶಿಯಾಗಿ ರಾಜ್ಯದ್ಯಾಂತ ಹೆಸರು ಪಡೆದಿದ್ದಾರೆ.

ಶ್ರೀ ಎಸ್ ಎಂ ಲೋಹಾರ

ಇವರು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಸಂತೆ ಶೀಗ್ಲಿಯಲ್ಲಿ ೦೬-೦೭-೧೯೬೪ ರಂದು ಜನಿಸಿದ್ದಾರೆ. ಪ್ರಸ್ತುತ ಜೆ ಎಸ್ ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದೇ ಮಹಾವಿದ್ಯಾಲಯದಲ್ಲಿ ಆರ್ಟ್ ಮಾಸ್ಟರ್ ಪದವಿ ಮತ್ತು ಕೆನ್ ಕಲಾ ಶಾಲೆ ಬೆಂಗಳೂರಿನಿಂದ ಜಿ ಡಿ ಪದವಿಯನ್ನು ಪಡೆದುಕೊಂಡಿರುವರು. ಬೆಂಗಳೂರು, ದಾವಣಗೆರೆ, ಶೀಗ್ಲಿ, ಬೆಳಗಾಂ, ಧಾರವಾಡ ಮುಂತಾದೆಡೆ, ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ ಹಾಗೂ ಮುಂಬೈ ಬೆಂಗಳೂರು, ದೆಹಲಿ, ಧಾರವಾಡ, ಗದಗ, ಬೆಳಗಾವಿ ಈ ಎಲ್ಲೆಡೆ ಸಮೂಹ ಕಲಾಪ್ರದರ್ಶನ ಮಾಡಿದ್ದಾರೆ. ಹೈದಾರಾಬಾದ್, ಬೋಪಾಲ್ (ಬಿನಾಲೆ) ಪೂಣೆ, ಬೆಂಗಳೂರು, ಚೆನ್ನೈ, ಮೈಸೂರು, ಮುಂತಾದೆಡೆ ೧೯೮೯, ೧೯೯೨ ಹೀಗೆ ೨೦೧೩ ರ ವರೆಗೆ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ತುಮಕೂರಿನ ಗ್ರಾಫಿಕ್ ಶಿಬಿರ ಬಿಜಾಪುರದ ಎಚ್ಚಿಂಗ್ ಕ್ಯಾಂಪ್, ಬೆಂಗಳೂರಿನ ರಾಜ್ಯಮಟ್ಟದ ಎಚ್ಚಿಂಗ್ ಕ್ಯಾಂಪ್‌ನಲ್ಲಿ ಅಲ್ಲದೇ ನಾಗಪುರ ಭೂಪಾಲ ಮುದ್ರಣ ಕಲೆಯ ಶಿಬಿರಗಳಲ್ಲಿ ಭಾಗವಹಿಸಿ ಬೆಂಗಳೂರು, ಧಾರವಾಡ, ಮುದ್ದೆಬಿಹಾಳ, ದೆಹಲಿ, ಗದಗ ಹೀಗೆ ಹಲವಾರು ಕಡೆಗಳಲ್ಲಿ ಪೇಂಟಿಂಗ್ ಶಿಬಿರಗಳಲ್ಲಿ ಇವರು ಭಾಗವಹಿಸಿದ್ದಾರೆ.

ಪ್ರಶಸ್ತಿಗಳು : ೧೯೯೧, ೧೯೯೨, ೨೦೦೯ರಲ್ಲಿ ದಸರಾ ಪ್ರಶಸ್ತಿ ರಾಜ್ಯಮಟ್ಟದ ರೇನಬೋ ಕಲಾ ಪ್ರತಿಭಾ ಪ್ರಶಸ್ತಿ ಮಂಗಳೂರು, ರಾಷ್ಟ್ರ ಮಟ್ಟದ ಬಿಜಾಪುರದ ಪ್ರಶಸ್ತಿ, ೨೦೦೮ ರಲ್ಲಿ ಹೈದಾರಾಬಾದ್‌ನ ಪಿ.ಟಿ.ರೆಡ್ಡಿ ಪ್ರಶಸ್ತಿ, ನಾಗಪುರದ ಪ್ರಶಸ್ತಿ ೨೦೦೬ ರಲ್ಲಿ ಪುಣೆಯ ಬೆಳಕ ಸ್ಮಾರಕ ಪ್ರಶಸ್ತಿ, ೨೦೦೬ ರಲ್ಲಿ ಬೀದರ್ ಸಾಹಿತ್ಯ ಸಮ್ಮೇಳನದ ಪ್ರಶಸ್ತಿ ಹೀಗೆ ಇನ್ನೂ ಅನೇಕ ಪ್ರಶಸ್ತಿಗೆ ಪಾತ್ರರಾಗಿರುವ ಇವರು ಮುದ್ರಣ ಕಲೆಯಲ್ಲಿ ವಿಶೇಷ ಪರಿಣಿತ ಕಲಾವಿದರಾಗಿದ್ದಾರೆ. ಕಲಾಮಂದಿರದ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಉತ್ಸಾಹದಿಂದ ಕಾರ್ಯನಿರ್ವಹಿಸುತ್ತಾರೆ.

ಶ್ರೀ ಎನ್ ಎನ್ ಚಿನ್ನಣ್ಣವರ

ಶ್ರೀ ಎನ್ ಎನ್ ಚಿನ್ನಣ್ಣವರ ೦೧-೦೬-೧೯೬೩ ರಂದು ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಹೆಬ್ಬಾಳದಲ್ಲಿ ಜನಿಸಿದ್ದಾರೆ. ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ ಧಾರವಾಡ ಆರ್ಟ್ ಮಾಸ್ಟರ್, ಡಿಪ್ಲೋಮಾ, ಬಿ.ಎಫ್.ಎ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಸದ್ಯದಲ್ಲಿ ಜೆ.ಎಸ್.ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಧಾರವಾಡ, ಮೈಸೂರು, ಬೆಂಗಳೂರು, ದಾವಣಗೆರೆ, ತುಮಕೂರು, ಪುಣೆಗಳಲ್ಲಿ ಕಲಾ ಪ್ರದರ್ಶನಗಳಲ್ಲಿ ಇವರ ಕಲಾ ಕೃತಿಗಳು ಪ್ರದರ್ಶಿತಗೊಂಡಿವೆ. ೧೯೯೪ರಲ್ಲಿ **"ಸ್ಪಾರ್ಕ್ ೯೪"** ಎಂಬ ಸಂಘಟನೆಯಿಂದ ಬೆಂಗಳೂರಿನಲ್ಲಿ ಸಮೂಹ ಕಲಾಪ್ರದರ್ಶನ, ೨೦೦೪ರಲ್ಲಿ ಅಕಾಡೆಮಿ ಆಫ್ ಕ್ರಿಯೇಟಿವ್ ಗ್ರಾಫಿಕ್ ಕಲಾ ಪ್ರದರ್ಶನ, ೨೦೦೫ ಬೀದರ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶನ ಮಾಡಿರುವರು. ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನ, ನಾಗಪುರ, ಪುಣೆಯ ಟಿಳಕ್ ಪ್ರತಿಷ್ಠಾನ ಕ್ಯಾಮ್ಲಿನ್ ಪ್ರದರ್ಶನಕ್ಕೆ ಇವರ ಕಲಾಕೃತಿ ಆಯ್ಕೆಗೊಂಡಿವೆ. ೨೦೧೦ ರಲ್ಲಿ ಮೂಡಬಿದ್ರೆಯ ಅಳ್ವಾಸ್ ಪೌಂಡೇಶನ್, ೨೦೦೪ ರಾಜೀವ್‌ಗಾಂಧಿ ಸ್ಮರಣಾರ್ಥ ಶಿಬಿರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಧಾರವಾಡ ಇವರ ಸಹಯೋಗದಲ್ಲಿ ಚಿತ್ರಕಲಾ ಶಿಬಿರ. ೨೦೧೨ ಸಮತಾ ಎಸ್.ಸಿ ಎಸ್.ಟಿ. ಸಂಘಟನೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಧಾರವಾಡದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ್ದ ಲಿತೋಗ್ರಾಫಿ ಕಾರ್ಯಗಾರದಲ್ಲಿ ಭಾಗವಹಿಸಿದ್ದಾರೆ. ಇವರು ತಮ್ಮ ಕಲಾಕೃತಿಗಳನ್ನು ಜನಪದೀಯ ಅಂಶಗಳನ್ನು ಇಟ್ಟುಕೊಂಡು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಚಿತ್ರ ರಚಿಸುವರು.

ಮಹಾವಿಧ್ಯಾಲಯದಲ್ಲಿ ಕಲಿತು ಹೆಸರು ಮಾಡಿದ ವಿಧ್ಯಾರ್ಥಿ ಸಮುದಾಯ

೧. **ಶ್ರೀ ಸೋಮಶೇಖರ ಸಾಲಿ :** ಕೆಲಕಾಲ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು.

೨. **ಶ್ರೀ ಎಸ್.ಜಿ. ಚಿನ್ನಣ್ಣವರು, ಹುಕ್ಕೇರಿ :** ಭಾವಚಿತ್ರ ರಚನೆ ಹಾಗೂ ನಿಸರ್ಗಚಿತ್ರಣದಲ್ಲಿ ನಿಷ್ಣಾತರು, ೧೯೮೩ ರಾಜ್ಯ ಪ್ರಶಸ್ತಿ ವಿಜೇತರು.

೩. **ಶ್ರೀ ರವಿ ಪರಾಂಜೆ :** ೧೯೫೭-೫೮ ರಲ್ಲಿ ದಿಲ್ಲಿ ರಾಷ್ಟ್ರೀಯ ಕಲಾ ಅಕಾಡೆಮಿಗೆ ಇವರ ೨ ಚಿತ್ರಗಳು ಆಯ್ಕೆಯಾದದ್ದು. ಇವರ ಕಲಾಕೃತಿಗಳು ಇಂಡಿಯಾ ತಾಜ ಗ್ರೂಪ್ ಹೋಟೆಲ್‌ಗಳಲ್ಲಿ ಓಬಿರಾಯ್ ಹೋಟೆಲ್ ಮುಂತಾದ ಸ್ಥಳಗಳಿಲ್ಲಿವೆ.

೪. **ಶ್ರೀ ಎಂ. ಆರ್. ಬಾಳೀಕಾಯಿ :** ಧಾರವಾಡ ಸರ್ಕಾರಿ ಚಿತ್ರಕಲಾ ಶಾಲೆಯ ಮಾಜಿ ಮುಖ್ಯೋಪಾಧ್ಯಾಯರು, ಶ್ರೇಷ್ಠ ಕಲಾವಿದ.

೫. **ಈಶ್ವರ ಮತ್ತು ಭೀಮರಾವ ಮುರಗೋಡ :** ಫ್ರಾನ್ಸಿನಲ್ಲಿ ಹಾಗೂ ದೇಶವಿದೇಶಗಳಲ್ಲಿ ಏಕವ್ಯಕ್ತಿಪ್ರದರ್ಶನಗಳನ್ನು ಮಾಡಿದ್ದಾರೆ. ನವದೆಹಲಿಯ ಸರ್ಕಾರಿ ಕಛೇರಿಯಲ್ಲಿ ಕಲಾವಿದರಾಗಿದ್ದರು.

೬. **ಶ್ರೀ.ವಿ.ಬಿ ಹಿರೇಗೌಡರ :** ದಾವಣಗೆರೆ ವಿಶ್ವವಿದ್ಯಾಲಯದ ಲಲಿತಕಲಾ ಕಾಲೇಜಿನ ಪ್ರಾಚಾರ್ಯರಾಗಿ ನಿವೃತ್ತಿ ಹೊಂದಿದ್ದಾರೆ. ಕಲಾ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ.

೭. **ಶ್ರೀ ಬಿ.ಕೆ. ಹುಬ್ಳಿ :** ಶ್ರೇಷ್ಠ ಮಟ್ಟದ ಕಲಾವಿದರು.

೮. **ಶ್ರೀ ಆರ್.ಬಿ. ಕುಂಬಾರ್:** ಚಿತ್ರಕಲಾ ಶಾಲೆಗಳ ಪರಿವೀಕ್ಷಕರಾಗಿದ್ದರು. ದಾವಣಗೆರೆ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿದ್ದರು.

೯. **ಶ್ರೀ ಎಂ.ಜಿ. ವಾಚೇದಮಠ :** ಉತ್ತಮ ಚಿತ್ರಕಲಾ ಶಿಕ್ಷಕರು ಶ್ರೇಷ್ಠಕಲಾವಿದುರ.

೧೦. **ಶ್ರೀ ಟಿ.ಬಿ. ಸೊಲಬಕ್ಕನವರ :** ಡಾವಣಗೇರಿಯ ಸರ್ಕಾರಿ ಚಿತ್ರಕಲಾ ಶಾಲೆಯಲ್ಲಿ ಉಪನ್ಯಾಸಕರಾಗಿದ್ದರು. ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಗೊಟಗೋಡಿಯಲ್ಲಿ ' ಉತ್ಸವ ಗಾರ್ಡ್‌ನಲ್ಲಿ ವಾಸ್ತವ ಬದುಕನ್ನು ಶಿಲ್ಪಗಳಲ್ಲಿ ನಿರ್ಮಿಸಿ ರಾಷ್ಟ್ರ ಮಟ್ಟದಲ್ಲಿ ಪ್ರಸಿದ್ದರಾಗಿದ್ದಾರೆ.

೧೧. **ಶ್ರೀ. ಪಿ. ಎನ್. ಹಿರೇಮಠ :** ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿದ್ದರು.

೧೨. **ಶ್ರೀ. ಖ.ಡಿ ಶಿರಿಯಣ್ಣವರ :** ಚಿತ್ರಕಲಾ ಶಾಲೆಗಳ ಪರಿವೀಕ್ಷಕರಾಗಿದ್ದರು, ಉತ್ತಮ ಕಲಾವಿದರು

೧೩. **ಶ್ರೀಮತಿ ವಿಮಲಾ ಶೀಲವಂತ :** ಒಳ್ಳೆಯ ಕಲಾವಿದರು ಡಿ. ವ್ಹಿ ಹಾಲಭಾವಿಯವರ ಮಗಳು

೧೪. **ಶ್ರೀ ಎನ್ ಬಿ ಜರಳಿ :** ಉತ್ತಮ ಚಿತ್ರಕಲಾ ಶಿಕ್ಷಕರು, ಧಾರವಾಡದಲ್ಲಿ ಗಂಗಾಂಬಿಕಾ ಚಿತ್ರಕಲಾ ಶಾಲೆ ಹಾಗೂ ಜಿಮ್ ಇಂಗ್ಲೀಷ್ ಮಧ್ಯಮ ಶಾಲೆ ಸ್ಥಾಪಿಸಿದರು.

೧೫. **ಶ್ರೀ ಶಾಂತವೀರಪ್ಪ :** ಮುರಗೋಡ, ಬೆಂಗಳೂರಿನಲ್ಲಿ ಕಲಾವಿದರಾಗಿದ್ದರು

೧೬. **ಶ್ರೀಮತಿ ರೋಜ ರುಬ್ಬಿ :** ಚಿತ್ರಕಲಾವಿದೆ, ಪ್ರಾಥಮಿಕ ಶಾಲೆಯ ಸಂಸ್ಥಾಪಕರು

೧೭. **ಶ್ರೀ ಈಶ್ವರ ಎನ್, ಜೋಷಿ :** ಶ್ರೇಷ್ಠ ಚಿತ್ರಕಲಾವಿದ ಹಾಗೂ ಛಾಯಾಚಿತ್ರ ಕಲಾವಿದರು.

೧೮. **ಶ್ರೀ ಎನ್ ಎನ್ ಪಾಟೀಲ :** ಭಾರತೀಯ ಕಲಾ ಕೇಂದ್ರದ ಪ್ರಾಚಾರ್ಯರಾಗಿದ್ದರು

೧೯. **ಶ್ರೀ ಜೆ ವಿ ಕಮ್ಮಾರ :** ಭಾರತೀಯ ಕಲಾ ಕೇಂದ್ರದ ಪ್ರಾಚಾರ್ಯರು

೨೦. **ಶ್ರೀ ಸುರೇಶ ಹಾಲಭಾವಿ :** ಹಾಲಭಾವಿ ಕಲಾಶಾಲೆಯ ಮಾಜಿ ಪ್ರಾಚಾರ್ಯರು, ನಿವೃತ್ತಿ ನಂತರ ಮೈಸೂರಿನ ಡಿ. ಎಂ. ಎಸ್ ಲಲಿತಕಲಾ ಮಹಾವಿದ್ಯಾಲಯದ ಚಿತ್ರಕಲೆಯಲ್ಲಿ ದೂರ ಶಿಕ್ಷಣ ನೀಡುವ ಡೀನ್‌ರೆಂದು ಸೇವೆ ಸಲ್ಲಿಸುತ್ತಿದ್ದಾರೆ. ಪೋಟೋಗ್ರಾಫಿ ಹಾಗೂ ಶಾಸ್ತ್ರೀಯ ನೃತ್ಯ, ವಚನ ನೃತ್ಯದಲ್ಲಿ ಗುರುತಿಸಿಕೊಂಡಿದ್ದಾರೆ.

೨೧. **ಶ್ರೀಮತಿ ಗಾಯತ್ರಿ ಗೌಡರ್ :** ಹಾಲಭಾವಿ ಶಾಲೆಯ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ೨೦೧೩ರಲ್ಲಿ ನಿವೃತ್ತರಾಗಿದ್ದಾರೆ.

೨೨. **ಡಾ. ಎಸ್ ಸಿ ಪಾಟೀಲ್ :** ರಾಜ್ಯ ಕನ್ನಡ ವಿಶ್ವವಿದ್ಯಾಲಯದ ಶಿಲ್ಪ ಮತ್ತು ಚಿತ್ರಕಲಾ ವಿಭಾಗದ ಮುಖ್ಯಸ್ಥರು ಮತ್ತು ಪ್ರವಾಚಕರಾಗಿ ಸೇವೆ ಸಲ್ಲಿಸಿದ್ದಾರೆ. ಮತ್ತು ಲಲಿತಕಲಾ ವಿಶ್ವವಿಧ್ಯಾಲಯದ

ವಿಷೇಶಾಧಿಕಾರಗಳಾಗಿ ಸೇವೆ ಸಲ್ಲಿಸುತಿದ್ದಾರೆ.

೨೩. **ಶ್ರೀ ಬಿ ಎಂ ಪಾಟೀಲ್** : ಹಾಲಭಾವಿ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿದ್ದಾರೆ, 'ಕರ್ನಾಟಕ ವೀರಶೈವ ಪರಂಪರೆಯ ಚಿತ್ರಕಲೆ' ವಿಷಯದಲ್ಲಿ ಪಿ.ಎಚ್.ಡಿ ಮತ್ತು 'ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು' ವಿಷಯದಲಿ ಎಂ.ಫಿಲ್ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪದವಿಗಳನ್ನು ಪಡೆದಿದ್ದು, ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ 'ಕೆ. ಬಿ. ಕುಲಕರ್ಣೀ' ಎಂಬ ಕೃತಿ ಬಿಡುಗಡೆಯಾಗಿದೆ.

೨೪. **ಶ್ರೀ ಎಸ್ ಎ ಲೋಹಾರ** : ಹಾಲಭಾವಿ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿದ್ದಾರೆ, ಗ್ರಾಫಿಕ್ ಕಲೆಯಲ್ಲಿ ಪರಿಣಿತಿ ಹೊಂದಿದ್ದಾರೆ. ಅನೇಕ ಪ್ರದರ್ಶನಗಳನ್ನು ಮಾಡಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

ಹಾಲಭಾವಿ ಕಲಾಶಾಲೆಯಲ್ಲಿ ಕಲಿತಂತಹ ಕೆಲವರು, ಚಿತ್ರಕಲೆ ಅಲ್ಲದೆ ಬೇರೆ ಕ್ಷೇತ್ರಗಳಲ್ಲಿ ತಮ್ಮ ಅನುಪಮ ಸಾಧನೆ ಹಾಗೂ ಸೇವೆಯಿಂದ ರಾಷ್ಟ್ರ ಹಾಗೂ ಅಂತರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಅವರಲ್ಲಿ ಕೆಲವರು

೧. **ಶ್ರೀ ಅನೀಲ ಠಕ್ಕರ** : ನಾಟಕ ಮತ್ತು ಚಲನಚಿತ್ರ ನಟರು

೨. **ಶ್ರೀ ಉಮೇಶ ಹೆರಂಜಾಲ** : ಶಾಸ್ತ್ರೀಯ ನೃತ್ಯ ಪಟು, ಬೆಳಗಾವಿಯಲ್ಲಿ ಬಹಳ ವರ್ಷ, ನೃತ್ಯ ವರ್ಗಗಳನ್ನು ನಡೆಸಿದವರು.

೩. **ಶ್ರೀ ವೆಂಕಟೇಶ ಗೋಡಖಿಂಡಿ** : 'ಆಕಾಶವಾಣಿ' ಧಾರವಾಡದ ನಿಲಯ ನಿರ್ದೇಶಕರಾಗಿ ಸೇವೆಸಲ್ಲಿಸಿದ್ದಾರೆ. ಖ್ಯಾತ ಕೊಳಲು ಊದುಕಾರನು

೪. **ಶ್ರೀ ಶಂಕರ ಪಾಟೀಲ್** : ದಾವಣಗೆರೆ ಚಿತ್ರಕಲಾ ಮಹಾವಿದ್ಯಾಲಯದ ವಾಣಿಜ್ಯ ಕಲಾ ವಿಭಾಗದ ಮುಖ್ಯಸ್ಥ, ಫೋಟೊಗ್ರಾಫಿ ಪರಿಣಿತರು.

೫. **ಶ್ರೀ ಯಶವಂತ್ ಯು ಹಳಬಂಡಿ** : ಖ್ಯಾತ ಗಾಯಕರು

೬. **ಶ್ರೀ ಸುಭಾಷ ಕಡಕೋಳ** : 'ಈ' ಟಿವಿ ಕಿರುತೆರೆ ಹಾಗೂ ಚಲನಚಿತ್ರ ಕಲಾ ನಿರ್ದೇಶಕರಾಗಿ ಮತ್ತು ನಟರಾಗಿಯೂ ಗುರುತಿಸಿಕೊಂಡಿದ್ದಾರೆ.

೭. **ಶ್ರೀ ಕಾರ್ತಿಕ ಶಿಂಧೆ** : ಚಲನಚಿತ್ರ ನಿರ್ದೇಶಕರಾಗಿ ಮುಂಬಾಯಿಯಲ್ಲಿ ನೆಲೆಸಿದ್ದಾರೆ. ಹಿಂದೀ ಭಾಷೆಯ ಚಲನಚಿತ್ರ ನಿರ್ಮಾಪಕರಾಗಿದ್ದಾರೆ.

೮. **ವಿಠಲ್ ಕೊನೇರಿ** : ಉತ್ತಮ ಛಾಯಚಿತ್ರಕಾರರಾಗಿ, ಮೈಸೂರಿನಲ್ಲಿ, ಭಾರತ ಸರ್ಕಾರದ 'ರೀಜನಲ್ ಕಾನ್ಸರ್‌ವೇಷನ್ ಲ್ಯಾಬೋರೇಟರಿ' ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

೯. **ಶ್ರೀ ಮಹೇಶ ಚಿರಂತಿಮಠ** : 'ಜಾನಪದ ಸಂಯಯಕ್ತ ಕರ್ನಾಟಕ'ದಲ್ಲಿ ಚಿತ್ರಕಲಾವಿದ.

ಅಧ್ಯಾಯ : ಆರು
ಸ್ಕೂಲ್ ಆಫ್ ಆರ್ಟ್‌ನ ಕಲಾಚಟುವಟಿಕೆಗಳು

ಅಧ್ಯಾಯ : ಆರು

ಸ್ಕೂಲ್ ಆಫ್ ಆರ್ಟ್‌ನ ಕಲಾಚಟುವಟಿಕೆಗಳು

ಡಿ.ವ್ಹಿ.ಹಾಲಭಾವಿಯವರು ತಮ್ಮ ತನು, ಮನ, ಧನಗಳನ್ನೆಲ್ಲಾ ದಾರೆಯೆರದು ಪೋಷಿಸಿ ಬೆಳೆಸಿದ ಸಂಸ್ಥೆ ಮುಂದೆ ನಡೆಸಲಾಗದ ಹಂತಕ್ಕೆ ತಲುಪಿದಾಗ ೨೦೦೮ ರಲ್ಲಿ ಸುರೇಶ ಹಾಲಭಾವಿ ಹಾಗೂ ಅವರ ಶ್ರೀಮತಿಯವರು ಮನಸೊಂದು ತಮ್ಮ ಹಿರಿಯರು ಸ್ಥಾಪಿಸಿದ ತಾವೇ ಕಟ್ಟಿ ಬೆಳೆಸಿದ ಕಲಾಶಾಲೆ ಮುಂದೆಯೂ ಎಂದಿಗೂ ಜನಮಾನಸದಲ್ಲಿ ಉಳಿಯಬೇಕೆಂಬ ಹೆಬ್ಬಯಕೆಯೊಡನೆ ಚಿಂತಿಸತೊಡಗಿದರು. ಫೈನ್ ಆರ್ಟ್ ಸಂಸ್ಥೆಯ ಅದ್ಯಕ್ಷರಾದ ಧಾರವಾಡದ ಶಾಸಕರಾದ ಶ್ರೀ ಚಂದ್ರಕಾಂತ ಬೆಲ್ಲದ ಅವರ ನೇತೃತ್ವದಲ್ಲಿ ಶಾಲಾಡಳಿತ ಮಂಡಳಿ, ಶಾಲಾ ಸಿಬ್ಬಂದಿ ಹಾಗೂ ಹಾಲಭಾವಿ ಮನೆತನದವರೆಲ್ಲಾ ಸೇರಿ ಚಿಂತನ ಮಂಡನ ಮಾಡಿ ಎಪ್ಪತ್ತು ವರ್ಷ ಕಟ್ಟಿ ಬೆಳೆಸಿದ ಶ್ರೀ. ಡಿ. ವಿ ಹಾಲಭಾವಿಯವರ ಸ್ಕೂಲ್ ಆಫ್ ಆರ್ಟ್‌ನ್ನು ಸುತ್ತೂರು ಮಹಾಸಂಸ್ಥಾನ ಮಠದ ಕೃಪಾ ಪೋಷಣೆಯಲ್ಲಿ ಬೆಳೆಯಲೆಂದು ಅವರಿಗೆ ಈ ಸಂಸ್ಥೆಯನ್ನು ನೀಡಲು ನಿರ್ಧರಿಸಿದರು. ಅದೇ ಇಂದಿನ "ಜೆ.ಎಸ್.ಎಸ್.ಹಾಲಭಾವಿ ಸ್ಕೂಲ್ ಆಫ್ ಆರ್ಟ್" ಆಗಿ ಬೆಳವಣಿಗೆ ಹೊಂದುತ್ತ ನಡೆದಿದೆ.

ಕಳೆದ ೨೦೦೮ ರಿಂದ ಜೆ.ಎಸ್.ಎಸ್ ಸಂಸ್ಥೆಯ ಆಡಳಿತ ಮಡಂಳಿ ಹಾಗೂ ಪೂಜ್ಯ ಶ್ರೀ ಸುತ್ತೂರು ಶ್ರೀಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಕಲಾಶಾಲೆಯ ಉನ್ನತ್ತಿಗೆ ಬೇಕಾದ ಎಲ್ಲ ಸಹಾಯ ಸಹಕಾರ ನೀಡುತ್ತಿದ್ದಾರೆ. ೨೦೦೯ ರಿಂದ ಜೆ.ಎಸ್.ಎಸ್. ಸಂಸ್ಥೆಯವರು ತಮ್ಮದೇ ಆದ ಕೆಲಗೇರಿಯ ಕೆರೆಯ ದಡದಲ್ಲಿ ಸುಮಾರು ನೂರಾರು ಎಕರೆ ಪ್ರದೇಶದಲ್ಲಿ ಕಟ್ಟಿಸಿರುವ ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮಾಡಿದರು. ಹೊಸದಾಗಿ ಸ್ಥಳ ಬದಲಾಯಿಸಿದ ಈ ಕ್ಯಾಂಪಸ್ ಅತ್ಯಂತ ಸುಂದರವಾಗಿದ್ದು ವಿಸ್ತಾರವಾದ ಉತ್ತರ ಪ್ರದೇಶದಲ್ಲಿದೆ. ಕೆರೆಯ ದಡದಲ್ಲಿ ಸರಕಾರದಿಂದ ನಿರ್ಮಿತ ಉದ್ಯಾನವನದ ಸಮೀಪ ಹಾಗೂ ಸುತ್ತಲೂ ಕಾಣುವ ಬೆಟ್ಟ ಗುಡ್ಡಗಳ ನಡುವೆ ರಾರಾಜಿಸುತ್ತಿದೆ. ಶ್ರೀಮತಿ ರೇಣುಕಾ ಮಾರ್ಕಂಡೇಯ ಅವರ ನೇತೃತ್ವದಲ್ಲಿ ಹಾಗೂ ಧಾರವಾಡ ಜೆ.ಎಸ್.ಎಸ್ ಸಂಸ್ಥೆಯ ಆಡಳಿತಾಧಿಕಾರಿಗಳು ಅಲ್ಲದೇ ಕಲಾಶಾಲೆಗಂದೇ ರಚಿಸಿರುವ ಸಲಹಾ

ಮಂಡಳಿಯ ಮಾರ್ಗದರ್ಶನದಲ್ಲಿ ತನ್ನ ಅಭಿವೃದ್ಧಿ ಪಥದತ್ತ ನಡೆದಿದೆ. ಉಪನ್ಯಾಸಕರೆಲ್ಲರೂ ಸಹ ತಮ್ಮ ವೈಯಕ್ತಿಕ ವಿದ್ಯಾಮಟ್ಟದ ಉನ್ನತ ಸಾಧಿಸಿಕೊಂಡು ಪ್ರಾಚಾರ್ಯರು ಮಾರ್ಗದರ್ಶನದಲ್ಲಿ ಹತ್ತು ಹಲವು ಶಿಬಿರ, ವಿಚಾರ ಸಂಕೀರಣ ಹಾಗೂ ಪ್ರಾತ್ಯಕ್ಷಿಕೆ, ವರ್ಕ್‌ಶಾಫ್‌ಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳ ಶ್ರೇಯೋಭಿವೃದ್ದತಿಗಾಗಿ ಶ್ರಮಿಸುತ್ತಿದ್ದಾರೆ ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಕೇಂದ್ರ ಲಲಿತಕಲಾ ಅಕಾಡೆಮಿಯ ಉಪಾಧ್ಯಕ್ಷರಾದ ಶ್ರೀ.ಕೆ.ಆರ್. ಸುಬ್ಬಣ್ಣ ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಕಲಾವಿದರಾದ ಶ್ರೀ ಆರ್ಯ ಆಚಾರ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ.ಕೆ.ಎಚ್.ಚೆನ್ನೂರ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಮಾನ್ಯ ಶ್ರೀ. ಎಂ. ಪಿ. ಬಗಲಿ ಆಡಳಿತಾಧಿಕಾರಿಗಳು ಜೆ.ಎಸ್.ಎಸ್.ವಿದ್ಯಾಪೀಠ ಮೈಸೂರು, ಧಾರವಾಡ ಶಾಖೆ ಇವರು ವಹಿಸಿದ್ದರು. ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

೨೦೦೯ ಮಾರ್ಚ್ ೩ ರಿಂದ ೫ರವರೆಗೆ ದೃಶ್ಯ ಕಲೆಯ ಕುರಿತು ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕಲಾವಿದರಾದ ಶ್ರೀ.ವ್ಹಿ.ಬಿ.ಹಿರೇಗೌಡರ, ಶ್ರೀ.ಡಾ॥ ವ್ಹಿ.ಎಂ.ಬಾಗಾಯತ, ವಿಜಾಪೂರ, ಶ್ರೀ.ವ್ಹಿ.ಎಂ.ಪಾಟೀಲ, ಧಾರವಾಡ, ಡಾ॥ಯಾದಪ್ಪ ಪರದೇಶಿ, ಬಾದಾಮಿ. ಡಾ॥ಎಸ್.ಸಿ.ಪಾಟೀಲ, ಹಂಪಿ, ಹಾಗೂ ಶ್ರೀ.ಜಿ.ಲಕ್ಷ್ಮಿಪತಿ, ಬೆಂಗಳೂರು ಉಪನ್ಯಾಸ ನೀಡಿದರು. ಸಂಚಾಲಕರಾಗಿ ಶ್ರೀ.ಸಿ.ಜಿ.ಪಾಟೀಲ ಹಾಗೂ ಶ್ರೀ.ಬಿ.ಎಂ ಪಾಟೀಲ ಕಾರ್ಯನಿರ್ವಹಿಸಿದರು.

೨೦೧೦ "ಕಲಾಗುರು ಶ್ರೀ.ಡಿ.ವ್ಹಿ.ಹಾಲಭಾವಿ ಗೌರವ ಪ್ರಶಸ್ತಿ" ಸಮಾರಂಭವನ್ನು ನವೆಂಬರ ೩೦-೨೦೧೦ ರಂದು ಕರ್ನಾಟಕ ವಿಶ್ವವಿದ್ಯಾಲಯದ ಮಾನಸೋಲ್ಲಾಸ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ೨೦೦೯ ನೇ ಸಾಲಿಗಾಗಿ ಕಲಾವಿದರಾದ ಡಾ॥ ಜೆ.ಎಸ್.ಖಂಡೇರಾವ್ ಗುಲ್ಬರ್ಗಾ ಮತ್ತು ೨೦೧೦ ನೇ ಸಾಲಿಗಾಗಿ ಕಲಾವಿದರಾದ ಶ್ರೀ.ಎಂ.ಆರ್ ಬಾಳಿಕಾಯಿ ಧಾರವಾಡ ಇವರುಗಳಿಗೆ ಭವ್ಯ ಸಮಾರಂಭದಲ್ಲಿ ಸತ್ಕರಿಸಿ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ.ಬಿ.ಆರ್.ಜಯರಾಮರಾಜೇಂದ್ರ ಅರಸ, ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪರಿಚಯವನ್ನು ಶ್ರೀ ಸುರೇಶ ಡಿ. ಹಾಲಭಾವಿಯವರು ನಡೆಸಿಕೊಟ್ಟರು. ಅಧ್ಯಕ್ಷತೆಯನ್ನು ಮಾನ್ಯ ಶ್ರೀ ಚಂದ್ರಕಾಂತ ಬೆಲ್ಲದ, ಶಾಸಕರು, ಧಾರವಾಡ ಇವರು ವಹಿಸಿದ್ದರು. ಈ ಕಾರ್ಯಕ್ರಮವು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸುತ್ತೂರು ಕ್ಷೇತ್ರ ಇವರ ದಿವ್ಯಸಾನಿಧ್ಯದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಮುರುಘಾಮಠದ ಮಲ್ಲಿಕಾರ್ಜುನ ಶ್ರೀಗಳು ಸಾನಿಧ್ಯತೆ ವಹಿಸಿದ್ದರು. ಈ ಸಮಯದಲ್ಲಿ ಇವರು "ಪ್ರಶಸ್ತಿ ಪುರಸ್ಕೃತರು" ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು.

೨೦೧೧ ಶ್ರೀ.ಡಿ.ವಿ.ಹಾಲಭಾವಿಯವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಮಯದಲ್ಲಿ ಹಾಲಭಾವಿಯವರ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು. ಉದ್ಘಾಟನೆ ಶ್ರೀಮತಿ ರೇಖಾಶೆಟ್ಟರ ನಡೆಸಿಕೊಟ್ಟರು. ಶ್ರೀ ಸುರೇಶ ಹಾಲಭಾವಿ ಹಾಗೂ ಶ್ರೀ.ಸಿ.ಜಿ.ಪಾಟೀಲ ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ಶ್ರೀ.ಎಂ.ಆರ್.ಬಾಳೆಕಾಯಿ ಅವರು ವಹಿಸಿದ್ದರು. ಅಲ್ಲದೇ "ತಿಂಗಳ ಸಂವಾದ" ಕಾರ್ಯಕ್ರಮದಲ್ಲಿ ೨೬-೦೭-೨೦೧೧ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಅಂಗವಾಗಿ ನಿವೃತ್ತ ಪ್ರಾಧ್ಯಾಪಕ ಡಾ॥ ಪಂಚಾಕ್ಷರಿ

ಹೀರೆಮಠ ಅವರು ಉಪನ್ಯಾಸ ಹಾಗೂ ಸಂವಾದ ನಡೆಸಿಕೊಟ್ಟರು.

೧೨-೮-೨೦೧೧ ರಂದು ಖ್ಯಾತ ಕಲಾವಿದ ಕೆ.ಕೆ.ಹೆಬ್ಬಾರ ಜನ್ಮ ಶತಮಾನೋತ್ಸವದ ಅಂಗವಾಗಿ ಚಿತ್ರಕಲಾ ಪ್ರದರ್ಶನ ಹಾಗೂ ವಿಚಾರ ಸಂಕೀರಣ ಏರ್ಪಡಿಸಲಾಗಿತ್ತು. ಶ್ರೀ.ಚಿ.ಸು.ಕೃಷ್ಣಶೆಟ್ಟಿ ಬೆಂಗಳೂರು ಹಾಗೂ ಶ್ರೀ.ಎನ್.ಕೆ.ಹಾಲಕೇರಿ ಧಾರವಾಡ ಇವರು ಉಪನ್ಯಾಸವನ್ನು ನೀಡಿದರು. ಕಲಾಪ್ರದರ್ಶನದ ಉದ್ಘಾಟನೆಯನ್ನು ಸುರೇಶ ಹಾಲಭಾವಿಯವರು ನಡೆಸಿಕೊಟ್ಟರು. ಕಲಾವಿದ ಶ್ರೀ ಆರ್ಯ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಜೆ.ಎಸ್.ಎಸ್.ಮಹಾಪೀಠದ ಆವರಣದಲ್ಲಿ ನಡೆಯಿತು.

೧೯ ಫೆಬ್ರವರಿ ೨೦೧೨ ರಿಂದ ೧೧ನೇ ಫೆಬ್ರವರಿವರೆಗೂ ಕಲಾವಿದ ಶ್ರೀ ಡಿ.ವಿ.ಬಡಿಗೇರ ಇವರ ಕಲಾಕೃತಿಗಳು ಪ್ರದರ್ಶನ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಲಲಿತಕಲಾ ಆಕಾಡೆಮಿಯ ಮಾಜಿ ಅದ್ಯಕ್ಷರು ವ್ಹಿ.ಟಿ.ಕಾಳೆಯವರು ನಡೆಸಿಕೊಟ್ಟರು. ಈ ಸಮಯದಲ್ಲಿ ಶ್ರೀ.ಬಿ.ಎಂ.ಪಾಟೀಲ ಹಾಗೂ ಮಧು ದೇಸಾಯಿ ಉಪನ್ಯಾಸ ನೀಡಿದರು. ಅಲ್ಲದೇ ಡಿ.ಜಿ.ಬಡಿಗೇರವರ ಹಾಗೂ ಶ್ರೀ ಸುರೇಶ ಹಾಲಭಾವಿ ದಂಪತಿಗಳು ಉಪಸ್ಥಿತರಿದ್ದರು. ಇದೇ ಸಮಯದಲ್ಲಿ ನುರಿತ ಮಾಧ್ಯಮಿಕ ಶಾಲೆಯ ಚಿತ್ರಕಲಾ ಶಿಕ್ಷಕರಿಂದ ಎರಡು ದಿನಗಳವರೆಗೆ ನಿಸರ್ಗ ಚಿತ್ರಕಲಾ ಶಿಬಿರ ಏರ್ಪಡಿಸಲಾಗಿತ್ತು. ನಿಸರ್ಗಚಿತ್ರ ಶಿಬಿರ ೯ ಮತ್ತು ೧೦ ರಂದು ನಡೆದರೆ ಉದ್ಘಾಟನೆಯನ್ನು ಹಿರಿಯ ಕಲಾವಿದರು ಹುಬ್ಬಳ್ಳಿಯ ಶ್ರೀ.ಆರ್.ಗರಗ ಅವರು ನಡೆಸಿಕೊಟ್ಟರು. ೧೦ ರಂದು ಸಾಯಂಕಾಲ ಶ್ರೀಮತಿ ರೇಣುಕಾ ಮಾರ್ಕಂಡೇ ಸ್ಲೈಡ್ಸ್ ಶೋ ತೋರಿಸುತ್ತಾ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು. ಸಂಚಾಲಕರಾಗಿ ಶ್ರೀ.ಎಸ್.ಎಂ ಲೋಹಾರ ಕಾರ್ಯನಿರ್ವಹಿಸಿದರು.

೨೦೧೨ ಮಾರ್ಚ್ ೬ ರಿಂದ ೧೭ ರವರೆಗೆ ಧಾರವಾಡದಲ್ಲಿ ಪ್ರಪ್ರಥಮ ಬಾರಿಗೆ ರಾಷ್ಟ್ರಮಟ್ಟದ ಶಿಲ್ಪಕಲಾ ಶಿಬಿರ ಏರ್ಪಡಿಸಲಾಗಿತ್ತು. ಧಾರವಾಡ ಜಿಲ್ಲಾಧಿಕಾರಿಗಳಾದ ಶ್ರೀ ದರ್ಪಣ ಜೈನ ಶಿಬಿರ ಉದ್ಘಾಟಿಸಿದರು. ಅಲ್ಲದೇ ಡಾ॥ ಎಸ್.ವಿ.ಪಾಡಿಗಾರ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇದೇ ಸಮಯದಲ್ಲಿ ಶ್ರೀ ಆರ್ಯಆಚಾರ್ಯ ಕಲಾವಿದರು ಧಾರವಾಡ ಇವರನ್ನು ಅತ್ಮಿಯವಾಗಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮಕ್ಕೆ ಶಿಬಿರಾರ್ಥಿಗಳಾಗಿ ಹಿರಿಯ ಶಿಲ್ಪ ಕಲಾವಿದರಾದ ಶ್ರೀ ವೇಣುಗೋಪಾಲ, ಗ್ವಾಲಿಯರ್‌ನ ಶ್ರೀ ಅನಿಲ್‌ಕುಮಾರ ವಿಶಾಖ ಪಟ್ಟಣದ ಶ್ರೀ ಸಂತೋಷಕುಮಾರ, ಶ್ರೀನಗರದ ಶ್ರೀ ಸಮೀರ್ ಮಿರ್ಜಾ ಬೆಂಗಳೂರಿನ ಶ್ರೀ.ಯು ಭಾಸ್ಕರ್‌ರಾವ್, ಶ್ರೀ.ಜಿ.ಎಲ್, ಭಟ್, ಶ್ರೀ ನಾರಾಯಣ ಸೂತ್ರಧಾರ, ಮೈಸೂರಿನ ಶ್ರೀ ವೀರಣ್ಣ ಅಕ್ಕಸಾಲಿ ಹಾಗೂ ಕುಂದೂರಿನ ಶ್ರೀ ಓಂಕಾರ ಮೂರ್ತಿ, ಮುಂಬೈನ ಪ್ರದೀಪ ಜೋಗದಂಡ, ಪಾಂಚಕಲಾದ ಶ್ರೀಮತಿ ಫಾರೂಲ್‌ಧರ್, ಧಾರವಾಡದ ಕಲಾವಿದ ಶರಣ್ ಮುಂತಾದವರು ಅತ್ಯತ್ತಮ ಶಿಲ್ಪಗಳನ್ನು ಸಂಸ್ಥೆಗೆ ನಿರ್ಮಿಸಿಕೊಟ್ಟರು. ಈ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಕಾವಾ ಮೈಸೂರು ಹಾಗೂ ಜೆ.ಎಸ್.ಎಸ್.ಮಹಾವಿದ್ಯಾಪೀಠ ಮೈಸೂರು ಸಂಸ್ಥೆಯ ಜಂಟಿ ಅಶ್ರಯದಲ್ಲಿ ನಡೆಸಲಾಯಿತು. ಇದರ ಸಂಚಾಲಕರಾಗಿ ಶ್ರೀ.ವ್ಹಿ.ಎ.ದೇಶಪಾಂಡೆ ಡೀನ್ "ಕಾವಾ" ಇವರು ನಡೆಸಿಕೊಟ್ಟರು.

ಮಾರ್ಚ್ ೧೭-೨೦೧೨ "ಕಲಾಗುರು ಶ್ರೀ ಡಿ.ವ್ಹಿ ಹಾಲಭಾವಿಯವರ ಶತಮಾನೋತ್ಸವ ಹಾಗೂ ಜೆ.ಎಸ್.ಎಸ್.ಸ್ಕೂಲ್ ಆಫ್ ಆರ್ಟ್‌ನ ಅಮೃತ ಮಹೋತ್ಸವ ಮತ್ತು ಜೆ.ಎಸ್.ಎಸ್. ರಪ್ತು ಉತ್ಪನ್ನ ಕೇಂದ್ರದ

ಕಟ್ಟಡದ ಉದ್ಘಾಟನೆ" ಹಾಗೂ ಸಂವಾದ ಸುತ್ತೂರು ಮಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಮಾಜಿ ರಾಷ್ಟ್ರಪತಿ ಶ್ರೀ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟನೆ ವಿದ್ಯಾರ್ಥಿಗಳೊಡನೆ ಸಂವಾದ ನಡೆಸಿದರು. ಪೂಜ್ಯರಾದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಬಿಜಾಪುರ ಇವರು ಉಪಸ್ಥಿತರಿದ್ದರು. ಎಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಜಗದೀಶ ಶೆಟ್ಟರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಹಲವಾರು ಸಚಿವರು, ಸಂಸದರು, ಶಾಸಕರು, ವಿಧಾನ, ಪರಿಷತ್ತು ಸದಸ್ಯರು, ಸರ್ಕಾರಿ ಅಧಿಕಾರಿಗಳು ಹಾಗೂ ನಮ್ಮ ಸಂಸ್ಥೆಯ ಹಿರಿಯ ಪದಾಧಿಕಾರಿಗಳೆಲ್ಲ ಉಪಸ್ಥಿತರಿದ್ದರು. ಈ ಕಾರ್ಯಕ್ರಮ ಅತಿಭವ್ಯವಾಗಿ ನಡೆದದ್ದು ಹೆಮ್ಮೆಯ ಪ್ರತೀಕವಾಗಿದೆ.

೨೦೧೩ರಲ್ಲಿ ನಡೆದಂತಹ ಕಿನ್ನಾಳ ಕಲೆಯ ವರ್ಕ್‌ಶಾಪ್ ಶಿಬಿರದಲ್ಲಿ ಕಲಾವಿದರಾದ ಶ್ರೀ ನಾರಾಯಣಪ್ಪನವರು ಚಿತ್ರ ಕಿನ್ನಾಳ ಕಲೆಯ ಹಲವಾರು ವಿನ್ಯಾಸದ ಕಲಾಕೃತಿಗಳ ರಚನೆಯಲ್ಲಿ ವಿದ್ಯಾರ್ಥಿಗಳಿಗೆ ಉತ್ತಮವಾದ ಮಾರ್ಗದರ್ಶನ ನೀಡಿ ೨೦ ರಿಂದ ೩೦ ಕಲಾಕೃತಿಗಳು ರಚನೆಗೊಳ್ಳುವಲ್ಲಿ ತಮ್ಮ ಅನುಭವವನ್ನು ಧಾರೆಯರೆದು ಆ ಕಾರ್ಯಕ್ರಮ ಯಶಸ್ವಿಯಾಗುವಂತೆ ಮಾಡಿದರು.

ಹಣದ ಸಹಾಯವಿಲ್ಲದೇ ಕಲಾಶಾಲೆಯನ್ನು ಬಹಳ ಕಷ್ಟಪಟ್ಟು ನಡೆಸಿಕೊಂಡು ಬಂದಿರುವರು. ಆಗಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಚಿತ್ರಕಲೆಯ ಕುರಿತು ಅರಿವು, ಮಾಹಿತಿಗಳಾಗಲಿ ಇರಲಿಲ್ಲವಾದುದರಿಂದ ವಿದ್ಯಾರ್ಥಿಗಳನ್ನು ಕೂಡಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ಕಲೆ ಹಾಗೂ ಕಲಾ ಶಿಕ್ಷಣ ಮತ್ತು ಉದ್ಯೋಗಕ್ಕೆ ಅವಕಾಶಗಳ ಕುರಿತು ತಿಳುವಳಿಕೆ ನೀಡುತ್ತ ಅವರನ್ನು ಆಕರ್ಷಿಸಲು ಚಿತ್ರಕಲೆ ಕುರಿತು ಕಲಾಚಟುವಟಿಕೆಗಳನ್ನು ನಡೆಸುತ್ತ ಹಾಗೂ ವಿದ್ಯಾರ್ಥಿಗಳಿಗೆ ಪ್ರವಾಸ, ಹೊರಾಂಗಣ ಚಿತ್ರಣಕ್ಕೆ ಕರೆದೊಯ್ಯುವುದು, ಹೊರಗಡೆಯಿಂದ ಉಪನ್ಯಾಸಕರನ್ನು ಕರೆಸುವುದು, ಕಲಾಶಿಬಿರ ಪ್ರದರ್ಶನಗಳನ್ನು, ಪ್ರಾತ್ಯಕ್ಷಿಕೆಗಳನ್ನು, ಹಮ್ಮಿಕೊಳ್ಳುತ್ತ ಮುನ್ನಡೆಯಿತು. ಅದೇ ರೀತಿಯಾಗಿ ಬೇರೆ ಕಡೆಗಳಿಗೆ ಅಂದರೆ ರಾಜ್ಯ ಮತ್ತು ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಚಿತ್ರಕಲಾ ಪ್ರದರ್ಶನ, ಶಿಬಿರ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸುತ್ತ ಈಗ ಎಪ್ಪತ್ತು ವರ್ಷಗಳನ್ನು ಮುಗಿಸಿಕೊಂಡು ಶತಮಾನೋತ್ಸವಕ್ಕೆ ಪಾದಾರ್ಪಣೆ ಮಾಡುತ್ತ ಇಡೀ ದೇಶದ ಗಮನವನ್ನೇ ಸೆಳೆಯುವಂತೆ ರೂಪುಗೊಂಡಿದೆ. ಇದಕ್ಕೆ ಕಾರಣವೂ ಇದೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಪ್ರಾರಂಭದ ದಿನಗಳನ್ನು ಅವಲೋಕಿಸಿದಾಗ ತರಗತಿಯಲ್ಲಿ ಬೋಧನೆಯನ್ನು ಉತ್ತಮ ಪಡಿಸಲು ಮುಂಬೈ ಜೆ.ಜೆ.ಕಲಾ ಶಾಲೆಯಲ್ಲಿ ಅಧ್ಯಯನ ಮಾಡಿದವರನ್ನು ಶಿಕ್ಷರನ್ನಾಗಿ ತೆಗೆದುಕೊಂಡಾಗ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗುತ್ತಾ ಬಂದಿತು.

ಕಲಾಶಾಲೆಯ ಗುಣಮಟ್ಟ ಹೆಚ್ಚಾಗಲು ಕಲಾಶಿಕ್ಷಕರ ಹೊಣೆಯು ಹೆಚ್ಚಾಗಿರುತ್ತದೆ ಅನ್ನುವುದನ್ನು ಅರಿತ ಶ್ರೀ ದಾನಪ್ಪ ಹಾಲಭಾವಿಯವರು ಪ್ರತಿಭೆ ಇರುವ ಸಿಬ್ಬಂದಿಯನ್ನೇ ನೇಮಕ ಮಾಡಿಕೊಳ್ಳುತ್ತಿದ್ದರು. ಶ್ರೀ ದಾನಪ್ಪ ಹಾಲಭಾವಿಯವರು ವಿಶಾಲವಾದ ಕಲಾಕ್ಷೇತ್ರದಲ್ಲಿ ಆಸಕ್ತಿಯಿಂದ ಅತರ್ವನಿಷ್ಠರಾಗಿ ದುಡಿಯುತ್ತಿದ್ದರು. ಇಂದಿನವರೆಗೂ ಸ್ಕೂಲ ಆಫ್ ಆರ್ಟ್ ಸಿಬ್ಬಂದಿಯು ಅದೇ ಮೌಲ್ಯವನ್ನು ಕಾಯ್ದುಕೊಂಡು ಬಂದಿರುವುದರ ಫಲವಾಗಿ "ಧಾರವಾಡದ ಸ್ಕೂಲ್ ಆಫ್ ಆರ್ಟ್" ಹಲವಾರು ಕಲಾವಿದರನ್ನು ಕಲಾಶಿಕ್ಷಕರನ್ನು, ಕಲಾ ಪ್ರೇಮಿಗಳನ್ನು, ಎಲ್ಲಾ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಕಲಾಚಟುವಟಿಕೆಗಳ ಮೂಲಕ ಜನ ಸಾಮಾನ್ಯರಲ್ಲೂ

ಕಲಾಪ್ರೇಮವನ್ನು ರೂಢಿಸಿ, ನಾಡಿನ ಸಂಸ್ಕೃತಿಯನ್ನು ಎತ್ತಿ ತೋರುವಂತೆ ಮಾಡಿದೆ, ಕಲಾಶಾಲೆಯ ವಾರ್ಷಿಕೋತ್ಸವದಲ್ಲಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸುವುದು, ಸಾಮಾನ್ಯ ವಿಷಯವೇ ಆದರೂ ಇನ್ನಿತರ ಸುಪ್ರಸಿದ್ಧ ಕಲಾವಿದರ ಕಲಾಕೃತಿಗಳನ್ನು ಯುವ ಕಲಾವಿದರ ಕಲಾಕೃತಿಗಳನ್ನು, ಕಲಾಶಿಬಿರಗಳನ್ನು ಸ್ಕೂಲ್ ಆಫ್ ಆರ್ಟ್ ಆಶ್ರಯದಲ್ಲಿ ಪ್ರದರ್ಶಿಸಿದ್ದಾರೆ. ತನ್ಮೂಲಕ ಜನತೆಯಲ್ಲಿ ಕಲಾಪ್ರಜ್ಞೆಯನ್ನು ಜಾಗ್ರತಗೊಳಿಸಿದ್ದಾರೆ. ಶಾಲಾ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪ್ರದರ್ಶನಗಳನ್ನು ನಾಡಿನ, ರಾಷ್ಟ್ರದ ಗಣ್ಯರು ಪ್ರಶಂಸಿದ್ದಾರೆ. ನಮ್ಮ ದೇಶದ ಗಣ್ಯಕಲಾವಿದರು, ಕಲಾವಿಮರ್ಶಕರು, ವಿದೇಶಿಯರು ಈ ಕಲಾಶಾಲೆಯನ್ನು ಸಂದರ್ಶಿಸಿ ತಮ್ಮ ಸದಭಿಪ್ರಾಯಗಳನ್ನು ದಾಖಲಿಸಿದ್ದಾರೆ.

ಕೇವಲ ವರ್ಣಚಿತ್ರ ಮಾತ್ರವಲ್ಲ ಗಾಯನ, ನೃತ್ಯ, ಛಾಯಾಚಿತ್ರ ಕಲೆಗಳಿಗೂ, ಕಲಾಶಾಲೆಯು ಪ್ರೋತ್ಸಾಹ ನೀಡುತ್ತ ಉಪಯುಕ್ತ ಕಾರ್ಯ ಕೈಗೊಂಡಿದೆ. ವರ್ಣಚಿತ್ರ ಕಲೆಯನ್ನು ಕುರಿತು ಶಿಕ್ಷಣ ನೀಡುವುದು ಮಾತ್ರವಲ್ಲ ಈ ಕಲಾಶಾಲೆಯು ಕಲಾಪ್ರಗತಿಗೆ ಸಂಬಂಧಪಟ್ಟ ಬೇರೆ ಬೇರೆ ಸಂಘಟನೆಗಳನ್ನು ರೂಪಿಸುವ ಕಾರ್ಯವನ್ನು ಕೈಗೊಂಡಿದೆ.

ಫೈನ್ ಆರ್ಟ ಸೊಸೈಟಿ, ಪೋಷ್ಟ ಡಿಪ್ಲೋಮಾ ಕ್ಲಬ್, ಆರ್ಟ್ ಗಿಲ್ಡ್ ಹಾಗೂ ಕಲಾಮಾರ್ಗ ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದ್ದು, ಕರ್ನಾಟಕ ಆರ್ಟಸೊಸೈಟಿ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘದಂತಹ ಸಂಘಟನೆಗಳು ಪ್ರಮುಖವಾಗಿದ್ದು ಸ್ಥಳೀಯವಾಗಿ ವರ್ಣಮೇಳ ನಗರ ಕಲಾವಿದರು ಎಂಬ ಸಂಘಟನೆಗಳನ್ನು ಹುಟ್ಟು ಹಾಕಿ ಇವುಗಳ ಮೂಲಕ ಕಲಾವಿದರಲ್ಲಿ ಕಲಾವಿಮರ್ಶಕರಲ್ಲಿ ಕಲಾ ಶಿಕ್ಷಕರಲ್ಲಿ ಪರಸ್ಪರ ಸಂಪರ್ಕ ವಿಚಾರ ವಿನಿಮಯಗಳಿಗೆ ಅವಕಾಶ ಕಲ್ಪಿಸುವ ಒಂದು ಕಲಾವೇದಿಕೆಯನ್ನು ರೂಪಿಸಿದಂತಾಗಿದೆ, ಕಲಾಶಾಲೆಯ ಕಟ್ಟಡದೊಳಗೆ ಪ್ರವೇಶಿಸಿದಾಗ ಅದೊಂದು ಕಲಾಲೋಕಕ್ಕೆ ಹೋದ ಅನುಭವ ಆಗುತ್ತದೆ.

ಹಾಲಭಾವಿ ಸ್ಕೂಲ ಆಫ್ ಆರ್ಟನ ಪ್ರಮುಖ ಕಲಾಚಟುವಟಿಕೆಗಳು







Founder Sri.D.V Halbhavi's 105 Birthday celebration


















* ೧೯೩೮ರಲ್ಲಿ ಸ್ಕೂಲ ಆಫ್ ಆರ್ಟದಿಂದ ಖ್ಯಾತ ಸಂಗೀತ ಕಲಾವಿದರಾದ 'ಕುಮಾರ ಗಂಧರ್ವ ಮತ್ತು ಶ್ರೀ ಅಬ್ದುಲ್ ಕರೀಮ್ ಖಾನರಿಂದ' ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಮುಂಬೈ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಿ.ಜಿ.ಖೇರ್ ಅವರು ಕಲಾ ಮಂದಿರಕ್ಕೆ ಸಂದರ್ಶನ ನೀಡಿದ್ದರು.
* ೧೯೩೯ರಲ್ಲಿ 'ಸ್ಕೂಲ್ ಆಫ್ ಆರ್ಟಿನ ವಾರ್ಷಿಕ ಕಲಾಪ್ರದರ್ಶನವನ್ನು' ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಉದ್ಘಾಟಿಸಿದರು.
* ೧೯೪೦ರಲ್ಲಿ ಖ್ಯಾತ ಕವಿಗಳಾದ 'ಅ.ನ.ಕೃಷ್ಣರಾವ್' ಮತ್ತು ಶ್ರೀ ವೆಂಕಟೇಶ ಅಯ್ಯಂಗಾರ್ ಅವರು ಸ್ಕೂಲ್ ಆಫ್ ಆರ್ಟನ್ನು ಸಂದರ್ಶಿಸಿದರು.
* ೧೯೪೨ರಲ್ಲಿ ಖ್ಯಾತ ರಂಗಕಲಾವಿದ 'ಶ್ರೀ ಗುಬ್ಬೀ ವೀರಣ್ಣ' ಅವರು ಸ್ಕೂಲ್ ಆಫ್ ಆರ್ಟನ್ನು ಸಂದರ್ಶಿಸಿರುವರು.
* ೧೯೪೩ರಲ್ಲಿ ಮುಂಬೈ ಸರಕಾರದ ಡಿ.ಪಿ ಆಯ್ ಶ್ರೀ ಡಿ.ಸಿ.ಪಾವಟೆ ಅವರು ಸ್ಕೂಲ್ ಆಫ್ ಆರ್ಟನ್ನು ಸಂದರ್ಶಿಸಿ ಮೆಚ್ಚುಗೆ ಸೂಚಿಸಿರುವರು.
* ೧೯೪೬ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸೊಲ್ಲಾಪುರದಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟನ ವಿದ್ಯಾರ್ಥಿಗಳ ಚಿತ್ರಕಲಾ ಪ್ರದರ್ಶನವನ್ನು 'ಅಕ್ಕಲಕೋಟದ ರಾಣಿ ಸಾಹೇಬ ಅವರು ಉದ್ಘಾಟಿಸಿದರು.
* ೧೯೪೭ರಲ್ಲಿ ಟೈಮ್ಸ್ ಆಫ್ ಇಂಡಿಯಾದ ಕಲಾವಿದ 'ಶ್ರೀ ಎಸ್.ಜಿ.ಶಿರೂರ್' ಅವರು ಸ್ಕೂಲ್ ಆಫ್ ಆರ್ಟದಲ್ಲಿ 'ಚಿತ್ರಕಲಾ ಪ್ರದರ್ಶನವನ್ನು' ಏರ್ಪಡಿಸಿದ್ದರು.
* ೧೯೪೯ರಲ್ಲಿ 'ನೃತ್ಯ ಕಲಾಪ್ರದರ್ಶನ' ವಿಷಯದ ಕುರಿತು ಕಲಾವಿದೆ ಶಾಂತಾರಾವ್ ಅವರಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.
* ೧೯೫೦ರಲ್ಲಿ ಶ್ರೀ ದಾನಪ್ಪ ಹಾಲಭಾವಿಯವರು ಕರ್ನಾಟಕ ಆರ್ಟ ಸೊಸೈಟಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ಸಂಘಟನೆಯು ಉದಯೋನ್ಮುಖ ಕಲಾವಿದರನ್ನು ರಾಷ್ಟ್ರಕ್ಕೆ ಪರಿಚಯಿಸುವ ಕಾರ್ಯ ಮಾಡಿತು.
* ೧೯೫೧ರಲ್ಲಿ ಡಿಸೆಂಬರ್ ೨೨ ರಂದು ಹಾಲಭಾವಿ ಸ್ಕೂಲ್ ಆಫ್ ಆರ್ಟವು "Special School under chapter VII of the G.A Code" ಅಡಿಯಲ್ಲಿ ಸೇರಿಕೊಂಡಿತು.
* ೧೯೫೧ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟದಲ್ಲಿ ಕರ್ನಾಟಕ ಆರ್ಟ ಸೊಸೈಟಿಯಿಂದ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.
* ೧೯೫೨ರಲ್ಲಿ ಕರ್ನಾಟಕದಾದ್ಯಂತ ಏಕೈಕವಾಗಿ ಸ್ಕೂಲ್ ಆಫ್ ಆರ್ಟಗೆ ಮಾತ್ರ ಚಿತ್ರಕಲಾ ಶಿಕ್ಷಕರ ತರಬೇತಿ ಕೋರ್ಸ್‌ಗಳನ್ನು ನಡೆಸಲು ಅನುಮತಿ ನೀಡಿದರು.
* ೧೯೫೩ರಲ್ಲಿ ಸ್ಕೂಲ್ ಆಫ್ ಆರ್ಟದ ರಿಜಿಸ್ಟ್ರೇಷನ್ Bombay Public Trust Act ಮಾಡಿಸಿದ್ದು ಅದರ ಅಂಗವಾಗಿ ಏರ್ಪಡಿಸಿದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ಕವಿ ಡಾ.

ದ.ರಾ.ಬೇಂದ್ರೆಯವರು ಕಲಾಶಾಲೆಯು ಧಾರವಾಡದ ಗರಿಮೆಯಾಗಿ ಬೆಳೆಯುತ್ತದೆ ಎಂದು ಮೆಚ್ಚುಗೆಯ ಮಾತುಗಳನ್ನು ಹೇಳಿದರು.

* ೧೯೫೭ರಲ್ಲಿ ಸ್ಕೂಲ್ ಆಫ್ ಆರ್ಟದ ವಿದ್ಯಾರ್ಥಿಗಳು ಹಂಪೆಯ ಕ್ಯಾಂಪಿನಲ್ಲಿ ರಚಿಸಿದ ಕಲಾಕೃತಿಗಳ Movie Filmನ್ನು ಖ್ಯಾತ ಕವಿಗಳಾದ ಜ್ಞಾನಪೀಠ ಪ್ರಶಸ್ತಿ ವಿಜೇತ ಕೆ. ವಿ. ಪುಟ್ಟಪ್ಪನವರು ಬಿಡುಗಡೆ ಗೊಳಿಸಿದರು.

* ೧೯೬೦ರಲ್ಲಿ ಸ್ಕೂಲ್ ಆಫ್ ಆರ್ಟ ವಿದ್ಯಾರ್ಥಿಗಳ ಪ್ರವಾಸವನ್ನು ಖಾನಾಪುರದ Pottery factoriಗೆ ಕರೆದುಕೊಂಡು ಹೋಗಿ ಅವುಗಳ ತಯಾರಿಕೆಯ ವಿಧಿವಿಧಾನಗಳ ಕುರಿತು ತಿಳಿದುಕೊಳ್ಳಲಾಯಿತು.

* ೧೯೬೧ರಲ್ಲಿ ಶ್ರೀ ಸದಾಶಿವ ಒಡಿಯರ್ ಉಪಕುಲಪತಿಗಳು ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ ಇವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಸ್ಕೂಲ್ ಆಫ್ ಆರ್ಟದಲ್ಲಿ ಹಮ್ಮಿಕೊಳ್ಳಲಾಗಿತ್ತು.

* ೧೯೬೨ರಲ್ಲಿ ಸ್ಕೂಲ್ ಆಫ್ ಆರ್ಟದ ಬೆಳ್ಳಿ ಮಹೋತ್ಸವವನ್ನು ಆಚರಿಸಲಾಯಿತು. ಅಂತರ್ ರಾಷ್ಟ್ರೀಯ ಕಲಾವಿದ ಪದ್ಮಶ್ರೀ ಕೆ.ಕೆ.ಹೆಬ್ಬಾರ್ ಅವರು ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿ ಪ್ರಾತ್ಯಕ್ಷಿಕೆಯನ್ನು ನೀಡಿ ಕಲಾಕೃತಿಗಳ ಕುರಿತು ಉಪನ್ಯಾಸ ನೀಡಿದರು ಅಧ್ಯಕ್ಷತೆಯನ್ನು ಡಾ.ಸಿ.ಪಾವಟೆ ಅವರು ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ ಇವರು ವಹಿಸಿದ್ದರು.

* ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ – ೧೯೮೫.

* ೧೯೬೨ರಲ್ಲಿ ಸ್ಕೂಲ್ ಆಫ್ ಆರ್ಟದ ಬೆಳ್ಳಿ ಮಹೋತ್ಸವದಲ್ಲಿ ಶಾಲೆಯ ಹಳೆಯ ಮತ್ತು ಹೊಸ ವಿದ್ಯಾರ್ಥಿಗಳ ಸಮಾವೇಶವನ್ನು ಪಂಜಾಬದ ರಾಜ್ಯಪಾಲರಾದ ಶ್ರೀಮತಿ ಡಾ.ಸರೋಜಿನಿ ಮಹೀಷಿ ಅವರು ಉದ್ಘಾಟನೆಯನ್ನು ಮಾಡಿದರು ಸಭೆಯ ಅಧ್ಯಕ್ಷತೆಯನ್ನು ಶ್ರೀ ಎನ್.ಎಂ.ನೇರ್ಲೇಕರ ಅವರು ವಹಿಸಿದ್ದರು.

* ೧೯೬೨ರಲ್ಲಿ ಮೈಸೂರಿನ ದಸರಾ ಉತ್ಸವಕ್ಕೆ ಸ್ಕೂಲ್ ಆಫ್ ಆರ್ಟನವರಿಂದ ಶಾಲೆಯ ವಿದ್ಯಾರ್ಥಿ ಮತ್ತು ಶಿಕ್ಷಕರು ಸೇರಿಕೊಂಡು 'ಕಿತ್ತೂರ ಚೆನ್ನಮ್ಮ' ಸ್ತಬ್ಧ ಚಿತ್ರ ಮಾಡಲಾಗಿತ್ತು.

* ೧೯೬೪ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟದಲ್ಲಿ ಫೆಡರೇಷನ್ ಆಫ್ ಆರ್ಟ್ ಇನ್ಸ್ಟಿಟ್ಯೂಟ್ ಮುಂಬೈ ದವರಿಂದ ಚಿತ್ರಕಲಾ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು.

* ೧೯೬೫ರಲ್ಲಿ ಲಲಿತಕಲಾ ಅಕಾಡಮಿ ಮೈಸೂರಿನ ಪ್ರಶಸ್ತಿ ವಿಜೇತ ಕಲಾವಿದ ಶ್ರೀ.ಪಿ.ಆರ್. ತಿಪ್ಪೇಸ್ವಾಮಿಯವರು ಸ್ಕೂಲ್ ಆಫ್ ಆರ್ಟಗೆ ಸಂದರ್ಶಿಸಿ ತಮ್ಮ ಕಲಾಅನುಭವಗಳನ್ನು ಹಂಚಿಕೊಂಡರು ಅವರನ್ನು ಸ್ಕೂಲಿನಿಂದ ಸತ್ಕರಿಸಲಾಯಿತು.

* ೧೯೬೫ರಲ್ಲಿ ಎಲ್ಲೋರಾ ಮತ್ತು ಅಜಂತಾದಲ್ಲಿ ಸ್ಕೂಲ್ ಆಫ್ ಆರ್ಟನ ವಿದ್ಯಾರ್ಥಿಗಳು ರಚಿಸಿದ ಕಲಾಕೃತಿಗಳ ಪ್ರದರ್ಶನವನ್ನು ಔರಂಗಾಬಾದ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ.ತಾವಣೆ ಅವರು ಉದ್ಘಾಟಿಸಿದರು. ಈ ಪ್ರದರ್ಶನವು ಫೇಡರೇಷನ್ ಆಫ್ ಆರ್ಟ್ ಇನ್ಸ್ಟಿಟ್ಯೂಷನ್ ಆಫ್

ಮುಂಬೈದವರ ಸಹಕಾರದೊಂದಿಗೆ ಪ್ರದರ್ಶನದ ವ್ಯವಸ್ಥೆಗೊಳಿಸಲಾಗಿತ್ತು.

* ೧೯೬೬ರಲ್ಲಿ ಖ್ಯಾತ ಕಲಾವಿದ ಶ್ರೀ ಎಂ.ವಿ.ಮಿಣಜಗಿಯವರು ಜಪಾನ ಪ್ರವಾಸ ಮಾಡಿ ಬಂದ ನಂತರ ಅವರನ್ನು ಆಮಂತ್ರಿಸಿ ಪ್ರವಾಸದ ಹಿನ್ನೆಲೆಯಲ್ಲಿ ಕಲಾ ಅನುಭವಗಳನ್ನು ಆಲಿಸಿ ಅವರಿಗೆ ಗೌರವಿಸಲಾಯಿತು.

* ೧೯೬೬ರಲ್ಲಿ ಲಲಿತಕಲೆಯ ಪ್ರಸಾರಕ್ಕಾಗಿ "ಆರ್ಟ್‌ಗಿಲ್ಡ್" ಎಂಬ ಕನ್ನಡ ಮತ್ತು ಆಂಗ್ಲ ಭಾಷೆಯ ಕಲಾ ಪತ್ರಿಕೆಯನ್ನು ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಶ್ರೀ ದಾನಪ್ಪ ಹಾಲಭಾವಿಯವರು ಪಾರಂಭಿಸಿದ್ದು ಈ ಪತ್ರಿಕೆಯನ್ನು ಡಾ.ಸರೋಜಿನಿ ಮಹಿಷಿ ಲೋಕಸಭಾ ಸದಸ್ಯರು ಅಕ್ಟೋಬರ್ ೬ ರಂದು ಬಿಡುಗಡೆಗೊಳಿಸಿದರು.

* ೧೯೬೭ರಲ್ಲಿ ದಿ ಫೆಡರೇಷನ್ ಆರ್ಟ್ ಇನ್ಸ್ಟ್ಯೂಟ್ ಬಾಂಬೆದ ಚಿತ್ರಕಲಾ ಪ್ರದರ್ಶನವನ್ನು ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟನವರು, ಫೆಬ್ರವರಿ ೨೫ ರಂದು ಕ.ವಿ.ವಿ ಧಾರವಾಡದ ಭಾಷಾ ವಿಭಾಗದಲ್ಲಿ ಕಲಾಪ್ರದರ್ಶನವನ್ನು ಏರ್ಪಡಿಸಲಾಗಿತ್ತು, ಕೇಂದ್ರ ರೈಲ್ವೆ ಮಂತ್ರಿಗಳಾದ ಶ್ರೀ ಎಸ್.ಕೆ.ಪಾಟೀಲ್ ಅವರು ಅತಿಥಿಗಳಾಗಿ ಬಂದಿದ್ದು, ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಎಸ್.ನಿಜಲಿಂಗಪ್ಪನವರು ಈ ಸಮಾರಂಭವನ್ನು ಉದ್ಘಾಟಿಸಿದರು.

* ೧೯೭೧ರಲ್ಲಿ ಯೋಗಾಪಟು ಶ್ರೀ ಲಕ್ಷ್ಮಣಕುಮಾರ ಸಣ್ಣ ಎಲ್ಲಪ್ಪನವರ್ ನಿರ್ದೇಶನದಲ್ಲಿ ಸ್ಕೂಲ್ ಆಫ್ ಆರ್ಟ ವಿದ್ಯಾರ್ಥಿಗಳಿಗೆ ಯೋಗಾ ಕ್ಲಾಸ್‌ಗಳನ್ನು ಪ್ರಾರಂಭಿಸಿದ್ದು, ಅದರ ಉದ್ಘಾಟನೆಯನ್ನು ಎಂ.ವೈ.ಗೋರ್ಪಡೆ ಅವರು (ಸಂಡೂರ) ನೆರವೇರಿಸಿದರು.

* ೧೯೭೨ರಲ್ಲಿ ಖ್ಯಾತ ಕಲಾವಿದ ಜಿ.ಎಸ್.ದಂಡಾವತಿಮಠ ಅವರಿಂದ ಸ್ಟಿಲ್ ಲೈಫ್ ಪ್ರಾತ್ಯಕ್ಷಿಕೆ ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.

* ೧೯೭೩ರಲ್ಲಿ ಖ್ಯಾತ ಸಂಗೀತಗಾರ್ತಿ ಶ್ರೀಮತಿ ಮಾಲಿನಿ ರಾಜೂರ್‌ಕರ್ ಅವರಿಂದ ಸಂಗೀತ ಕಾರ್ಯಕ್ರಮವನ್ನು ಸ್ಕೂಲ್ ಆಫ್ ಆರ್ಟದಲ್ಲಿ ಏರ್ಪಡಿಸಲಾಗಿತ್ತು.

* ೧೯೭೩ರಲ್ಲಿ ಕಲಾವಿದ ಕೆ.ಜಿ.ಕುಲಕರ್ಣಿ ಅವರಿಂದ ನವ್ಯ ಕಲೆಯ ಕುರಿತು ಉಪನ್ಯಾಸವನ್ನು ಏರ್ಪಡಿಸಿದ್ದರು ಶ್ರೀಮತಿ ತಾರಾಪವಾರ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು.

* ೧೯೭೪ರಲ್ಲಿ ಖ್ಯಾತ ಸಾಹಿತಿಗಳಾದ ಶ್ರೀ ಎಸ್.ಎಸ್.ಭೂಸನೂರ್ ಮಠ ಅವರಿಗೆ ರಾಷ್ಟ್ರೀಯ ಪ್ರಶಸ್ತಿ ಪಡೆದಿದ್ದು ಪ್ರಖ್ಯಾತ ಕವಿ ಡಾ. ದ.ರಾ.ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿರುವುದಕ್ಕೆ ಸ್ಕೂಲ್ ಆಫ್ ಆರ್ಟದಿಂದ ಸನ್ಮಾನಿಸಲಾಯಿತು.

* ೧೯೭೫ರಲ್ಲಿ ದಾವಣಗೇರಿ ಸಹಕಾರಿ ಚಿತ್ರಕಲಾ ಶಾಲೆಯ ಉಪನ್ಯಾಸಕರಾದ ಶ್ರೀ ಶಂಕರ ಪಾಟೀಲರು ಛಾಯಚಿತ್ರ ಕಲಾಪ್ರದರ್ಶನವನ್ನು ಏರ್ಪಡಿಸಿರುವರು.

* ೧೯೭೭ರಲ್ಲಿ ಪೋಸ್ಟ್ ಡಿಪ್ಲೋಮಾ ಕ್ಲಬ್ ದ ಪ್ರಥಮ ಕಲಾ ಪ್ರದರ್ಶನವನ್ನು ಸ್ಕೂಲ್ ಆಫ್ ಆರ್ಟದ

ನೂತನ ಪ್ರಚಾರ್ಯರಾದ ಶ್ರೀಮತಿ ತಾರಾಪವಾರ ಅವರು ಉದ್ಘಾಟಿಸಿದರು.

* ೧೯೭೭ರಲ್ಲಿ ಸಾಹಿತ್ಯ ಅಕಾಡಮಿ ಪ್ರಶಸ್ತಿ ವಿಜೇತ ಶ್ರೀಮತಿ ತಾಲವುಡ್ ಅವರಿಗೆ ಸನ್ಮಾನ್ಯ ಇದೇ ವರ್ಷ ಹೈದರಾಬಾದ ಪ್ರವಾಸವನ್ನು ಶಾಲಾ ವಿದ್ಯಾರ್ಥಿಗಳು ಕೈಗೊಂಡರು.

* ೧೯೭೯ರಲ್ಲಿ ಈಶ್ವರ್ ಮುರಗೋಡ ನಮ್ಮ ಶಾಲೆಯ ಹಳೆಯ ವಿದ್ಯಾರ್ಥಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಫ್ರಾನ್ಸ್‌ಗೆ ಹೋಗಿ ಅಧ್ಯಯನ ಮುಗಿಸಿಕೊಂಡು ಬಂದ ಸಂದರ್ಭದಲ್ಲಿ ಸ್ಕೂಲ್ ಆಫ್ ಆರ್ಟದಿಂದ ಸನ್ಮಾನಿಸಲಾಯಿತು.

* ೧೯೭೯ರಲ್ಲಿ ಪೋಸ್ಟ್ ಡಿಪ್ಲೋಮಾ ಕ್ಲಬ್ ದವರಿಂದ 'ಚಿಕ್ಕಮಕ್ಕಳ ಚಿತ್ರಕಲಾ ಪ್ರದರ್ಶನವನ್ನು' ಹಮ್ಮಿಕೊಂಡಿದ್ದು, ಅದರ ಉದ್ಘಾಟನೆಯನ್ನು ಕಲಾಮಂದಿರದ ನೂತನ ಪ್ರಾಚಾರ್ಯರಾದ ಶ್ರೀ ಸುರೇಶ್ ಡಿ.ಹಾಲಭಾವ್ಹಿಯವರು ನೆರವೇರಿಸಿದರು.

* ೧೯೮೦ರಲ್ಲಿ ಡಿ.ಟಿ.ಸಿ ಕ್ಲಾಸಿನ 'ಬೆಳ್ಳಿಹಬ್ಬ' ವನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಟಿ.ಪಿ.ಅಕ್ಕಿಯವರಿಗೆ ರಾಜ್ಯಪ್ರಶಸ್ತಿ ಬಂದಿದ್ದು ಅವರನ್ನು ಸನ್ಮಾನಿಸಲಾಯಿತು.

* ೧೯೮೧ ರಲ್ಲಿ ಸ್ಕೂಲ್ ಆಫ್ ಆರ್ಟ ವಿದ್ಯಾರ್ಥಿಗಳನ್ನು ಬದಾಮಿ ಪಟ್ಟದಕಲ್ಲುಗಳ ನಿಸರ್ಗ ಚಿತ್ರಗಳ ರಚನೆಯನ್ನು ಮಾಡಲು ಕರೆದುಕೊಂಡು ಹೋಗಿರುವುದು.

* ೧೯೮೨ರಲ್ಲಿ ಖ್ಯಾತ ಕಲಾವಿದ ಎ.ಎ ಅಲ್ಮೇಲಕರ ಅವರ ಮುಂಬೈಯಿಂದ ಧಾರವಾಡದ ಸ್ಕೂಲ್ ಆಫ್ ಆರ್ಟಗೆ ಭೇಟಿಕೊಟ್ಟು ಅತ್ಯಮೂಲ್ಯವಾದ ತಮ್ಮ ಮೂರು ಕಲಾಕೃತಿಗಳನ್ನು ಕಾಣಿಕೆಯಾಗಿ ನೀಡಿದರು.

* ೧೯೮೪ರಲ್ಲಿ ಸ್ಕೂಲ್ ಆಫ್ ಆರ್ಟದ ಹಳೆಯ ವಿದ್ಯಾರ್ಥಿ ಶ್ರೀಶೈಲ ಚಿನ್ನಣ್ಣವರ್ ಅವರಿಗೆ ರಾಜ್ಯ ಪ್ರಶಸ್ತಿ ದೊರಕಿರುವುದಕ್ಕೆ ಹಾಗೂ ಅವರು ಚಿತ್ರಕಲಾ ಶಿಕ್ಷಕರಾಗಿ ನಿವೃತ್ತಿಯಾಗಿದ್ದು ಈ ಹಿನ್ನೆಲೆಯಲ್ಲಿ ಅವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ಅವಧಿಯಲ್ಲಿ ಸ್ಕೂಲ್ ಆಫ್ ಆರ್ಟ ಹಳೆಯ ವಿದ್ಯಾರ್ಥಿಗಳಾದ ಶ್ರೀ ಈಶ್ವರ ಮುರಗೋಡ ಸಹೋದರರು ಫ್ರಾನ್ಸಿನಿಂದ ಹಿಂದಿರುಗಿದಾಗ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

* ೧೯೮೫ರಲ್ಲಿ 'ಹಾಲಭಾವಿ ಸ್ಕೂಲ್ ಆಫ್ ಆರ್ಟ'ದ ಸುವರ್ಣ ಮಹೋತ್ಸವವನ್ನು ಆಚರಿಸಲಾಯಿತು. ದಾವಣಗೇರಿಯ ಸರಕಾರಿ ಕಲಾಶಾಲೆಯ ಪ್ರಚಾರ್ಯರಾದ ಶ್ರೀ ವಿ.ಬಿ.ಹಿರೇಗೌಡರ ಅವರು ಶ್ರೀ ಸೋಮಶೇಖರ ಸಾಲಿಯವರ ಭಾವಚಿತ್ರದ ಪ್ರಾತ್ಯಕ್ಷಿಕೆ ನೀಡಿದರು ಮತ್ತು ವಿಚಾರ ಸಂಕೀರ್ಣವನ್ನು ಹಮ್ಮಿಕೊಂಡಿದ್ದು ಶ್ರೀ ದಾನಪ್ಪ ಹಾಲಭಾವ್ಹಿಯವರು ಬರೆದ 'ನಾ ಕಂಡ ಸಿಲೋನ್' ಕಿರು ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು.

* ೧೯೮೬ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ ವಿದ್ಯಾರ್ಥಿಗಳು ಹೈದರಾಬಾದ ಪ್ರವಾಸ ಮತ್ತು ಹಂಪೆಯ ನಿಸರ್ಗ ದೃಶ್ಯಗಳ ರಚನೆಗೆ ಒಂದು ವಾರದ ಕ್ಯಾಂಪ್ ಹಾಕಲಾಗಿತ್ತು.

* ೧೯೮೭ರಲ್ಲಿ ಸ್ಕೂಲ್ ಆಫ್ ಆರ್ಟ ಗ್ಯಾಲರಿ ಕಟ್ಟಡದ ಧನ ಸಹಾಯಕ್ಕಾಗಿ ಸರ್ ಯಶವಂತ ದೇಶಪಾಂಡೆ ಅವರ ನಿರ್ದೇಶನದ ಪ್ರೊ.ಮಾರಿಹಾಳ ಅವರು ರಚಿಸಿದ 'ಕಿತ್ತೂರ ಚೆನ್ನಮ್ಮ' ನಾಟಕವನ್ನು ಸುಮಾರು ಒಂದು ತಿಂಗಳ ವರೆಗೆ ಮಾರ್ಗದರ್ಶನ ಹೊಂದಿದ ಸ್ಕೂಲ್ ಆಫ್ ಆರ್ಟ ವಿದ್ಯಾರ್ಥಿಗಳು 'ಕಲಾಭವನದಲ್ಲಿ' ಅಭಿನಯಿಸಿದರು.

* ೧೯೮೮ರಲ್ಲಿ ಸವೆನ್ ಸ್ಟಾರ್ ಎಕ್ಸಿಬಿಷನ್ ಬಿ.ಎಂ.ಪಾಟೀಲ ನೇತೃತ್ವದ ಆರ್ಟ್ ಮಾಸ್ಟರ್ ವಿದ್ಯಾರ್ಥಿಗಳ ಕಲಾಪ್ರದರ್ಶನವನ್ನು ಖ್ಯಾತ ಕಲಾವಿದ ಶ್ರೀ ಎನ್.ಜಿ.ಮುತ್ಗೇಕರ ಅವರು ಉದ್ಘಾಟಿಸಿದರು, ಅಥಿತಿಗಳಾಗಿ ಖ್ಯಾತ ಹಿಂದೂಸ್ಥಾನಿ ಗಾಯಕಿ ಪದ್ಮಭೂಷಣ ಡಾ.ಗಂಗೂಬಾಯಿ ಹಾನಗಲ್ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಶಾಲೆಯ ಸಂಸ್ಥಾಪಕರಾದ ಶ್ರೀ ಡಿ.ವಿ.ಹಾಲಭಾವಿ ಅವರು ವಹಿಸಿದ್ದರು.

* ೧೯೮೯ರಲ್ಲಿ ಬೆಳಗಾಂವದ ಖ್ಯಾತ ಕಲಾವಿದರಾದ ಶ್ರೀ ಕೆ.ಬಿ.ಕುಲಕರ್ಣಿ ಅವರಿಂದ ಲೈಫ್ ಪ್ರಾತ್ಯಕ್ಷಿಕೆಯನ್ನು ಸ್ಕೂಲ್ ಆಫ್ ಆರ್ಟ್‌ದಲ್ಲಿ ಹಮ್ಮಿಗೊಳ್ಳಲಾಗಿತ್ತು.

* ೧೯೯೦ರಲ್ಲಿ ಸ್ಕೂಲ್ ಆಫ್ ಆರ್ಟ್ ವಿದ್ಯಾರ್ಥಿಗಳು ಸುಮಾರು ೧೫ ದಿನಗಳ ವರೆಗೆ ಹಂಪೆಯ ನಿಸರ್ಗ ಚಿತ್ರಗಳ ಕಾರ್ಯಾಗಾರ ನಂತರ ರಚನೆಯಾದ ಕಲಾಕೃತಿಗಳನ್ನು ಆಯ್ಕೆ ಮಾಡಿಕೊಂಡು ಸರಕಾರಿ ಆರ್ಟ್ ಗ್ಯಾಲರಿ ಧಾರವಾಡದಲ್ಲಿ ಪ್ರದರ್ಶನ ಮಾಡಲಾಯಿತು.

* ೧೯೯೩ರಲ್ಲಿ ೬ನೇ ರಾಷ್ಟ್ರೀಯ ಕಲಾಮೇಳ, ಮದ್ರಾಸ್‌ನಲ್ಲಿ ನಡೆದಿರುವ ಚಿತ್ರಕಲಾ ಪ್ರದರ್ಶನದಲ್ಲಿ ಸ್ಕೂಲ್ ಆಫ್ ಆರ್ಟ್ ದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಕಲಾಕೃತಿಗಳನ್ನು ಒಂದು ಮಳಿಗೆಯಲ್ಲಿ ಪ್ರದರ್ಶಿಸಲಾಯಿತು.

* ೧೯೯೩ರಲ್ಲಿ 'ನಗರ ಕಲಾವಿದರು' ಸಂಘಟನೆಯಿಂದ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದು ರಾಜ್ಯ ಲಲಿತಕಲಾ ಅಕಾಡಮಿ ಅಧ್ಯಕ್ಷರಾದ ಶ್ರೀ ತಿಪ್ಪೇಸ್ವಾಮಿ ಅವರು ಉದ್ಘಾಟಿಸಿದರು.

* ೧೯೯೩ರಲ್ಲಿ 'ಶ್ರೀ ದಾನಪ್ಪ ಹಾಲಭಾವಿ ಮತ್ತು ಕಲಾಶಾಲೆಯ ಕುರಿತು' ವಿಚಾರ ಸಂಕೀರ್ಣವಿದ್ದು ಶ್ರೀ ದಾನಪ್ಪ ಹಾಲಭಾವಿ ಅವರ ಜೀವನ ಮತ್ತು ಕಲಾಕೃತಿಗಳ ಕುರಿತು' ಉಪನ್ಯಾಸಕರಾದ ಶ್ರೀ ಬಿ.ಎಂ.ಪಾಟೀಲರು ಮತ್ತು ಸ್ಕೂಲ್ ಆಫ್ ಆರ್ಟ್ ಕುರಿತು ಚಿತ್ರಕಲಾ ಶಿಕ್ಷಕರಾದ ಶ್ರೀ ಎಸ್.ಬಿ.ಜರಲಿ ಅವರು ವಿಷಯ ಮಂಡಿಸಿದರು. ಅಧ್ಯಕ್ಷತೆ ಪ್ರೊ. ವಿ.ಜಿ.ಮಾರಿಹಾಳ ಮತ್ತು ಅತಿಥಿಗಳಾಗಿ ಶ್ರೀ ಎನ್.ಮರಿಶಾಮಾಚಾರ್ ಕಲಾವಿದರು, ಬೆಂಗಳೂರು ಆಗಮಿಸಿದ್ದರು.

* ೧೯೯೪ರಲ್ಲಿ ಸ್ಪಾರ್ಕ್ – ೯೪ ಎಕ್ಸಿಬ್ಯೂಷನ್ ಧಾರವಾಡದ ಸ್ಕೂಲ್ ಆಫ್ ಆರ್ಟ್‌ನ ಬೋಧಕ ಸಿಬ್ಬಂದಿಯ ಕಲಾಕೃತಿಗಳ ಪ್ರದರ್ಶನವನ್ನು ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಏರ್ಪಡಿಸಲಾಗಿತ್ತು, ಉದ್ಘಾಟಕರಾಗಿ ಹಿರಿಯ ಕಲಾವಿದ ಶ್ರೀ ಎಂ.ಬಿ.ಪಾಟೀಲರು ಆಗಮಿಸಿದ್ದರು.

* ೧೯೯೫ರಲ್ಲಿ ೭ನೇ ರಾಷ್ಟ್ರೀಯ ಕಲಾಮೇಳ, ಬೆಂಗಳೂರು ದಲ್ಲಿ ನಡೆದಿರುವ ಚಿತ್ರಕಲಾ ಪ್ರದರ್ಶನದಲ್ಲಿ ಸ್ಕೂಲ್ ಆಫ್ ಆರ್ಟ್‌ದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಕಲಾಕೃತಿಗಳನ್ನು ಒಂದು ಮಳಿಗೆಯಲ್ಲಿ

ಪ್ರದರ್ಶಿಸಲಾಯಿತು.

* ೧೯೯೫ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದ ವಜ್ರಮಹೋತ್ಸವ ಕಾರ್ಯಕ್ರಮಗಳು ಒಂದು ವರುಷ ವಿಡಿ ನಡೆದು ಬಂದವು ಚಿಕ್ಕಮಕ್ಕಳ ಚಿತ್ರಕಲಾ ಶಿಬಿರ, ಸ್ಪರ್ಧೆ ಪ್ರದರ್ಶನ ಶಾಲೆಯ ಹಳೆಯ ವಿದ್ಯಾರ್ಥಿಗಳ ಕಲಾಶಿಬಿರ, ಪ್ರಸಕ್ತ ಸಾಲಿನ ವಿದ್ಯಾರ್ಥಿಗಳ ಕಲಾ ಶಿಬಿರ, ಕಲಾ ಶಾಲೆಯ ಉಪನ್ಯಾಸಕರ ಕಲಾಶಿಬಿರ, ವಿಚಾರಸಂಕಿರಣ ಇದರಲ್ಲಿ ಸುಮಾರು ೧೪ ಜನ ವಿದ್ವಾಂಸರನ್ನು ಬೇರೆಡೆಗಳಿಂದ ಕರೆಸಿ ವಿಷಯ ಮಂಡಿಸಿ ಲೇಖನಗಳನ್ನು ಕೊಟ್ಟಿದ್ದು, ಅದು ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು ಪುಸ್ತಕ ರೂಪದಲ್ಲಿ ಪ್ರಕಟಣೆಯಾಗಿದ್ದು ಸ್ಮರಣ ಸಂಚಿಕೆ ಚಿತ್ರಾಕ್ಷಿಯ ಬಿಡುಗಡೆ, ಸುಮಾರು ೨೦ ಜನ ಹಿರಿಯ ಕಲಾವಿದರ ಶಿಬಿರ, ಪ್ರದರ್ಶನ ಹೀಗೆ ಅದ್ದೂರಿಯಾಗಿ ಆಚರಿಸಲಾಯಿತು.

* ೧೯೯೬ ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ವಿದ್ಯಾರ್ಥಿಗಳ ಕಲಾಕೃತಿಗಳ ಪ್ರದರ್ಶನವನ್ನು ವೆಂಕಟಪ್ಪ ಆರ್ಟ್ ಗ್ಯಾಲರಿ ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು.

* ೧೯೯೭ ರಲ್ಲಿ ಡಿ.ವಿ.ಹಾಲಭಾವಿಯವರ ಹುಟ್ಟುಹಬ್ಬದ ಅಂಗವಾಗಿ ವಿದ್ಯಾರ್ಥಿಗಳಿಗೆ ಏರ್ಪಡಿಸುವ ಚಿತ್ರಕಲಾ ಸ್ಪರ್ಧೆ ಹಾಗೂ ಪ್ರದರ್ಶನವು ಈ ವರೆಗೆ ಹುಬ್ಬಳ್ಳಿ ಧಾರವಾಡಕ್ಕೆ ಸೀಮಿತವಾಗಿದ್ದದ್ದು ವಿಭಾಗ ಮಟ್ಟಕ್ಕೆ ವಿಸ್ತರಿಸಲಾಯಿತು. ಪ್ರಥಮ ವಿಭಾಗ ಮಟ್ಟದ ವಿದ್ಯಾರ್ಥಿಗಳ ಸ್ಪರ್ಧೆಗೆ ಸುಮಾರು ೮೨ ಕಲಾ ಕೃತಿಗಳು ಬಂದಿದ್ದು ಅವುಗಳಲ್ಲಿ ೩೦ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಿ ಅವುಗಳಲ್ಲಿ ಪ್ರಶಸ್ತಿಗಳನ್ನು ವಿತರಿಸಲಾಯಿತು.

* ೧೯೯೮ರಲ್ಲಿ ಡಿ.ವಿ.ಹಾಲಭಾವಿಯವರ ಹುಟ್ಟು ಹಬ್ಬದ ಅಂಗವಾಗಿ ಏರ್ಪಡಿಸಿದ ವಿಭಾಗಮಟ್ಟದ ಚಿತ್ರಕಲಾ ಸ್ಪರ್ಧೆಗೆ ವಿಜಾಪೂರ, ಬೆಳಗಾಂವ್, ಕಾರವಾರ, ಧಾರವಾಡ ಜಿಲ್ಲೆಗಳಿಂದ ಕಲಾಕೃತಿಗಳು ೧೦೧ ಕಲಾಕೃತಿಗಳು ಬಂದವು ಅವುಗಳಲ್ಲಿ ೪೦ ಕಲಾಕೃತಿಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ಕೊಟ್ಟು ಪ್ರದರ್ಶಿಸಲಾಯಿತು.

* ೧೯೯೮ರಲ್ಲಿ ಸ್ಕೂಲ್ ಆಫ್ ಆರ್ಟ್‌ದ ಶಿಕ್ಷಕರ ಚಿತ್ರಕಲಾ ಶಿಬಿರ ಪ್ರದರ್ಶನವನ್ನು ಸರಕಾರಿ ಚಿತ್ರಕಲಾ ಗ್ಯಾಲರಿ ಧಾರವಾಡದಲ್ಲಿ ಏರ್ಪಡಿಸಲಾಗಿತ್ತು.

* ೧೯೯೯ರಲ್ಲಿ ಏರ್ಪಡಿಸಿದ ವಿಭಾಗ ಮಟ್ಟದ ಚಿತ್ರಕಲಾ ಪ್ರದರ್ಶನಕ್ಕೆ ೧೩೧ ಕಲಾಕೃತಿಗಳು ಬಂದಿದ್ದು ಅದರಲ್ಲಿ ೪೦ ಕಲಾಕೃತಿಗಳನ್ನು ಆಯ್ಕೆ ಮಾಡಿ ಪ್ರದರ್ಶಿಸಲಾಯಿತು ಪ್ರಶಸ್ತಿಗಳನ್ನು ಕೊಡಲಾಯಿತು.

* ೨೦೦೦ರಲ್ಲಿ ಏರ್ಪಡಿಸಿದ ವಿಭಾಗಮಟ್ಟದ ಚಿತ್ರಕಲಾ ಪ್ರದರ್ಶನಕ್ಕೆ ೧೩೮ ಕಲಾಕೃತಿಗಳು ಬಂದಿದ್ದು ಅದರಲ್ಲಿ ೫೦ ಕಲಾಕೃತಿಗಳನ್ನು ಆಯ್ಕೆ ಮಾಡಿ ಪ್ರದರ್ಶಿಸಲಾಯಿತು ಹಾಗೂ ಪ್ರಶಸ್ತಿಗಳನ್ನು ವಿತರಿಸಲಾಯಿತು.

* ೨೦೦೦ರಲ್ಲಿ ಸ್ಕೂಲ್ ಆಫ್ ಆರ್ಟ್‌ನ ಶಿಕ್ಷಕರ ಚಿತ್ರಕಲಾಶಿಬಿರ ಪ್ರದರ್ಶನವನ್ನು ಸರಕಾರಿ ಚಿತ್ರಕಲಾ ಗ್ಯಾಲರಿ ಧಾರವಾಡದಲ್ಲಿ ಏರ್ಪಡಿಸಲಾಗಿತ್ತು.

* ೨೦೦೦ರಲ್ಲಿ ಲಿಥೋ ಆರ್ಟಿಸ್ಟ್ ಕ್ಯಾಂಪನ್ನು ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದಿಂದ ಏರ್ಪಡಿಸಿದ್ದು, ಹುಬ್ಬಳ್ಳಿ ಧಾರವಾಡದ ಕಲಾಶಾಲೆಯ ಶಿಕ್ಷಕರಿಗಾಗಿ ಈ ಶಿಬಿರವನ್ನು ಏರ್ಪಡಿಸಲಾಗಿತ್ತು ಮಾರ್ಗದರ್ಶಕರಾಗಿ

ಮುದ್ರಣ ಕಲಾವಿದ ಈಶ್ವರ ಬಾಬೂ ದಾವಣಗೆರೆಯ ಸರಕಾರಿ ಕಲಾಶಾಲೆಯ ಮುದ್ರಣ ವಿಭಾಗದ ಉಪನ್ಯಾಸಕರು ಆಗಮಿಸಿದ್ದರು.

* ೧೯೯೮ರಲ್ಲಿ ಮುಂಬೈ ಜೆ.ಜೆ. ಸ್ಕೂಲ್ ಆಫ್ ಆರ್ಟದ ಉಪನ್ಯಾಸಕರಾದ ಶ್ರೀ ಅನಿಲ್ ನಾಯ್ಕ ಅವರು ಪ್ರೊ. ಅಶೋಕ ಶೆಟ್ಟರ್ ಅವರ ಭಾವಚಿತ್ರದ ಪ್ರಾತ್ಯಕ್ಷಿಕೆಯನ್ನು ನೀಡಿದರು, ಜೊತೆಗೆ 'ಕ್ರಿಯೇಟಿವ್ ಸ್ಟಿಲ್‌ಲೈಫ್' ಸಂಯೋಜನೆಯನ್ನು ಸ್ಕೂಲ್ ಆಫ್ ಆರ್ಟ್ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಮಾಡಿ ತೋರಿಸಿದರು.

* ೧೯೯೯ರಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರು ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ಗೆ ಸಂದರ್ಶನ ನೀಡಿ ರಾಜಕೀಯ ವ್ಯಕ್ತಿಗಳ ವ್ಯಂಗ್ಯಚಿತ್ರಗಳನ್ನು ಬಿಡಿಸಿ ಸ್ಕೂಲಿಗೆ ಕಾಣಿಕೆಯಾಗಿ ಕೊಟ್ಟಿರುವರು.

* ೨೦೦೧ರಲ್ಲಿ ಖ್ಯಾತ ಕಲಾವಿದ ನಾಡೋಜ ಶ್ರೀ ಜೆ. ಎಸ್. ಖಂಡೇರಾವ್ ಅವರು ಭಾವಚಿತ್ರದ ಪ್ರಾತ್ಯಕ್ಷಿಕೆಯನ್ನು ಸ್ಕೂಲ್ ಆಫ್ ಆರ್ಟದಲ್ಲಿ ನೀಡಿದರು.

* ೨೦೦೩ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ವಿದ್ಯಾರ್ಥಿಗಳಿಂದ ಉತ್ತರ ಕರ್ನಾಟಕದಲ್ಲಿಯೇ ಪ್ರಥಮ ಬಾರಿಗೆ ಪ್ರತಿಷ್ಠಾಪನಾ ಕಲೆಯ ರೂಪಕಗಳನ್ನು ಶ್ರೀಮತಿ ಗಾಯಿತ್ರಿ ಗೌಡರ ಹಾಗೂ ಶ್ರೀಮತಿ ರೇಣುಕಾ ಮಾರ್ಕಂಡೇ ಉಪನ್ಯಾಸಕರ ಮಾರ್ಗ ದರ್ಶನದಲ್ಲಿ ರಚನೆಗೊಂಡ ಪ್ರತಿಷ್ಠಾಪನಾ ಕಲೆಯು ಪ್ರಯೋಗಾತ್ಮಕವಾಗಿ ಚಿತ್ರ ಭಾಷೆಯಲ್ಲಿ ವಸ್ತುಗಳ ಬಳಸುವಿಕೆಯನ್ನು ಕುರಿತಂತೆ ಚಿಂತಿಸಿದ್ದು ಗಮನಾರ್ಹ, ಭಾರತೀಯ ಸಂಸ್ಕೃತಿ ಅಧ್ಯಾತ್ಮ, ಸಂಪ್ರದಾಯ, ಮೂಢನಂಬಿಕೆಗಳನ್ನು ಆಚರಣೆಗಳನ್ನು ಭ್ರಮಾಲೋಕ, ಭೋಗ ಜೀವನ ಇತ್ಯಾದಿ ವಿಷಯಗಳಿಗೆ ವೈಚಾರಿಕವಾಗಿ ಕ್ರಿಯಾತ್ಮಕವಾಗಿ ಸ್ಪಂದಿಸಿದ ಕಲಾಕೃತಿಗಳು ಜನ ಸಾಮಾನ್ಯರ ಮನಗೆದ್ದವು.

* ೨೦೦೫ರಲ್ಲಿ ಪ್ರಾಚಾರ್ಯ ಹುದ್ದೆಯಿಂದ ನಿವೃತ್ತರಾದ ಶ್ರೀ ಸುರೇಶ ಹಾಲಭಾವಿಯವರಿಗೆ ಬೀಳ್ಕೊಡುಗೆಯನ್ನು ಸ್ಕೂಲ್ ಆಫ್ ಆರ್ಟ್ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ೨೧-೦೧-೨೦೦೫ ರಂದು 'ಸುನಾಮಿ ದುರಂತ' ಕುರಿತಂತೆ ಹುಬ್ಬಳ್ಳಿ ಧಾರವಾಡದ ಕಲಾಶಾಲೆಯ ಪೇಂಟಿಂಗ ವರ್ಗದ ವಿದ್ಯಾರ್ಥಿಗಳನ್ನು ಸೇರಿಸಿ ಚಿತ್ರಕಲಾ ಶಿಬಿರವನ್ನು ಶ್ರೀ ಬಿ.ಎಂ.ಪಾಟೀಲ ಮತ್ತು ಶ್ರೀ ಎಸ್.ಎಂ.ಲೋಹಾರ್ ಅವರ ನಿರ್ದೇಶನದಲ್ಲಿ ೩ ದಿನಗಳವರೆಗೆ ನಡೆಯಿತು. ದಿನಾಂಕ:೨೨-೦೧-೨೦೦೫ ರಂದು 'ಕಲೆ ಮತ್ತು ಸೌಂದರ್ಯಶಾಸ್ತ್ರ' ವಿಚಾರ ಸಂಕೀರ್ಣದ ಉಪನ್ಯಾಸಕರಾಗಿ ಶ್ರೀ ಲಕ್ಷ್ಮಣಕುಮಾರ ಬಕ್ಕಾಯ್ ಅವರು ಬಂದಿದ್ದರು. ಅಧ್ಯಕ್ಷತೆಯನ್ನು ನೂತನ ಶಾಲಾ ಪ್ರಾಚಾರ್ಯರಾದ ಶ್ರೀಮತಿ ಗಾಯಿತ್ರಿ ಗೌಡರ್ ಅವರು ವಹಿಸಿಕೊಂಡಿದ್ದರು.

* ಜನವರಿ ೨೪ ರಂದು ಈ ಶಿಬಿರದ ಮುಕ್ತಾಯ ಮತ್ತು ಶಿಬಿರದಲ್ಲಿಯ ಕಲಾಕೃಗಳ ಪ್ರದರ್ಶನವನ್ನು ಶ್ರೀ ಪಿ.ಎಸ್.ಹಿರೇಮಠ ಅವರು ಉದ್ಘಾಟಿಸಿದರು, ಅತಿಥಿಗಳಾಗಿ ಆಗಮಿಸಿದ ಡಾ ಎ.ಮುರಿಗೆಪ್ಪ ಮುಖ್ಯಸ್ಥರು ಕನ್ನಡ ಅಧ್ಯಯನ ಪೀಠ ಕ.ವಿ.ವಿ ಧಾರವಾಡ ಸಭೆಯ ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಬೆಲ್ಲದ ಅವರು ವಹಿಸಿಕೊಂಡಿದ್ದು, ಪ್ರಾಚಾರ್ಯರ ಹುದ್ದೆಯಿಂದ ನಿವೃತ್ತಿ ಹೊಂದಿರುವ ಶ್ರೀ ಸುರೇಶ ಡಿ.ಹಾಲಭಾವಿಯವರನ್ನು ಶಾಲೆಯ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಮತ್ತು ಸಂಸ್ಥೆಯವರು ಆತ್ಮೀಯವಾಗಿ ಬೀಳ್ಕೊಡುಗೆ ಹಾಗೂ ನೂತನ ಪ್ರಾಚಾರ್ಯರಾಗಿ ಬಂದ ಶ್ರೀಮತಿ ಗಾಯಿತ್ರಿ ಗೌಡರವರನ್ನು

ಸ್ವಾಗತಿಸಲಾಯಿತು. ಈ ಕಾರ್ಯಕ್ರಮವನ್ನು ಉಪನ್ಯಾಸಕ ಶ್ರೀ ಬಿ.ಎಂ.ಪಾಟೀಲ ನಿರೂಪಿಸಿದರು.

* ೨೦೦೫ ರಲ್ಲಿ 'ಮಾನ್ಸೂನ್ ಶೋ' ಆಗಸ್ಟ್ ೯ ರಿಂದ ೧೧ ರವರೆಗೆ ನಮ್ಮ ವಿದ್ಯಾರ್ಥಿಗಳೊಂದಿಗೆ ಸ್ಥಳೀಯ ಕಲಾಶಾಲೆಗಳ ವಿದ್ಯಾರ್ಥಿಗಳನ್ನೊಳಗೊಂಡ ಚಿತ್ರಕಲಾ ಶಿಬಿರವನ್ನು ಶ್ರೀ ಬಿ.ಎಂ.ಪಾಟೀಲ ಮತ್ತು ಶ್ರೀ ಸಿ.ಜಿ.ಪಾಟೀಲ ಅವರ ನಿರ್ದೇಶನದಲ್ಲಿ ೩ ದಿನಗಳವರೆಗೆ ನಡೆಯಿತು. ಶಿಬಿರದಲ್ಲಿ ರಚಿಸಿದ ಕಲಾ ನಿರ್ದೇಶಕರಾದ ಶ್ರೀ ಬಿ.ಎಂ.ಪಾಟೀಲ, ಶ್ರೀ ಸಿ.ಜಿ.ಪಾಟೀಲ ಅವರು ನಿರ್ವಹಿಸಿದರು. ಪ್ರಾಚಾರ್ಯರಾದ ಶ್ರೀಮತಿ ಗಾಯಿತ್ರಿ ಗೌಡರ ಅವರು ಉಪಸ್ಥಿತರಿದ್ದರು.

* ಶ್ರೀ ಆರ್ಯ ಆಚಾರ್ಯ, ಶ್ರೀ ಮಧು ದೇಸಾಯಿ, ಶ್ರೀಮತಿ ಗಾಯಿತ್ರಿ ಗೌಡರ ಅವರು ಯೋಜಿಸಿ ತಮ್ಮದೇ ಆದ ಕಲಾಸಂಸ್ಥೆ 'ಕಲಾಮಂಡಳದ' ವತಿಯಿಂದ 'ಕಲಾಗುರು ಶ್ರೀ ಡಿ.ವಿ.ಹಾಲಭಾವಿ ಗೌರವ ಪ್ರಶಸ್ತಿ ಪ್ರಧಾನ ಮಾಡುವ ಸಮಾರಂಭವನ್ನು ಹಮ್ಮಿಕೊಂಡಿದ್ದು, ಪ್ರಥಮ ಪ್ರಶಸ್ತಿಯು ಶ್ರೀ ವಿ.ಬಿ.ಹಿರೇಗೌಡರ ದಾವಣಗೆರೆಯ ಖ್ಯಾತ ಕಲಾವಿದರಿಗೆ ಸಂದಾಯವಾಯಿತು. ಈ ಕಾರ್ಯಕ್ರಮವು ಅದ್ದೂರಿಯಾಗಿ ಮಾಡಲಾಯಿತು.

* ೨೦೦೫ರಲ್ಲಿ ಫೈನ್ ಆರ್ಟ್ ಸೊಸೈಯಿಯು ಶ್ರೀ ಡಿ.ವಿ.ಹಾಲಭಾವಿ ಅರ್ಟ್ ಫೌಂಡೇಷನ್ ಪ್ರಾರಂಭಿಸಿ ಅದರ ವತಿಯಿಂದ ೨೦೦೫ರ ಕಲಾಗುರು ಶ್ರೀ ಡಿ.ವಿ.ಹಾಲಭಾವಿ ಪ್ರಶಸ್ತಿಯನ್ನು ಶ್ರೀ ವಿ.ಜಿ.ಅಂದಾನಿ ಖ್ಯಾತ ಕಲಾವಿದರು ಗುಲಬರ್ಗಾ ಇವರಿಗೆ ನೀಡಲಾಯಿತು. ಶ್ರೀ ಜಗದ್ಗುರು ಡಾ.ತೊಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಗದಗ ಡಂಬಳ ಅವರ ಸಾನಿಧ್ಯದಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿ ರಾಜ್ಯದ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಎಂ.ಪಿ.ಪ್ರಕಾಶ ಅವರು ಭಾಗವಹಿಸಿದ್ದು ಖ್ಯಾತ ಪತ್ರಕರ್ತ ನಾಡೋಜ ಡಾ. ಪಾಟೀಲ ಪುಟ್ಟಪ್ಪ ನವರು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಬೆಲ್ಲದ ಅವರು ವಹಿಸಿದ್ದರು.

ರಾಜ್ಯದ ಚಿತ್ರಕಲಾ ಶಿಕ್ಷಣ ರಂಗದಲ್ಲಿಯೇ ಅತ್ಯಂತ ಪ್ರಭಲವಾದ ಸಂಘಟನೆಗಳೆಂದು ಗುರುತಿಸುವ ಎರಡು ಸಂಘಟನೆಗಳು.

೧. ೧೯೪೦ರಲ್ಲಿ 'ಕರ್ನಾಟಕ ಆರ್ಟ ಸೊಸೈಟಿ'ಯನ್ನು ಪುನರುಜ್ಜೀವನ ಗೊಳಿಸಿದ ಶ್ರೀ ಡಿ.ವಿ.ಹಾಲಭಾವಿಯವರು ಈ ಸಂಸ್ಥೆಯು ರಾಜ್ಯದ ಕಲಾಶಾಲೆಗಳಿಗೆ ಕಾಯಕಲ್ಪವಾಗಿತ್ತು ಇದರಿಂದ ಬೇರೆ ಜಿಲ್ಲೆಗಳಿಂದ, ಬೇರೆ ರಾಜ್ಯಗಳಿಂದ ಕಲಾಕೃತಿಗಳ ಪ್ರದರ್ಶನ, ಪ್ರಾತ್ಯಾಕ್ಷಿಕೆ, ಸಮ್ಮೇಳನ, ಚಿತ್ರಕಲಾ ಶಾಲೆಗಳ ಶಿಕ್ಷಕರ ಸಮಸ್ಯೆಗಳ ಪರಿಹಾರ ಕಲಾಶಾಲೆಗಳಿಗೆ ಅನುದಾನ, ಸಿಬ್ಬಂದಿಗೆ ವೇತನ, ಪರೀಕ್ಷೆಗಳ ಸುಧಾರಣೆಗೆ ಕ್ರಮ, ಚಿತ್ರಕಲಾ ಶಿಕ್ಷಕರ ಸಂಘಟನೆ, ವಿದ್ಯಾರ್ಥಿಗಳ ಸಂಘಟನೆಗಳಿಗೆ, ಹಾಲಭಾವಿ ಸ್ಕೂಲ್ ಆಫ್ ಆರ್ಟ ರಾಜ್ಯದ ಕಲಾಶಿಕ್ಷಣ ಬೆಳೆಯಲು ಕಾರಣೀಭೂತರಾಗಿ ಧೃವತಾರೆಯಂತೆ ಬೆಳಗಿತು. ಈ ಸೊಸೈಟಿ ಕಾರ್ಯದರ್ಶಿಯಾಗಿ ಶ್ರೀ ಡಿ.ವಿ.ಹಾಲಭಾವಿಯವರು ಕಾರ್ಯ ನಿರ್ವಹಿಸಿದರು.

೨. ೧೯೮೬ರಲ್ಲಿ 'ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘವು' ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ದಲ್ಲಿ ಪ್ರಾರಂಭವಾಯಿತು. ಪ್ರಥಮ ಅಧ್ಯಕ್ಷರಾಗಿ ಶ್ರೀ ಪಿ.ಎಸ್.ಹಿರೇಮಠ ವಿ.ಮ.ಲ.ಕ.ಮ

ವಿದ್ಯಾಲಯ ಹುಬ್ಬಳ್ಳಿಯ ಪ್ರಚಾರ್ಯರು ಕಾರ್ಯದರ್ಶಿಯಾಗಿ ಶ್ರೀ ಸುರೇಶ ಡಿ.ಹಾಲಭಾವಿ ಪ್ರಾಚಾರ್ಯರು ಸ್ಕೂಲ್ ಆಫ್ ಆರ್ಟ ಧಾರವಾಡ. ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನವನ್ನು ಶಿಬಿರವನ್ನು, ವಿಚಾರಗೋಷ್ಠಿಗಳನ್ನು ಹಂಪೆಯಲ್ಲಿ ಹಮ್ಮಿಕೊಂಡಿತ್ತು. ರಾಜ್ಯದ ಚಿತ್ರಕಲಾ ಶಾಲೆಗಳಲ್ಲಿ ಕೆಲವು ಮಾತ್ರ ತಾಂತ್ರಿಕ ಇಲಾಖೆಯ ಅಧೀನದಲ್ಲಿ ಹೋಗುವುದನ್ನು ವಿರೋಧಿಸಿ ಹೋರಾಟ, ಚಿತ್ರಕಲಾ ಶಾಲೆಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯ, ಸಿಬ್ಬಂದಿಗೆ ಸೂಕ್ತವಾದ ವೇತನ ಕೊಡುವಂತೆ ಹಾಗೂ ವಿದ್ಯಾರ್ಥಿಗಳಿಗೆ ಬಸ್ ಪಾಸ್‌ಗೋಸ್ಕರ ಹೋರಾಟಗಳನ್ನು ಹಮ್ಮಿಕೊಳ್ಳಲಾಯಿತು. ಅದರಲ್ಲಿ ಯಶಸ್ವಿಯಾಯಿತು.

ನಂತರ ಈ ಸಂಘಟನೆಗೆ ಕಾರ್ಯದರ್ಶಿಯಾಗಿ ಶ್ರೀ ಕೆ.ಬಾಬೂರಾವ್ ಪ್ರಾಚಾರ್ಯರು ರವೀಂದ್ರ ಕಲಾನಿಕೇತನ ತುಮಕೂರು ಅವರು ಬಂದ ನಂತರ, ರಾಜ್ಯದ ಕಲಾಶಾಲೆಗಳಿಗೆ ಶೇಕಡಾ ೧೦೦ಕ್ಕೆ ೧೦೦ರಷ್ಟು ವೇತನ ಜಾರಿಗೆ ಹೋರಾಟ ಅದರಲ್ಲಿ ಯಶಸ್ವಿಯಾಗಿ ಸಂಘಟನೆಯು ಮುಂದೆ ಈ ಸಂಘಕ್ಕೆ ಅಧ್ಯಕ್ಷರಾಗಿ ಶ್ರೀ ಕೆ.ಬಾಬೂರಾವ್ ಪ್ರಾಚಾರ್ಯರು ರವೀಂದ್ರ ಕಲಾನಿಕೇತನ ತುಮಕೂರು ಆಯ್ಕೆ ಆಗಿದ್ದು ಕಾರ್ಯದರ್ಶಿಯಾಗಿ ಶ್ರೀ ಬಿ.ಎಂ.ಪಾಟೀಲ ಉಪನ್ಯಾಕಸರು ಹಾಲಭಾವಿ ಸ್ಕೂಲ್ ಆಫ್ ಆರ್ಟ ಧಾರವಾಡ ಆಯ್ಕೆಯಾದರು. ಇವರ ಅವಧಿಯಲ್ಲಿ ರಾಜ್ಯದ ಕಲಾಶಾಲೆಗಳನ್ನು ವ್ಯವಸ್ಥಿತವಾಗಿ ಮುಂದುವರಿಯಲು ಕೆ.ಸಿ.ಎಸ್.ಆರ್ ಕುರಿತು ಖ್ಯಾತ ನ್ಯಾಯವಾದಿ ಪಾರ್ಥಸಾರಥಿ ಅವರಿಂದ ವಿಚಾರ ಕಮ್ಮಟವನ್ನು ರಾಜ್ಯದ ಎಲ್ಲ ಕಲಾಶಾಲೆಗಳ ಪ್ರಾಚಾರ್ಯರು ಮತ್ತು ಹಿರಿಯ ಉಪನ್ಯಾಸಕರಿಗೆ ಮೂರು ದಿನಗಳವರೆಗೆ ಚಿಂತನ, ಮಂಥನ ನಡೆದವು. ಇದರಿಂದಾಗಿ ಸಂಸ್ಥೆಗಳು ಕಲಾಶಾಲೆಗಳು ಪ್ರಾಚಾರ್ಯರು, ನಿರ್ವಹಿಸಬೇಕಾದ ಕಾರ್ಯ ಅಧಿಕಾರ ಬಳಕೆಯ ಕುರಿತಾದ ಕಾನೂನು ನೀತಿಗಳ ಅರಿವು ಮೂಡಿಸಲಾಯಿತು.

ಚಿತ್ರಕಲಾ ಶಾಲೆಗಳ ಶಿಕ್ಷಕರಿಂದ ರಾಜ್ಯ ಮಟ್ಟದ ಕಲಾಪ್ರದರ್ಶನವನ್ನು ಹಮ್ಮಿಕೊಂಡಿದ್ದು ಕಲಾ ವಿಮರ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆಯಿತು. 'ರಾಜ್ಯದ ಚಿತ್ರಕಲಾ ಶಾಲೆಗಳನ್ನೆಲ್ಲ ಕನ್ನಡ ವಿಶ್ವವಿದ್ಯಾಲಯದ ಅಧೀನದಲ್ಲಿರಬೇಕು' ಎಂಬ ಹೋರಾಟವನ್ನು ತೀವ್ರಗೊಳಿಸಲಾಯಿತು. ಈ ಬೇಡಿಕೆಗೆ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಬೆಂಬಲವೂ ದೊರೆಯಿತು. ನಮ್ಮ ಸಂಘಟನೆಯೊಂದಿಗೆ ರಾಜ್ಯ ಚಿತ್ರಕಲಾ ಶಾಲಾ ಸಂಸ್ಥೆಗಳ ಒಕ್ಕೂಟವೂ ಕೈಜೋಡಿಸಿತು. ಇದರಿಂದಾಗಿ ರಾಜ್ಯದ ಎಲ್ಲ ಕಲಾಶಾಲೆಗಳು ಹಂಪೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಉಳಿದುಕೊಂಡವು. ಹೀಗೆ ಹತ್ತಾರು ಕಾರ್ಯಗಳಿಗೆ ಅದರಲ್ಲೂ ಚಿತ್ರಕಲಾ ಶಾಲೆಗಳಿಗೆ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ, ಒಳ್ಳೆಯ ಸಂಘಟನೆಯಾಗಿ ಇನ್ನೂ ಮುಂದುವರೆದಿದೆ. ಈ ಸಂಘಟನೆಯ ಉಪಾಧ್ಯಕ್ಷರಾಗಿ ಶ್ರೀಮತಿ ಗಾಯಿತ್ರಿ ಗೌಡರ ಪ್ರಚಾರ್ಯರು ಹಾಲಭಾವಿ ಸ್ಕೂಲ್ ಆಫ್ ಆರ್ಟ ಧಾರವಾಡ, ಕಾರ್ಯದರ್ಶಿಯಾಗಿ ಶ್ರೀ ಬಿ.ಎಲ್.ಚವಾಣ ಪ್ರಾಚಾರ್ಯರು ಜೆ.ಎನ್.ಕಲಾ ಶಾಲೆ ಗದಗ ನಿರ್ವಹಿಸುತ್ತಿರುವರು. ಹೀಗೆ ಹಾಲಭಾವಿ ಸ್ಕೂಲ್ ಆಫ್ ಆರ್ಟ ತನ್ನ ಕಲಾ ಮಂದಿರಕ್ಕೆ ಮಾತ್ರ ಸೀಮಿತವಾಗದೇ ಇಡೀ ರಾಜ್ಯದ ಕಲಾ ಶಿಕ್ಷಣ, ಕಲಾ ಶಾಲೆಗಳ ಬೆಳವಣಿಗೆ, ಹಲವಾರು ಕಲಾಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಹಲವು ಸಂಘಟನೆಯನ್ನು ಹುಟ್ಟು ಹಾಕಿದ ಶ್ರೇಯಸ್ಸು ಈ ಸ್ಕೂಲ್ ಆಫ್ ಆರ್ಟಗೆ ಸಲ್ಲುತ್ತದೆ.

೨೦೧೫ರ ಶ್ರೀ ಡಿ. ವಿ. ಹಾಲಭಾವಿ ರಾಷ್ಟ್ರೀಯ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ಮತ್ತು ಚಿತ್ರಕಲಾ ಶಿಲ್ಪಿ ಶ್ರೀ ಡಿ. ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್(ರಿ), ಧಾರವಾಡ ಇವರ ಸಹಯೋಗದಲ್ಲಿ ಕುಂಚ ಕಲಾತಪಸ್ವಿ ರಾಷ್ಟ್ರೀಯ ಪ್ರಶಸ್ತಿಯನ್ನು ಹಿರಿಯ ಕಲಾವಿದರಾದ ಶ್ರೀ. ಎಂ. ಬಿ. ಪಾಟೀಲ, ಬೆಂಗಳೂರು

ಇವರಿಗೆ ನೀಡಿ ಗೌರವಿಸಲಾಗಿದೆ. ಮತ್ತೋರ್ವ ಹಿರಿಯ ಕಲಾವಿದರು ಶ್ರೀ ಪ್ರಭುಹರಸೂರ, ತುಮಕೂರು ಅವರಿಗೆ ಹಾಲಭಾವಿ ಅವರ ಜನ್ಮದಿನಾಚರಣೆಯ ದಿನದಂದು ಈ ಪ್ರಶಸ್ತಿಯನ್ನು ನೀಡಲಾಗಿದೆ. ಹಾಗೆಯೇ ಯುವಕುಂಚ ಕಲಾಶ್ರೀ ರಾಷ್ಟ್ರೀಯ ಪ್ರಶಸ್ತಿಯನ್ನು ಶ್ರೀ ಕರಿಯಪ್ಪ ಹನುಮಂತಪ್ಪ ಹಂಚಿನಮನಿ, ಹಾವೇರಿ ಮತ್ತು ಶ್ರೀ ಆದಿತ್ಯ ಎಸ್. ಚೌಧರಿ, ಮುಂಬೈ ಇವರುಗಳಿಗೆ ನೀಡಿ ಗೌರವಿಸಲಾಗಿದೆ.

೨೦೧೬ರ ಜುಲೈ ೫ ಮತ್ತು ೬ ಈ ಎರಡು ದಿನಗಳ ಕಾಲ ಕರ್ನಾಟಕ ಲಲಿತಕಲಾ ಅಕಾಡೆಮಿಯು ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ "ದೃಶ್ಯಕಲೆ – ಶಿಕ್ಷಣ ಮತ್ತು ಸಂಶೋಧನೆ" ಎಂಬ ವಿಚಾರಸಂಕಿರಣವನ್ನು ಏರ್ಪಡಿಸಿದ್ದು, ಈ ಸಂದರ್ಭದಲ್ಲಿ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ. ಎಸ್. ಮೂರ್ತಿಯವರು ಜೆ. ಎಸ್. ಎಸ್. ಹಾಲಬಾವ್ಹಿ ಸ್ಕೂಲ್ ಆಫ್ ಆರ್ಟ್ಸನ ವೀಕ್ಷಣೆಗೆ ಬಂದ ಸಮಯದಲ್ಲಿ ಅವರಿಗೆ ಸನ್ಮಾನದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಇಲ್ಲಿ ಶ್ರೀ ಸುರೇಶ ಹಾಲಭಾವಿ, ಸ್ಕೂಲ್ ಆಫ್ ಆರ್ಟ್ನ ಪ್ರಾಚಾರ್ಯರು, ಉಪನ್ಯಾಸಕರು ಮತ್ತು ಹಿರಿಯ ಕಲಾವಿದರಾದ ಡಾ. ವಿ. ಜಿ. ಅಂದಾನಿ, ಡಾ. ಡಿ. ಎ. ಉಪಾಧ್ಯ, ಪ್ರೊ. ಎಸ್. ಸಿ. ಪಾಟೀಲ, ಡಾ. ಆರ್. ಎಚ್. ಕುಲಕರ್ಣಿ ಹಾಗೂ ಇನ್ನುಳಿದಂತೆ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಕೆಲವು ಕಲಾವಿದರುಗಳು ಈ ಕಾರ್ಯಕ್ರಮಕ್ಕೆ ಹಾಜರಿದ್ದರು.



























ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ಭಾರತದಲ್ಲಿ ಕಲಾಶಿಕ್ಷಣ ಪ್ರಾಚೀನ ಕಾಲದಿಂದಲೂ ಗುರುಕುಲ ಪದ್ಧತಿಯಲ್ಲಿ ಅಲಲ್ಲಿ ಬೆಳೆದು ಬಂದಿರುವುದು ಸಾಹಿತ್ಯ, ಶಾಸನ ಮುಂತಾದ ಕಡೆಗೆ ಉಲ್ಲೇಖಗೊಂಡಿರುವ ಅಂಶಗಳಿಂದ ಸ್ಪಷ್ಟವಾಗುತ್ತದೆ. ೬೪ ಕಲೆಗಳ ವಿದ್ಯಾಭ್ಯಾಸದ ಪ್ರಸ್ತಾಪ ಸಂಸ್ಕೃತ, ಕನ್ನಡ ಕಾವ್ಯ ಶಾಸನಗಳಲ್ಲಿ ಕಂಡುಬರುತ್ತದೆ. ಬ್ರಿಟಿಷರು ಭಾರತಕ್ಕೆ ಬಂದನಂತರ ಶಿಕ್ಷಣ ಸುಧಾರಣೆಗಾಗಿ ಅನೇಕ ಆಯೋಗಗಳನ್ನು ರಚಿಸಿ ಶೈಕ್ಷಣಿಕ ರಂಗದಲ್ಲಿ ಹಲವಾರು ಯೋಜನೆಗಳನ್ನು ಜಾರಿಗೆ ತಂದರು.

ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಧಿಕಾರ ಲಲಿತಕಲೆಗಳಿಗೆ ಉಂಟು, ಸಂಸ್ಕೃತಿಯ ವಿವಿಧ ಅಭಿವ್ಯಕ್ತಿಗಳು, ಆಯಾಕಾಲಮಾನಗಳಿಗೆ ಸ್ಪಂದಿಸಿ ಕರ್ನಾಟಕಕ್ಕೆ ಒಂದು ಕಲಾಪರಂಪರೆಯನ್ನೇ ಒದಗಿಸಿದೆ. ಕಲ್ಲಿನಲ್ಲಿ ಅರಳಿದ ಶಿಲ್ಪ ವಾಸ್ತು ಶಿಲ್ಪ ಹಾಗೂ ಕುಸುರಿ ಕಲೆಯಾಗಿರಬಹುದು. ಆಟಿಕೆ ವಸ್ತುಗಳಾಗಿರಬಹುದು. ಭಿತ್ತಿ ಚಿತ್ರಗಳಾಗಿರಬಹುದು. ಹಸ್ತಪ್ರತಿ ದವಳಗ್ರಂಥಗಳಾಗಿರಬಹದು. ಅವುಗಳಲ್ಲಿ ಬಿಡಿಸಿದ ಚಿತ್ರಗಳು ಉತ್ಕೃಷ್ಟವಾಗಿವೆ. ಈ ಹಿನ್ನೆಲೆಯಲ್ಲಿ ಚಿತ್ರಕಲಾ ಶಿಕ್ಷಣ ಅವಶ್ಯಕವಾಯಿತು. "ಕಲೆಯು ಸಂಸ್ಕೃತ ಜೀವನದ ಪ್ರತಿನಿಧಿ" ಆ ಸಂಸ್ಕೃತಿಯ ಅಂಗವಾಗಿರುವ ಈ ಅಭಿವ್ಯಕ್ತಿಯನ್ನು ಸಮೃದ್ಧಗೊಳಿಸುವಲ್ಲಿ ಶಾಲಾಶಿಕ್ಷಣ ಕ್ಷೇತ್ರವು ಮಹತ್ವದ ಹಂತವಾಗಿದೆ.

ಪ್ರಾಚೀನ ಭಾರತದಲ್ಲಿ "ಗುರುಕುಲ ಪದ್ಧತಿಯಲ್ಲಿ" ಕಲಾಪ್ರಕಾರಗಳು ನಡೆಯುತ್ತಿದ್ದವು. ತದನಂತರ "ವಂಶ ಪರಂಪರ್ಯ" ಕಲಾಶಿಕ್ಷಣ ಬೆಳೆದು ಬಂದಿತು. ನಂತರದ ಅವಧಿಯಲ್ಲಿ "ಕಲೆಯನ್ನು ಕಲಿಯುವುದು ಕೀಳರಿಮೇ" ಎಂಬುದು ಹೆಚ್ಚಿತು. ಈ ಸಂದರ್ಭದಲ್ಲಿ "ಬ್ರಿಟೀಷರು ಕಲಾಶಾಲೆಗಳನ್ನು ಪ್ರಾರಂಭಿಸಿದರು.

ಈ ಹಿನ್ನೆಲೆಯಲ್ಲಿ ನಮ್ಮ ಚಿತ್ರಕಲಾ ಪರಂಪರೆಯ ಕಲೆ, ಕಲಾಶಿಕ್ಷಣ ಪದ್ದತಿ ಕಲಾವಾತಾವರಣ ಚಿತ್ರಕಲಾ ಶಿಕ್ಷಣದ ಅವಶ್ಯಕತೆಯ ಹಿನ್ನಲೆಯಲ್ಲಿ ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಸುಮಾರು ೭೦ ವರ್ಷಗಳನ್ನು ಪೂರೈಸಿ ಶತಮಾನೋತ್ಸವದತ್ತ ಹೆಜ್ಜೆ ಹಾಕುತ್ತಿದ್ದು ಸಾವಿರಾರು ವಿದ್ಯಾರ್ಥಿಗಳನ್ನು

ಹೊರತಂದಿದ್ದು. ಕಲಾಗ್ರಂಥಗಳು, ಕಲಾಪತ್ರಿಕೆಗಳು, ಕಲಾಸಂಘಟನೆಗಳು, ಕಲಾಪ್ರದರ್ಶನ, ಪ್ರಾತ್ಯಕ್ಷಿಕ, ಹೀಗೆ ಹತ್ತಾರು ಹಂಶಗಳನ್ನು ಹೊಂದಿದ್ದು ಈ ಕೊಡುಗೆಯನ್ನು ದಾಖಲಿಕರಣ ಮಾಡುವ ಉದ್ದೇಶದಿಂದ ಈ ಅಧ್ಯಯನವನ್ನು ಮಾಡಲಾಗಿದೆ. ಕಲಾಶಿಕ್ಷಣದ ಹಿನ್ನಲೆ ಐತಿಹಾಸಿಕ ಹಿನ್ನಲೆಯ ಬಗ್ಗೆ ಮುಖ್ಯವಾಗಿ ಬರುವ ನಾಲ್ಕು ಕಲಾಶಾಲೆಗಳ ಪಠ್ಯಕ್ರಮ ಕಲ್ಕತೆಯಲ್ಲಿ ಭಾರತೀಯರಿಗೆ ಒತ್ತು ಕೊಟ್ಟು ಕಲಾಶಿಕ್ಷಣ ಪ್ರಾರಂಭಿಸಿದರೆ. ಮುಂಬೈಯಲ್ಲಿ ಜೆ.ಜೆ.ಸ್ಕೂಲ್ ಅಫ್ ಆರ್ಟ್ (ಅಕಾಡೆಮಿಕ್ ಶೈಲಿ) ಪಾಶ್ಚತ್ಯ ಶೈಲಿಗೆ ಒತ್ತು ಕೊಟ್ಟು ಕಲಾಶಿಕ್ಷಣ ಪ್ರಾರಂಭವಾಯಿತು. ಕರ್ನಾಟಕದ ಎಲ್ಲ ಕಲಾಶಾಲೆಗಳಿಗೂ ಜೆ.ಜೆ.ಕಲಾಶಾಲೆಯ ಪ್ರಭಾವವೇ ಇರುವುದು ಇದಕ್ಕೆ ಕಾರಣ ರಾಜ್ಯದಲ್ಲಿ ಪ್ರಥಮ ಶೈಕ್ಷಣಿಕವಾಗಿ ಪರೀಕ್ಷೆಯ ಹಿನ್ನಲೆಯಲ್ಲಿ ಪ್ರಾರಂಭವಾದ "ಕಲಾಶಾಲೆ ಹಾಲಭಾವಿ ಸ್ಕೂಲ್ ಆಫ್ ಆರ್ಟ್" ಆಗಿದ್ದು. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಕಲಾಶಾಲೆಗಳು ಹುಟ್ಟಿಕೊಂಡವು. ಇದರಿಂದಾಗಿ ರಾಜ್ಯದ ಎಲ್ಲ ಕಲಾಶಾಲೆಗಳಿಗೆ ಈವರೆಗೂ ಅಂದರೆ, ೨೦೦೧ ರವರೆಗೆ "ಮುಂಬೈ ಜೆ.ಜೆ.ಸ್ಕೂಲ್ ಆಫ್ ಆರ್ಟ್‌ದಲ್ಲಿ ಕಲಿತ್ತಿರುವ ಶ್ರೀ ದಾನಪ್ಪ ಹಾಲಭಾವಿಯವರನ್ನೊಳಗೊಂಡ ಸಪ್ತವರ್ಣದ ಕಲಾವಿದರು. ಕಲಾಶಾಲೆಗಳನ್ನು ಪ್ರಾರಂಭಿಸಲು ಕಂಕಣ ಬದ್ದರಾಗಿ ನಿಂತಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಈ ಎಲ್ಲಾ ವಿವರಗಳನ್ನು ಎರಡನೆ ಅಧ್ಯಾಯನದಲ್ಲಿ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಧಾರವಾಡ ಸಂಸ್ಕೃತಿಕ ಪರಿಸರ ಮತ್ತು ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಸ್ಥಾಪನೆ. ಧಾರವಾಡವು ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಹೇಳುವ ಒಂದು ಮಾತು ಪ್ರಚಲಿತವಾಗಿದೆ. ಸಂಸ್ಕೃತಿ ಎನ್ನುವುದು ಅನೇಕ ಗುಣ ವಿಶೇಷಗಳ ಸುಂದರ ಸಮುಚ್ಚಯ ಕಲೆಯನ್ನು ಮೆಚ್ಚಿಕೊಳ್ಳುವ ದೃಷ್ಟಿಯನ್ನು ಪಡೆದವನ್ನೆನ್ನುವ ಕಾರಣದಿಂದ ಮನುಷ್ಯನು ಸುಸಂಸ್ಕೃತ ಅಭಿರುಚಿ ಉಳ್ಳವನೆನಿಸುತ್ತಾನೆ. ಧಾರವಾಡದ ಕಲಾ ಪರಿಸರಕ್ಕೆ ಹಾಲಭಾವಿಯವರು ತಮ್ಮ ಅನುಪಮ ಕಾಣಿಕೆ ಸಲ್ಲಿಸಿದ್ದಾರೆ. ತುಂಬಿತ್ತು ಹಾಲಗೇರಿ ಎಂದು ಹಾಡಿ ಧಾರವಾಡದ ಹಾಲಗೆರೆಯನ್ನು ಚಿರಸ್ವಾಮಿಗಳಸಿದರು. ಈಗ ಅದು ಹಾಳಕೆರೆಯಾಗಿ 'ಹಾಲಭಾವಿ' ಯೆಂದು ತದ್ಭವದಲ್ಲಿ ಕರೆಯಲ್ಪಡುವ ಹಾಲ (ಹೃದಯದ) ಭಾವಿಯವರ ಕಲಾ ಮಂದಿರವೊಂದನ್ನು ಕಟ್ಟಿ ಕಲಾಭಾವಿಯೆನಿಸಿದ್ದಾರೆ.

ಕಲಾಶಾಲೆಯ ಶಿಕ್ಷಣ ಸುಧಾರಣೆಯ ಹಿನ್ನೆಲೆಯಲ್ಲಿ ರಚನೆಗೊಂಡ ಶೈಕ್ಷಣಿಕ ವರದಿಗಳು "ಸಪ್ತವರ್ಣದ" ಕಲಾವಿದದರಲ್ಲಿ ಮೊದಲಿಗೆ ಶ್ರೀ ದಾನಪ್ಪ ಹಾಲಭಾವಿಯವರು. ಕರ್ನಾಟಕದಲ್ಲಿ ಪ್ರಥಮ ಕಲಾಶಾಲೆಯನ್ನು ಪ್ರಾರಂಭಿಸಿದವರು. ಜನಸಾಮಾನ್ಯರಿಗೆ ಕಲಾಭಿರುಚಿಯನ್ನು ಹುಟ್ಟಿಸಲು ಮಾಡಿದ ಪ್ರಯತ್ನ ಕಲಾಶಾಲೆಯು ಹಂತಹಂತವಾಗಿ ಬೆಳೆದು ಬಂದ ಬಗೆ ಪಠ್ಯಕ್ರಮ ಪಾಠೋಪಕರಣಗಳ ಪೂರೈಕೆ ಸ್ವತಂತ್ರ ಕಟ್ಟಡ ಕಲಾ ಶಾಲೆಯ ರಜಿಷ್ಟ್ರೇಷನ್ ಅನುದಾನ ಸಿಬ್ಬಂದಿಗೆ ವೇತನ, ಶಿಕ್ಷಣ ಅಧಿಕಾರಗಳು ಕಲಾವಿದರು ಕವಿಗಳು, ಸಾಹಿತಿಗಳು, ಸಂಗೀತಗಾರರು, ನಾಟಕಕಾರರೊಂದಿಗೆ ನಿರಂತರ ಸಂಬಂದವನ್ನು ಹೊಂದಿರುವ ಕಲಾ ಶಾಲೆಯು ಬೆಳ್ಳಿಮಹೋತ್ಸವ, ಸುವರ್ಣಮಹೋತ್ಸವ ಹಾಗೂ ವಜ್ರಮಹೋತ್ಸವಗಳನ್ನು ಪೂರೈಸುತ್ತ ಶತಮಾನೋತ್ಸವದತ್ತ ಹೆಜ್ಜೆ ಹಾಕುತ್ತಿರುವ ಕಲಾಶಾಲೆಯ ವಿವರವಾದ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸ್ಕೂಲ್ ಆಫ್ ಆರ್ಟನ ಹುಟ್ಟು ಬೆಳವಣಿಗೆಯ ವಿವಿಧ ಆಯಾಮಗಳು, ಈ ಕಲಾಶಾಲೆಯ ಆಡಳಿತವು ಮುಂಬೈ ಸರಕಾರದಲ್ಲಿ ಮತ್ತು (ಕರ್ನಾಟಕ) ಮೈಸೂರು ಸರಕಾರದಲ್ಲಿದೆ. ಅನ್ನುವ

ಕುರಿತು ವಿವರಿಸಲಾಗಿದೆ. ಕಲಾಶಾಲೆಗಳು ಪ್ರಾರಂಭದಿಂದ ಇಲ್ಲಿಯವರೆಗೆ ಅನುಸರಿಸಕೊಂಡು ಬಂದ ಪಠ್ಯಕ್ರಮ ತರಗತಿಗಳು. ಪರೀಕ್ಷೆಗಳು, ಪದ್ದತಿ, ಹಾಗೂ ಸಿಬ್ಬಂಧಿ ವರ್ಗ, ವೇತನ ಇತ್ಯಾದಿಯಾಗಿ ಸದ್ಯದ ಕಲಾಶಾಲೆಯ ಸ್ಥಿತಿಗಳನ್ನು ವಿವರವಾಗಿ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಸ್ಕೂಲ್ ಆಫ್ ಆರ್ಟ್‌ನ ಭೋಧಕ ವರ್ಗ ಮತ್ತು ವಿದ್ಯಾರ್ಥಿ ಸಮುದಾಯ ಸ್ಕೂಲ್ ಆಫ್ ಆರ್ಟ್‌ನಲ್ಲಿ ಈವರೆಗೆ ಪರೀಕ್ಷೆಯಲ್ಲಿ ರಾಜ್ಯಕ್ಕೆ ರ‍್ಯಾಂಕ್ ಬಂದ ವಿದ್ಯಾರ್ಥಿಗಳು, ರಾಜ್ಯಲಲಿತಕಲಾ ಅಕಾಡೆಮಿ ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿರುವ ಕಲಾವಿದರ ಪರಿಚಯ ಈಗಿನ ಪ್ರತಿಭಾವಂತ ವಿದ್ಯಾರ್ಥಿಗಳು ಅವರುಗಳಿಸಿದ ಪ್ರಶಸ್ತಿಗಳು ಸ್ಕೂಲ್ ಆಫ್ ಆರ್ಟ್‌ನ ಅಧ್ಯಾಪಕ ವರ್ಗದ ಸಾಧನೆಗಳು ವಿವರವಾದ ಅಧ್ಯಾಯನವು ಅಧ್ಯಾಯ-೫ ರಲ್ಲಿ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಸ್ಕೂಲ್ ಆಫ್ ಆರ್ಟ್‌ನ ಕಲಾ ಚಟುವಟಿಕೆಗಳು: ೧೯೩೫ ರಲ್ಲಿ ಪ್ರಾರಂಭವಾದ ಕಲಾ ಶಾಲೆಯ ನಿರಂತರ ಕಲಾ ಚಟುವಟಿಕೆಯಲ್ಲಿ ತೊಡಗಿರುವ ಗುರುತಿನ ಹೆಜ್ಜೆಗಳನ್ನು ಪಟ್ಟಿಮಾಡಲಾಗಿದೆ. ಸುಮಾರು ೭೧ ವರ್ಷಗಳನ್ನು ಪೂರ್ತಿಗೊಳಿಸಿದ ಈ ಕಲಾಶಾಲೆಗೆ ಖ್ಯಾತಿ ಕಲಾವಿದರಿಂದ ಪ್ರಾತ್ಯಕ್ಷಿಕೆಗಳು, ಸಾಹಿತ್ಯದ ದಿಗ್ಗಜರಿಂದ ಉಪನ್ಯಾಸ, ಕಲಾವಿದರ ಮತ್ತು ಕಲಾವಿದ್ಯಾರ್ಥಿಗಳು, ಕಲಾಶಿಬಿರ, ಅಜಂತಾ, ಎಲ್ಲೋರಾ, ಬದಾಮಿ, ಪಟ್ಟದಕಲ್ಲು, ಭೂದೃಶ್ಯಗಳ, ಭಿತ್ತಿಚಿತ್ರಗಳ ರಚನೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳ ಮೂವಿ ಫಿಲ್ಮಂಗಳನ್ನು ಮಾಡಿಕೊಂಡಿದ್ದು. ಆಗಾಗ ಕಲಾಶಾಲೆಯ ವಿದ್ಯಾರ್ಥಿಗಳಿಗೆ ತೋರಿಸಿ ಕೃತಿ ರಚಿಸುವಂತೆ ಪ್ರೋತ್ಸಾಹಿಸುವ ಕಾರ್ಯ ಮಾಡಿದ್ದು ಕರ್ನಾಟಕ ಆರ್ಟ್ ಸೊಸಾಯಿಟಿ, ಫೆಡರೇಷನ್ ಆಫ್ ಆರ್ಟ್ ಇನ್ಸಿಟ್ಯೂಟ್ ಮುಂಬೈ ಸಂಘಟನೆಗಳೊಂದಿಗೆ ಮಾಡಿದ ಕಲಾಚಟುವಟಿಕೆಗಳು "ಆರ್ಟ್ ಗಿಲ್ಟ್ ಮತ್ತು ಕಲಾಮಾರ್ಗ" ಮಾಸಿಕ ಕಲಾಕೃತಿಕೆಗಳನ್ನು ಪ್ರಾರಂಭಿಸಿದ್ದು ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂಧಿ ಸಂಘ ಧಾರವಾಡದಲ್ಲಿ ಹುಟ್ಟು ಹಾಕಿದ್ದು ಕಲಾಶಾಲೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿದ್ದು ಹೀಗೆ ಸಾವಿರಾರು ಕಾರ್ಯಗಳನ್ನು ಕೈಗೊಂಡಿರುವ ಸ್ಕೂಲ್ ಆಫ್ ಆರ್ಟ್‌ದ ಕಲಾಚಟುವಟಿಕೆಗಳ ವಿವರುಗಳನ್ನು ಈ ಅಧ್ಯಾಯದಲ್ಲಿದೆ.

ಒಟ್ಟಾರೆಯಾಗಿ ಧಾರವಾಡ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಹುಟ್ಟು ಬೆಳವಣೆಗೆಯನ್ನು ಅವಲೋಕಿಸಿದಾಗ ಇದು ಸಮಾಜಕ್ಕೆ ಮಹತ್ವದ ಕೊಡುಗೆಯಾಗಿದೆ. ಎನ್ನಬಹುದು. ಧಾರವಾಡದಲ್ಲಿ ಕಲೆಯ ಬಗ್ಗೆ ಇದ್ದ ಅಸಡ್ಡೆಯನ್ನು ಹೊಡೆದೊಡಿಸಿ, ಕಲಾಭಿರುಚಿಯನ್ನೂಂಟುಮಾಡಿದ ಶ್ರೀ.ಡಿ.ವ್ಹಿ ಹಾಲಭಾವಿಯವರು ಕಲಾಮಂದಿರವನ್ನು ಕಟ್ಟಿ ಅದೊಂದು, ಅದ್ಭುತ ಶಕ್ತಿಯ ಕೇಂದ್ರವನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿರುವರು. ಗ್ರಾಮೀಣ ಪ್ರದೇಶದ ಬಡವಿದ್ಯಾರ್ಥಿಗಳಿಗೆ, ಸ್ವಾವಲಂಭಿಯಾಗಿ ಓದಲು ರೂಪಿಸಿಕೊಳ್ಳಲು ಈ ಸಂಸ್ಥೆ ಪೂರಕ ವಾತಾವರಣವನ್ನು ಕಲ್ಪಿಸಿದೆ. ಸಮಕಾಲೀನ ಸಂದರ್ಭದಲ್ಲಿ ಹೊಸ ಹೊಸ ಪ್ರಯೋಗಗಳಾಗುತ್ತಿದ್ದು. ಅವುಗಳನ್ನು ಗಮನಿಸುತ್ತ ಭೋದಕ ವರ್ಗದವರು. ತಮ್ಮದೇ ಆದ ಶೈಲಿಯನ್ನು ಕಂಡುಕೊಳ್ಳುವಲ್ಲಿ ಸಫಲರಾಗಿದ್ದು ವಿದ್ಯಾರ್ಥಿಗಳಿಗೂ ತಿಳಿಹೇಳುತ್ತ, ನಾಡಿನ ಸಂಸ್ಕೃತಿಗೆ ಕಲಾಲೋಕಕ್ಕೆ ಶಿಕ್ಷಣ ಕ್ಷೇತ್ರಕ್ಕೆ ಈ ಸಂಸ್ಥೆ ತನ್ನದೇ ಆದ ವಿಶೇಷ ಕೊಡುಗೆಯನ್ನು ನೀಡಿದೆ. ಸುಮಾರು ೭೦ ದಶಕಗಳನ್ನು ದಾಟಿ ಬಂದ ಕಲಾಶಾಲೆ ಹಲವಾರು ಕಷ್ಟ ನಷ್ಟಗಳನ್ನು ಕಂಡಿದೆ. ಕಲಾಶಿಕ್ಷಣದಲ್ಲಿ ಸಮಕಾಲೀನತೆಗೆ ಸ್ಪಂದಿಸುತ್ತಿದ್ದು, ಸ್ಥಳ, ಕಟ್ಟಡ ವಿಷಯಗಳನ್ನು ಗಮನಿಸಿದಾಗ ಸಮಕಾಲೀನತೆಗೆ ಬಹುದೂರದಲ್ಲಿದೆ. ಎಂಬುದು ವಿಷಾದನೀಯ, ಸಂಗತಿಯಾಗಿದೆ. ತನ್ನದಲ್ಲಿ

ಆದ ವಿಶೇಷ ಕಲಾಚಟುವಟಿಕೆಯೊಂದಿಗೆ, ಇಡೀ ನಾಡಿನ ಜನಗೆಯೇ ಈ ಮಹಾವಿದ್ಯಾಲಯದತ್ತ ನೋಡುವ ಮೆಚ್ಚುವ ಕಾರ್ಯಗಳು, ನಡೆಯುತ್ತಾ ಬಂದಿವೆ. ಡಿ.ದಾನಪ್ಪ ಹಾಲಭಾವಿಯವರ ಕಲ್ಪನೆಯ ಕೂಸಾದ ಈ ಕಲಾಮಂದಿರ ಶತಮಾನೋತ್ಸವದ ಹೊಸ್ತಿಲಲ್ಲಿದೆ. ಪ್ರಸ್ತುತ ಜಗದ್ಗುರ ಶ್ರೀ ಶಿವರಾತ್ರಿಶ್ವರ (J.S.S) ಇವರ ಆಶ್ರಯದಲ್ಲಿರುವ ಮಹಾವಿದ್ಯಾಲಯವು ಸ್ವತಂತ್ರ್ಯ ಕಟ್ಟಡವನ್ನು ಹೊಂದಿದ್ದು ನಿಸರ್ಗದತ್ತವಾದ ವಾತಾವರಣದಿಂದ ವಿದ್ಯಾರ್ಥಿಗಳನ್ನು ಸಳೆಯುವ ಬಗೆಯನ್ನು ವಿವರಿಸುವುದಾಗಿದೆ.

ಅಡಿ ಟಿಪ್ಪಣೆಗಳು

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್ ಸ್ಕೂಲ್ ಆಫ್ ಆರ್ಟ್ ಧಾರವಾಡ ಪುಟ ೨೩–೨೪

ಡಿ.ವಿ.ಹಾಲಭಾವಿ, ನನ್ನ ಸಿಲೋನ ಪ್ರವಾಸ ಪುಟ ೨

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್ ದ ಸ್ಕೂಲ್ ಆಫ್ ಆರ್ಟ್ ಧಾರವಾಡ ಪುಟ ೨೪–೨೫

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್ ದ ಸ್ಕೂಲ್ ಆಫ್ ಆರ್ಟ್ ಧಾರವಾಡ ಪುಟ ೨೩–೨೪

ಡಿ.ವಿ.ಹಾಲಭಾವಿ, ನನ್ನ ಸಿಲೋನ ಪ್ರವಾಸ ಪುಟ ೧–೨

ಡಿ.ವಿ.ಹಾಲಭಾವಿ, ನನ್ನ ಸಿಲೋನ ಪ್ರವಾಸ ಪುಟ ೧೪

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್ ದ ಸ್ಕೂಲ್ ಆಫ್ ಆರ್ಟ್ ಧಾರವಾಡ ಪುಟ ೨೭–೨೮

ಎನ್ ಪಿ ಬಸವರಾಜ್ ಎ ಸ್ಟಡಿ ಆಫ್ ಹಿಸ್ಟರಿ ಆಫ್ ಆರ್ಟ್ ದ ಸ್ಕೂಲ್ ಆಫ್ ಆರ್ಟ್ ಧಾರ್ರವಾಡ ಪುಟ ೨೯–೩೦

ಡಾ.ಎಸ್.ಸಿ.ಪಾಟೀಲ, ಸುವರ್ಣ ಮಹೋತ್ಸವ ಸಂಚಿಕೆ ಪುಟ ೫–೬

ಡಾ.ಎಸ್.ಸಿ.ಪಾಟೀಲ, (ಸಂ) ಚಿತ್ರಾಕ್ಷಿ ಪುಟ–೩

ಎಸ್ ಕೆ ಹೂಗಾರ ಡಿ.ವಿ.ಹಾಲಭಾವಿ ಪುಟ ೧೬

ಎಸ್ ಕೆ ಹೂಗಾರ ಡಿ.ವಿ.ಹಾಲಭಾವಿ ಪುಟ ೧೪

ಎಸ್ ಕೆ ಹೂಗಾರ ಡಿ.ವಿ.ಹಾಲಭಾವಿ ಪುಟ ೨೦

ಡಾ.ಎಸ್.ಸಿ.ಪಾಟೀಲ, ಸುವರ್ಣ ಮಹೋತ್ಸವ ಸಂಚಿಕೆ ಪುಟ –೩

ಡಾ.ಎಸ್.ಸಿ.ಪಾಟೀಲ, (ಸಂ) ಚಿತ್ರಾಕ್ಷಿ ಪುಟ–೧೬

ಡಾ.ಎಸ್.ಸಿ.ಪಾಟೀಲ, (ಸಂ) ಚಿತ್ರಾಕ್ಷಿ ಪುಟ–೧೭

ಗ್ರಂಥಋಣ
ಅನುಬಂಧಗಳು

೧. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ
ಕೆ.ವಿ. ಕಾಳೆ
ಪ್ರಕಾಶಕರು: ಎ.ವಿ.ನಾವಡ
ಮುದ್ರಣ: ಪ್ರಿಂಟ್ ಪಾರ್ಕ್ ಬೆಂಗಳೂರು
ಮೊದಲ ಮುದ್ರಣ: ೨೦೦೦ನೇ ಇಸವಿ

೨. ಕಲಾಕೋಶ : (ಪ್ರ.ಸ) ಪಿ.ಆರ್. ತಿಪ್ಪೇಸ್ವಾಮಿ
ಸಂ.ಎನ್. ಮರಿರಾಮಾಚಾರ್
ಡಾ॥ ಅ.ಲ.ನರಸಿಂಹನ್
ವಿ.ಟಿ. ಕಾಳೆ
ಡಾ॥ ಬಿ.ಕೆ.ಹರೇಮಠ
ಮೊದಲ ಮುದ್ರಣ ೧೯೯೪ನೇ ಇಸವಿ

೩. ಕರ್ನಾಟಕ ದೇವಾಲಯ: ಕೋಶ (ದಾರವಾಡ ಜಿಲ್ಲೆ)
ಡಾ॥ ಸಿ ಮಹದೇವ
ಮೊದಲ ಮುದ್ರಣ ೨೦೦೬ನೇ ಇಸವಿ
ಪುಟ:೬೦

೪. ಭಾರತೀಯ ಚಿತ್ರಕಲೆ (ಜನಪ್ರಿಯ ಪುಸ್ತಕ ಮಾಲೆ)
ಡಾ.ಶಿವರಾಮ ಕಾರಂತ್
ಪುಟ.ಸಂ.೧, ೧೫

೫. ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ
ಅ.ನ.ಕೃ. ಗೌತಮ್
ಮದಲ ಮದ್ರಣ:೧೯೩೨
ಎರಡನೇ ಮುದ್ರಣ:೨೦೦೭

೬. ದೃಶ್ಯಕಲಾವಿದರು: ಎನ್ ಮರಿಶಾಮಾಚಾರ್
ಮೊದಲ ಮುದ್ರಣ:೨೦೦೧

೭. ದೃಶ್ಯಕಲೆಗಳು ಗುಣಗ್ರಹಣ:
ಡಾ॥ ಅ.ಲ.ನರಸಿಂಹನ್ಸಂ.ಚಿ.ಸು.ಕೃಷ್ಣಶೆಟ್ಟಿ
ಮೊದಲ ಮುದ್ರಣ:೧೯೯೫

೮. ಕಲಾವಿದ ಎಂ ಎ ಚೆಟ್ಟಿಯವರು ಜೀವನ ಕಲಾಕೃತಿಗಳು
ಒಂದು ಅಧ್ಯಯನ)
(ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಮಹಾಪ್ರಬಂಧ)

ಡಾ॥ ಲಕ್ಷ್ಮೀದೇವಿ ಗವಾಯಿ
ಪ್ರಥಮ ಮುದ್ರಣ:೨೦೦೩
ಪ್ರಕಾಶಕರು: ವೀರಶೈವ ಅಧ್ಯಯನ ಅಕಾಡೆಮಿ

೧೦. ಕಟ್ಟಂಗೇರಿ ಕೃಷ್ಣ ಹೆಬ್ಬಾರ ಕಲೆ ಮತ್ತು ಬದುಕು
ಕೇ.ಶಿ. ಹರಿದಾಸ ಭಟ್ಟ

೧೧. ಅಭಿನಂದನ ಗ್ರಂಥ: ಎಂ.ಎ. ಚೆಟ್ಟಿ –ನೆನಪಿನ ಕಿಟಕಿಯಿಂದ ಕಲಾತಪಸ್ವಿ

೧೨. ಶಿಕ್ಷಣ ಸಂಪದ: ಪ್ರೊ. ವಿ.ಜಿ.ಮಾರಿಹಾಳ
ಅಭಿನಂದನ ಗ್ರಂಥ
ಡಾ॥ ಎನ್ ಸಿ ಪಾಟೀಲ

೧೩. ೬೪೬ ಕಲೆಗಳಿಂದ ದೃಶ್ಯಕಲೆಗಳವರೆಗೆ ಸಂಶೋಧನ ಪ್ರಬಂಧ
ಲೇಖಕರು ಡಾ॥ ಡಿ.ಎ. ಉಪಾಧ್ಯ
ಪ್ರಕಾಶಕರು: ಭೂಮಿಕಾ ಆರ್ಟ್ಸ್ ಮೈಸೂರು

೧೪. ಸಂಯೋಜನೆ: ಎನ್ ಮರಿಶಾಮಾಚಾರ್
ಸಿ.ಎಂ.ಎನ್. ಪ್ರಕಾಶನ ಬೆಂಗಳೂರು
ಮೊದಲ ಮುದ್ರಣ : ೧೯೯೯

೧೫. ದೃಶ್ಯಕಲಾ ಪ್ರಪಂಚ : ಎನ್ ಮರಿಶಾಮಚಾರ್
ಮೊದಲ ಮುದ್ರಣ ೨೦೦೭
ಸಿ.ಎಂ.ಎನ್ ಪ್ರಕಾಶನ

೧೬. ಅನ್ನದಾನಿ ಹಿರೇಮಠ, ಎಂ.ಎ. ಚೆಟ್ಟಿ –೧೯೮೫

೧೭. ವರ್ಣ ಸಂಚಯ
ಡಾ॥ ಎಸ್.ಸಿ ಪಾಟೀಲ್ ಪ್ರ ವಿಜಯ
ಚಿತ್ರಕಲಾ ಮಹಾವಿಧ್ಯಾಲಯ ಇಲಕಲ್ ೨೦೦೧

೧೮. ಡಾ॥ ಬಿ.ಎಂ. ಪಾಟೀಲ್, ಧಾರವಾಡದ ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನ ಒಂದು
ಐತಿಹಾಸಿಕ ಅಧ್ಯಯನ,

೧೯. ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ–೧೯೮೫

೨೦. ಸುರೇಶ್ ಹಾಲಬಾವಿಯವರ ಕಲೆ ಮತ್ತು ಬದುಕು

